# ಕರ್ನಾಟಕ ವಿಧಾನ ಪರಿಷತ್ತು

## ಮಂಗಳವಾರ, 4ನೇ ಜೂನ್ 2013

**ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ
ಪೂರ್ವಾಹ್ನ 11 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು
ಪೀಠದಲ್ಲಿ ಉಪಸ್ಥಿತರಿದ್ದರು.**

**1. ಸಂತಾಪ ಸೂಚನೆ**

**ವಿಷಯ:- ಶ್ರೀಮತಿ ರಮಾದೇವಿ, ಶ್ರೀ ಡಿ.ಕೆ.ಆದಿಕೇಶವಲು,**

**ಶ್ರೀ ಎಂ.ಎಸ್.ನಾಗನೂರ, ಶ್ರೀ ಪುಂಡಲೀಕಪ್ಪ ಈಶ್ವರಪ್ಪ ಜ್ಞಾನಮೋಠೆ,**

**ಶ್ರೀ ಕೆ.ಡಿ.ಪಾಟೀಲ, ಶ್ರೀ ಪಿ.ಬಿ.ಶ್ರೀನಿವಾಸ, ಶ್ರೀಮತಿ ಶಕುಂತಲಾ ದೇವಿ ಹಾಗೂ ಶ್ರೀ ಲಾಲ್ಗುಡಿ ಜಯರಾಮನ್ ರವರುಗಳ ನಿಧನದ ಬಗ್ಗೆ.**

@@@

**ಸಭಾಪತಿಯವರು:-** ಕಳೆದ ಸದನ ಅನಿರ್ಧಿಷ್ಟಾವಧಿಯವರೆಗೆ ಮುಂದೂಡಿದ ನಂತರ ಇವೊತ್ತಿನವರೆಗೆ ಕೆಲವು ಹಿರಿಯರು ನಮ್ಮನ್ನಗಲಿದ್ದಾರೆ. ಅವರನ್ನು ನೆನಪು ಮಾಡಿಕೊಳ್ಳತಕ್ಕಂಥ ಸಂದರ್ಭ ಇದು. ಅದನ್ನು ನಾನು ಪ್ರಸ್ತಾಪಿಸುತ್ತೇನೆ.

**ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀಮತಿ ರಮಾದೇವಿ, ಮಾಜಿ ಸಂಸದರಾದ ಶ್ರೀ ಡಿ.ಕೆ.ಆದಿಕೇಶವಲು, ಮಾಜಿ ಸಚಿವರು, ಸಂಸದರು ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಂ.ಎಸ್. ನಾಗನೂರ, ವಿಧಾನ ಸಭೆಯ ಮಾಜಿ ಸದಸ್ಯರುಗಳಾದ: ಶ್ರೀ ಪುಂಡಲೀಕಪ್ಪ ಈಶ್ವರಪ್ಪ ಜ್ಞಾನಮೋಠೆ ಹಾಗೂ ಶ್ರೀ ಕೆ.ಡಿ. ಪಾಟೀಲ, ಖ್ಯಾತ ಗಾಯಕ ಶ್ರೀ ಪಿ.ಬಿ. ಶ್ರೀನಿವಾಸ, ಖ್ಯಾತ ಗಣಿತಜ್ಞೆ ಶ್ರೀಮತಿ ಶಕುಂತಲಾ ದೇವಿ ಹಾಗೂ ಖ್ಯಾತ ಪಿಟೀಲು ವಾದಕ ಶ್ರೀ ಲಾಲ್ಗುಡಿ ಜಯರಾಮನ್ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.**

**01. ಶ್ರೀಮತಿ ವಿ.ಎಸ್. ರಮಾದೇವಿ**

**ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀಮತಿ ವಿ.ಎಸ್. ರಮಾದೇವಿ ಅವರು ದಿನಾಂಕ: 17.04.2013 ರಂದು ನಿಧನ ಹೊಂದಿರುತ್ತಾರೆ.**

1934ರ ಜನವರಿ 15ರಂದು ಆಂಧ್ರ ಪ್ರದೇಶದ ಚೆಬ್ರೋಲುವಿನಲ್ಲಿ ಜನಿಸಿದ ಇವರು ಎಂ.ಎ., ಎಲ್.ಎಲ್.ಎಂ ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಭಾರತೀಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯರಾಗಿ,

ಶಾಸಕಾಂಗ ಇಲಾಖೆಯ ವಿಶೇಷ ಕಾರ್ಯದರ್ಶಿಯಾಗಿ, ಕೇಂದ್ರ ಕಾನೂನು ಆಯೋಗದ ಸದಸ್ಯ ಕಾರ್ಯದರ್ಶಿಯಾಗಿ, ರಾಷ್ಟ್ರೀಯ ಮಹಿಳಾ ಆಯೋಗದ ಸಲಹೆಗಾರರಾಗಿ, ಕೇಂದ್ರ ಚುನಾವಣಾ ಆಯೋಗದ ಪ್ರಥಮ ಮಹಿಳಾ ಆಯುಕ್ತರಾಗಿ ಹಾಗೂ ರಾಜ್ಯಸಭೆಯ ಮಹಾ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದ ಇವರು ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿಯೂ ಕಾರ್ಯನಿರ್ವಹಿಸಿದ್ದರು.

2ನೇ ಡಿಸೆಂಬರ್, 1999 ರಿಂದ 20ನೇ ಆಗಸ್ಟ್, 2002ರವರೆಗೆ ರಾಜ್ಯದ ಪ್ರಥಮ ಮಹಿಳಾ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದ ಇವರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದವರನ್ನು ಗುರುತಿಸಿ ಗಣರಾಜ್ಯೋತ್ಸವ ದಿನದಂದು ಗೌರವಿಸುವ ಪರಿಪಾಠ ಹುಟ್ಟು ಹಾಕಿದ ಕೀರ್ತಿ ಇವರಿಗೆ ಸಲ್ಲುತ್ತದೆ. 'ಕನ್ನಡದ ರಾಜ್ಯಪಾಲೆ' ಎಂದು ಜನರಿಂದ ಪ್ರಶಂಸೆಯನ್ನು ಪಡೆದಿದ್ದ ಇವರು ರಾಜಭವನಕ್ಕೆ ಶ್ರೀಸಾಮಾನ್ಯನಿಗೆ ಮುಕ್ತ ಪ್ರವೇಶವನ್ನು ಕಲ್ಪಿಸಿ ಅವರ ದುಃಖ ದುಮ್ಮಾನಗಳನ್ನು ಆಲಿಸುವ ಮೂಲಕ ನೋವು ನಲಿವಿಗೆ ಸ್ಪಂದಿಸುವ ಕಾರ್ಯ ನಿರ್ವಹಿಸಿದ್ದರು. 'ರಾಜ್ಯ ಸಭಾ ಅಟ್ ವರ್ಕ್' ಪುಸ್ತಕವನ್ನೊಳಗೊಂಡಂತೆ ಹಲವಾರು ಪುಸ್ತಕಗಳನ್ನು ರಚಿಸಿರುತ್ತಾರೆ.

**ಇವರ ನಿಧನದಿಂದಾಗಿ ರಾಷ್ಟ್ರವು ಒಬ್ಬ ದಕ್ಷ, ಸರಳ, ಸಜ್ಜನ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.**

### 02. ಶ್ರೀ ಡಿ.ಕೆ. ಆದಿಕೇಶವಲು

**ಮಾಜಿ ಸದಸ್ಯರಾದ ಶ್ರೀ ಡಿ.ಕೆ. ಆದಿಕೇಶವಲು ಅವರು ದಿನಾಂಕ: 24.04.2013 ರಂದು ನಿಧನ ಹೊಂದಿರುತ್ತಾರೆ.**

1941ರ ಜುಲೈ 01 ರಂದು ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿ ಜನಿಸಿದ ಶ್ರೀಯುತರು ಮೆಕ್ಯಾನಿಕಲ್ ಇಂಜಿನೀಯರಿಂಗ್ ಪದವೀಧರರಾಗಿದ್ದು ವೃತ್ತಿಯಲ್ಲಿ ಉದ್ಯಮಿಯಾಗಿದ್ದರು. ಆಂಧ್ರ ಪ್ರದೇಶದ ಚಿತ್ತೂರು ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ಉದ್ಯಮ,

ರಾಜಕಾರಣದ ಜೊತೆಗೆ ವೈದ್ಯ, ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದರು. ತಿರುಪತಿ ತಿರುಮಲ ದೇವಾಲಯದ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ನಿರ್ವಹಿಸಿದ ಕಾರ್ಯ ಸ್ಮರಣೀಯವಾಗಿದೆ.

**ಶ್ರೀಯುತರ ನಿಧನದಿಂದಾಗಿ ರಾಷ್ಟ್ರವು ಒಬ್ಬ ಹಿರಿಯ ಉದ್ಯಮಿ ಹಾಗೂ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**03. ಶ್ರೀ ಎಂ.ಎನ್. ನಾಗನೂರ**

**ಮಾಜಿ ಸಚಿವರು, ಸಂಸದರು ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಎಂ.ಎನ್.ನಾಗನೂರ ರವರು ದಿನಾಂಕ: 24.02.2013 ರಂದು ನಿಧನ ಹೊಂದಿರುತ್ತಾರೆ.**

1926ರ ಜೂನ್ 23 ರಂದು ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಜನಿಸಿದ ಶ್ರೀಯುತರು ಬಿಎ., ಎಲ್.ಎಲ್.ಬಿ., ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಬೆಳಗಾಂ ಜಿಲ್ಲಾ ಸ್ಕೂಲ್ ಬೋರ್ಡ್ ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸದಸ್ಯರಾಗಿ ಹಾಗೂ ಬೈಲಹೊಂಗಲ ಪುರಸಭೆಯ ಉಪಾಧ್ಯಕ್ಷರಾಗಿಯೂ ಸೇವೆಯನ್ನು ಸಲ್ಲಿಸಿರುತ್ತಾರೆ.

ಶ್ರೀಯುತರು 1957 ರಲ್ಲಿ ಸಂಪಗಾಂವ-2 ವಿಧಾನಸಭಾ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾಗಿದ್ದರು ಹಾಗೂ 1962ರಲ್ಲಿ 3ನೇ ವಿಧಾನ ಸಭೆಗೆ ಸದಸ್ಯರಾಗಿ ಆಯ್ಕೆಯಾಗಿದ್ದರು. ಇವರು 1958-1962ರ ಅವಧಿಯಲ್ಲಿ ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಬಿ.ಡಿ.ಜತ್ತಿಯವರ ಸಂಪುಟದಲ್ಲಿ ಲೋಕೋಪಯೋಗಿ ಇಲಾಖೆಯ ಉಪ-ಸಚಿವರಾಗಿ ಸೇವೆ ಸಲ್ಲಿಸಿದ್ದರು. 1967ರಲ್ಲಿ ಬೆಳಗಾವಿ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿ ಕಾರ್ಯನಿರ್ವಹಿಸಿದ್ದರು. ಶ್ರೀಯುತರು ತಿಗಡಿ ಹರಿನಾಲಾ ಯೋಜನೆಗೆ ಚಾಲನೆ ನೀಡಿದ ಕೀರ್ತಿಗೆ ಭಾಜನರಾಗಿರುತ್ತಾರೆ.

**ಶ್ರೀಯುತರ ನಿಧನದಿಂದ ರಾಜ್ಯವು ಒಬ್ಬ ಹಿರಿಯ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**04. ಶ್ರೀ ಪುಂಡಲೀಕಪ್ಪ ಈಶ್ವರಪ್ಪ ಜ್ಞಾನಮೋತೆ**

**ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಪುಂಡಲೀಕಪ್ಪ ಈಶ್ವರಪ್ಪ ಜ್ಞಾನಮೋತೆ ಅವರು ದಿನಾಂಕ: 09.03.2013ರಂದು ನಿಧನ ಹೊಂದಿರುತ್ತಾರೆ.**

1918ನೇ ಸೆಪ್ಟಂಬರ್ 20ರಂದು ಯಲಬುರ್ಗಾ ತಾಲ್ಲೂಕಿನ ತಲಕಾಲ್ ಗ್ರಾಮದಲ್ಲಿ ಜನಿಸಿದ ಶ್ರೀಯುತರು ವೃತ್ತಿಯಲ್ಲಿ ಉದ್ಯಮಿಯಾಗಿದ್ದರು ಹಾಗೂ ಸಾಮಾಜಿಕ ಸೇವೆಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡಿದ್ದರು. ಹೈದರಾಬಾದ್ ಕರ್ನಾಟಕ ವಿಮೋಚನಾ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿದ್ದರು. ಶ್ರೀಯುತರನ್ನು ಜೀವಂತವಾಗಿ ಅಥವಾ ಶವವಾಗಿ ತಂದು ಕೊಟ್ಟವರಿಗೆ ₹ 500/–ಗಳ ಬಹುಮಾನವನ್ನು ನೀಡುವುದಾಗಿ ಅಂದಿನ ಹೈದರಾಬಾದ್ ಸಂಸ್ಥಾನವು ಘೋಷಿಸಿತ್ತು. ಶ್ರೀಯುತರು ರಾಯಚೂರು ಜಿಲ್ಲಾ ಕೋ–ಆಪರೇಟಿವ್ ಯೂನಿಯನ್ ಅಧ್ಯಕ್ಷರಾಗಿ, ರಾಯಚೂರು ಸ್ಪಿನ್ನಿಂಗ್ ಮಿಲ್‌ನ ನಿರ್ದೇಶಕರಾಗಿ, ಕುಷ್ಠಗಿಯ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ನ ಅಧ್ಯಕ್ಷರಾಗಿ, ಕುಷ್ಠಗಿಯ ಜನರಲ್ ಸ್ಟೂಡೆಂಟ್ ಹಾಸ್ಟೆಲ್‌ನ ನಿರ್ವಾಹಕರಾಗಿ, ಮೈಸೂರು ರಾಜ್ಯ ಕೋ–ಆಪರೇಟಿವ್ ಸಂಘದ ನಿರ್ದೇಶಕರಾಗಿ, ರೆಡ್ ಕ್ರಾಸ್ ಸಂಘದ ಸದಸ್ಯರಾಗಿ, ಸೇವೆಯನ್ನು ಸಲ್ಲಿಸಿರುತ್ತಾರೆ. 1957 ಮತ್ತು 1962ರಲ್ಲಿ ಕುಷ್ಟಗಿ ವಿಧಾನ ಸಭಾ ಕ್ಷೇತ್ರದಿಂದ ವಿಧಾನಸಭೆ ಚುನಾಯಿತರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

**ಶ್ರೀಯುತರ ನಿಧನದಿಂದ ರಾಜ್ಯವು ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ನೇರ ನಿಷ್ಠುರ, ಸರಳ ಸಜ್ಜನಿಕೆಯ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

**05. ಶ್ರೀ ಕೆ.ಡಿ. ಪಾಟೀಲ**

**ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಕಾಶಿರಾಯನಗೌಡ ದೇವನಗೌಡ ಪಾಟೀಲ ಅವರು ದಿನಾಂಕ: 21.03.2013 ರಂದು ನಿಧನ ಹೊಂದಿರುತ್ತಾರೆ.**

ವಿಜಾಪುರದ ಜನಿಸಿದ್ದ ಶ್ರೀಯುತರು ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ವಿಜಾಪುರ ಸ್ಪಿನ್ನಿಂಗ್ ಮಿಲ್ ನಿರ್ದೇಶಕರಾಗಿ, ಎ.ಪಿ.ಎಂ.ಸಿ. ಅಧ್ಯಕ್ಷರಾಗಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿದ್ದ ಶ್ರೀಯುತರು ಶಾಸಕರಿಗೆ 5ನೇ ವಿಧಾನ ಸಭೆಗೆ ಹೂವಿನ ಹಿಪ್ಪರಗಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

**ಶ್ರೀಯುತರ ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.**

## 06. ಶ್ರೀ ಪಿ.ಬಿ. ಶ್ರೀನಿವಾಸ

**ಖ್ಯಾತ ಹಿನ್ನಲೆ ಗಾಯಕ ಪ್ರತಿವಾದಿ ಭಯಂಕರ ಶ್ರೀನಿವಾಸ ಅವರು ದಿನಾಂಕ:14.04.2013 ರಂದು ನಿಧನ ಹೊಂದಿರುತ್ತಾರೆ.**

ಕನ್ನಡ ಚಿತ್ರರಂಗ ಕಂಡಿರುವ ಜನಪ್ರಿಯ ಸ್ವರಯೋಗಿ, ಪಿ.ಬಿ.ಎಸ್ ಎಂದೇ ಪ್ರಖ್ಯಾತರಾದ ಶ್ರೀಯುತರು 1930ರ ಸೆಪ್ಟೆಂಬರ್, 22 ರಂದು ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ಕಾಕಿನಾಡದಲ್ಲಿ ಜನಿಸಿದ್ದರು. ಬಿ.ಕಾಂ. ಪದವೀಧರರಾದ ಶ್ರೀಯುತರು ಕನ್ನಡ, ತೆಲುಗು, ತಮಿಳು, ಹಿಂದಿ, ಮಲೆಯಾಳಂ ಮತ್ತು ತುಳು ಭಾಷೆಗಳಲ್ಲದೆ ಅನೇಕ ಭಾಷೆಗಳ ಚಲನಚಿತ್ರಗಳಲ್ಲಿ ಸುಮಾರು 3450ಕ್ಕೂ ಹೆಚ್ಚಿನ ಗೀತೆಗಳನ್ನು ಹಾಡಿದ್ದಾರೆ. ಕನ್ನಡದಲ್ಲಿ ಅತೀ ಹೆಚ್ಚಿನ ಗೀತೆಗಳನ್ನು ಹಾಡಿದ್ದಾರೆ. 1952 ರಲ್ಲಿ ಹಿಂದಿ ಚಲನಚಿತ್ರ ಮಿ. ಸಂಪತ್ ಮೂಲಕ ಚಲನಚಿತ್ರ ರಂಗಕ್ಕೆ ಪರಿಚಯರಾದ ಇವರು ಗೀತಾದತ್, ಶಮ್ಸದ್ ಬೇಗಂ ಮತ್ತು ಜಿಕ್ಕಿ ಅವರುಗಳ ಜೊತೆ ಹಾಡುಗಳನ್ನು ಹಾಡಿದ್ದಾರೆ. 'ಜಾತಕ ಫಲ' ಚಿತ್ರದ ಮೂಲಕ ಕನ್ನಡ, ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ ಪರಿಚಿತರಾದರು.

ಕನ್ನಡ ಚಲನ ಚಿತ್ರರಂಗದ ಮೇರು ನಟ, ಪದ್ಮಭೂಷಣ ಡಾ॥ ರಾಜ್‌ಕುಮಾರ್‌ರವರ ಚಲನ ಚಿತ್ರಗಳಲ್ಲಿ 200ಕ್ಕೂ ಹೆಚ್ಚು ಗೀತೆಗಳನ್ನು ಹಾಡಿರುವ ಶ್ರೀಯುತರು ಡಾ॥ ರಾಜ್‌ಕುಮಾರ್ ಹಾಗೂ ಪಿ.ಬಿ.ಎಸ್., ಎಂದರೆ

‘ಶರೀರ–ಶಾರೀರ’ ಎಂದೇ ಜನಮಾನಸದಲ್ಲಿ ಪ್ರಖ್ಯಾತರಾಗಿದ್ದರು. ಅಲ್ಲದೆ ಕನ್ನಡ ಚಲನ ಚಿತ್ರ ನಟರಾದ ಡಾ॥ ವಿಷ್ಣುವರ್ಧನ, ಡಾ॥ ಶ್ರೀನಾಥ, ಕಲ್ಯಾಣ್ ಕುಮಾರ್ ಹಾಗೂ ಉದಯ ಕುಮಾರ್ ಅವರ ಚಲನ ಚಿತ್ರಗಳಲ್ಲದೆ, 1950, 1960 ಹಾಗೂ 1970ರ ಮೂರು ದಶಕಗಳ ಕಾಲ ಕನ್ನಡ ಚಲನಚಿತ್ರ ರಂಗದ ಗೀತೆಗಳನ್ನು ತಮ್ಮ ಮಧುರ ಕಂಠ ಸಿರಿಯ ಮೂಲಕ ಅಜರಾಮರಾಗಿಸಿದ ಕೀರ್ತಿಗೆ ಭಾಜನಾಗಿರುತ್ತಾರೆ. ಕನ್ನಡ ಭಾಷೆಯ ಸೊಗಡು ಹಾಗೂ ಸಂಸ್ಕೃತಿಗೆ ಮಾರುಹೋಗಿದ್ದ ಶ್ರೀಯುತರು ರಾಜ್ಯದ ಸಾಂಸ್ಕೃತಿಕ ಪ್ರತೀಕವಾದ ಮೈಸೂರು ಪೇಟವನ್ನು ಧರಿಸದೆ ಯಾವುದೇ ಕಾರ್ಯಕ್ರಮಗಳಿಗೂ ತೆರಳುತ್ತಿರಲಿಲ್ಲ, ಇದು ಅವರು ಕನ್ನಡ ಭಾಷೆ ಹಾಗೂ ಕರ್ನಾಟಕದೊಡನೆ ಹೊಂದಿದ ಬೇರ್ಪಡಿಸಲಾಗದ ಪ್ರೀತಿಯ ಧ್ಯೋತಕವಾಗಿರುವುದು.

ಪ್ರಖಾಂಡ ಪಾಂಡಿತ್ಯವನ್ನು ಹೊಂದಿದ್ದ ಶ್ರೀಯುತರು ಸುಮಾರು 8ಕ್ಕೂ ಹೆಚ್ಚೂ ಭಾಷೆಗಳಲ್ಲಿ ಕರತಲಾಮಲಕರಾಗಿ ಸಹಸ್ರಾರು ಗೀತೆಗಳನ್ನು ರಚಿಸಿರುತ್ತಾರೆ. ಶ್ರೀಯುತರ ಸ್ವಂತ ರಚನೆಯಾದ “ದಿವ್ಯಗಗನ ವನವಾಸಿನಿ” ಎಂಬ ಸಂಸ್ಕೃತ ಗೀತೆಯನ್ನು ಭಾಗ್ಯಜ್ಯೋತಿ ಚಿತ್ರಕ್ಕೆ ಶ್ರೀಮತಿ ವಾಣಿಜಯರಾಂ ಅವರೊಂದಿಗೆ ಹಾಡಿರುತ್ತಾರೆ. “ನವನೀತ ಸುಮಸುಧಾ” ಎಂಬ ರಾಗ ಅವರ ಸೃಷ್ಠಿಯಾಗಿರುತ್ತದೆ. “ಶ್ರೀನಿವಾಸ ಗಾಯಿತ್ರಿ ವ್ರತ”, “ಗಾಯಕುಡಿ ಗೇಯಲು”, “ಪ್ರಣವಂ” ಎನ್ನುವ ಪುಸ್ತಕಗಳನ್ನು ಪ್ರಕಟಿಸಿರುವ ಶ್ರೀಯುತರು ‘ಸರಿ ನಾ ಹೋಗಿ ಬರುವೆ’ ಎಂದು ನಮ್ಮನ್ನು ಅಗಲಿದ್ದಾರೆ.

ಶ್ರೀಯುತರು ಆರಿಝೋನ್ ಯೂನಿರ್ವಸಿಟಿಯ “ಡಾಕ್ಟರೇಟ್” ಪುರಸ್ಕಾರ, 1998ರಲ್ಲಿ ‘ರಾಜ್ಯೋತ್ಸವ ಪ್ರಶಸ್ತಿ’, ತಮಿಳುನಾಡು ಸರ್ಕಾರದ ‘ಕಲೈಮಾಮಣಿ ಪ್ರಶಸ್ತಿ’, ಡಾ॥ ರಾಜಕುಮಾರ್ ‘ಸೌಹಾರ್ಧ ಪ್ರಶಸ್ತಿ’ ಗಳಲ್ಲದೆ ತಮಿಳು, ತೆಲುಗು, ಮಲಯಾಳಂ ಭಾಷೆಗಳ ಅವರ ಗೀತೆಗಳಿಗೆ ಹತ್ತು ಹಲವಾರು ಪ್ರಶಸ್ತಿಗಳಿಗೆ ಶ್ರೀಯುತರು ಭಾಜನರಾಗಿದ್ದಾರೆ.

**ಇವರ ನಿಧನದಿಂದಾಗಿ ಭಾರತೀಯ ಚಲನಚಿತ್ರ ರಂಗವು ತಮ್ಮ ಕಂಠ ಸಿರಿಯ ಮೂಲಕ ಚಲನಚಿತ್ರ ಗೀತೆಗಳನ್ನು ಅಜರಾಮರಾಗಿಸಿದ ಒಬ್ಬ ಶ್ರೇಷ್ಠ ಸ್ವರಯೋಗಿಯನ್ನು ಕಳೆದುಕೊಂಡಂತಾಗಿದೆ.**

## 07. ಶ್ರೀಮತಿ ಶಕುಂತಲಾ ದೇವಿ

**'ಮಾನವ ಕಂಪ್ಯೂಟರ್' ಎಂದು ಜನಜನಿತರಾಗಿದ್ದ, ಗಣಿತಜ್ಞೆ ಶಕುಂತಲಾ ದೇವಿ ಅವರು ದಿನಾಂಕ:21.04.2013 ರಂದು ನಿಧನ ಹೊಂದಿರುತ್ತಾರೆ.**

1939ರ ನವೆಂಬರ್ 4 ರಂದು ಜನಿಸಿದ್ದ ಇವರು ಯಾವುದೇ ಪ್ರಾಸಂಗಿಕ ಶಿಕ್ಷಣವನ್ನು ಪಡೆಯದೆ 6ನೇ ವಯಸ್ಸಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಗುಣಾಕಾರ ಭಾಗಾಕಾರಗಳ ವಿಷಯದಲ್ಲಿ ಇರುವ ಪ್ರತಿಭೆಯನ್ನು ಪ್ರದರ್ಶಿಸಿದರು. 1980ರಲ್ಲಿ ಲಂಡನ್‌ನ ಇಂಪೀರಿಯಲ್ ಕಾಲೇಜಿನ ಕಂಪ್ಯೂಟರ್ ವಿಭಾಗ ಸಿದ್ದಪಡಿಸಿದ ಗುಣಾಕಾರವನ್ನು ಯಾವುದೇ ತಾಂತ್ರಿಕ ಸಹಾಯವಿಲ್ಲದೆ 13 ಅಂಕಿಗಳನ್ನು ಗುಣಿಸಿ ಕೇವಲ 28 ಸೆಕೆಂಡುಗಳಲ್ಲಿ ನಿಖರ ಉತ್ತರ ನೀಡಿ 1995ರಲ್ಲಿ ಗಿನ್ನಿಸ್ ದಾಖಲೆ ನಿರ್ಮಿಸಿದ್ದರು. 1977ರಲ್ಲಿ ಅಮೇರಿಕಾದ ಡಲ್ಲಾಸ್‌ನಲ್ಲಿ 201 ಅಂಕಿಗಳನ್ನು ನೀಡಿ 23ನೇ ವರ್ಗ ಮೂಲವನ್ನು 50 ಸೆಕೆಂಡುಗಳಲ್ಲಿ ಕಂಡು ಹಿಡಿದರು. ಯುನಿವಾಕ್ 1108 ಕಂಪ್ಯೂಟರ್‌ಗಿಂತ 10 ಸೆಕೆಂಡು ಬೇಗ ಉತ್ತರ ನೀಡಿದ್ದರು. ಕ್ಲಿಷ್ಠ ಗಣಿತ ಸಮಸ್ಯೆಗಳನ್ನು ಫಟಾಫಟ್ ಬಗೆಹರಿಸುವ ಪ್ರತಿಭೆ, ಚಾಕಚಕ್ಯತೆ, ಮಾನಸಿಕ ಅಪರಿಮಿತ ಸಾಮರ್ಥ್ಯವನ್ನು ಮೈಗೂಡಿಸಿಕೊಂಡಿದ್ದ ಇವರು ಅಂತರರಾಷ್ಟ್ರೀಯ ಮಟ್ಟದಲ್ಲಿ 'ಹ್ಯೂಮನ್ ಕಂಪ್ಯೂಟರ್' ಎನ್ನುವ ಖ್ಯಾತಿ ಗಳಿಸಿದ್ದರು. ಗಣಿತ ಕಬ್ಬಿಣದ ಕಡಲೆ ಎಂದು ಭಾವಿಸುವವರಿಗೆ ಸುಲಭವಾಗಿ ಬಿಡಿಸಬಹುದಾದ ಹಾಗೂ ಖುಷಿಯಿಂದ ಸಮಸ್ಯೆ ಬಿಡಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವ ಮಹತ್ವಾಕಾಂಕ್ಷೆಯನ್ನು ಅವರು ಹೊಂದಿದ್ದರು.

ಇವರು ಖಗೋಳ ಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ಗಣಿತ ಶಾಸ್ತ್ರಗಳ ಪ್ರಚಾರಕ್ಕಾಗಿ 'ವಿದ್ಯಾ ಫೌಂಡೇಶನ್' ಎಂಬ ಟ್ರಸ್ಟನ್ನು ಸ್ಥಾಪಿಸಿರುವುದಲ್ಲದೆ ಎಸ್.ಐ.ಐ.ಎಮ್.ಎಸ್ ಅಂಡ್ ಪಿಯು ಕಾಲೇಜ್, ಬೆಂಗಳೂರಿನ ಎಚ್.ಎಸ್.ಆರ್.ಲೇಔಟ್‌ನಲ್ಲಿ ಶಕುಂತಲಾ ದೇವಿ ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಮೆಂಟ್ ಸೈನ್ಸ್ ಮತ್ತು ಪಿಯು ಕಾಲೇಜ್' ಎಂಬ ಪ್ರತಿಷ್ಠಿತ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸಿರುತ್ತಾರೆ.

ಭಾರತ, ಇಂಗ್ಲೆಂಡ್, ಅಮೇರಿಕಾ, ಕೆನಡಾ, ಆಸ್ಟ್ರೇಲಿಯಾ ಸೇರಿದಂತೆ ಪ್ರಪಂಚದ ವಿವಿಧೆಡೆಯ ಅನೇಕ ವಿಶ್ವವಿದ್ಯಾಲಯಗಳಲ್ಲಿ ತಮ್ಮ ಪ್ರತಿಭೆಯ ಪ್ರದರ್ಶನವನ್ನು ನೀಡಿದ್ದರು. ಫಿಲಿಪೈನ್ಸ್ ವಿಶ್ವವಿದ್ಯಾಲಯ ಅವರಿಗೆ ಪ್ರಪಂಚದ "ಮಹತ್ವದ ಮಹಿಳೆ" ಎಂಬ ಪ್ರಶಸ್ತಿಯನ್ನು ನೀಡಿರುತ್ತದೆ. 'ರಾಮಾನುಜಮ್ ಮ್ಯಾಥಮೆಟಿಕಲ್ ಜೀನಿಯಸ್' ಪ್ರಶಸ್ತಿಗಳಲ್ಲದೆ ಇನ್ನೂ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು.

**ಇವರು ನಿಧನದಿಂದಾಗಿ ರಾಜ್ಯವು ಒಬ್ಬ ಪ್ರಪಂಚದ ಖ್ಯಾತ ಗಣಿತಜ್ಞೆ ಹಾಗೂ ಜ್ಯೋತಿಷ್ಯ ಶಾಸ್ತ್ರಜ್ಞೆಯನ್ನು ಕಳೆದುಕೊಂಡಂತಾಗಿದೆ.**

## 08. ಶ್ರೀ ಲಾಲ್ಗುಡಿ ಜಯರಾಮನ್

**ಖ್ಯಾತ ಪಿಟೀಲು ವಾದಕ ಶ್ರೀ ಲಾಲ್ಗುಡಿ ಜಯರಾಮನ್‌ರವರು ದಿನಾಂಕ:22.04.2013 ರಂದು ನಿಧನ ಹೊಂದಿರುತ್ತಾರೆ.**

1930ರ ಸೆಪ್ಟೆಂಬರ್, 17 ರಂದು ತಿರುಚನಾಪಳ್ಳಿಯ ಜಿಲ್ಲೆಯ ಲಾಲ್ಗುಡಿ ಬಳಿಯ ಇದತುಮಗಲಂನಲ್ಲಿ ಜನಿಸಿದ್ದ ಶ್ರೀಯುತರು ತಮ್ಮ 12ನೇ ವಯಸ್ಸಿನಲ್ಲೇ ಕರ್ನಾಟಕ ಸಂಗೀತ ಮೇರು ಪ್ರತಿಭೆಗಳಾಗಿದ್ದ ಅರಿಯಕುಡಿ ರಾಮಾನುಜ ಅಯ್ಯಂಗಾರ್, ಚೆಂಬೈ ವೈದ್ಯನಾಥ್ ಭಾಗವತರ್ ಹಾಗೂ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಅವರೊಂದಿಗೆ ಕಛೇರಿಯಲ್ಲಿ ಕಾಣಿಸಿಕೊಂಡು ಭರವಸೆಯ ಪಿಟೀಲು ವಾದಕರೆನಿಸಿಕೊಂಡು ಹಿರಿಯ ಸಾಧಕರಿಂದ ಬೆನ್ನು ತಟ್ಟಿಸಿಕೊಂಡಿದ್ದರು. 'ಶಿಸ್ತಿನ ಸಂಗೀತಗಾರ' ಎಂದೇ ಹೆಸರಾಗಿದ್ದ ಇವರು ಸಂಪ್ರದಾಯದ ಚೌಕಟ್ಟಿನೊಳಗೆ 'ಸಮ್ಮೋಹನಗೊಳಿಸುವ

ತಂತ್ರ'ಗಳ ಅನ್ವೇಷಣೆಗೆ ಮುಂದಾಗಿ 'ಲಾಲ್ಗುಡಿ' ಶೈಲಿಯನ್ನು ಹುಟ್ಟು ಹಾಕಿದರು. ವಿದೇಶಗಳಲ್ಲಿ ನೀಡಿದ ಹಲವಾರು ಸಂಗೀತ ಕಛೇರಿಗಳಲ್ಲಿ ಶ್ರೀಯುತರು 'ಲಾಲ್ಗುಡಿ' ಮೋಡಿ ಮಾಡಿದ್ದು, ವಿವಿಧ ಪ್ರಯೋಗಗಳ ಮೂಲಕ ಸಂಗೀತ ಸಮೃದ್ಧಿಗೊಳಿಸುವ ಕನಸು ಕಾಣುತ್ತಿದ್ದ ಶ್ರೀಯುತರು 'ಲಾಲ್ಗುಡಿ ಬನಿ' ಎಂಬ ತಮ್ಮದೇ ಆದ ವಿಶಿಷ್ಟ ತಂತಿವಾದ್ಯವನ್ನು ಪರಿಚಯಿಸಿ ಅದರ ಮೂಲಕ ವಿಶ್ವ ಸಂಗೀತ ರಸಿಕರ ಮನಸೂರೆಗೊಂಡಿದ್ದರು.

ಸಂಗೀತ ಪ್ರಿಯರಿಂದ 'ಕರ್ನಾಟಕ ಸಂಗೀತ ಸಾಗರ' ಎಂದೇ ಕರೆಯಿಸಿಕೊಂಡಿದ್ದ ಜಯರಾಮನ್ ಪಿಟೀಲು ವಾದನದ ಜೊತೆಗೆ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ ಹಾಗೂ ವಾಗ್ಮೀಯಕಾರರಾಗಿದ್ದರು. ಕನ್ನಡ, ತಮಿಳು, ತೆಲುಗು ಹಾಗೂ ಸಂಸ್ಕೃತದಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಸಂಗೀತದ ಜೊತೆಗೆ ಭರತನಾಟ್ಯಕ್ಕೆ ತಮ್ಮದೇ ಆದ ಆಯಾಮ ನೀಡಿದ ಶ್ರೀಯುತರು ಅಪೂರ್ವ ತಿಲ್ಲಾನಗಳು ಹಾಗೂ ವರ್ಣಗಳ ಬಹುದೊಡ್ಡ ಕೊಡುಗೆ ನೀಡಿದ್ದಾರೆ.

ಭಾರತದ ಸಂಗೀತ ಹಾಗೂ ಸಾಂಸ್ಕೃತಿಕ ನಿಯೋಗಗಳಲ್ಲಿ ರಷ್ಯಾ, ಲಂಡನ್, ಸಿಂಗಪುರ, ಜರ್ಮನಿ ಹಾಗೂ ಇಟಲಿ ಸೇರಿದಂತೆ ಹತ್ತು ಹಲವು ದೇಶಗಳಲ್ಲಿ ಸಂಗೀತ ಕಛೇರಿ ನೀಡಿದ್ದಾರೆ. 1971ರಲ್ಲಿ ಶ್ರೀಯುತರು ಅಮೇರಿಕಾ, ಕೆನಡಾ ಪ್ರವಾಸ ಕೈಗೊಂಡಿದ್ದು, ಪೂರ್ವ ಪಶ್ಚಿಮ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಡಿ 24 ಕಛೇರಿಗಳು ಹಾಗೂ ಉಪನ್ಯಾಸಗಳನ್ನು ನೀಡಿರುತ್ತಾರೆ. ಭಾರತೀಯ ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿ ರಷ್ಯಾಕ್ಕೆ ಭೇಟಿ ನೀಡಿರುತ್ತಾರೆ. ಸುಮಾರು ಏಳು ದಶಕಗಳ ಕಾಲ ಸಂಗೀತ ಸರಸ್ವತಿಯ ಸೇವೆ ಮಾಡಿದ ಶ್ರೀಯುತರಿಗೆ 1972ರಲ್ಲಿ 'ಪದ್ಮಶ್ರೀ' ಹಾಗೂ 2001 ರಲ್ಲಿ 'ಪದ್ಮಭೂಷಣ' ಪ್ರಶಸ್ತಿಗಳು ಸಂದಿವೆ. ಜೊತೆಗೆ ಚೌಡಯ್ಯ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ, ಸಂಗೀತ ಕಲಾನಿಧಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಅವರ ಮುಡಿಯನ್ನು ಅಲಂಕರಿಸಿವೆ.

**ಶ್ರೀಯುತರ ನಿಧನದಿಂದ ರಾಜ್ಯವು ಕರ್ನಾಟಕ ಸಂಗೀತ ಕ್ಷೇತ್ರದ ದಿಗ್ಗಜ ಪಿಟೀಲು ವಾದಕರನ್ನು ಕಳೆದುಕೊಂಡಂತಾಗಿದೆ.**

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ತಾವು ತಂದಿರುವಂತಹ ಈ ಸಂತಾಪ ಸೂಚನಾ ನಿರ್ಣಯವನ್ನು ಬೆಂಬಲಿಸುತ್ತಾ, 8 ಜನ ಹಿರಿಯ ಮಹನೀಯರೇನು ನಮ್ಮನ್ನಗಲಿ ಹೋಗಿದ್ದಾರೆ ಅವರ ಬಗ್ಗೆ ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಒಬ್ಬ ವ್ಯಕ್ತಿ ತನಗಾಗಿ ಮಾತ್ರವಲ್ಲದೆ ಬೇರೆಯವರಿಗಾಗಿ ಕೂಡ ಬದುಕಿದರೆ ಆ ಬದುಕು ನಿಜವಾದ ಬದುಕು ಎನಿಸಿಕೊಳ್ಳುತ್ತದೆ. ಅಂತಹ ಬದುಕನ್ನು ಬದುಕಿದಂತಹವರು ತಮ್ಮ ವೃತ್ತಿ ಜೀವನದಲ್ಲಿ ಅಷ್ಟೇ ಅಲ್ಲದೆ ಕಲೆ, ಸಂಗೀತ, ಸಾಹಿತ್ಯ, ಸಾಮಾಜಿಕ ಇಂತಹ ಅನೇಕ ಸಾರ್ವಜನಿಕ ಕ್ಷೇತ್ರಗಳಲ್ಲಿ ತಮ್ಮದೇ ಆದಂತಹ ಹೆಜ್ಜೆ ಗುರುತುಗಳನ್ನು ಮೂಡಿಸಿ ಹೋಗಿರುತ್ತಾರೆ, ಅದೇ ರೀತಿ ಈ ಮಹನೀಯರು ಸಹ ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿ ಹೋಗಿದ್ದಾರೆ.

ನಮ್ಮ ಕರ್ನಾಟಕ ರಾಜ್ಯದ ಪ್ರಥಮ ಮಹಿಳಾ ರಾಜ್ಯಪಾಲರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಂತಹ ಶ್ರೀಮತಿ ವಿ.ಎಸ್.ರಮಾದೇವಿಯವರು ವೃತ್ತಿಯಲ್ಲಿ ವಕೀಲರಾಗಿದ್ದರು. ತಮ್ಮ ಕಾಲದಲ್ಲಿ ಅತ್ಯುತ್ತಮವಾದ ಕೆಲಸವನ್ನು ಮಾಡಿದಂತಹ ಕೀರ್ತಿಗೆ ಸಹ ಅವರು ಭಾಜನರಾಗಿದ್ದಂತಹವರು. ಅವರು ಕೇಂದ್ರ ಚುನಾವಣಾ ಆಯೋಗದ ಪ್ರಥಮ ಮಹಿಳಾ ಆಯುಕ್ತರಾಗಿ, ರಾಜ್ಯಸಭೆಯ ಮಹಾ ಕಾರ್ಯದರ್ಶಿಗಳಾಗಿ ಹಾಗೂ ಹಿಮಾಚಲಪ್ರದೇಶದ ರಾಜ್ಯಪಾಲರಾಗಿಯೂ ಕಾರ್ಯನಿರ್ವಹಿಸಿದ್ದರು. ಸಾಮಾನ್ಯವಾಗಿ ರಾಜ್ಯಪಾಲರಿಗೂ ಮತ್ತು ಜನಸಾಮಾನ್ಯರಿಗೂ ಅಂತರ ಇರುತ್ತದೆ. ಆದರೆ, ಎಲ್ಲರನ್ನೂ ಬಹಳ ಗೌರವದಿಂದ ಕಾಣುತ್ತಿದ್ದ ಶ್ರೀಮತಿ ರಮಾದೇವಿಯವರು ರಾಜಭವನದ ಪ್ರವೇಶಕ್ಕೆ ಸಾರ್ವಜನಿಕರಿಗೆ ಮುಕ್ತವಾಗಿ ಅವಕಾಶ ಕಲ್ಪಿಸಿಕೊಟ್ಟು ಅವರ ದುಃಖ-ದುಮ್ಮಾನಗಳು, ಕಷ್ಟ-ಕಾರ್ಪಣ್ಯಗಳನ್ನು ಆಲಿಸಿ ಅವರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಂತಹ ಅಪರೂಪದ ಸಮರ್ಥ ಆಡಳಿತಗಾರರಾಗಿದ್ದರು. ಅವರ ನಿಧನದಿಂದಾಗಿ ಒಬ್ಬರು ಸರಳ-ಸಜ್ಜನ ರಾಜಕಾರಣಿಯನ್ನು ನಾವು ಕಳೆದುಕೊಂಡಂತಾಗಿದೆ.

ಶ್ರೀ ಡಿ.ಕೆ.ಆದಿಕೇಶವಲು ಅವರು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿ ಜನಿಸಿದವರು, ಮೆಕ್ಯಾನಿಕಲ್ ಇಂಜಿನಿಯರಿಂಗ್ ಪದವೀಧರರಾಗಿದ್ದ ಅವರು ವೃತ್ತಿಯಲ್ಲಿ ಉದ್ಯಮಿಯಾಗಿದ್ದರು. ಆಂಧ್ರ ಪ್ರದೇಶದ ಚಿತ್ತೂರು ಕ್ಷೇತ್ರದಿಂದ ಲೋಕಸಭಾ ಸದಸ್ಯರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದ ಅವರು ಉದ್ಯಮ, ರಾಜಕಾರಣದ ಜೊತೆಗೆ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳು ಸೇರಿದಂತೆ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆ ಮಾಡಿ, 'ಶಿಕ್ಷಣ ಪ್ರೇಮಿ' ಎನಿಸಿಕೊಂಡಿದ್ದಾರೆ. ಅದರ ಜೊತೆಗೆ ಉದ್ಯಮ ಕ್ಷೇತ್ರದಲ್ಲಿ ತಮ್ಮದೇ ಆದಂತಹ ಹೆಸರನ್ನು ಕೂಡ ಮಾಡಿದ್ದರು. ಹೀಗಾಗಿ ಅವರ ಅಗಲಿಕೆಯಿಂದಾಗಿ ಹಿರಿಯ ಉದ್ಯಮಿಯೊಬ್ಬರನ್ನು ನಾವು ಕಳೆದುಕೊಂಡಂತಾಗಿದೆ.

ಶ್ರೀ ಎಂ.ಎನ್.ನಾಗನೂರ ಅವರು ನಮ್ಮ ಬೆಳಗಾವಿ ಜಿಲ್ಲೆಯವರು. ಕಾನೂನು ಪದವೀಧರರಾಗಿದ್ದ ಅವರು ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಬಿ.ಡಿ.ಜತ್ತಿಯವರ ಸಂಪುಟದಲ್ಲಿ ಲೋಕೋಪಯೋಗಿ ಇಲಾಖೆಯ ಉಪ–ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಅಲ್ಲದೆ, ಸಂಸತ್ ಸದಸ್ಯರಾಗಿ ಕೂಡ ಸೇವೆ ಸಲ್ಲಿಸಿದ್ದಾರೆ. ಹಿರಿಯ ನ್ಯಾಯವಾದಿಯಾಗಿದ್ದ ಅವರು ಬೆಳಗಾವಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸದಸ್ಯರಾಗಿ, ಬೈಲಹೊಂಗಲ ಪುರಸಭಾ ಉಪಾಧ್ಯಕ್ಷರಾಗಿ ಕೂಡ ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಅತ್ಯಂತ ಸರಳ–ಸಜ್ಜನ ರಾಜಕಾರಣಿಯಾಗಿದ್ದಂತಹ ಅವರು ನಿಜಕ್ಕೂ ಸಾರ್ಥಕ ಜೀವನವನ್ನು ನಡೆಸಿದಂತಹವರು.

ಶ್ರೀ ಪುಂಡಲೀಕಪ್ಪ ಈಶ್ವರಪ್ಪ ಜ್ಞಾನಮೋಠೆ ಅವರು ಯಲಬುರ್ಗಾ ತಾಲ್ಲೂಕಿನ ತಲಕಾಲ್ ಗ್ರಾಮದಲ್ಲಿ ಜನಸಿದವರಾಗಿದ್ದು, ವೃತ್ತಿಯಲ್ಲಿ ಅವರು ಕೂಡ ಉದ್ಯಮಿಯಾಗಿದ್ದರು. ಹೈದರಾಬಾದ್ ಕರ್ನಾಟಕ ವಿಮೋಚನಾ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿದ್ದ ಅವರನ್ನು ಆ ಸಂದರ್ಭದಲ್ಲಿ ಜೀವಂತವಾಗಿ ಅಥವಾ ಶವವಾಗಿ ತಂದು ಒಪ್ಪಿಸಿದವರಿಗೆ ಐದುನೂರು ರೂಪಾಯಿಗಳ ಬಹುಮಾನವನ್ನು ಘೋಷಿಸಲಾಗಿತ್ತು.

(11–30 ಗಂಟೆ)

ಇವರು ಒಬ್ಬ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಸಹಕಾರಿ ಧುರೀಣರು ಸಹ ಆಗಿದ್ದರು. ಶ್ರೀಯುತರು ರಾಯಚೂರು ಜಿಲ್ಲಾ ಕೋ–ಅಪರೇಟಿವ್ ಯೂನಿಯನ್ ಅಧ್ಯಕ್ಷರಾಗಿ, ರಾಯಚೂರು ಸ್ಪಿನ್ನಿಂಗ್ ಮಿಲ್‌ನ ನಿರ್ದೇಶಕರಾಗಿ ಕುಷ್ಟಗಿಯ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ನ ಅಧ್ಯಕ್ಷರಾಗಿ ಹಾಗೂ ಅನೇಕ ಸಹಕಾರಿ ಸಂಸ್ಥೆಗಳಲ್ಲಿ ತಮ್ಮದೇ ಆದಂತಹ ಛಾಪನ್ನು ಮೂಡಿಸಿದಂಥವರು. ಶ್ರೀಯುತರು 1957ರಲ್ಲಿ ಹಾಗೂ 1962ರಲ್ಲಿ ಕುಷ್ಟಗಿ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಚುನಾಯಿತರಾಗಿ ಜನಾನುರಾಗಿಯಾಗಿ, ಕ್ರಿಯಾಶೀಲ ಶಾಸಕರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರ ನಿಧನದಿಂದ ರಾಜ್ಯವು ಒಬ್ಬ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಹಾಗೂ ನೇರ ನಿಷ್ಠುರ, ಸರಳ ಸಜ್ಜನಿಕೆಯ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂಥಾಗಿದೆ.

ಅದೇ ರೀತಿ ಶ್ರೀ ಕೆ.ಡಿ.ಪಾಟೀಲ್ ಇವರು ನಮ್ಮ ವಿಜಾಪುರ ಜಿಲ್ಲೆಯವರು. ಇವರು ಬಹಳ ವರ್ಣರಂಜಿತರಾದಂತಹ ರಾಜಕಾರಣಿ ಹಾಗೂ ಇವರು ಒಬ್ಬ ಸಹಕಾರಿ ಧುರೀಣರು ಸಹ ಆಗಿದ್ದರು. ವಿಶೇಷವಾಗಿ ಇವರು ಹಿಂದಿನ ಸಂಸದರಾದಂತಹ ಹಾಗೂ ಹಿರಿಯ ರಾಜಕಾರಣಿಯಾದಂತಹ ದಿವಂಗತ ಗುಡದಿನ್ನಿಯವರ ಜೊತೆ ಬಹಳಷ್ಟು ಗುರುತಿಸಿಕೊಂಡಿದ್ದರು. ಯಾವಾಗಲೂ ಅವರ ಜೊತೆ ಇರುವುದನ್ನು ಬಹಳಷ್ಟು ಸಂದರ್ಭದಲ್ಲಿ ನಾನು ನೋಡಿದ್ದೇನೆ. ವಿಜಾಪುರ ಸ್ಪಿನ್ನಿಂಗ್ ಮಿಲ್ ನಿರ್ದೇಶಕರಾಗಿ, APMC ಅಧ್ಯಕ್ಷರಾಗಿ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಯುತರು ಶಾಸಕರಾಗಿ 5ನೇ ವಿಧಾನಸಭೆಗೆ ಹೂವಿನ ಹಿಪ್ಪರಗಿ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿ ನಮ್ಮ ಅಖಂಡ ವಿಜಾಪುರ ಜಿಲ್ಲೆಯಲ್ಲಿ ತಮ್ಮದೇ ಆದಂತಹ ಛಾಪನ್ನು ಮೂಡಿಸಿ ಸೇವೆಯನ್ನು ಸಲ್ಲಿಸಿರುತ್ತಾರೆ. ಶ್ರೀಯುತರ ನಿಧನದಿಂದಾಗಿ ರಾಜ್ಯವು ಹಿರಿಯ ಸರಳ ಸಜ್ಜನ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ.

ಇನ್ನು ಶ್ರೀ ಪಿ.ಬಿ.ಶ್ರೀನಿವಾಸ ಇವರು ಖ್ಯಾತ ಹಿನ್ನಲೆ ಗಾಯಕರು. ತಮ್ಮದೇ ಆದಂತಹ ರೀತಿಯಲ್ಲಿ ಹೆಸರು ಮಾಡಿದಂತವರು. ಇವರು ಕನ್ನಡ

ಚಿತ್ರರಂಗ ಕಂಡಿರುವ ಜನಪ್ರಿಯ ಸ್ವರಯೋಗಿ 'PBS' ಎಂದೇ ಪ್ರಖ್ಯಾತರಾಗಿದ್ದರು. ಶ್ರೀಯುತರು ಕನ್ನಡ, ತೆಲುಗು, ತಮಿಳು, ಹಿಂದಿ, ಮಲೆಯಾಳಂ ಮತ್ತು ತುಳು ಭಾಷೆಗಳಲ್ಲದೆ ಅನೇಕ ಭಾಷೆಗಳ ಚಲನಚಿತ್ರಗಳಲ್ಲಿ ಸುಮಾರು 3,450ಕ್ಕೂ ಹೆಚ್ಚಿನ ಗೀತೆಯನ್ನು ಹಾಡಿದಂತಹ ಕೀರ್ತಿಗೆ ಭಾಜನರಾದವರು. ಅದರಲ್ಲಿ ವಿಶೇಷವಾಗಿ ಕನ್ನಡದಲ್ಲಿ ಅತಿ ಹೆಚ್ಚಿನ ಗೀತೆಗಳನ್ನು ಹಾಡಿದ್ದಾರೆ. ಶ್ರೀಯುತರು ಕನ್ನಡ ಚಲನ ಚಿತ್ರರಂಗದ ಮೇರು ನಟ, ಪದ್ಮಭೂಷಣ, ನಟಸಾರ್ವಭೌಮ ಡಾ॥ ರಾಜ್‌ಕುಮಾರ್‌ರವರ ಚಲನ ಚಿತ್ರಗಳಲ್ಲಿ 200ಕ್ಕೂ ಹೆಚ್ಚು ಗೀತೆಗಳನ್ನು ಹಾಡಿದ್ದಾರೆ. ಇವರು ಕನ್ನಡ ಭಾಷೆಯ ಸೊಗಡು ಹಾಗೂ ಸಂಸ್ಕೃತಿಗೆ ಮಾರುಹೋಗಿದ್ದರು. ಇವರು ಕನ್ನಡ ಭಾಷೆ ಹಾಗೂ ಕರ್ನಾಟಕದೊಡನೆ ಹೊಂದಿದ್ದ ಬೇರ್ಪಡಿಸಲಾಗದ ಪ್ರೀತಿಯ ದ್ಯೋತಕವಾಗಿದ್ದರು. ಇವರ ನಿಧನದಿಂದಾಗಿ ಭಾರತೀಯ ಚಲನಚಿತ್ರ ರಂಗವು ತಮ್ಮ ಕಂಠ ಸಿರಿಯ ಮೂಲಕ ಚಲನಚಿತ್ರ ಗೀತೆಗಳನ್ನು ಅಜರಾಮರಾಗಿಸಿದ ಒಬ್ಬ ಶ್ರೇಷ್ಠ ಸ್ವರಯೋಗಿಯನ್ನು ಕಳೆದುಕೊಂಡಂತಾಗಿದೆ.

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಮಾತನಾಡುತ್ತಿರುವುದು ನಮಗೆ ಸರಿಯಾಗಿ ಕೇಳಿಸುತ್ತಿಲ್ಲ. ತಮಗೆ ಏನಾದರು ಕೇಳಿಸುತ್ತಿರಬಹುದು. ಆದರೆ ಅವರು ಮಾತನಾಡುವುದು ಸ್ಪಷ್ಟವಾಗಿ ಕೇಳಿಸುತ್ತಿಲ್ಲ. ಮೈಕ್ ಸರಿ ಇಲ್ಲವೋ ಅಥವಾ ಅವರ ಧ್ವನಿ ಸರಿ ಇಲ್ಲವೋ ಗೊತ್ತಿಲ್ಲ. ಅವರು ಈ ಕಡೆ ಇದ್ದಾಗ ಕೇಳಿಸುತ್ತಿತ್ತು, ಆ ಕಡೆ ಹೋದಮೇಲೆ ಸ್ವಲ್ಪ ಕೇಳಿಸುತ್ತಿಲ್ಲ.

**ಸಭಾಪತಿಯವರು:–** ಹಾಗಾದರೆ ಅವರು ಈ ಕಡೆಯೇ ಬಂದು ಮಾತನಾಡಬೇಕು ಎಂಬುದು ನಿಮ್ಮ ಆಸೆಯೇ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರ ಆಶಯ 'ನಾನು ಆ ಕಡೆಯೇ ಇರಬೇಕು' ಎಂದು ಇದ್ದಿರಬಹುದು. ಆದರೆ ಜನರ ಆಸೆ ಈ ಕಡೆ ಇರಬೇಕು ಎಂದು ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಿಗೆ ಏನು ನೋವಾಗಿದೆ ಎಂದರೆ ನಾವು ಆ ಕಡೆ ಅವರ ಜೊತೆಯಲ್ಲಿಯೇ ಇದ್ದೆವಲ್ಲ, ಆದರೆ ನಾವು ಈ ಕಡೆ ಬಂದಮೇಲೆ ಅವರ ಕಿವಿ ಸ್ವಲ್ಪ ಮಂದವಾದಂತೆ ಕಾಣಿಸುತ್ತಿದೆ. ಸ್ವಲ್ಪ ಮಟ್ಟಿಗೆ ಚುನಾವಣೆಯಲ್ಲಿ ಆಘಾತ ಅನುಭವಿಸಿದರು.

ಶ್ರೀಯುತರು ಆರಿಝೋನ್ ಯೂನಿರ್ವಸಿಟಿಯ "ಡಾಕ್ಟರೇಟ್" ಪುರಸ್ಕಾರ, 1998ರಲ್ಲಿ 'ರಾಜ್ಯೋತ್ಸವ ಪ್ರಶಸ್ತಿ' ತಮಿಳುನಾಡು ಸರ್ಕಾರದ 'ಕಲೈಮಾಮಣಿ ಪ್ರಶಸ್ತಿ' ಡಾ॥ ರಾಜ್‌ಕುಮಾರ್ 'ಸೌಹಾರ್ದ ಪ್ರಶಸ್ತಿ' ಗಳಲ್ಲದೆ ತಮಿಳು, ತೆಲುಗು, ಮಲಯಾಳಂ ಭಾಷೆಗಳ ಅವರ ಗೀತೆಗಳಿಗೆ ಹತ್ತು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಇವರ ನಿಧನದಿಂದಾಗಿ ಭಾರತೀಯ ಚಲನಚಿತ್ರ ರಂಗವು ಒಬ್ಬ ಶ್ರೇಷ್ಠ ಸ್ವರಯೋಗಿಯನ್ನು ಕಳೆದುಕೊಂಡಂತಾಗಿದೆ.

ಶ್ರೀಮತಿ ಶಕುಂತಲಾ ದೇವಿ ಇವರು 'ಮಾನವ ಕಂಪ್ಯೂಟರ್' ಎಂದು ಜನಜನಿತರಾಗಿದ್ದರು. ಇವರನ್ನು ನಾನು ಇತ್ತೀಚೆಗೆ ಮೈಸೂರಿನಲ್ಲಿ ನೋಡಿದ್ದೆ. ನಾವು ಲೆಕ್ಕವನ್ನು Calculator ನಲ್ಲಿ ಮಾಡಿದರೆ ಸ್ವಲ್ಪ ತಡವಾಗಬಹುದು ಆದರೆ ಇವರು ಯಾವುದೇ Calculator ಇಲ್ಲದೆ ಗುಣಾಕಾರ, ಭಾಗಾಕಾರ ಮಾಡುತ್ತಿದ್ದರು. ಇವರೇನು ಪ್ರಾಸಂಗಿಕ ಶಿಕ್ಷಣ ಪಡೆದವರಲ್ಲ. ಅದು ಅವರಿಗೆ 'gift of God' ಅಂದರೆ ದೇವರ ಒಂದು ದೇಣಿಗೆಯಾಗಿತ್ತು. ಇವರು ಗಣಿತದಲ್ಲಿ ಅತ್ಯುತಮವಾದಂತಹ ಸಾಮರ್ಥ್ಯವನ್ನು ಹೊಂದಿದ್ದವರು. ಇವರು ಇಡೀ ಪ್ರಪಂಚ ಬೆರಗುಗೊಳ್ಳುವಂತೆ ಗಣಿತದಲ್ಲಿ ಪಾಂಡಿತ್ಯ ಮತ್ತು ಪ್ರಭುತ್ವವನ್ನು ಹೊಂದಿದ್ದರು. ಇವರು ಎಷ್ಟೇ ಅಂಕಿಗಳನ್ನು ಕೂಡಿಸಿ, ಕಳೆದು ಅಥವಾ ಭಾಗಾಕಾರ ಅಥವಾ ಗುಣಾಕಾರ ಮಾಡಿ ಎಂದು ಹೇಳಿದರೆ ಕ್ಷಣಾರ್ಧದಲ್ಲಿ ಕಂಡು ಹಿಡಿಯುತ್ತಿದ್ದರು. ಇವತ್ತಿನ ಆಧುನಿಕ ಪ್ರಪಂಚದಲ್ಲಿ 21ನೇ ಶತಮಾನದ ಹೊಸ್ತಿಲಲ್ಲಿ Calculator ಅಥವಾ Computer ಅನ್ನು ಮೀರಿದಂತಹ ಒಂದು ಪಾಂಡಿತ್ಯವನ್ನು ಹೊಂದಿದ್ದರಲ್ಲದೆ ಇವರು ಶಿಕ್ಷಣ ಪ್ರೇಮಿಗಳೂ ಸಹ ಆಗಿದ್ದರು. ಅಲ್ಲದೆ ಬೆಂಗಳೂರಿನ HSR Layout ನಲ್ಲಿ

Shakuntala Devi International Institute of Management Sciences & Pre University College ಎಂಬ ಪ್ರತಿಷ್ಠಿತ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿರುತ್ತಾರೆ. ಭಾರತ, ಇಂಗ್ಲೆಂಡ್, ಅಮೇರಿಕಾ, ಕೆನಡಾ ಮತ್ತು ಆಸ್ಟ್ರೇಲಿಯಾ ಸೇರಿದಂತೆ ಪ್ರಪಂಚದ ವಿವಿಧೆಡೆಯ ಅನೇಕ ವಿಶ್ವವಿದ್ಯಾಲಯಗಳಲ್ಲಿ ತಮ್ಮ ಪ್ರತಿಭೆಯ ಪ್ರದರ್ಶನವನ್ನು ಮಾಡುವುದರ ಜೊತೆಗೆ ನಮ್ಮ ದೇಶಕ್ಕೆ ಹೆಸರು ತಂದು ಕೊಟ್ಟಿದ್ದಾರೆ ಎಂಬ ಮಾತನ್ನು ಹೇಳಬಯಸುತ್ತೇನೆ. Indian contribution towards mathematics is zero ಎನ್ನುತ್ತಾರೆ. ಆದರೆ, 'ಶೂನ್ಯ' ಕಂಡು ಹಿಡಿದವರು ನಮ್ಮ ದೇಶದವರು. ಇಂತಹ ಸಾಧನೆ ಮಾಡಿದಂತಹ ಈ ದೇಶದಲ್ಲಿ ಇಡೀ ಪ್ರಪಂಚದ ಎಲ್ಲಾ ರಾಷ್ಟ್ರಗಳು ಆಶ್ಚರ್ಯ ಪಡುವಂತಹ ಒಂದು ಅದ್ಭುತವಾದಂತಹ ಜ್ಞಾನವನ್ನು ಗಣಿತದಲ್ಲಿ ಹೊಂದಿದ್ದರು. ಇವರ ನಿಧನದಿಂದಾಗಿ ರಾಜ್ಯವು ಒಬ್ಬ ಪ್ರಪಂಚದ ಖ್ಯಾತ ಗಣಿತಜ್ಞೆ ಹಾಗೂ ಜ್ಯೋತಿಷ್ಯ ಶಾಸ್ತ್ರಜ್ಞೆಯನ್ನು ಕಳೆದುಕೊಂಡಂತಾಗಿದೆ.

ಶ್ರೀ ಲಾಲ್ಗುಡಿ ಜಯರಾಮನ್ ಇವರು ಖ್ಯಾತ ಪಿಟೀಲು ವಾದಕರು. ಇವರು ಸಂಗೀತ ಪ್ರಿಯರಿಂದ 'ಕರ್ನಾಟಕ ಸಂಗೀತ ಸಾಗರ' ಎಂದೇ ಕರೆಯಿಸಿಕೊಂಡಿದ್ದರು. ಇವರು ಪ್ರಪಂಚದ ನಾನಾ ರಾಷ್ಟ್ರಗಳಲ್ಲಿ ಭಾರತದ ಸಂಗೀತ ಹಾಗೂ ಸಾಂಸ್ಕೃತಿಕ ನಿಯೋಗಗಳಲ್ಲಿ ರಷ್ಯಾ, ಲಂಡನ್, ಸಿಂಗಪೂರ, ಜರ್ಮನಿ ಹಾಗೂ ಇಟಲಿ ಸೇರಿದಂತೆ ಹತ್ತು ಹಲವು ದೇಶಗಳಲ್ಲಿ ಸಂಗೀತ ಕಛೇರಿ ನೀಡಿದಂತಹ ಕೀರ್ತಿಗೆ ಭಾಜನರಾಗಿದ್ದರು. ಇವರು ಭಾರತೀಯ ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿ ರಷ್ಯಾಕ್ಕೆ ಭೇಟಿ ನೀಡಿರುತ್ತಾರೆ. ಸುಮಾರು ಏಳು ದಶಕಗಳ ಕಾಲ ಅಂದರೆ 70 ವರ್ಷಗಳವರೆಗೆ ಇವರು ಸಂಗೀತ ಸರಸ್ವತಿಯ ಸೇವೆ ಮಾಡಿದ ಶ್ರೀಯುತರಿಗೆ 'ಪದ್ಮಶ್ರೀ' ಹಾಗೂ 'ಪದ್ಮಭೂಷಣ' ಪ್ರಶಸ್ತಿಗಳು ಸಂದಿವೆ. ಜೊತೆಗೆ ಚೌಡಯ್ಯ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿ, ಸಂಗೀತ ಕಲಾನಿಧಿ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳಿಗೆ ಭಾಜನರಾದವರು. ಶ್ರೀಯುತರ ನಿಧನದಿಂದ ರಾಜ್ಯವು ಕರ್ನಾಟಕ ಸಂಗೀತ ಕ್ಷೇತ್ರದ ದಿಗ್ಗಜ ಪಿಟೀಲು ವಾದಕರನ್ನು ಕಳೆದುಕೊಂಡಂತಾಗಿದೆ. ಇವರೆಲ್ಲರೂ ತಮ್ಮದೇ ಆದಂತಹ ಕ್ಷೇತ್ರಗಳಲ್ಲಿ ಅದ್ಭುತವಾದಂತಹ

ಸಾಧನೆಯನ್ನು ಮಾಡಿದಂಥವರು. ಈ ಸಂದರ್ಭದಲ್ಲಿ ಒಂದು ಮಾತು ನೆನಪಿಗೆ ಬರುತ್ತಿದೆ. ಒಂದು ಮಗು ಹುಟ್ಟುವಾಗ ಅಳುತ್ತಾ ಬಂದರೆ ಪ್ರಪಂಚವೆಲ್ಲಾ ನಗು ನಗುತ್ತಾ ಸ್ವಾಗತ ಮಾಡುತ್ತದೆ. ಆ ಮಗು ಬೆಳೆದು ದೊಡ್ಡವನಾಗಿ ಸಮಾಜಕ್ಕೆ, ನಾಡಿಗೆ, ನುಡಿಗೆ ಅಥವಾ ವಿಶಿಷ್ಟವಾದಂತಹ ಕ್ಷೇತ್ರದಲ್ಲಿ ತನ್ನದೇ ಆದಂತಹ ಕೊಡುಗೆ ನೀಡಿ ಸಾರ್ಥಕ ಬದುಕನ್ನು ಬದುಕಿ ಒಂದು ದಿವಸ ಈ ಪ್ರಪಂಚದಿಂದ ಪ್ರಯಾಣ ಮಾಡುವಂತಹ ಸಂದರ್ಭದಲ್ಲಿ ಅವನು ನಗು ನಗುತ್ತಾ ಹೋದರೆ ಮನೆಯವರೆಲ್ಲರೂ ಅಳುತ್ತಾ ಬೀಳ್ಕೊಡುತ್ತಾರೆ ಎನ್ನುವಂತಹ ಮಾತು ಈ ಎಲ್ಲಾ ಹಿರಿಯ ಚೇತನಗಳಿಗೆ ಅನ್ವಯಿಸುತ್ತದೆ. ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ, ಅಭಿಮಾನಿಗಳಿಗೆ, ಬಂಧು–ಬಾಂಧವರಿಗೆ, ಹಿತೈಷಿಗಳಿಗೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಈ ಸದನದಲ್ಲಿ ಮಂಡನೆಯಾದಂತಹ ಸಂತಾಪ ಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ, ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀಮತಿ ವಿ.ಎಸ್.ರಮಾದೇವಿ ಅವರು ದಿನಾಂಕ:17/4/2013ರಂದು ನಿಧನ ಹೊಂದಿರುತ್ತಾರೆ. ಸಾಧಾರಣವಾಗಿ 'ಆಡು ಮುಟ್ಟದ ಸೊಪ್ಪಿಲ್ಲ' ಎನ್ನುವಂತೆ ಸಮಾಜ ಸೇವೆಯಲ್ಲಿ ಮತ್ತು ಸಾರ್ವಜನಿಕ ಜೀವನದಲ್ಲಿ ಶ್ರೀಮತಿ ವಿ.ಎಸ್.ರಮಾದೇವಿಯವರು ಮುಟ್ಟದಂತಹ ಜಾಗವಿಲ್ಲ ಎನ್ನುವಂತಹ ಮಾತನ್ನು ನಾವು ಕೇಳಿದ್ದೇವೆ. ಅವರು ಕರ್ನಾಟಕದ ರಾಜ್ಯಪಾಲರಾಗಿದ್ದಾಗ ಇಲಾಖೆಗಳಲ್ಲಿ, ಸರ್ಕಾರದಲ್ಲಿ ಬೇರೆ ಬೇರೆ ಜವಾಬ್ದಾರಿಯನ್ನು ನಿರ್ವಹಿಸುವುದರ ಜೊತೆಗೆ ಸಮಾಜ ಸೇವೆಯಲ್ಲಿಯೂ ಸಹ ಎತ್ತಿದ ಕೈ ಎನ್ನುವುದು ನಮಗೆಲ್ಲರಿಗೂ ತಿಳಿದಿರುವಂತಹ ವಿಷಯವಾಗಿದೆ.

ರಾಜ್ಯಪಾಲರ ಕಚೇರಿಗೆ ಸಾಮಾನ್ಯ ಜನರ ಪ್ರವೇಶಕ್ಕೆ ಅವಕಾಶ ಲಭ್ಯವಿಲ್ಲದಂತಹ ಸಂದರ್ಭದಲ್ಲಿ ಸಾಮಾನ್ಯ ಜನರು ಕೂಡ ರಾಜ್ಯಪಾಲರನ್ನು

ಭೇಟಿ ಮಾಡಿ ಅವರೊಂದಿಗೆ ಸಮಾಲೋಚಿಸಿ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸಬಹುದೆಂದು ಇಡೀ ದೇಶಕ್ಕೆ ಶ್ರೀಮತಿ ರಮಾದೇವಿಯವರು ತೋರಿಸಿಕೊಟ್ಟರು. ಅಂತಹವರು ಇವತ್ತು ನಮ್ಮನ್ನು ಅಗಲಿದ್ದಾರೆ. ಅವರು ರಾಜ್ಯಪಾಲರಾಗಿ ಕೆಲಸ ಮಾಡಿದಂತಹ ಸಂದರ್ಭದಲ್ಲಿ ರಾಜ್ಯಪಾಲರ ಕಚೇರಿ ಎಷ್ಟು ಗೌರವಯುತವಾಗಿ ಕೆಲಸ ಮಾಡಲು ಸಾಧ್ಯವೋ ಅಷ್ಟು ಗೌರವಯುತವಾಗಿ ಎಲ್ಲವನ್ನೂ ಹೊರತುಪಡಿಸಿ ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಕೆಲಸ ಮಾಡಿದಂತಹ ರಾಜ್ಯಪಾಲರುಗಳ ಹೆಸರಿನ ಪಟ್ಟಿಯಲ್ಲಿ ರಮಾದೇವಿಯವರು ಮುಂಚೂಣಿಯಲ್ಲಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಅಂತಹವರನ್ನು ನಾವಿವತ್ತು ಅಗಲಿದ್ದೇವೆ.

ಶ್ರೀ ಡಿ.ಕೆ.ಆದಿಕೇಶವಲುರವರು ನಮ್ಮ ಜೊತೆಯಲ್ಲಿ ಲೋಕಸಭೆಯಲ್ಲಿ ಇದ್ದವರು, ಕೊನೆಯ ಸಾಲಿನಲ್ಲಿ ಕುಳಿತುಕೊಳ್ಳುತ್ತಿದ್ದರು ಸಹ ನಗೆಚಟಾಕಿಗಳ ಮೂಲಕ ಸಾರ್ವಜನಿಕ ಸಮಸ್ಯೆಗಳನ್ನು ಪ್ರತಿಪಾದಿಸುತ್ತಿದ್ದರು. ಧಾರ್ಮಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅವರ ಸೇವೆ ಅಪಾರವಾದುದು ಎಂದು ನಾನು ತಿಳಿದುಕೊಂಡಿದ್ದೇನೆ. ತಿರುಪತಿ ತಿರುಮಲ ದೇವಸ್ಥಾನಗಳ ಆಡಳಿತ ಮಂಡಲಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ಅವರು ಮಾಡಿದಂತಹ ಸೇವೆಗಳು ಇವತ್ತಿಗೂ ಸಹ ಧಾರ್ಮಿಕ ಕ್ಷೇತ್ರದ ನೆನಪಿನಲ್ಲಿವೆ. ಅವರು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳನ್ನು ಸ್ಥಾಪಿಸಿ ಬಡ ವಿದ್ಯಾರ್ಥಿಗಳಿಗೂ ಸಹ ಪ್ರವೇಶಾವಕಾಶ ನೀಡಿರುವುದನ್ನು ನಾನು ಕಂಡಿದ್ದೇನೆ. ಇಂತಹ ಒಬ್ಬ ಅದ್ಭುತ ವ್ಯಕ್ತಿ ಇವತ್ತು ನಮ್ಮನ್ನು ಅಗಲಿದ್ದಾರೆ.

ಸಾಧಾರಣವಾಗಿ ರಾಜಕಾರಣದಲ್ಲಿ ಅವಿರೋಧವಾಗಿ ಆಯ್ಕೆ ಆಗುವುದು ಅದೊಂದು ವಿಶೇಷ. ಒಬ್ಬ ವ್ಯಕ್ತಿ ಅವಿರೋಧವಾಗಿ ಆಯ್ಕೆ ಆಗಬೇಕೆಂದರೆ ಅವರ ಜನಪ್ರಿಯತೆ ಎಷ್ಟೆಂಬುದು ಇಡೀ ಸಮಾಜಕ್ಕೆ ಗೊತ್ತಿರುತ್ತದೆ. ನಮ್ಮ ಸ್ನೇಹಿತರಾದ ಶ್ರೀ ಎಂ.ಎನ್.ನಾಗನೂರ್‌ರವರು ಸಂಪಗಾಂವ–2 ವಿಧಾನಸಭಾ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆ ಆದಾಗ ಈ ವಿಚಾರ ಇಡೀ ರಾಜ್ಯಕ್ಕೆ ಗೊತ್ತಾಯಿತು. ಇವರು ಶ್ರೀ ಬಿ.ಡಿ.ಜತ್ತಿಯವರ ಸಂಪುಟದಲ್ಲೂ ಕೂಡ ಲೋಕೋಪಯೋಗಿ ಸಚಿವರಾಗಿ ಕೆಲಸವನ್ನು

ಮಾಡಿದಂತಹ ಒಬ್ಬ ಹಿರಿಯ ಸಜ್ಜನ ರಾಜಕಾರಣಿ ಎನ್ನುವುದನ್ನು ನಾನು ಕೇಳಿದ್ದೇನೆ.

ಶ್ರೀಮಾನ್ ಪುಂಡಲೀಕಪ್ಪ ಈಶ್ವರಪ್ಪ ಜ್ಞಾನಮೋತೆಯವರು ಯಾವ ರೀತಿಯಲ್ಲಿ ದೇಶಪ್ರೇಮಿಗಳಾಗಿದ್ದರು ಎನ್ನುವುದಕ್ಕೆ ಅವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೇಗೆ ನಡೆದುಕೊಂಡಿದ್ದರು ಎನ್ನುವುದು ಸಾಕ್ಷಿಯಾಗಿದೆ. ಅಂದಿನ ಹೈದರಾಬಾದ್ ಸಂಸ್ಥಾನ ಅವರನ್ನು ಹಿಡಿದು ಕೊಟ್ಟವರಿಗೆ 500 ರೂಪಾಯಿಗಳ ಬಹುಮಾನವನ್ನು ನೀಡುವುದಾಗಿ ಘೋಷಣೆ ಮಾಡಿತ್ತು. ಅವರು ಕುಷ್ಟಗಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಗೊಂಡು ಕೆಲಸ ಮಾಡಿದ್ದನ್ನು ಸಹ ನಾವು ಕಂಡಿದ್ದೇವೆ.

ಇನ್ನು ಶ್ರೀಮಾನ್ ಕೆ.ಡಿ.ಪಾಟೀಲರ ಬಗ್ಗೆ ಹೇಳುವುದಾದರೆ ಒಬ್ಬ ಸಹಕಾರಿ ಧುರೀಣರು ರಾಜಕಾರಣದಲ್ಲಿ ಹೆಚ್ಚು ಹೆಚ್ಚು ಹೇಗೆ ಯಶಸ್ವಿಯಾಗುತ್ತಾರೆ ಎನ್ನುವುದಕ್ಕೆ ಶ್ರೀ ಕಾಶಿರಾಯನಗೌಡ ಪಾಟೀಲರೇ ಸಾಕ್ಷಿ. ಇವರು ಬಿಜಾಪುರದ ಸ್ಪಿನ್ನಿಂಗ್ ಮಿಲ್ ನಿರ್ದೇಶಕರಾಗಿ ಮತ್ತು ಎಪಿಎಂಸಿ ಅಧ್ಯಕ್ಷರಾಗಿ ಕೆಲಸವನ್ನು ಮಾಡಿದ್ದಾರೆ. ಇದರ ಜೊತೆಗೆ ಬೆಂಗಳೂರು ಇನ್ನೂ ಬೆಳೆಯುತ್ತಿದ್ದ ಸಂದರ್ಭದಲ್ಲಿ ಇವರು ಬೆಂಗಳೂರಿನ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕೂಡ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ ಎನ್ನುವುದನ್ನು ನಾವೆಲ್ಲರೂ ಕೇಳಿದ್ದೇವೆ.

ಶ್ರೀ ಪಿ.ಬಿ.ಶ್ರೀನಿವಾಸ್‌ರವರು ಖ್ಯಾತ ಹಿನ್ನಲೆ ಗಾಯಕರು, ನಾವೆಲ್ಲರೂ ಸಣ್ಣವರಾಗಿದ್ದಾಗ ಅಂದರೆ, 50–60–70ರ ದಶಕದಲ್ಲಿ ಸಿನಿಮಾಗಳಿಗೆ ಹೋದರೆ ಅಲ್ಲಿ ಪಿ.ಬಿ.ಶ್ರೀನಿವಾಸ್‌ರವರ ಹಾಡುಗಳೇ ಕೇಳುತ್ತಿದ್ದವು. ಇವತ್ತು ಚಿತ್ರರಂಗದಲ್ಲಿ ಬೇರೆಯವರ ಹಾಡುಗಳನ್ನು ಕೇಳುವುದಕ್ಕೆ ಆಗುತ್ತಿಲ್ಲ, ಇದರ ಬಗ್ಗೆ ಮಾನ್ಯ ಅಂಬರೀಷ್‌ರವರು ಹೇಳಬೇಕು. ಶ್ರೀ ಪಿ.ಬಿ.ಶ್ರೀನಿವಾಸ್‌ರವರು ಇಡೀ ಕನ್ನಡ ಚಿತ್ರರಂಗವನ್ನು ತಮ್ಮ ಹಾಡುಗಳ ಮೂಲಕ ಆಳಿದ್ದರು ಎನ್ನುವುದನ್ನು ನಾವು ಕಂಡಿದ್ದೇವೆ. ಇಂತಹ ಒಬ್ಬ ಅದ್ಭುತ ವ್ಯಕ್ತಿ ನಮ್ಮಿಂದ ಅಗಲಿದ್ದಾರೆ.

ಇನ್ನು ಶಕುಂತಲಾದೇವಿಯವರು ‘ಮಾನವ ಕಂಪ್ಯೂಟರ್’ ಎಂದೇ ಹೆಸರಾಗಿದ್ದವರು. ಈ ಜಗತ್ತಿನಲ್ಲಿ ಏನೆಲ್ಲಾ ನಡೆಯುತ್ತದೆ ಎಂದರೆ, ಹೊಸದಾಗಿ ಆವಿಷ್ಕಾರಗಳನ್ನು ಮಾಡಿದಾಗ ಮಾತ್ರ ಹೊಸತನದ ಬಗ್ಗೆ ನಮಗೆ ಗೊತ್ತಾಗುತ್ತದೆ. ವೈಜ್ಞಾನಿಕವಾಗಿ ಮಾತ್ರ ಹೊಸ ಆವಿಷ್ಕಾರಗಳನ್ನು ಮಾಡಬಹುದೆನ್ನುವುದು ಜನರ ಮನಸ್ಸಿನಲ್ಲಿದೆ. ದೇವರು ನಮಗೆ ಎಲ್ಲವನ್ನು ನೀಡಿರುತ್ತಾನೆ, ಆದರೆ ನಮಗೆ ಬೇಕಾದಾಗ ಮಾತ್ರ ನಾವು ಅದರ ಹುಡುಕಾಟವನ್ನು ಮಾಡುತ್ತೇವೆ. ಆದಕಾರಣ ಇವತ್ತಿನ ತಾಂತ್ರಿಕ ಮತ್ತು ಕಂಪ್ಯೂಟರ್ ಯುಗದಲ್ಲಿ ನಡೆಯತಕ್ಕ ವಿದ್ಯಮಾನಗಳನ್ನು ಶಕುಂತಲಾ ದೇವಿಯವರು ಬಹಳ ಹಿಂದೆಯೇ ಗ್ರಹಿಸಿದ್ದನ್ನು ನಾವು ಕಂಡಿದ್ದೇವೆ. ಹಲವಾರು ಗಿನ್ನಿಸ್ ದಾಖಲೆಗಳನ್ನು ಮಾಡಿದಂತಹ ಗಣಿತಜ್ಞೆಯನ್ನು ನಾವಿವತ್ತು ಕಳೆದುಕೊಂಡಿದ್ದೇವೆ.

ಇನ್ನು ಶ್ರೀ ಲಾಲ್ಗುಡಿ ಜಯರಾಮನ್‌ರವರ ಬಗ್ಗೆ ಹೇಳುವುದಾದರೆ, ಪ್ರತಿಯೊಬ್ಬರು ಸಹ ಅವರವರ ಕ್ಷೇತ್ರದಲ್ಲಿ ಹೊಸ ಪ್ರಯೋಗಗಳನ್ನು ಮಾಡುವಂತಹದ್ದು ಪ್ರಯೋಗ ಶಾಲೆಗಳಲ್ಲಿ ಬಿಟ್ಟರೆ ಉಳಿದೆಡೆ ಬಹಳ ಕಡಿಮೆ. ಆದರೆ ಲಾಲ್ಗುಡಿ ಜಯರಾಮನ್‌ರವರು ತಮ್ಮ ಸಂಗೀತ ಕ್ಷೇತ್ರದಲ್ಲಿ ವಿಶೇಷವಾದ ಹೊಸ ಪ್ರಯೋಗವೊಂದನ್ನು ಮಾಡಿ ‘ಲಾಲ್ಗುಡಿ ಬನಿ’ ಎನ್ನುವ ತಂತಿ ವಾದ್ಯವನ್ನು ಸಂಗೀತ ಲೋಕಕ್ಕೆ ಪರಿಚಯಿಸಿದರು. ನಮ್ಮ ರಾಷ್ಟ್ರದ ಗೌರವಯುತ ಪ್ರಶಸ್ತಿಗಳಾದ ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳು ಅವರಿಗೆ ಸಂದಿವೆ. ಇವರು ಸಹ ಇವತ್ತು ನಮ್ಮನ್ನು ಅಗಲಿದ್ದಾರೆ.

ಮಾನ್ಯ ಸಭಾಪತಿಯವರೆ, ನನ್ನದೊಂದು ವಿಶೇಷ ಪ್ರಸ್ತಾಪ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ. ಇತ್ತೀಚಿನ ದಿವಸಗಳಲ್ಲಿ ಛತ್ತೀಸ್‌ಗಡದಲ್ಲಿ ದೊಡ್ಡದೊಂದು ದುರಂತದ ಬಗ್ಗೆ ತಮಗೆಲ್ಲರಿಗೂ ತಿಳಿದಿದೆ. ರಾಷ್ಟ್ರ ಮತ್ತು ದೇಶವನ್ನು ಆಳತಕ್ಕ ಜವಾಬ್ದಾರಿಯನ್ನು ಹೊತ್ತಿರತಕ್ಕ ನಮಗೆಲ್ಲರಿಗೂ ಕೆಟ್ಟ ಸಂದೇಶ ನೀಡಿದಂತಹ ಕರಾಳ ಕೃತ್ಯ ಎಂದು ನಾನು ಭಾವಿಸುತ್ತೇನೆ. ಇದರಲ್ಲಿ ನಮ್ಮ ಹಲವು ಗಣ್ಯ ವ್ಯಕ್ತಿಗಳು, ಪೋಲೀಸ್ ಸಿಬ್ಬಂದಿಗಳು ಬಲಿಯಾಗಿದ್ದಾರೆ, ದೇಶ ರಕ್ಷಣೆ ಮಾಡಬೇಕಾದವರು,

ದೇಶವನ್ನು ಆಳುವ ಜವಾಬ್ದಾರಿಯನ್ನು ಹೊತ್ತವರು ನಕ್ಸಲರ ಕರಾಳ ಕೃತ್ಯಕ್ಕೆ ಬಲಿಯಾಗಿದ್ದಾರೆ. ಇಂತಹ ದುರಂತಗಳು ಮತ್ತೆಲ್ಲೂ ಸಹ ನಡೆಯಬಾರದು. ಕರ್ನಾಟಕ ರಾಜ್ಯದಲ್ಲೂ ಸಹ ಇದರ ಬಗ್ಗೆ ಗಂಭೀರವಾದ ಚಿಂತನೆ ಆಗಬೇಕೆನ್ನುವುದು ನನ್ನ ಅಭಿಪ್ರಾಯ. ಆಡಳಿತ ಪಕ್ಷದಲ್ಲಿ ಕುಳಿತಿರುವ ನನ್ನೆಲ್ಲಾ ಮಿತ್ರರಲ್ಲಿ ಈ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಾವು ಸಹ ಈ ನಕ್ಸಲ್ ಚಟುವಟಿಕೆ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕಾದ ಅವಶ್ಯಕತೆ ಇದೆ. ಇತ್ತೀಚಿನ ದಿವಸಗಳಲ್ಲಿ ಕರ್ನಾಟಕ ರಾಜ್ಯದಲ್ಲೂ ಕೂಡ ನಕ್ಸಲ್ ಚಲನವಲನಗಳು ನಡೆಯುತ್ತಿರುವುದನ್ನು ನಾವು ಗಮನಿಸಿದ್ದೇವೆ. ಇವತ್ತು ಛತ್ತೀಸ್‌ಗಡದ ದುರಂತದ ನಂತರ ಅಲ್ಲಿರತಕ್ಕ ಜನರನ್ನು ಬೇರೆ ಕಡೆಗೆ ಸಾಗಿಸತಕ್ಕ ಕಾರ್ಯ ನಡೆದಿದೆ. ಇದರಿಂದ ಪಲಾಯನ ಅಥವಾ ಅಡಗುತಾಣ ಮಾಡಿಕೊಳ್ಳುವ ಸಾಧ್ಯತೆ ಇದೆ. ಇದನ್ನು ಸಮರ್ಥವಾಗಿ ಎದುರಿಸಲು ನಾವು ಸಜ್ಜಾಗಬೇಕು. ನಮ್ಮಲ್ಲಿರುವ ಸಣ್ಣಪುಟ್ಟ ಅಭಿಪ್ರಾಯ ವ್ಯತ್ಯಾಸಗಳನ್ನು ಬದಿಗಿಟ್ಟು ರಾಜಕೀಯರಹಿತವಾಗಿ ಕಾರ್ಯಾಚರಣೆಯನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಂಡು ಇವರೆಲ್ಲರ ಆತ್ಮಕ್ಕೆ ಶಾಂತಿ ನೀಡಿ, ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ನೋವನ್ನು ಭರಿಸತಕ್ಕ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತಾ ತಮ್ಮ ಸಂತಾಪ ಸೂಚನೆಗೆ ಸಹಮತಿಯನ್ನು ಸೂಚಿಸುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಛತ್ತೀಸ್‌ಗಡದಲ್ಲಿ ಮೃತರಾದ ನಮ್ಮ ದೇಶದ ನಾಯಕರು ಮತ್ತಿತರರ ಹೆಸರುಗಳನ್ನು ಇದರಲ್ಲಿ ಸೇರಿಸಿಕೊಂಡು ಅವರ ಕುಟುಂಬ ವರ್ಗದವರಿಗೆ ಅವರ ಅಗಲಿಕೆಯ ನೋವನ್ನು ಭರಿಸತಕ್ಕ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷದ ಮೌನವನ್ನು ಆಚರಿಸಿದರು.)**

**ಸಭಾಪತಿಯವರು:–** ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

**(11 ಗಂಟೆ 48 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ ಮಧ್ಯಾಹ್ನ 12 ಗಂಟೆ 12 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಪೀಠದಲ್ಲಿ ಸಭಾಪತಿಯವರಾದ ಶ್ರೀ ಡಿ.ಹೆಚ್.ಶಂಕರಮೂರ್ತಿಯವರು ಉಪಸ್ಥಿತರಾದರು)**

**2. ನೂತನ ಸಚಿವರುಗಳ ಪರಿಚಯ**

**ಸಭಾಪತಿಯವರು:–** ಈಗ ಮಾನ್ಯ ಸಭಾನಾಯಕರು ನೂತನ ಸಚಿವರುಗಳ ಪರಿಚಯವನ್ನು ಮಾಡಿಕೊಡುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ತಾವು ಸದನವನ್ನು ಪ್ರಾರಂಭ ಮಾಡುವ ಮೊದಲು ಸದನದಲ್ಲಿ ಹಾಜರಿರುವ ಸಚಿವರುಗಳನ್ನು ಸದನಕ್ಕೆ ಪರಿಚಯ ಮಾಡಿಕೊಡುತ್ತೇನೆ.

**(ಈ ಕೆಳಕಂಡ ಸಚಿವರುಗಳನ್ನು ಮಾನ್ಯ ಸಭಾನಾಯಕರು ಸದನಕ್ಕೆ ಪರಿಚಯ ಮಾಡಿಕೊಟ್ಟರು)**

1. ಶ್ರೀ ಆರ್.ವಿ.ದೇಶಪಾಂಡೆ, ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು
2. ಶ್ರೀ ಕೆ.ಜೆ.ಜಾರ್ಜ್, ಗೃಹ ಸಚಿವರು
3. ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ, ಅಬಕಾರಿ ಸಚಿವರು
4. ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್, ಸಹಕಾರ ಸಚಿವರು

5. ಶ್ರೀ ದಿನೇಶ್ ಗುಂಡೂರಾವ್, ಆಹಾರ ಹಾಗೂ ಗ್ರಾಹಕರ ವ್ಯವಹಾರಗಳ ನಾಗರಿಕ ಸರಬರಾಜು ಸಚಿವರು

6. ಶ್ರೀ ಖಮರುಲ್ ಇಸ್ಲಾಂ, ಪೌರಾಡಳಿತ ಮತ್ತು ನಗರಾಭಿವೃದ್ಧಿ ಹಾಗೂ ಸಾರ್ವಜನಿಕ ಉದ್ದಿಮೆ, ಹಜ್ ಮತ್ತು ವಕ್ಫ್, ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

7. ಶ್ರೀ ಹೆಚ್.ಕೆ.ಪಾಟೀಲ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

8. ಶ್ರೀ ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು

**ಸಭಾಪತಿಯವರು:–** ಧನ್ಯವಾದಗಳು. ಮಾನ್ಯ ಸಭಾನಾಯಕರೇ, ಇನ್ಯಾರಾದರೂ ಸಚಿವರು ಸದನಕ್ಕೆ ಬಂದರೆ ನಂತರ ಅವರುಗಳ ಪರಿಚಯವನ್ನು ಮಾಡಿಕೊಡಿ.

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಮಾನ್ಯ ಸಭಾಪತಿಯವರೇ, ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಸಿಕ್ಕಿತು.

**ಶ್ರೀ ಯಂ.ಸಿ. ನಾಣಯ್ಯ (ವಿಧಾನ ಸಭಾ ಕ್ಷೇತ್ರ):–** ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ ಎನ್ನುವವರಲ್ಲಿ ನೀವೂ ಒಬ್ಬರು ಎಂದು ಕಾಣುತ್ತದೆ.

**ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ರೆಕಾರ್ಡ್ ಸರಿಯಾಗಬೇಕು ಎನ್ನುವ ಕಾರಣಕ್ಕಾಗಿ ಹೇಳುತ್ತಿದ್ದೇನೆ. ಇಲ್ಲಿ ಯಾರೂ ಸಂಘ ಪರಿವಾರದವರು ಇಲ್ಲ, ಈಗ ಕಾಂಗ್ರೆಸ್ ಸರ್ಕಾರ ಇದೆ, ಎಲ್ಲರೂ ಕಾಂಗ್ರೆಸ್ ಪಕ್ಷದವರು ಮತ್ತು ಇಲ್ಲಿ ಕುಂತಿ ಮಕ್ಕಳು ಯಾರೂ ಇಲ್ಲ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಲಘುವಾಗಿ ಹೇಳಿದ್ದನ್ನು ಇಷ್ಟು ಗಂಭೀರವಾಗಿ ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಕಳೆದ

ಅಧಿವೇಶನದಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದಂತಹ ಸಂದರ್ಭದಲ್ಲಿ ಕೆಲವು ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡಲೇಬೇಕೆಂಬ ತೀರ್ಮಾನಕ್ಕೆ ಬಂದು, ಅದಕ್ಕೆ ತಾವು ಕೂಡ ತಮ್ಮ ಸಹಮತವನ್ನು ವ್ಯಕ್ತ ಮಾಡಿದ್ದೀರಿ. ತಾವು ಇವತ್ತು ಸಂತಾಪ ಸೂಚನೆಯನ್ನು ಮಂಡಿಸಿದ್ದೀರಿ. ಆ ಸಂದರ್ಭದಲ್ಲಿ ನಾನು ಮಧ್ಯ ಪ್ರವೇಶ ಮಾಡಿ ಮಾತನಾಡತಕ್ಕಂಥಾದ್ದು ಸರಿ ಅಲ್ಲ ಎನ್ನುವ ಭಾವನೆಯಿಂದ ನಾವು ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗಲಿಲ್ಲ.

**ಸಭಾಪತಿಯವರು:-** ಈ ಸಂತಾಪ ಸೂಚಕ ನಿರ್ಣಯದ ಪ್ರಶ್ನೆ ಬಂದಾಗ ತಾವು ಹೇಳಿದ್ದು ನನಗೆ ನೆನಪಿದೆ. ನಾವು ಹುಷಾರಾಗಿ ಇರಬೇಕಾಗುತ್ತದೆ. ನಮ್ಮ ಸದನದ ಘನತೆ, ಗೌರವ, ಪದ್ಧತಿಗೆ ತಕ್ಕ ಹಾಗೆ ನಾವು ಅದನ್ನು ನಡೆಸಬೇಕು. ಆದರೆ ಕೆಲವು ತಾಪತ್ರಯಗಳು ಏನು ಬರುತ್ತವೆ ಎಂದರೆ ಕೆಳಮನೆ ಹಾಗೂ ಮೇಲ್ಮನೆ ಎರಡು ಸದನಗಳಲ್ಲಿ ಒಟ್ಟಿಗೆ ಸಂತಾಪ ಸೂಚನೆ ನಿರ್ಣಯವನ್ನು ಮಂಡಿಸುವಾಗ ಕೆಳಮನೆಯಿಂದ ನಮಗೆ ಈ ಸಂಬಂಧವಾಗಿ ಒಂದು ಪಟ್ಟಿ ಬರುತ್ತದೆ. ಆ ಪಟ್ಟಿಯನ್ನು ನಾವು ಬದಲಾವಣೆ ಮಾಡುವುದು ಅಷ್ಟು ಸಮಂಜಸವಲ್ಲ ಎಂದು ನನಗೆ ಅನ್ನಿಸಿತು. ಹಾಗಾಗಿ ತಾವು ಹಿಂದೆ ಹೇಳಿದ ಮಾತುಗಳನ್ನು ನೆನಪಿಟ್ಟುಕೊಂಡು ಈ ವಾರದಲ್ಲಿ ನಾನು ಹಾಗೂ ಮಾನ್ಯ ಸಭಾಧ್ಯಕ್ಷರು ಒಂದು ಸಣ್ಣ ಸಭೆಯನ್ನು ಮಾಡುವವರಿದ್ದೇವೆ. ಆ ಸಭೆಯಲ್ಲಿ ಈ ವಿಷಯಗಳನ್ನಿಟ್ಟುಕೊಂಡು ಪ್ರಸ್ತಾಪ ಮಾಡಿ ಮುಂದೆ ಆ ಚರ್ಚೆಯಿಂದ ಏನು ಪರಿಣಾಮವಾಗಿದೆ ಎನ್ನುವುದನ್ನು ತಮಗೆ ತಿಳಿಸುತ್ತೇವೆ. ಹಾಗಾಗಿ ಹೆಸರುಗಳನ್ನು ತೆಗೆದುಕೊಂಡು ಮಾತನಾಡುವುದು ಬೇಡ.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ನಮ್ಮ ಸಂಸತ್ತಿನ ಕೌಲ್ ಅಂಡ್ ಶಕ್ದರ್'ನಲ್ಲಿ ಇದರ ಬಗ್ಗೆ ಸ್ಪಷ್ಟವಾಗಿ ಕೆಲವು ವಿಚಾರಗಳನ್ನು ಹೇಳಿದ್ದಾರೆ. Distinguished personages ಎಂದು ಹೇಳುವಂಥ ಪರಿಸ್ಥಿತಿ ಬಂದಾಗ, ಸದಸ್ಯರನ್ನು ಬಿಟ್ಟು, ಮಾಜಿ ಸದಸ್ಯರನ್ನು ಬಿಟ್ಟು ನಾವು ಯಾವುದಾದರೂ ಒಂದು ರೆಫರೆನ್ಸ್‌ನ್ನು ಮಾಡಬೇಕಾದಂಥ ಸಂದರ್ಭ

ಬಂದಾಗ distinguished personages ಎಂದು ಹೇಳುತ್ತಿರತಕ್ಕಂಥ ಅಥವಾ foreign States ಎನ್ನುವ ವಿಚಾರ ಬಂದಾಗ, distinguished personages ಎಂದರೆ ಅಲ್ಲಿ ಮಹಾತ್ಮ ಗಾಂಧೀಯವರ ಹೆಸರು ಬರುತ್ತದೆ. ಅಂತಹವರ ಹೆಸರುಗಳ ಬಗ್ಗೆ ಹೇಳುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ನಾವಿದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ ಇವತ್ತು ತಾವು ತಂದಿರತಕ್ಕಂಥ ಸಂತಾಪ ಸೂಚಕ ನಿರ್ಣಯದ ವಿಚಾರಗಳ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಆದರೆ ನಾವು ಯಾರ ಬಗ್ಗೆ ಮಾತನಾಡುತ್ತೇವೆ ಎಂಬುದನ್ನು ನೋಡಬೇಕು. ತಾವು ಶ್ರೀಮತಿ ಶಕುಂತಲ ಬಾಯಿ ಬಗ್ಗೆ ತಂದಿರಿ, ಅದನ್ನು ನಾನು ಇಲ್ಲವೆಂದು ಹೇಳುವುದಕ್ಕೆ ತಯಾರಿಲ್ಲ. ಅದೇ ರೀತಿ ತಾವು ಶ್ರೀ ಶ್ರೀನಿವಾಸ ರಾವ್ ರವರ ಬಗ್ಗೆ ತಂದಿರಿ, ಅದರ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಆದರೆ ಇನ್ನು ಕೆಲವು ವಿಚಾರಗಳ ಬಗ್ಗೆ ಹೇಳುವುದಾದರೆ, ನಾವು ಎಲ್ಲಿಗೆ ತಲುಪುತ್ತೇವೆ ಎಂದರೆ, ಈ ದೇಶದಲ್ಲಿ ಬೇಕಾದಷ್ಟು ಜನ ಉದ್ಯಮಿಗಳು, ಬೇಕಾದಷ್ಟು ಜನ ಹಣ ಮಾಡುವವರಿದ್ದಾರೆ ಮತ್ತು ಬೇಕಾದಷ್ಟು ಜನ ಕೆಲಸ ಮಾಡುವವರಿದ್ದಾರೆ. ಬಹುಶಃ ಅವರೆಲ್ಲರ ಹೆಸರುಗಳನ್ನು ನಾವಿಲ್ಲಿ ತಂದು ರೆಫರೆನ್ಸ್ ಮಾಡಬೇಕೆಂದರೆ, ಯಾರ ಹೆಸರುಗಳನ್ನು ಸಂತಾಪ ಸೂಚಕ ನಿರ್ಣಯದಲ್ಲಿ ಪ್ರಸ್ತಾಪ ಮಾಡಬೇಕೆಂಬುದು ಈ ಸದನದ ಘನತೆಯ ಪ್ರಶ್ನೆಯಾಗುತ್ತದೆ. ಈ ವಿಚಾರವನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ದಯವಿಟ್ಟು ತಾವು ಇದರ ಬಗ್ಗೆ ಗಮನವನ್ನು ಹರಿಸಿ.

**ಸಭಾಪತಿಯವರು:-** ನಾನು ಈ ವಿಚಾರವನ್ನು ಗಮನಿಸಿದ್ದೇನೆ. ನಾನು ಖಂಡಿತ ಅದರ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸುತ್ತೇನೆ.

ಈಗ ಇನ್ನಿಬ್ಬರು ಸಚಿವರು ಈ ಸದನಕ್ಕೆ ಬಂದಿದ್ದಾರೆ. ಮಾನ್ಯ ಸಭಾನಾಯಕರು ಅವರ ಪರಿಚಯವನ್ನು ಸದನಕ್ಕೆ ಮಾಡಿಕೊಡಬೇಕು.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ, ಸಣ್ಣ ನೀರಾವರಿ ಸಚಿವರು. ಶ್ರೀ ಎಂ.ಹೆಚ್.ಅಂಬರೀಶ್, ವಸತಿ ಸಚಿವರು ಇವರುಗಳನ್ನು ಈ ಸದನಕ್ಕೆ ಪರಿಚಯ ಮಾಡಿಕೊಡುತ್ತಿದ್ದೇನೆ.

**ಸಭಾಪತಿಯವರು:–** ಇವತ್ತು ಪ್ರಶ್ನೋತ್ತರ ವೇಳೆ ಇಲ್ಲ. ಹಾಗಾಗಿ ಶೂನ್ಯ ವೇಳೆಯೂ ಸಹ ಇರುವುದಿಲ್ಲ. ಶೂನ್ಯ ವೇಳೆಯ ಬದಲು special mention ಅನ್ನು ತೆಗೆದುಕೊಳ್ಳುತ್ತೇವೆ. ಅದು part of Question Hour. ನನ್ನ ಬಳಿ ಒಂದೇ ಒಂದು ವಿಶೇಷ ಪ್ರಸ್ತಾವ ಇದೆ. ಅದನ್ನು ಮುಗಿಸಿದ ನಂತರ ಬೇರೆ ವಿಚಾರಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ. ಮಾನ್ಯ ನಾಣಯ್ಯನವರು ಅಥವಾ ಮಾನ್ಯ ಸಭಾನಾಯಕರು ಹೇಳಿದಂಥ ವಿಚಾರಗಳೇನಿವೆ, ಅಂತಹ ವಿಚಾರಗಳಿದ್ದರೆ ಪ್ರಸ್ತಾಪ ಮಾಡಿ. ಬೇರೆ ವಿಚಾರಗಳಿದ್ದರೆ ನಂತರ ಪ್ರಸ್ತಾಪ ಮಾಡಿ.

ಈಗ ವಿಶೇಷ ಪ್ರಸ್ತಾವನೆಗಳನ್ನು ತೆಗೆದುಕೊಳ್ಳೋಣ. ಪ್ರಶ್ನೋತ್ತರ ವೇಳೆ ಇದ್ದರೆ ನಾವು ಶೂನ್ಯ ವೇಳೆಯನ್ನು ತೆಗೆದುಕೊಳ್ಳುತ್ತೇವೆ. ಪ್ರಶ್ನೋತ್ತರ ವೇಳೆ ಇಲ್ಲದಿದ್ದರೆ ನಿಯಮ 351ರ ಅಡಿಯಲ್ಲಿ ವಿಶೇಷ ಪ್ರಸ್ತಾವನೆಗಳನ್ನು ತೆಗೆದುಕೊಳ್ಳುತ್ತೇವೆ. ಅದು part of procedure. ಮಾನ್ಯ ಶಿವಯೋಗಿಸ್ವಾಮಿಯವರೆ, ನೀವು ವಿಶೇಷ ಪ್ರಸ್ತಾವನೆಗಳ ಅಡಿಯಲ್ಲಿ ಕಳುಹಿಸಿರುವ ವಿಷಯವನ್ನು ಓದಿ. ಇದು ಸಹ ಹೆಚ್ಚು–ಕಡಿಮೆ ಶೂನ್ಯ ವೇಳೆಯೇ ಆಗಿರುತ್ತದೆ. ಆದರೆ ಅದಕ್ಕೆ ಹೆಸರು ಬೇರೆ ಇರುತ್ತದೆ ಅಷ್ಟೆ.

## 3. ವಿಶೇಷ ಪ್ರಸ್ತಾವ

**2013–14ರ ಶೈಕ್ಷಣಿಕ ವರ್ಷದಲ್ಲಿ ಆರಂಭ ಮಾಡಬೇಕಿದ್ದ ವಸತಿ ಶಾಲೆಗಳನ್ನು ರದ್ದುಗೊಳಿಸಿರುವ ಬಗ್ಗೆ.**

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಹಿಂದಿನ ವರ್ಷದಲ್ಲಿ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಜಗದೀಶ್ ಶೆಟ್ಟರ್‌ರವರು ರಾಜ್ಯದಲ್ಲಿ ನೂತನವಾಗಿ ಮೊರಾರ್ಜಿ ದೇಸಾಯಿ, ರಾಣಿ ಚೆನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ ವಸತಿ ಶಾಲೆಗಳನ್ನು ಪ್ರಸ್ತುತ ಶೈಕ್ಷಣಿಕ ವರ್ಷದಿಂದ (2013–14) ಆರಂಭಿಸಲು ತೀರ್ಮಾನಿಸಿ, ಅಗತ್ಯ ಕ್ರಮ ಕೈಗೊಂಡಿದ್ದರು. ನನ್ನ ಕ್ಷೇತ್ರವಾದ ದಾವಣಗೆರೆ ಜಿಲ್ಲೆಯಲ್ಲಿ ಹರಪನಹಳ್ಳಿ ಹಾಗೂ ಹೊನ್ನಾಳಿ ತಾಲ್ಲೂಕುಗಳಲ್ಲಿ ಅಟಲ್ ಬಿಹಾರಿ

ವಾಜಪೇಯಿ ವಸತಿ ಶಾಲೆಗಳು, ಚನ್ನಗಿರಿ ತಾಲ್ಲೂಕಿನಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಹಾಗೂ ಜಗಳೂರು ತಾಲ್ಲೂಕಿನಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಆರಂಭಿಸಬೇಕಾಗಿತ್ತು. ಅದಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯರೂಪದ ಚರ್ಚೆಗಳು ಆಗಿತ್ತು.

ವಿಶೇಷವಾಗಿ, ಗ್ರಾಮೀಣ ಪ್ರದೇಶದ, ಹಿಂದುಳಿದ, ದಲಿತ, ಅಲ್ಪಸಂಖ್ಯಾತ ಹಾಗೂ ಇತರೆ ಪ್ರತಿಭಾನ್ವಿತ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಸದುದ್ದೇಶದಿಂದ ಶಾಲೆಗಳನ್ನು ಆರಂಭಿಸಲು ತೀರ್ಮಾನಿಸಲಾಗಿತ್ತು.

ಎಲ್ಲಾ ಜಿಲ್ಲೆಗಳಲ್ಲಿ ಈ ಶಾಲೆಗಳನ್ನು ಆರಂಭಿಸಲು ತಾತ್ಕಾಲಿಕವಾಗಿ ಬಾಡಿಗೆ ಕಟ್ಟಡಗಳನ್ನು ಗುರುತಿಸಲಾಗಿದ್ದು, ಬೋಧಕ, ಬೋಧಕೇತರ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ (Out sourcing) ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಅರ್ಹ ವಿದ್ಯಾರ್ಥಿಗಳಿಗೆ ಪೂರ್ವಭಾವಿ ಪರೀಕ್ಷೆಗಳನ್ನು ನಡೆಸಿ, ಕೌನ್ಸೆಲಿಂಗ್ ಕೂಡ ಮಾಡಲಾಗಿದೆ.

ಈ ಹಂತದಲ್ಲಿ ಪ್ರಸ್ತುತ ವರ್ಷ ಈ ಶಾಲೆಗಳನ್ನು ಆರಂಭಿಸುವುದನ್ನು ತಡೆಹಿಡಿದಿರುವುದಾಗಿ ಸರ್ಕಾರ ಸುತ್ತೋಲೆ ಹೊರಡಿಸಿದ್ದು, ಇದರಿಂದಾಗಿ ಪೋಷಕರಿಗೆ ಆತಂಕವಾಗಿದ್ದು, ಸರ್ಕಾರದ ಈ ನಿಲುವಿನಿಂದಾಗಿ ರಾಜ್ಯದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಭವಿಷ್ಯಕ್ಕೆ ಗ್ರಹಣ ಹಿಡಿದಂತಾಗಿದೆ. ಮಾನ್ಯ ಸಮಾಜ ಕಲ್ಯಾಣ ಸಚಿವರು ಕೂಡಲೇ ಸೂಕ್ತ ಆದೇಶ ಮಾಡಿ ಶಾಲೆಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

ಮಾನ್ಯ ಸಭಾಪತಿಗಳೇ, ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ, 'ಸದರಿ ಶಾಲೆಗಳನ್ನು ಪ್ರಾರಂಭ ಮಾಡುವ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದೆ ಎಂದು ಆದೇಶವನ್ನೇನು ಹೊರಡಿಸಿದ್ದೀರೋ ತಕ್ಷಣ ಅದನ್ನು ವಾಪಸ್ಸು ಪಡೆಯಬೇಕು ಮತ್ತು ಈ ಶೈಕ್ಷಣಿಕ ವರ್ಷದಿಂದಲೇ ಪ್ರಾರಂಭ ಮಾಡುತ್ತೇವೆ ಎಂದು ಆಶ್ವಾಸನೆ ಕೊಡಬೇಕು' ಎಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್(ಸಭಾನಾಯಕರು):–** ಉತ್ತರವನ್ನು ನಂತರ ಕೊಡಿಸುತ್ತೇನೆ. ಉತ್ತರ ಕೊಡಲು ನಮಗೆ 3 ದಿವಸಗಳ ಅವಕಾಶ ಇರುತ್ತದೆ. ಹಾಗಾಗಿ ಸಂಬಂಧಪಟ್ಟ ಸಚಿವರ ಮುಖಾಂತರ ಆದಷ್ಟು ಬೇಗ ಉತ್ತರ ಕೊಡಿಸುತ್ತೇನೆ. ಸಾಧ್ಯವಾದರೆ ನಾಳೆಯೇ ಉತ್ತರ ಕೊಡಿಸುತ್ತೇನೆ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಸಾಧ್ಯವಾದರೇ, ಇವತ್ತು ಸಾಯಂಕಾಲದ ಒಳಗೆ ಉತ್ತರ ಕೊಡಿಸಿ.

**ಶ್ರೀ ಎಸ್.ಆರ್. ಪಾಟೀಲ್:–** ಆದಷ್ಟು ಬೇಗ ಉತ್ತರ ಕೊಡಿಸುತ್ತೇನೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಗಳೇ, ನಾನೂ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಲು ಮನವಿ ಕೊಟ್ಟಿದ್ದೆ.

**ಸಭಾಪತಿಯವರು:–** ನನಗದು ತಲುಪಿಲ್ಲ. ವಿಳಂಬವಾಗಿ ತಲುಪಿದರೆ ಅದನ್ನು ಸರ್ಕಾರಕ್ಕೆ ಕಳುಹಿಸುವುದಕ್ಕೆ ಆಗುವುದಿಲ್ಲ. ನಾಳೆ 10 ಗಂಟೆಯ ಒಳಗೆ ನಿಮ್ಮ ನೋಟಿಸನ್ನು ಕಳುಹಿಸಿ ಕೊಟ್ಟರೆ ನಾನು ನಿಮಗೆ ಅವಕಾಶ ಕೊಡುತ್ತೇನೆ. 'ಶೂನ್ಯವೇಳೆ'ಯ ಅಡಿಯಲ್ಲಿ ಕೊಟ್ಟ ಯಾವ ನೋಟಿಸ್‌ನ್ನು ಇವತ್ತು ತೆಗೆದುಕೊಂಡಿಲ್ಲ.

ನಾವು ಸದನವನ್ನು ಗಂಭೀರವಾಗಿ ನಡೆಸಬೇಕಾಗುತ್ತದೆ. ಅದಕ್ಕೆ ನಾವೇ ಮಾಡಿಕೊಂಡಿರುವ ನಿಯಮಾವಳಿಗಳ ಪುಸ್ತಕ ಇದೆ. ಎಲ್ಲಾ ಗೌರವಾನ್ವಿತ ಸದಸ್ಯರಿಗೆ ನಾನು ಈ ಪುಸ್ತಕವನ್ನು ಕೊಟ್ಟಿದ್ದೇನೆ. ಆ ಪುಸ್ತಕದಲ್ಲಿರುವ ಹಾಗೆ ನಾವು ನಡೆದುಕೊಳ್ಳಬೇಕಾಗುತ್ತದೆ. ನಾನು ಶೂನ್ಯವೇಳೆ ಎಂದು ಬರೆದುಕೊಟ್ಟಿದ್ದೆ, ಅದನ್ನು ಸ್ಪೆಷಲ್ ಮೆನ್‌ಷನ್ ಎಂದು ಭಾವಿಸಿ ತೆಗೆದುಕೊಳ್ಳಿ ಎಂದು ಮಾನ್ಯ ಸದಸ್ಯರು ಹೇಳುವುದಕ್ಕೆ ಬರುವುದಿಲ್ಲ. ನಾನು ಸಭಾಪತಿಯಾಗಿ ಶನಿವಾರದ ದಿವಸ ಪ್ರೆಸ್‌ಮೀಟ್ ಮಾಡಿ, ಶೂನ್ಯವೇಳೆ ಇರುವುದಿಲ್ಲ, ಪ್ರಶ್ನೋತ್ತರ ವೇಳೆ ಇರುವುದಿಲ್ಲ ಆದರೆ ಸ್ಪೆಷಲ್ ಮೆನ್‌ಷನ್ ಮಾಡುವುದಕ್ಕೆ ಅವಕಾಶ ಉಂಟು ಎಂದು ಹೇಳಿದ್ದೆ. ನಾನು ನೋಡಿದ ಹಾಗೆ, ಬೆಂಗಳೂರಿನ ಪತ್ರಿಕೆಗಳಲ್ಲಿ ಅದನ್ನು ಪ್ರಿಂಟ್ ಮಾಡಿದ್ದಾರೆ. ಮಾನ್ಯ ಸದಸ್ಯರು, ಅದನ್ನು ಗಮನಿಸಿಯೇ ಇಲ್ಲ, ಶೂನ್ಯವೇಳೆ ಎಂದು ಕೊಟ್ಟಿದ್ದನ್ನು ಸ್ಪೆಷಲ್

ಮೆನ್‌ಷನ್ ಎಂದು ಕನ್‌ವರ್ಟ್ ಮಾಡಿಕೊಳ್ಳಿ ಎಂದು ಹೇಳಿದರೆ ಅದು ಅಷ್ಟು ಸರಿ ಎಂದೆನಿಸುವುದಿಲ್ಲ. ತಮ್ಮ ಮನಸ್ಸಿಗೆ ಬೇಜಾರಾಗಿದ್ದರೆ ದಯವಿಟ್ಟು ಕ್ಷಮಿಸಬೇಕು. ದಯವಿಟ್ಟು ಸಹಕರಿಸಿ. ನಿಯಮಾವಳಿಗಳ ಪ್ರಕಾರ ಎಲ್ಲರಿಗೂ ಎಲ್ಲಾ ವಿಚಾರಗಳನ್ನು ಚರ್ಚಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವುದು ನನ್ನ ಆಸೆಯಾಗಿದೆ. ಹೆಚ್ಚಿನ ಸದಸ್ಯರು ಭಾಗವಹಿಸಬೇಕು, ಚರ್ಚೆ ಮಾಡಬೇಕು, ಮಾತನಾಡಬೇಕು, ಅವರ ಅಭಿಪ್ರಾಯಗಳನ್ನು ಹೇಳಬೇಕು ಎನ್ನುವುದು ನನ್ನ ಆಸೆಯಾಗಿದೆ. ಮತ್ತೆ, ಹೆಚ್ಚಿನ ವಿಷಯಗಳಿಗೆ ಸರ್ಕಾರ ಸ್ಪಂದಿಸಬೇಕು ಎನ್ನುವುದು ಕೂಡ ನನ್ನ ಭಾವನೆಯಾಗಿದೆ. ಆದರೆ, ನಾವೇ ಮಾಡಿಕೊಂಡಿರುವ ನಿಯಮಾವಳಿಗಳನ್ನು ಬಿಟ್ಟು ಸದನ ನಡೆಸುವ ವಿಚಾರ ನನ್ನನ್ನು ಇಕ್ಕಟ್ಟಿಗೆ ಸಿಲುಕಿಸುತ್ತದೆ. ದಯವಿಟ್ಟು ಕ್ಷಮಿಸಿ.

## 4. ವರದಿಗಳನ್ನೊಪ್ಪಿಸುವುದು

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ನಾನು ಹಕ್ಕುಬಾಧ್ಯತಾ ಸಮಿತಿಯ 72ನೇ ವರದಿಯನ್ನು ಒಪ್ಪಿಸುತ್ತೇನೆ.

**ಡಾ|| ಎಸ್.ಆರ್. ಲೀಲಾ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಗಳೇ, ನಾನು ಕರ್ನಾಟಕ ವಿಧಾನ ಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ 25ನೇ ವರದಿಯನ್ನು ಒಪ್ಪಿಸುತ್ತೇನೆ.

**ಸಭಾಪತಿಯವರು:–** ವರದಿಗಳನ್ನೊಪಿಸಲಾಯಿತು.

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ತುಂಬಾ ಗಂಭೀರವಾದ ವಿಚಾರವನ್ನು ಸದನದಲ್ಲಿ ಮಂಡಿಸಬಯಸುತ್ತೇನೆ . . .

**ಸಭಾಪತಿಯವರು:–** ಒಂದು ನಿಮಿಷ, ಮಾನ್ಯ ನಾಣಯ್ಯನವರು ಏನೋ ಮಾತನಾಡಬಯಸುತ್ತಿದ್ದಾರೆ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ. ನಾನೂ ಕೂಡ ಒಂದು

ನಿಲುವಳಿ ಸೂಚನೆಯನ್ನು ತಮಗೆ ಕೊಟ್ಟಿದ್ದೇನೆ. ಅವರದು ಬಹಳ ಮುಖ್ಯವಾಗಿರುವಂತಹ ವಿಚಾರ, ನನ್ನದೂ ಕೂಡ ಬಹಳ ಮುಖ್ಯವಾದ ವಿಚಾರವಾಗಿದೆ. ಅವರು ಅಡಿಕೆ ಬೆಳೆ ಮತ್ತು ಗುಟ್ಕಾ ವಿಚಾರವನ್ನು ಎತ್ತಿದ್ದಾರೆ. ನಾನು, ಕರ್ನಾಟಕ ಲೋಕಸೇವಾ ಆಯೋಗದಲ್ಲಿ ನಡೆಯುತ್ತಿರತಕ್ಕಂಥ, ನಡೆಯುತ್ತಿದೆ ಎನ್ನಲಾದ ವಿಚಾರಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಿ, ಆ ಕುರಿತು ಸರ್ಕಾರದಿಂದ ಉತ್ತರ ಬಯಸಿದ್ದೇನೆ. ತಾವು ಯಾವರೀತಿ ತೀರ್ಮಾನ ಮಾಡುತ್ತೀರೋ ಗೊತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮೊದಲು ಆದ್ಯತೆ ನೀಡಲಾಗುತ್ತದೆ. ಈಗ ನಾನು ನಿಮ್ಮನ್ನು ಒಂದು ವಿಚಾರ ಕೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಇವತ್ತು ಮಾತನಾಡಲು ಅವಕಾಶ ಕೊಟ್ಟರೆ, ನಾನು ಎತ್ತಬೇಕಾಗಿರುವ ವಿಚಾರದ ಬಗ್ಗೆ ನಾಳೆ ಮಾತನಾಡಲು ಪುನಃ ತಮಗೆ ನೋಟೀಸ್ ಕಳುಹಿಸಿ ಕೊಡಬೇಕಾಗುತ್ತದೆ. ನಾಳೆ ನನ್ನ ವಿಚಾರವನ್ನು ಮೊದಲು ತೆಗೆದುಕೊಳ್ಳುವುದಕ್ಕೆ ಆದ್ಯತೆ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:–** ಖಂಡಿತ ಅವಕಾಶ ಕೊಡುತ್ತೇನೆ. ಮಾನ್ಯ ಸಭಾನಾಯಕರಲ್ಲಿ ಮತ್ತು ಮಾನ್ಯ ಸಚಿವರಲ್ಲಿ ನನ್ನದೊಂದು ಸಣ್ಣ ಮನವಿ ಇದೆ. ಇವತ್ತು ಸದನದಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಮಾನ್ಯ ಸಚಿವರುಗಳು ಬಂದಿರುವುದು ಸಂತೋಷದ ವಿಚಾರವಾಗಿದೆ. ಆದರೆ, ಹಿಂದೆ ಈ ಕುರ್ಚಿಯಲ್ಲಿ ಕುಳಿತುಕೊಂಡಿದ್ದ, ಅಂದರೆ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು, ಮಾನ್ಯ ಸುದರ್ಶನ್‌ರವರು ಅಥವಾ ಮಾನ್ಯ ಕಲ್ಮಣ್‌ಕರ್‌ರವರುಗಳು ಮಾನ್ಯ ಸಚಿವರ ಕಡೆ ಮುಖ ಮಾಡಿ ಒಂದು ಮಾತನ್ನು ಹೇಳುತ್ತಿದ್ದರು. ಅದನ್ನು ನನ್ನ ಬಾಯಲ್ಲಿ ಹೇಳಿಸಬೇಡಿ. ಬೆಳಿಗ್ಗೆ ಸದನಕ್ಕೆ ಬರುವ ಸಚಿವರು ಸಂಜೆಯ ತನಕ ಇರಬೇಕು. ಕೆಳಮನೆಯಲ್ಲಿ ಕೆಲಸ ಇದ್ದಾಗ ಮಾತ್ರ ಅಲ್ಲಿ ಹೋಗಿ. ಈ ವಿಚಾರವಾಗಿ ಮಾನ್ಯ ವೀರಣ್ಣಮತ್ತಿಕಟ್ಟಿಯವರೂ ಕೂಡ ನನಗೆ ಧ್ವನಿಗೂಡಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಬಹಳ ಸಲ ಕೋಪದಿಂದ ಸಹ ಮಾತನಾಡಿದ್ದುಂಟು. ಪ್ರಸ್ತುತ ಬಹಳ ಮಂದಿ ಸಚಿವರು ಹೊಸಬರು. ಮೊದಲ

ಬಾರಿಗೆ ಸಚಿವರಾಗಿರುವವರೂ ಕೆಲವರಿದ್ದೀರಿ. ದಯವಿಟ್ಟು ಈ ನನ್ನ ಮನವಿಯನ್ನು ಗಮನಿಸಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

## 5. ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ

## ಗುಟ್ಕಾ ನಿಷೇಧದ ಬಗ್ಗೆ ನಡೆಯುತ್ತಿರುವ ವ್ಯಾಪಕ ಚರ್ಚೆ ಕುರಿತು.

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಇದೊಂದು ಸಾರ್ವಜನಿಕ ಮಹತ್ವವಾದಂತಹ, ಗಂಭೀರವಾದಂತಹ ವಿಚಾರವಾಗಿದೆ. ಇತ್ತೀಚಿನ ದಿನಗಳಲ್ಲಿ ಗುಟ್ಕಾ ನಿಷೇಧದ ಬಗ್ಗೆ ವ್ಯಾಪಕವಾದ ಚರ್ಚೆಗಳು ನಡೆಯುತ್ತಿವೆ. ನಾನು ಪ್ರಾರಂಭದಲ್ಲೇ ಒಂದು ಮಾತನ್ನು ಉಲ್ಲೇಖ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಭಾಪತಿಗಳೇ, ಇವತ್ತು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಅಡಿಕೆ ಬೆಳೆಗಾರರು, ಬೆಳೆ ಅವಲಂಬಿತವಾದ ಕಾರ್ಮಿಕರು, ಆ ಬೆಳೆಗೆ ಸಂಬಂಧಪಟ್ಟಂತೆ ಉತ್ಪನ್ನಗಳನ್ನು ಮಾಡುವವರು ಮತ್ತು ಮಾರಾಟ ಮಾಡುವವರು ಹೀಗೆ ಸುಮಾರು ಒಂದೂವರೆ ಕೋಟಿ ಜನರ ಭವಿಷ್ಯದ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ಗುಟ್ಕಾ ನಿಷೇಧ ಮಾಡುವುದರ ಬಗ್ಗೆ ಬಿಲ್‌ಕುಲ್ ನಮ್ಮ ವಿರೋಧವಿಲ್ಲ. ನಾನು ಈ ಅಂಶವನ್ನು ಪ್ರಾರಂಭದಲ್ಲೇ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಏಕೆಂದರೆ, ಸದನದಿಂದ ಬೇರೊಂದು ರೀತಿಯಲ್ಲಿ ಸಂದೇಶ ಹೋಗಬಾರದು. ಆರೋಗ್ಯಕ್ಕೆ ಹಾನಿಕರವಾದಂತಹ ತಂಬಾಕು, ನಿಕೋಟಿನ್‌ಗಳ ಸೇವನೆಯಿಂದ ಬರುತ್ತಿರುವಂತಹ ಬೇರೆ ಬೇರೆ ಕಾಯಿಲೆಗಳ ಬಗ್ಗೆ ಕ್ರಮ ಕೈಗೊಳ್ಳಬೇಕಾದ್ದು ಸರ್ಕಾರಗಳ ಕರ್ತವ್ಯ. ಕೋರ್ಟುಗಳ ಆದೇಶಗಳನ್ನು ಪಾಲಿಸಬೇಕಾಗಿರುವುದೂ ಸರ್ಕಾರಗಳ ಕರ್ತವ್ಯ, ಇದನ್ನು ನಾನು ಇಲ್ಲ ಎಂದು ಹೇಳುತ್ತಿಲ್ಲ. ಆದರೆ, ಯಾವುದೋ ಒಂದು ಹಂತದಲ್ಲಿ ತರಾತುರಿಯ ನಿರ್ಧಾರಗಳು ಆಗುತ್ತಿವೆ. ವಿಶೇಷವಾಗಿ ಸದನ ನಡೆಯುವಂತಹ ಸಂದರ್ಭಗಳಲ್ಲಿ ಸದನಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಅಡಿಕೆ ಬೆಳೆಯುವ ಭಾಗದಿಂದ ಬಂದ ಶಾಸಕರುಗಳ ಅಭಿಪ್ರಾಯಗಳನ್ನು ಪಡೆದುಕೊಳ್ಳದೇ ತರಾತುರಿಯಿಂದ ನಿರ್ಧಾರ ತೆಗೆದುಕೊಳ್ಳುತ್ತಿರುವ ಕಾರಣ ಸುಮಾರು ಒಂದೂವರೆ ಕೋಟಿ ಜನರ ಭವಿಷ್ಯ ಅನಿಶ್ಚಿತತೆಯಿಂದ ಕೂಡಿದಂತಾಗಿದೆ.

ಇದರ ಬಗ್ಗೆ ಪ್ರಶ್ನೆ ಮಾಡುವಂಥದ್ದು ಬಹಳ ಅವಶ್ಯಕವಾಗಿದೆ ಮತ್ತು ತುರ್ತಾದುದಾಗಿದೆ. ಈ ದೇಶದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ರೈತರ ಆತ್ಮಹತ್ಯೆಯ ಬಗ್ಗೆ ವರ್ಷಂಪ್ರತಿ ಪಟ್ಟಿ ಬರುತ್ತಿದೆ. ಬೇರೆಯವರು ಆತ್ಮಹತ್ಯೆ ಮಾಡಿಕೊಂಡರೆ ಅದು ಹೈಲೈಟ್ ಆಗುತ್ತದೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ದಿನದ 24 ಗಂಟೆ ತನ್ನ ರಕ್ತವನ್ನು ಬೆವರನ್ನಾಗಿ ಪರಿವರ್ತನೆ ಮಾಡಿ ದುಡಿಯುವ ರೈತನ ಜೀವನಕ್ಕೆ ಬೇಕಾದ ಪೂರಕ ಆವಶ್ಯಕತೆಗಳ ಬಗ್ಗೆ ಚಿಂತನೆ ಮಾಡುವ ನಿಟ್ಟಿನಲ್ಲಿ ನಾವು ಬಹಳ ಹಿಂದಕ್ಕೆ ಹೋಗುತ್ತಿದ್ದೇವೆ. ಇವತ್ತು ಅಡಿಕೆ ಬೆಳೆಗಾರನ ಪರಿಸ್ಥಿತಿ ಏನಾಗಿದೆ . . . .

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಗಳೇ, ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ನೀಡಲಾಗಿದೆಯೇ? . . (ಗೊಂದಲ) ವಿಷಯದ ಬಗ್ಗೆ ಮಾತನಾಡುತ್ತಾ ಹೋದರೆ . . .

**ಸಭಾಪತಿಯವರು:-** ವಿಚಾರದ ಮಹತ್ವ ಎಷ್ಟಿದೆ ಎಂಬುದನ್ನಷ್ಟೆ ಹೇಳಿ . . . (ಗೊಂದಲ)

(12.30 ಗಂಟೆ)

**ಶ್ರೀ ಡಿ.ವಿ.ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಈ ವಿಷಯದ ಸಾರ್ವಜನಿಕ ಮಹತ್ವ ಎಷ್ಟಿದೆ ಎಂಬುದನ್ನು ಹೇಳುತ್ತಿದ್ದೇನೆ. ನಿಲುವಳಿ ಸೂಚನೆ ಮೂಲಕ ತೆಗೆದುಕೊಳ್ಳಲು ಅವರು ಒಪ್ಪಿಕೊಳ್ಳಲಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿ ಕೊಡಲಾಗಿದೆಯೇ ಹೇಗೆ ಎಂದು ನಾನು ಕೇಳಿದೆ.

**Sri D.V. SADANANDA GOWDA:-** It is a preliminary submission and I have not gone into detail.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ತಮಗೆ convince ಮಾಡುವುದಕ್ಕೆ ವಿರೋಧ ಪಕ್ಷದ ನಾಯಕರು ಎದ್ದು ನಿಂತಿದ್ದಾರೆ. ಇದೇ ರೀತಿ ಮಾನ್ಯ ಎಸ್.ಆರ್.ಪಾಟೀಲ್‌ರವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಎಷ್ಟು ಟೈಮ್ ತೆಗೆದುಕೊಂಡಿದ್ದಾರೆ ಎಂಬುದನ್ನು ಕಡತ ತೆಗೆದು ನೋಡಲಿ. ಈಗ ಅವರು ಅಲ್ಲಿ ಕುಳಿತ ತಕ್ಷಣ ನಿಯಮದ ಬಗ್ಗೆ ಮಾತನಾಡುವುದು ಬೇಡ. ಪ್ರಿಲಿಮಿನರಿ ಸಬ್‌ಮಿಷನ್ ಮಾಡುವುದಕ್ಕೆ ಅವರು ಒಂದು ಗಂಟೆ ಸಮಯ ತೆಗೆದುಕೊಂಡಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ನಾನು ಪ್ರಿಲಿಮಿನರಿ ಸಬ್‌ಮಿಷನ್ ಬೇಡ ಎಂದು ಹೇಳುತ್ತಿಲ್ಲ. ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಡಲಾಗಿದೆಯೇ ಹೇಗೆ ಎಂದು ಕೇಳಿದೆ.

**ಶ್ರೀ ಡಿ.ವಿ. ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ಪ್ರಿಲಿಮಿನರಿ ಸಬ್‌ಮಿಷನ್ ಎಂದೇ ನಾನು ಮಾತನಾಡುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಸನ್ಮಾನ್ಯ ಸಭಾಪತಿಯವರು ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅವಕಾಶ ಮಾಡಿಕೊಟ್ಟಿದ್ದಾರೆಯೋ ಏನೋ ಎಂದು ನಾನು ಕೇಳಿದೆ.

**ಶ್ರೀ ಡಿ.ವಿ. ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟ ಮೇಲೆಯೇ ನಾನು ಎದ್ದು ನಿಂತು ಮಾತನಾಡುತ್ತಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟ ಮೇಲೆಯೇ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವುದು.

(ಗೊಂದಲ)

**ಸಭಾಪತಿಯವರು:–** ಇಷ್ಟೊಂದು ಜನ ಮಾತನಾಡಿದರೆ ನಾನೇನು ಮಾಡುವುದಕ್ಕಾಗುತ್ತದೆ? ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲು ನಿಂತಿದ್ದಾರೆ. ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಯಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದೇ ಒಂದು ವಿಚಾರವನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಎಸ್.ಆರ್.ಪಾಟೀಲ್‌ರವರು ವಿಚಾರ ಮಾಡಬೇಕಾಗುತ್ತದೆ. ಅವರು ವಿರೋಧ ಪಕ್ಷದ ನಾಯಕರಾಗಿ, ಈಗ ಮಂತ್ರಿಗಳಾಗಿ ಸಭಾನಾಯಕರ ಸ್ಥಾನದಲ್ಲಿದ್ದಾರೆ. ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳಾಗಿ ಸುಮಾರು ಕೆಲಸಗಳನ್ನು ಮಾಡಿದ್ದಾರೆ. ಈ ಸದನದಲ್ಲಿ ನಮ್ಮ ಬೇಡಿಕೆಗಳಿಗೆಲ್ಲಾ ಸ್ವಲ್ಪ ಮಟ್ಟಿಗೆ ಅವರು ಉತ್ತರವನ್ನು ಕೊಟ್ಟು, ಈಗ ವಿರೋಧ ಪಕ್ಷದ ನಾಯಕರಾಗಿ ಮಾತನಾಡುವಾಗ, ಮಾನ್ಯ ಸಭಾನಾಯಕರು ಆತುರ ಮಾಡುವುದು ಬೇಡ. ಸಭಾನಾಯಕರಾಗಿ ಅವರಿಗೆ ತಾಳ್ಮೆ ಇರಲಿ. ಅವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿರುವುದರಿಂದ ಅವರಿಗೆ ತಾಳ್ಮೆ ಇರಬೇಕೆಂದು ನಾನು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:–** ನನ್ನಷ್ಟು ತಾಳ್ಮೆ ಇದ್ದವರು ಇಲ್ಲ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸ್ವಲ್ಪ ಮಟ್ಟಿಗೆ ಅವಕಾಶ ಕೊಟ್ಟರೆ ಏನಾಗುತ್ತದೆ?

**ಸಭಾಪತಿಯವರು:–** ಮಾನ್ಯ ಸಭಾನಾಯಕರೇ, ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಸದಸ್ಯರುಗಳು ಸಹಿ ಹಾಕಿ ಇದನ್ನು ನಿಲುವಳಿ ಸೂಚನೆಯಡಿಯಲ್ಲಿ ಚರ್ಚೆ ಮಾಡಬೇಕೆಂದು ನಿಯಮ 59 ರ ಅಡಿಯಲ್ಲಿ ನೋಟಿಸ್ ಕೊಟ್ಟಿದ್ದಾರೆ. ಇದನ್ನು ಏಕೆ ನಿಯಮ 59 ರ ಅಡಿಯಲ್ಲಿ ನಾವು ಚರ್ಚೆ ಮಾಡಬೇಕು, ಬೇರೆ ವಿಷಯಗಳನ್ನು ಬದಿಗೊತ್ತಿ ಇದನ್ನೇ ಏಕೆ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಅವರು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೇನೆ. ಅದನ್ನು ಅವರು ಹೇಳಲಿ. ನಮಗೆ

ನಿಮಗೆ ಒಪ್ಪಿಗೆಯಾದರೆ ಅವರು ಹೇಳಿದ ಹಾಗೆಯೇ ಮಾಡೋಣ. ಒಪ್ಪಿಗೆಯಾಗದಿದ್ದರೆ ನಾವು ಯಾವ ರೀತಿ ಮಾಡಬೇಕೆಂಬುದನ್ನು ಹೇಳೋಣ. ಇದನ್ನು ಏಕೆ ನಿಲುವಳಿ ಸೂಚನೆ ಮೂಲಕ ತೆಗೆದುಕೊಳ್ಳಬೇಕು ಎಂಬುದನ್ನು ಅವರು ಹೇಳುತ್ತಿದ್ದಾರೆ, ಹೇಳಲಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ಚರ್ಚೆ ಬೇಡ ಎನ್ನುವುದಿಲ್ಲ. ಚರ್ಚೆಗೆ ನಾವು ಸಿದ್ಧರಿದ್ದೇವೆ. ಆದರೆ, ಯಾವ ನಿಯಮದ ಅಡಿಯಲ್ಲಿ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಮಾತ್ರ ನಮ್ಮ ಚಿಂತನೆ ಅಷ್ಟೆ. ನಾವೇನೂ ಚರ್ಚೆ ಬೇಡ ಎಂದು ಹೇಳುತ್ತಿಲ್ಲ. ನಮಗೂ ರೈತರ ಬಗ್ಗೆ ಚಿಂತನೆ, ಕಾಳಜಿ ಇದೆ. ಅದಕ್ಕಾಗಿಯೇ ನಮ್ಮನ್ನು ತಂದು ಇಲ್ಲಿ ಕೂರಿಸಿದ್ದಾರೆ.

**ಶ್ರೀ ಬಸವರಾಜ್ ಹೊರಟ್ಟಿ:–** ಮಾನ್ಯ ಎಸ್.ಆರ್.ಪಾಟೀಲ್‌ರವರು ಬಹಳ ಸ್ಪೀಡ್‌ನಲ್ಲಿದ್ದಾರೆ. ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಎಷ್ಟು ಹೊತ್ತು convince ಮಾಡಿದ್ದಾರೆ ಎಂಬುದನ್ನು ಕಡತದಲ್ಲಿ ತೆಗೆದು ನೋಡಲಿ. ಅವರು convince ಮಾಡುತ್ತಿದ್ದಾರೆ, ಮಾಡಲಿ. ತಾವು ಈಗ ಸಭಾನಾಯಕರಾಗಿದ್ದೀರಿ. ಸಭಾನಾಯಕರಿಗೆ ಕೇಳುವಂತಹ ಸೌಜನ್ಯ ಇರಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಸರ್ಕಾರ ಚರ್ಚೆ ಮಾಡುವುದಕ್ಕೆ ಸಿದ್ಧವಿದೆ. ನಾವು ಚರ್ಚೆ ಬೇಡ ಎನ್ನುವುದಿಲ್ಲ.

(ಗೊಂದಲ)

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಬೇರೆ ವಿಷಯಗಳನ್ನು ಬದಿಗೊತ್ತಿ ಈ ವಿಷಯ ತೆಗೆದುಕೊಳ್ಳಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ಬೇರೆ ವಿಷಯಗಳನ್ನು ಏಕೆ ಬದಿಗೊತ್ತಿ ಇದರ ಬಗ್ಗೆ ಚರ್ಚೆ ಮಾಡಬೇಕು, ಇದರ ಮಹತ್ವವೇನು ಎಂಬುದರ ಬಗ್ಗೆ ಅವರು convince ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳೋಣ.

**ಶ್ರೀ ಬಸವರಾಜ್ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಪೀಠಕ್ಕೆ convince ಮಾಡುವುದು ಅವರ duty. ಮಾನ್ಯ ಸಭಾನಾಯಕರು ಎಲ್ಲರೂ ಮಾತನಾಡುವುದನ್ನು ಪೂರ್ಣವಾಗಿ ಕೇಳಬೇಕು. ಮಧ್ಯೆ ಅವರು ಮಾತನಾಡಬಾರದು. ಎಲ್ಲರೂ ಮಾತನಾಡಿದ ನಂತರ ಅವರು ಮಾತನಾಡಬೇಕು. ಸಭಾನಾಯಕರಾಗಿರುವಂಥವರು ಅಂದರೆ, ಸರ್ಕಾರ ನಡೆಸುವಾಗ ಎಲ್ಲರ ಮಾತನ್ನು ಕೇಳಿದ ನಂತರ ಮಾತನಾಡಬೇಕು. ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ನನಗಿಂತ ಹೆಚ್ಚು ಸಮಯ ಈ ಸದನದಲ್ಲಿ ಕಳೆದಿರಬಹುದು. ನಾನು ಅನೇಕ ಮಜಲುಗಳಲ್ಲಿ ಕೆಲಸ ಮಾಡಿದ್ದೇನೆ. ಈ ಮನೆಯ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಪ್ರತಿಪಕ್ಷದ ಉಪ ನಾಯಕನಾಗಿ ಕೆಲಸ ಮಾಡಿದ್ದೇನೆ. ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ. ಮಾನ್ಯ ಬಸವರಾಜ ಹೊರಟ್ಟಿಯವರು ಬಹಳ ಹಿರಿಯ ಸದಸ್ಯರಾಗಿದ್ದಾರೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೇ, ವಿವರವಾಗಿ ಮಾತನಾಡುವುದು ಬೇಡ. ಅದರ ಮಹತ್ವದ ಬಗ್ಗೆ ಮಾತನಾಡಿ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಾನು ವಿವರವಾಗಿ ಮಾತನಾಡುವುದಾದರೆ ನನ್ನಲ್ಲಿ ಬಹಳ ಮಾಹಿತಿ ಇದೆ. ನಾನು ಆಮೇಲೆ ಮಾತನಾಡುತ್ತೇನೆ. ಈಗ ಈ ವಿಚಾರದ ಸಾರ್ವಜನಿಕ ಮಹತ್ವ ಏನು ಎಂಬುದರ ಬಗ್ಗೆ ಹೇಳುತ್ತಿದ್ದೇನೆ. ಮಾನ್ಯ ಸಿದ್ದರಾಮಯ್ಯನವರು ಗಡಿಬಿಡಿಯಲ್ಲಿ ಮಾತನಾಡುವ ಹಾಗೆ ಮಾನ್ಯ ಸಭಾನಾಯಕರು ಮಾತನಾಡಬಾರದು. ಸಭಾನಾಯಕರು ಹಿರಿಯರಿದ್ದಾರೆ. ನನ್ನ ಮನಸ್ಸಿನಲ್ಲಿ ಒಂದು ಇದೆ. ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾದ ತಕ್ಷಣ ಬಹಳ ಗಡಿಬಿಡಿಯಲ್ಲೇ ಸುಮಾರು ಹೊತ್ತು ಮಾತನಾಡಿದರು. ಇಲ್ಲಿ ಸಭಾನಾಯಕರು ಅದೇ ರೀತಿ ಮಾತನಾಡುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತೆ ವಿಷಯಾಂತರ ಮಾಡಿ ಎಲ್ಲಿಗೋ ಹೋಗಿಬಿಟ್ಟರು.

(ಗೊಂದಲ)

**Sri S.R. PATIL:-** Why are you giving the comparison. ಸಿದ್ದರಾಮಯ್ಯನವರು, He has got a concern for the people of the Karnataka State.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ರಾಜ್ಯದ ಜನತೆಯ ಬಗ್ಗೆ ನಮಗೆ concern ಇದೆ. ಅದಕ್ಕೆ ನಾವು ತ್ವರಿತಗತಿಯಿಂದ ನಿರ್ಣಯ ಕೈಗೊಳ್ಳುತ್ತೇವೆ. ಆ ರೀತಿ ತ್ವರಿತಗತಿಯಿಂದ ನಿರ್ಣಯ ಕೈಗೊಂಡು resolution ಮಾಡಿದರೆ ಅದಕ್ಕೂ comment ಮಾಡುವುದೇ?

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ನಾನು ಏಕೆ ಇಷ್ಟು ಗಂಭೀರವಾಗಿ ಹೇಳುತ್ತಿದ್ದೇನೆಂದರೆ, ಈಗ ಸದನ ನಡೆಯುತ್ತಿದೆ. ಇದು ಕೋಟ್ಯಾಂತರ ಜನರ ಜೀವನ ಮತ್ತು ಭವಿಷ್ಯದ ಬಗ್ಗೆ ಚಿಂತನೆ ಮಾಡಬೇಕಾದ ಸಂಗತಿ. ಇದು ಕೇವಲ ನಿನ್ನೆ ಮೊನ್ನೆಯಿಂದ ಬಂದಿರುವುದಲ್ಲ. ಇವತ್ತು ನಾಳೆ ಮಾಡಬೇಕಾದ ಸಂಗತಿಗಳಾಗಿದ್ದರೂ ಕೂಡ ಇದರ ಬಗ್ಗೆ ಇಷ್ಟು ಜನರ ಜೀವದ ಜೊತೆ ಚೆಲ್ಲಾಟ ಆಡುವ ಪರಿಸ್ಥಿತಿಯಲ್ಲಿ, ಏಕಾಏಕಿ ಗಡಿಬಿಡಿಯಲ್ಲಿ ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದಾರಲ್ಲಾ ಇದರಿಂದಾಗಿ ಏನಾಗಿದೆ ಎಂಬುದನ್ನು ಅವರು ಚಿಂತನೆ ಮಾಡಿದ್ದಾರೆಯೇ? ಇದು ಇಡೀ ಸದನಕ್ಕೆ ಅಗೌರವ ತೋರಿಸಿದೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ, ಸದನ ಇಲ್ಲದಿದ್ದಾಗ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಂಡು ಆದೇಶಗಳನ್ನು ಮಾಡಲಿ. ಇಲ್ಲಿ ಸದನಗಳು ನಡೆಯುತ್ತಿತ್ತು. ಹಿಂದಿನ ದಿನಗಳಲ್ಲಿ ಈ ವಿಚಾರದ ಬಗ್ಗೆ ಚರ್ಚೆಗಳು ನಡೆಯಬೇಕು ಎನ್ನುವುದು ಸದನದ ಒಳಗೂ ಹೊರಗೂ ಆ ಸಂದರ್ಭದಲ್ಲೂ ಕೂಡ ಚರ್ಚೆಯಾಗಿತ್ತು.

ಆದರೆ, ಚರ್ಚೆ ಮಾಡಲಿಲ್ಲ. ನಾನು ಒಂದು ವಿಚಾರವನ್ನು ತಮಗೆ ಕೇಳುವುದಕ್ಕೆ ಬಯಸುತ್ತೇನೆ. ತಾವು ಅಡಿಕೆ ಬೆಳೆಗಾರರ ಊರಿಂದ ಬಂದವರು. ತಾವು ಅಡಿಕೆ ಬೆಳೆಗಾರರ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಅತ್ಯಂತ ಹೆಚ್ಚು ವಾದಗಳನ್ನು ಮಂಡನೆ ಮಾಡಿದವರು ಎಂದು ನಾನು ತಿಳಿದುಕೊಳ್ಳುತ್ತಿದ್ದೇನೆ. ಅವರ ಸಮಸ್ಯೆಗಳು ಎಷ್ಟಿವೆ? ಇವತ್ತು ಈ ವಿಚಾರ ಸಾರ್ವಜನಿಕ ಮಹತ್ವವುಳ್ಳದ್ದು ಎಂದು ನಾನು ಏಕೆ ಹೇಳುತ್ತೇನೆಂದರೆ, ಈ ವಿಷಯ ಕೇವಲ ಯಾರೋ ಒಬ್ಬ ವ್ಯಕ್ತಿ, ಯಾವುದೋ ಒಂದು ಸಂಘಟನೆ, ಯಾವುದೋ ಒಂದು ಭಾಗಕ್ಕೆ ಮಾತ್ರ ಸೀಮಿತವಾಗಿಲ್ಲ. ಈ ರಾಜ್ಯದ 16 ಜಿಲ್ಲೆಗಳಲ್ಲಿ ಅಡಿಕೆ ಬೆಳೆಗಾರರು ಇದ್ದಾರೆ. ಇವತ್ತು 1,84,515 ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 2,44,288 ಟನ್ ಅಡಿಕೆಯನ್ನು ಬೆಳೆಯುತ್ತಾರೆ. ಅಡಿಕೆ ಉತ್ಪನ್ನಗಳು ಯಾವ ಯಾವ ರೀತಿಯಲ್ಲಿ ನಡೆಯುತ್ತಿವೆ. ಏನೆಲ್ಲಾ ಆಗುತ್ತಿದೆ ಎಂಬುದು ಗೊತ್ತಿದೆ. ಬಹಳಷ್ಟು ಫ್ಯಾಕ್ಟರಿಗಳಲ್ಲಿ ಎಷ್ಟು ಜನರು ಕೆಲಸ ಮಾಡುತ್ತಿದ್ದಾರೆ ಎಂಬುದು ಗೊತ್ತಿದೆ. ಇವತ್ತು ಪ್ಲಾಸ್ಟಿಕ್‌ನ್ನು ನಾವು ತೆಗೆಯಬೇಕೆಂದು ಮಾಡಿದಾಗ, ಲಕ್ಷಾಂತರ ಜನ ಯುವಕರು ಅಡಿಕೆ ಹಾಳೆಗಳಿಂದ ತಟ್ಟೆಗಳನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ. ಸಾವಯವ ಕೃಷಿಗೆ ಸಂಬಂಧಪಟ್ಟ ಅಡಿಕೆ ಹಾಳೆಗಳನ್ನು ತುಂಡು ಮಾಡಿ ಸಾವಯವ ಕೃಷಿಗಳನ್ನು ಮಾಡುವಂತಹ ಜನರಿದ್ದಾರೆ. ಸಣ್ಣ ಗೂಡು ಅಂಗಡಿಯನ್ನು ಇಟ್ಟುಕೊಂಡು ಅಡಿಕೆ ಮಾರಾಟ ಮಾಡುವವರು ಲಕ್ಷಾಂತರ ಜನರಿದ್ದಾರೆ. ಇವರು ನಿರುದ್ಯೋಗಿಗಳಾಗುತ್ತಾರೆ. ಇವರ ಭವಿಷ್ಯದ ಬಗ್ಗೆ ಚಿಂತನೆ ಮಾಡಬೇಕು. ಗುಟ್ಕಾ ನಿಷೇಧದ ಬಗ್ಗೆ ನಮ್ಮದು ಸಹಮತ ಇದೆ, ಇಲ್ಲ ಎಂದು ಹೇಳುವುದಿಲ್ಲ. ಸದನ ನಡೆಯುತ್ತಿರುವಾಗ ಏಕೆ ಚರ್ಚೆ ಮಾಡಲಿಲ್ಲ? ಅವರು ಸದನವನ್ನು taken for granted ಆಗಿ ಮಾಡುತ್ತಿದ್ದಾರೆಯೇ? ಇದು ರಾಜ್ಯದ 16 ಜಿಲ್ಲೆಗಳ ಅಡಿಕೆ ಬೆಳೆಗಾರರ ಜ್ವಲಂತ ಸಮಸ್ಯೆ. ನಾನು ಹೇಳುತ್ತಿರುವಂಥದ್ದು ಕೋರ್ಟಿನ ಆದೇಶವಾಗಿದೆ ಎನ್ನುವ ನೆಪದಲ್ಲಿ......

(ಗೊಂದಲ)

**Sri VEERANNA MATTIKATTI:-** You don't misguide the House.

**ಶ್ರೀ ಆರ್.ವಿ. ದೇಶಪಾಂಡೆ:–** ವಿರೋಧ ಪಕ್ಷದ ನಾಯಕರಿಗೆ ಇದರ ಗಂಭೀರತೆಯನ್ನು ವ್ಯಕ್ತಪಡಿಸುವ ಅಧಿಕಾರ ಇದೆ. ಆದರೆ, ಇಲ್ಲಸಲ್ಲದ ಆಪಾದನೆ ಮಾಡುವ ಅಧಿಕಾರ ಅವರಿಗೆ ಇಲ್ಲ. ಈಗ ಗುಟ್ಕಾ ಮಾರಾಟ ಬೇಡ ಎಂದು ಸುಪ್ರೀಂ ಕೋರ್ಟ್‌ನವರು ಆರ್ಡರ್ ಮಾಡಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಇಷ್ಟು ದೊಡ್ಡ ಸಂಖ್ಯೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವಂತಹ ಸಂಗತಿಗಳು ಎಂದು ನಾನು ಹೇಳುತ್ತಿದ್ದೇನೆ. ಇದು ಕೇವಲ ಅಡಿಕೆ ಬೆಳೆಗಾರರಿಗೆ ಮಾತ್ರವಲ್ಲ, ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ಆದಾಯವನ್ನು ತರುತ್ತಿರುವಂತಹ ಅಡಿಕೆ ಬೆಳೆಗಾರರಿಗೆ ಆಗುತ್ತಿರುವ ನಷ್ಟ. ಒಂದು ಕಡೆ ಸರ್ಕಾರದ ಬೊಕ್ಕಸದ ಖಜಾನೆ ಖಾಲಿಯಾಗುತ್ತಿದೆ. ಮತ್ತೊಂದು ಕಡೆಯಿಂದ ಕೋಟ್ಯಾಂತರ ಜನ ಸಮಸ್ಯೆಗೆ ಈಡಾಗುತ್ತಾರೆ. ಇಂತಹ ಮಹತ್ವದ ವಿಚಾರ ಚರ್ಚೆಯಾಗುವುದು ಬೇಡವೇ?

ಸುಪ್ರೀಂ ಕೋರ್ಟಿನ ಆದೇಶದ ಪ್ರಕಾರ ಮಾಡುತ್ತಿದ್ದೇವೆಂದು ಸರ್ಕಾರದಿಂದ ಹೇಳಿಕೆಯನ್ನು ಕೊಡುತ್ತಿದ್ದಾರೆ. ಇದನ್ನು ಮಾಡಬಾರದು ಎಂದು ನಾವ್ಯಾರೂ ಹೇಳುತ್ತಿಲ್ಲ. ಗುಟ್ಕಾ ನಿಷೇಧಕ್ಕೆ ನಮ್ಮ ವಿರೋಧವಿಲ್ಲ. ಆದರೆ, ಎಲ್ಲೋ ಒಂದು ಕಡೆ ಗುಟ್ಕಾ ನಿಷೇಧದ ವಿಷಯ ಬಂದಾಗ ಗುಟ್ಕಾದ ವಿಷಯದಲ್ಲಿ ರಾಜಕಾರಣ ಮಾಡುತ್ತಿದ್ದಾರೆಂದು ಬೇರೆ ಬೇರೆ ಕಡೆ ಮಂತ್ರಿಗಳು ಹೇಳಿಕೆಯನ್ನು ಕೊಡುತ್ತಾರೆ. ಈ ವಿಷಯವಾಗಿ ಸದನದಲ್ಲಿ ಚರ್ಚೆಯಾಗಬೇಕು. ಚರ್ಚೆಗೆ ಏತಕ್ಕೆ ಅವಕಾಶವಿಲ್ಲ? ಹೊರಗಡೆ ಹೋಗಿ ಗುಟ್ಕಾ ವಿಷಯದಲ್ಲಿ ರಾಜಕಾರಣ ಮಾಡುತ್ತಿದ್ದಾರೆಂದು ಹೇಳುತ್ತಾರಲ್ಲಾ! ಸದನದೊಳಗೆ ರಾಜಕಾರಣ ಮಾಡಿ ಈ ವಿಷಯವಾಗಿ ಚರ್ಚೆ ಮಾಡಲಿ. ಇವತ್ತು, ಇದರ ಬಗ್ಗೆ ಹತ್ತು–ಹಲವಾರು ವಿಷಯಗಳನ್ನು ಚರ್ಚೆ ಮಾಡುವುದಿಲ್ಲ. ಇವತ್ತು ಕೂಲಿಗಾರ ಜನರು ಇದ್ದಾರೆ, ಕೃಷಿ ಕಾರ್ಮಿಕರಿಗೆ ಅತ್ಯಂತ ಹೆಚ್ಚು ಸಂಬಳ ಕೊಡುವಂತಹದ್ದು ಯಾವುದಾದರೂ ಕ್ಷೇತ್ರ ಇದ್ದರೆ

ಅದು ಅಡಿಕೆ ಬೆಳಗಾರರ ಕ್ಷೇತ್ರ. ಅಡಿಕೆ ಬೆಳೆ ಕೆಲಸದಲ್ಲಿ ಅವರಿಗೆ ಹೆಚ್ಚಿನ ಕೂಲಿ ಸಿಗುತ್ತದೆ. ಮಳೆಗಾಲದಲ್ಲಿ ಕೃಷಿ ಕಾರ್ಮಿಕರಿಗೆ ದಿವಸಕ್ಕೆ 500 ರೂಪಾಯಿಗಳ ಸಂಬಳವನ್ನು ಕೊಡುತ್ತಾರೆ. ಇದು ಸಾರ್ವಜನಿಕ ಮಹತ್ವದ ವಿಷಯವಲ್ಲವೇ? ನೂರಾರು ಯುವಕರು ಅಡಿಕೆ ಹಾಳೆ ಮತ್ತು ತಟ್ಟೆಗಳನ್ನು ಮಾಡಿಕೊಂಡು ಜೀವನ ಮಾಡುತ್ತಾರೆ. ಅಡಿಕೆ ತೋಟಗಳು ನಾಶವಾದರೆ ನಾಳೆ ಇವರು ಯಾರೂ ಇರುವುದಿಲ್ಲ. ಗೋರಖ್‌ಸಿಂಗ್ ಸಮಿತಿ ಕೇಂದ್ರದಿಂದ ರಚನೆಯಾಯಿತು. ಅಡಿಕೆ ಬೆಳೆಗಾರರ ಸಮಸ್ಯೆ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಜಾರಿಗೆ ತಂದು, ಅವರಿಗೆ ರಕ್ಷಣೆ ಕೊಡುವ ಅವಶ್ಯಕತೆ ಇದೆ. ಇವತ್ತು ನಾವು ಹೇಳುವುದೇನೆಂದರೆ..

(ಗೊಂದಲ)

**ಸಭಾಪತಿಯವರು:–** ಅವರ ಭಾಷಣ ಮುಗಿಯುತ್ತದೆ. ಅವರು ಅಡಿಕೆಯ ಮಹತ್ವ ಏನು ಎಂದು ಹೇಳುತ್ತಿದ್ದಾರೆ. ನೀವು ಹೌದು ಅಥವಾ ಅಲ್ಲ ಎನ್ನುವುದನ್ನು ಹೇಳಿ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಾನು ರಾಜಕಾರಣ ಮಾತನಾಡುವುದಿಲ್ಲ. ರಾಜಕಾರಣದ ವಿಷಯ ಮಾತನಾಡಿದರೆ ಅವರಿಗೆ ನೋವಾಗಬಹುದು. ಅಡಿಕೆ ಬೆಳೆಯುವಂತಹ ಕರಾವಳಿ ಇರಬಹುದು, ಮಲೆನಾಡು ಇರಬಹುದು, ಅಲ್ಲಿನ ಜನರು ಇವರಿಗೆ ಸರ್ಕಾರ ನಡೆಸಲಿಕ್ಕೆ ಆಶೀರ್ವಾದ ಮಾಡಿದ್ದಾರೆ. ಇದು ಅವರುಗಳಿಗೆ ಇವರು ಕೊಡುವಂತಹ ಉಡುಗೊರೆಯೇ? ಈಗ ಇವರು ಮಾಡಿರುವಂತಹದ್ದು, ಇವರು ಅವರಿಗೆ ಕೊಡುವ ಉಡುಗೊರೆಯಾಗಿದೆ. ರಾಜಕಾರಣ ಮಾತನಾಡುತ್ತಾರೆ ಎಂದು ಇವರು ನಮಗೆ ಹೇಳುತ್ತಿದ್ದಾರೆ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಇವತ್ತು ಅಡಿಕೆಯ ದರ 15–16 ಸಾವಿರ ರೂಪಾಯಿಗಳಿದೆ. ಅದು ಕೇಂದ್ರ ಸರ್ಕಾರದ ಕೊಡುಗೆಯಾಗಿದೆ. Import Duty . . .

(ಗೊಂದಲ)

**Sri R.V. Deshapande:-** smuggling stop ಮಾಡಿದ್ದೇವೆ. ನೀವು ಇದ್ದಾಗ ಏನು ಮಾಡಿದ್ದೀರಿ?

**ಶ್ರೀ ಆರ್.ವಿ. ವೆಂಕಟೇಶ್:-** ಮಾನ್ಯ ಸಭಾಪತಿಯವರೆ,

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:-** ಒಂದು ನಿಮಿಷ ಕೇಳಿ ಶ್ರೀಯುತ ವೆಂಕಟೇಶ್‌ರವರೇ, ಗುಟ್ಕಾ ನಿಷೇಧದ ಆದೇಶವಾದ ಕೇವಲ ಎರಡು ದಿನಗಳ ನಂತರ ಶಿವಮೊಗ್ಗ ಮತ್ತು ಮಂಗಳೂರು ಮಾರುಕಟ್ಟೆಯಲ್ಲಿ ಅಡಿಕೆಯ ಬೆಲೆ ಒಂದು ಕ್ವಿಂಟಾಲ್‌ಗೆ ಎರಡು ಸಾವಿರ ರೂಪಾಯಿಗಳಷ್ಟು ಕಡಿಮೆಯಾಗಿದೆ. ರೈತ ಆತಂಕದಲ್ಲಿದ್ದಾನೆ.

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:-** ಸುಮ್ಮನೆ ರಾಜಕೀಯ ಲಾಭಕ್ಕೋಸ್ಕರ ಮಾತನಾಡಬೇಡಿ.

**ಶ್ರೀ ಮತ್ತಿಕಟ್ಟೆ ವೀರಣ್ಣ:-** ಅಡಿಕೆ ಬೆಳೆಗಾರರಿಗೆ ನಮ್ಮೆಲ್ಲರ ಸಂಪೂರ್ಣ ಬೆಂಬಲ ಇದೆ. ಆದರೆ, ಗುಟ್ಕಾದಿಂದ ಮಹತ್ತರವಾದ ರೋಗ ಬರುತ್ತದೆ, ಪ್ರಾಣ ಹಾನಿ, ಸಾಮಾಜಿಕವಾಗಿ ತೊಂದರೆಯಾಗುತ್ತದೆ. ಅಡಿಕೆ ಬೆಳೆಗಾರರಿಗೆ ಯಾವ ಹಂತದಲ್ಲಿ ಏನು ಮಾಡಬೇಕೆಂದು ಯೋಚನೆ ಮಾಡೋಣ. ನಾವೆಲ್ಲರೂ ರೈತರ ಮಕ್ಕಳೇ ಆಗಿದ್ದೇವೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಮತ್ತಿಕಟ್ಟೆ ವೀರಣ್ಣನವರೇ, ತದನಂತರ ನೀವು ಉತ್ತರ ಕೊಡಿ. ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ನಾವು ಗಂಭೀರವಾಗಿ ಇವತ್ತೇ ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವುದಕ್ಕೆ ಮತ್ತೊಂದು ಕಾರಣವಿದೆ. ಈ ಗುಟ್ಕಾ ನಿಷೇಧದ ಆದೇಶ ಬಂದ ತಕ್ಷಣ ಎಷ್ಟೊಂದು ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರಗಳನ್ನು ಬರೆದಿದ್ದೇನೆ. ಆ ಪತ್ರಗಳಿಗೆ

ಅವರು ನನಗೆ ಉತ್ತರವನ್ನು ಕಳುಹಿಸಿದ್ದಾರೆ. ಉತ್ತರವನ್ನು ಕಳುಹಿಸಿ, "ಅಡಿಕೆ ಬೆಳೆಗಾರರ ಸಮಸ್ಯೆಗಳ ಬಗ್ಗೆ ಮತ್ತು ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರುವ ಕರ ನಷ್ಟವುಂಟಾದರೂ ಸಹ ರಾಜ್ಯದ ಸಾರ್ವಜನಿಕರ ಆರೋಗ್ಯದ ಹಿತಾಸಕ್ತಿಯನ್ನು ಪರಿಗಣಿಸಿ, ಅನಿವಾರ್ಯವಾಗಿ ಗುಟ್ಕಾ, ಪಾನ್‌ಮಸಾಲ, ತಂಬಾಕು ಪದಾರ್ಥಗಳನ್ನು ನಿಷೇಧಿಸಿ ದಿನಾಂಕ 30-05-2013ಕ್ಕೆ ಆದೇಶ ಹೊರಡಿಸಿದೆ. ಅದನ್ನು ನಾವು ಒಪ್ಪಿಕೊಳ್ಳುತ್ತೇನೆ. ಸದರಿ ಆದೇಶಕ್ಕೆ ನಾವೇನೂ ತಕರಾರೂ ಮಾಡುವುದಿಲ್ಲ. ಕೋರ್ಟಿನ ವಿಷಯವನ್ನು ಹೇಳುತ್ತಾರೆ. ಕೋರ್ಟಿನ ವಿಷಯ ಆದೇಶಕ್ಕೆ ಸಂಬಂಧಪಟ್ಟಿದ್ದು. ಅದಕ್ಕೆ ನಾವು ತಕರಾರು ಮಾಡುವುದಿಲ್ಲ. ರಾಜ್ಯ ಸರ್ಕಾರದ ಈ ಕ್ರಮಕ್ಕೆ ಸಹಕಾರ ನೀಡುವಂತೆ ಕೋರುತ್ತೇನೆ, ಒಂದು ವೇಳೆ ಅಡಿಕೆ ಬೆಳೆಗಾರರಿಗೆ ಸಮಸ್ಯೆ ಉದ್ಭವವಾದರೆ ಅದರ ಬಗ್ಗೆ ಚಿಂತನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು" ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಯಾವಾಗಲೂ prevention is better than cure. ಏನಾದರೂ ಆಗುತ್ತದೆ, ಆಗಬಹುದು. ಈಗಾಗಲೇ ಮಾರುಕಟ್ಟೆಯಲ್ಲಿ ಅಡಿಕೆ ದರ ಕ್ವಿಂಟಾಲ್‌ಗೆ 2000 ರೂಪಾಯಿಗಳಷ್ಟು ಕಡಿಮೆಯಾಗಿದೆ. ಇದು ಮಹತ್ತರವಾದ ವಿಚಾರವಾಗಿರುವುದರಿಂದ ಒಂದು ಸಂಗತಿಯನ್ನು ತಮಗೆ ಹೇಳಲಿಕ್ಕೆ ಬಯಸುತ್ತೇನೆ.

ಕಳೆದ ಬಾರಿ 2009ರಲ್ಲಿ ಮುಖ್ಯಮಂತ್ರಿಗಳು ಸೇರಿದಂತೆ ನಾವುಗಳೆಲ್ಲಾ ಕೇಂದ್ರ ಸರ್ಕಾರಕ್ಕೆ ನಮ್ಮ ರಾಜ್ಯ ಸರ್ಕಾರದ ವತಿಯಿಂದ ನಿಯೋಗ ಹೋಗಿದ್ದೇವು. ಆ ಸಮಯದಲ್ಲಿ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದ ಮಾನ್ಯ ಸಿದ್ದರಾಮಯ್ಯನವರು ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀಮತಿ ಮೋಟಮ್ಮನವರು ಸಹ ನಮ್ಮ ನಿಯೋಗದ ಜೊತೆಯಲ್ಲಿ ಬಂದಿದ್ದರು.

**ಶ್ರೀ ಆರ್.ವಿ. ದೇಶಪಾಂಡೆ:-** ನಾವು ಸಹ ಅಡಿಕೆ ಬೆಳೆಗಾರರಾಗಿದ್ದೇವೆ.

**ಶ್ರೀ ಡಿ.ವಿ. ಸದಾನಂದಗೌಡ:-** ಪ್ರತಿಯೊಂದು ವಿಷಯದಲ್ಲೂ ಸಹ ನೀವು ಮಧ್ಯೆ ಪ್ರವೇಶ ಮಾಡಿ ಮಾತನಾಡಬೇಡಿ. ವಿಚಾರವನ್ನು ತಪ್ಪಿಸುವಂತಹ ಪ್ರಯತ್ನ ಮಾಡಬೇಡಿ. ನೀವು ಉತ್ತರ ಕೊಡುವಾಗ ಹೇಳಿ. ನಾನು ಮಾತನಾಡುವಾಗ ಏತಕ್ಕೆ ಮಧ್ಯೆ ಪ್ರವೇಶ ಮಾಡಿ ಮಾತನಾಡುತ್ತೀರಿ? ಸರ್ಕಾರಕ್ಕೆ ಅಡಿಕೆ ಬೆಳೆಗಾರರ ಸಮಸ್ಯೆಗಳನ್ನು ಕೇಳಲಿಕ್ಕೆ ತಾಳ್ಮೆಯೇ ಇಲ್ಲದಿದ್ದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಇದು ಸಾರ್ವಜನಿಕ ಮಹತ್ವದ ವಿಚಾರವಾಗಿದೆ. ನಾವು ದೆಹಲಿಗೆ ಹೋಗಿದ್ದೆವು. ದೆಹಲಿಗೆ ಹೋಗುವಾಗ ಸನ್ಮಾನ್ಯ ಸಿದ್ದರಾಮಯ್ಯನವರು ಮಾನ್ಯ ಮನಮೋಹನ್‌ಸಿಂಗ್‌ರವರಿಗೆ ಇದರ ಬಗ್ಗೆ ವಿವರಿಸಿ ಹೇಳಿದ್ದರು. ಅಡಿಕೆ ಬೆಳೆಗಾರರ ಸಮಸ್ಯೆ ಸಾರ್ವಜನಿಕ ಮಹತ್ವದ ಸಮಸ್ಯೆ ಎಂದು ಹೇಳಿದ್ದರು. ಇದರಿಂದ ಕರ್ನಾಟಕ ರಾಜ್ಯದ ಜನರಿಗೆ ತೊಂದರೆಯಾಗುತ್ತದೆ ಎಂದು ಹೇಳಿದ್ದರು. ಇವತ್ತು ಅದು ಸಾರ್ವಜನಿಕ ಮಹತ್ವದ ವಿಷಯ ಅಲ್ಲವೇ? ಶ್ರೀಯುತ ಸಿದ್ಧರಾಮಯ್ಯನವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಇದು ಸಾರ್ವಜನಿಕ ಮಹತ್ವದ ವಿಷಯವಾಗಿತ್ತು. ಇವತ್ತು ಇವರು ಅಧಿಕಾರಕ್ಕೆ ಬಂದಾಗ ಈ ವಿಚಾರ ಸಾರ್ವಜನಿಕ ಮಹತ್ವದ ವಿಚಾರವಲ್ಲವೇ? ಅದಕ್ಕೋಸ್ಕರ ಈ ವಿಚಾರವಾಗಿ ಚರ್ಚೆ ಮಾಡಬೇಕೆಂದು ಹೇಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:-** ಹಾಗಾದರೆ, ಈ ಚರ್ಚೆಗೆ ಒಪ್ಪಿಕೊಳ್ಳಿ. ಇದಕ್ಕೆ ವಿರೋಧ ಇಲ್ಲವೆಂದರೆ ಚರ್ಚೆಗೆ ಅವಕಾಶ ಮಾಡಿಕೊಡಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಚಾರವಾಗಿ ಚರ್ಚೆ ಮಾಡಲಿಕ್ಕೆ ವಿರೋಧವಿಲ್ಲ. ಆದರೆ, ಇದನ್ನು ನಿಯಮ 59ರಡಿಯಲ್ಲಿ ತರುವುದು ಬೇಡ. ನಿಯಮ 68ರಡಿಯಲ್ಲಿ ತರಲಿ ಎನ್ನುವುದು ನಮ್ಮ ಸಲಹೆ. ನಾವು ಅದಕ್ಕೆ ಸಿದ್ಧರಿದ್ದೇವೆ. The Government is ready for discussion. ಈ ಸಮಸ್ಯೆ ಸುಪ್ರೀಂ ಕೋರ್ಟ್‌ನ ಆದೇಶದಿಂದ ಉದ್ಭವಿಸಿದೆ. ಈ ದೇಶದ ಸರ್ವೋಚ್ಛ ನ್ಯಾಯಾಲಯ ಕೊಟ್ಟಂತಹ ನಿರ್ಣಯದ ಮೇಲೆ ಇವತ್ತು ಈ ಸಮಸ್ಯೆ ಉದ್ಭವಿಸಿದೆ. ಆದ್ದರಿಂದ, ಈ ವಿಚಾರವಾಗಿ ಚರ್ಚೆ

ಮಾಡಲು ನಿಯಮ 68 ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಿ. ನಮ್ಮದೇನೂ ಅಭ್ಯಂತರವಿಲ್ಲ. ಈ ವಿಚಾರವನ್ನು ಮುಗಿಸೋಣ. ತಾವು ಇದಕ್ಕೆ ಸಮಯ ನಿಗದಿ ಮಾಡಿ. ಇದು ಮಹತ್ವದ ವಿಚಾರವಿದೆ. ಬಿಜೆಪಿ ಸರ್ಕಾರಗಳು ಇರುವಂತಹ ಬೇರೆ ಬೇರೆ ರಾಜ್ಯಗಳಲ್ಲಿಯೂ ಇದು ರದ್ದಾಗಿದೆ. ಇವತ್ತು ಮಧ್ಯಪ್ರದೇಶ ಇರಬಹುದು, ಮತ್ತೊಂದು ರಾಜ್ಯ ಇರಬಹುದು, ಬಿಹಾರ ಇರಬಹುದು, ಛತ್ತೀಸ್‌ಘಡ ಇರಬಹುದು, ಈ ರಾಜ್ಯಗಳಲ್ಲಿ ಈ ಗುಟ್ಕಾವನ್ನು ನಿಷೇಧ ಮಾಡಲಾಗಿದೆ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಮೆರಿಟ್ ವಿಷಯಕ್ಕೆ ನಾನು ಹೋಗಬೇಕೇ ಬೇರೆ ರಾಜ್ಯಗಳಲ್ಲಿ ಇದನ್ನು ನಿಷೇಧ ಮಾಡಿರುವ ವಿಚಾರ ಬೇಡ. ಇದು ಮಹತ್ವದ ವಿಚಾರವಾಗಿದ್ದು, ಇದನ್ನು ನಿಯಮ 59 ರಡಿಯಲ್ಲಿ ಚರ್ಚೆ ಮಾಡಬೇಕಾಗಿದೆ.

**ಶ್ರೀ ಎಸ್.ಆರ್. ಪಾಟೀಲ:-** ನಿಯಮ 68 ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ನಮ್ಮದೇನೂ ವಿರೋಧವಿಲ್ಲ. ನಾವು ಅದಕ್ಕೆ ಸಿದ್ಧರಿದ್ದೇವೆ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ದಯಮಾಡಿ ಕೇಳಿ. ಇದು ಬಹಳ ಮಹತ್ವದ ವಿಚಾರವಾಗಿದೆ. ಯಾವ ನಿಯಮದಡಿ ಚರ್ಚೆ ಮಾಡಬೇಕೆಂದು ಮಾನ್ಯ ಸಭಾಪತಿಯವರು ಹೇಳುತ್ತಾರೆ. ನೀವು ನಮಗೆ ಹೇಳುವುದಿಲ್ಲ. We will not tolerate this.

**ಶ್ರೀ ಎಸ್.ಆರ್. ಪಾಟೀಲ್:-** ನಿಯಮ 68 ರಡಿಯಲ್ಲಿ ವಿರೋಧ ಪಕ್ಷದ ನಾಯಕರು ತಮಗೆ ಬೇಕಾದಷ್ಟು ಮಾತನಾಡಲಿ. I am submitting to the Chair.

**Dr.A.H. SHIVAYOGISWAMY:-** Let the Hon'ble Chairman be convinced. Let him clear this.

**Sri S.R. PATIL:-** I am submitting to the Chair. Dr.Shivayogiswamy, why are you interfering?

(ಗೊಂದಲ)

**ಸಭಾಪತಿಯವರು:-** ಸಭಾನಾಯಕರೇ, ವಿರೋಧ ಪಕ್ಷದ ನಾಯಕರು ತಮ್ಮ ಚರ್ಚೆಯನ್ನು ಮುಗಿಸಲಿ. ವಿರೋಧ ಪಕ್ಷದ ನಾಯಕರು ಒಂದು ಮಹತ್ವದ ವಿಷಯದ ಬಗ್ಗೆ ಮಾತನಾಡಿದ್ದಾರೆ. ಅವರು ತಮ್ಮ ಮಾತುಗಳನ್ನು ಮುಗಿಸಲಿ. ಈ ಹಿನ್ನೆಲೆಯಲ್ಲಿ ನಿಮ್ಮ ಅಭಿಪ್ರಾಯ ಹೇಳಿ. ಈಗಲೇ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ ಅಥವಾ ಯಾವಾಗ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾನಾಯಕರಿಗೆ ಏನು ಸಹಕಾರ ಬೇಕೋ ಅದನ್ನು ನಾವು ಕೊಡುತ್ತೇವೆ.

**Sri S.R. PATIL:-** The Government is ready for discussion. It should be taken up under Rule 68. ನಾವು ಇದರ ಬಗ್ಗೆ ಚರ್ಚೆ ಮಾಡಲಿಕ್ಕೆ ತಯಾರಿದ್ದೇವೆ. ತಾವು ಇದಕ್ಕೆ ಸಮಯ ನಿಗದಿ ಮಾಡಬೇಕು.

(ಗೊಂದಲ)

**ಶ್ರೀ ಅಲ್ಲಮ ಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ನಾಯಕರು ಬಹಳ ಗೊಂದಲಕ್ಕೀಡಾಗಿದ್ದಾರೆ. ಅಡಿಕೆ ವಿಚಾರದಲ್ಲಿ ನಮ್ಮ ಸರ್ಕಾರ, ನಮ್ಮ ಮುಖ್ಯಮಂತ್ರಿಗಳ್ಯಾರು ಮಾತನಾಡಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:-** ಈ ಚರ್ಚೆಯ ಮಹತ್ವವನ್ನು ಕಡಿಮೆ ಮಾಡುವಂತಹ ಪ್ರಯತ್ನಗಳನ್ನು ಸರ್ಕಾರ ನಡೆಸುತ್ತಿದೆ.

**ಶ್ರೀ ಅಲ್ಲಮ ಪ್ರಭು ಪಾಟೀಲ್:-** ಅಡಿಕೆ ಬೆಳೆಗಾರರ ನೆರವಿಗೆ ಸರ್ಕಾರ ಬರುತ್ತದೆ ಎನ್ನುವ ಒಳ್ಳೆಯ ಮಾತನ್ನು ಹೇಳಿದ್ದಾರೆ.

(ಗೊಂದಲ)

**ಸಭಾಪತಿಯವರು:–** ಶ್ರೀಯುತ ಅಲ್ಲಮ ಪ್ರಭು ಪಾಟೀಲ್‌ರವರೇ, ದಯವಿಟ್ಟು ಕುಳಿತುಕೊಳ್ಳಿ ಸರ್ಕಾರದ ಪರವಾಗಿ ಉತ್ತರ ಕೊಡಲಿಕ್ಕೆ ಸಭಾ ನಾಯಕರು, ಬೇರೆ ಸಚಿವರುಗಳಿದ್ದಾರೆ. ನೀವು ಚರ್ಚೆಯಲ್ಲಿ ಭಾಗವಹಿಸಬಹುದೇ ಹೊರತು ಸರ್ಕಾರದ ಪರವಾಗಿ ಬೇರೆ ಯಾರೇ ಸದಸ್ಯರು ಉತ್ತರ ಕೊಡುವುದಕ್ಕಾಗುವುದಿಲ್ಲ. ಅದು ಸರಿ ಹೋಗುವುದಿಲ್ಲ. ಈ ವಿಚಾರವಾಗಿ ಸಭಾನಾಯಕರಾಗಲೀ ಅಥವಾ ಬೇರೆ ಯಾರೇ ಸಚಿವರಾಗಲೀ ಮಾತನಾಡಬಹುದು. ದಯಮಾಡಿ ಕುಳಿತುಕೊಳ್ಳಿ. ಇನ್ನೆರಡು ನಿಮಿಷಗಳಲ್ಲಿ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ಮುಗಿಸುತ್ತಾರೆ. ಅವರು ತಮ್ಮ ಭಾಷಣವನ್ನು ಮುಗಿಸಲಿ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್:–** ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ಮುಗಿಸಲಿ. ನಾವು ಅದಕ್ಕೆ ಉತ್ತರ ಕೊಡಲಿಕ್ಕೆ ಸಿದ್ಧವಾಗಿದ್ದೇವೆ.

**ಸಭಾಪತಿಯವರು:–** ನಾನು ಗಡಿಯಾರವನ್ನು ನೋಡುತ್ತಿದ್ದೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ನಾವು ಈ ವಿಚಾರವನ್ನು ಈಗಲೇ ಚರ್ಚೆಗೆ ತೆಗೆದುಕೊಳ್ಳೋಣ.

(ಗೊಂದಲ)

**ಸಭಾಪತಿಯವರು:–** ಅವರು ತಮ್ಮ ಭಾಷಣವನ್ನು ಮುಗಿಸಲಿಕ್ಕೆ ಬಿಡಿ.

**ಶ್ರೀ ಎಸ್.ಆರ್. ಪಾಟೀಲ್:–** ನಿಯಮ 68ರಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇವೆ.

**ಶ್ರೀ ಡಿ.ವಿ. ಸದಾನಂದಗೌಡ:–** ನಾನು ವಿನಂತಿಸಿಕೊಳ್ಳುತ್ತೇನೆ. ಏಕೆ ಏನು ಎಂದು ನಾನು ಚೇರ್‌ಗೆ ಕೇಳುತ್ತಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ನಾನೂ ಸಹ ಚೇರ್‌ಗೆ ಹೇಳುತ್ತಿದ್ದೇನೆ.

**(ಗೊಂದಲ)**

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ, ಈ ಕುರಿತು ಚರ್ಚೆಯಾದ ನಂತರ, ನಿಯಮಾವಳಿಗಳ ಅಡಿಯಲ್ಲಿ ತಾವು ಒಂದು ರೂಲಿಂಗ್ ಅನ್ನು ಕೊಡಬೇಕು. ಅದನ್ನು ಬಿಟ್ಟು ಅವರು ಹೇಗೆ ರೂಲಿಂಗ್ ಕೊಡುತ್ತಾರೆ? ಆದರೆ, ಮಾನ್ಯ ಸಭಾ ನಾಯಕರು ಚರ್ಚೆಯನ್ನು ಶುರು ಮಾಡಿದ್ದಾರೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಇದರ ಗಾಂಭೀರ್ಯದ ಬಗ್ಗೆ ಮಾತನಾಡಿದರು. ಮಧ್ಯೆ ಮಧ್ಯೆ ಮಾನ್ಯ ಸಭಾ ನಾಯಕರು ತಮ್ಮ ಸಲಹೆಯನ್ನು ಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಕನ್‌ಕ್ಲೂಡ್ ಮಾಡುವುದಕ್ಕೆ ಮುಂಚೆ ತಮ್ಮ ಅಭಿಪ್ರಾಯವನ್ನು ಹೇಳಿ ಕನ್‌ಕ್ಲೂಡ್ ಮಾಡಬೇಕು. ಸರ್ಕಾರದ ಪರವಾಗಿ ಈಗಾಗಲೇ ಅವರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ ನಂತರ ಮಾನ್ಯ ಸಭಾ ನಾಯಕರು ಮತ್ತೆ ಏನಾದರೂ ಹೇಳುವುದಿದ್ದರೆ ಹೇಳಲಿ. ಅದನ್ನು ಕೇಳೋಣ. ನಂತರ ನಾನು ನನ್ನ ನಿರ್ಣಯವನ್ನು ಹೇಳುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ನಾನು ಯಾವುದೇ ವಿವರಕ್ಕೆ ಹೋಗಿಲ್ಲ. ನಾನು ಸುಪ್ರೀಂ ಕೋರ್ಟಿನ ಯಾವುದೇ ಆದೇಶದ ಬಗ್ಗೆ ಉಲ್ಲೇಖ ಮಾಡಿಲ್ಲ ಮತ್ತು ಇವರು ಮಾಡಿದ ಯಾವುದೇ ನೋಟಿಫಿಕೇಷನ್ ಬಗ್ಗೆ ಮಾತನಾಡಿಲ್ಲ. ಯಾವುದೇ ರೀತಿಯಲ್ಲಿ ಅಡಿಕೆ ಬೆಳೆಗಾರರ ಸಮಸ್ಯೆ ಇದೆ, ಆ ಸಮಸ್ಯೆಗಳ ಬಗ್ಗೆ ಮತ್ತು ಕೆಳಗಿನ ಹಂತದ ಸಮಸ್ಯೆ ಬಗ್ಗೆ ನಾನು ಹೇಳಿಲ್ಲ. ಅಡಿಕೆ ಬೆಳೆಗಾರರ ವಿಚಾರಗಳು ಏನಿವೆ ಏನೆಲ್ಲಾ ನಡೆದಿದೆ ಇದರ ಮಹತ್ವದ ಬಗ್ಗೆ ಹೋಗಿಲ್ಲ. ಇದು ಬಹಳ ಮಹತ್ವಪೂರ್ಣವಾದ ವಿಚಾರವಾಗಿದೆ. ದಯಮಾಡಿ ಈ ಸದನದ ಎಲ್ಲಾ ಕಲಾಪಗಳನ್ನು ಬದಿಗಿರಿಸಿ ಅಡಿಕೆ ಬೆಳೆಗಾರರ ಸಮಸ್ಯೆಯನ್ನು ಕೈಗೆತ್ತಿಕೊಳ್ಳಬೇಕೆಂದು ತಮ್ಮನ್ನು ಕನ್ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ, ಆ ಭಾಗದಲ್ಲಿ ಕುಳಿತಿರುವವರೆಲ್ಲರೂ ಸೇರಿ ಹಾದಿ ತಪ್ಪಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಇದು ಸರಿಯಲ್ಲ. ಇದನ್ನು ನಾನು ಒಪ್ಪುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ನೀವು ಹಾದಿ. . . .

**ಶ್ರೀ ಡಿ.ವಿ.ಸದಾನಂದಗೌಡ:-** ಇದು ಬಹಳ ಮಹತ್ವದ ವಿಚಾರವಾಗಿದೆ. ಇದನ್ನು ನಾನು ಒಪ್ಪುವುದಿಲ್ಲ. ನಾನು ಹೇಳುವುದನ್ನು ಕೇಳುವುದಕ್ಕೆ ಯಾರೂ ತಯಾರಿಲ್ಲವೆಂದರೆ ಹೇಗೆ? ನಾನೇನಾದರೂ ಗೊಂದಲ ಉಂಟು ಮಾಡಿದ್ದರೆ ತಾವು ಆದೇಶ ಮಾಡಿ. ನಾನು ಇದರ ಮಹತ್ವದ ಬಗ್ಗೆ ಮಾತ್ರ ಮಾತನಾಡಿದ್ದೇನೆ. ಲಕ್ಷಾಂತರ ಅಡಿಕೆ ಬೆಳೆಗಾರರ ಭವಿಷ್ಯದ ಬಗ್ಗೆ ಮಾತನಾಡುತ್ತಿದ್ದೇನೆ. ಸುಪ್ರೀಂ ಕೋರ್ಟಿನ ಆದೇಶದ ನಂತರ ತಕ್ಷಣ ಅಡಿಕೆ ಮಾರುಕಟ್ಟೆ ಕುಸಿದಿದೆ. ಅಡಿಕೆ ಮಾರುಕಟ್ಟೆ ಕುಸಿತದ ಬಗ್ಗೆ ತಮ್ಮನ್ನು ಕನ್ವಿನ್ಸ್ ಮಾಡಬೇಕಾಗುತ್ತದೆ. ಇಲ್ಲಿ ಹೇಳುವುದನ್ನು ಸ್ವಲ್ಪ ಕೇಳಿ. ಮಾರ್ಚ್‌ನಿಂದ ಜೂನ್ ತಿಂಗಳ ಈ ಒಂದು ಅವಧಿ ಏನು ಇದೆ ಇದು ಕೋ-ಆಪರೇಟಿವ್ ಸೊಸೈಟಿ ಮತ್ತು ಇತರೆ ಬ್ಯಾಂಕುಗಳಿಂದ ಪಡೆದ ಸಾಲದ renewal period ಆಗಿದೆ. ಇಂತಹ ಒಂದು ಸಂದರ್ಭದಲ್ಲಿ ಅಡಿಕೆ ಬೆಲೆ ಕುಸಿತವಾಗಿದೆ. ಸಾಲದ ಬಾಧೆ ತಾಳಲಾರದೆ ರೈತರು ಏನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಆ ಪಟ್ಟಿಗೆ ಇನ್ನಷ್ಟು ಅಡಿಕೆ ಬೆಳೆಗಾರರೂ ಸೇರುವ ಪರಿಸ್ಥಿತಿ ಉಂಟಾಗುತ್ತದೆ. ದಯಮಾಡಿ ಇದಕ್ಕೆ ತಕ್ಷಣ ಪರಿಹಾರವನ್ನು ಕೊಡುವ ಕೆಲಸ ಕಾರ್ಯಗಳನ್ನು ಸರ್ಕಾರ ಮಾಡಬೇಕಾಗಿದೆ. ಈ ಕುರಿತು ಅಗತ್ಯವಾದ, ಮಹತ್ವದ ಚರ್ಚೆ ನಡೆಯಬೇಕೆಂದು ನಾನು ಬಯಸುತ್ತೇನೆ. ನಾನು ಈ ವಿಚಾರದ ಬಗ್ಗೆ ವಿವರಕ್ಕೆ ಹೋಗಬೇಕೆಂದರೆ ಇನ್ನೂ ಒಂದು ಗಂಟೆ ಮಾತನಾಡಬಲ್ಲೆ. ಇದು ಸಾರ್ವಜನಿಕ ಮಹತ್ವದ ವಿಚಾರವಾಗಿದೆ. ಒಂದೊಂದು ದಿವಸ ನಿಧಾನವಾದರೂ ಕಷ್ಟವಾಗುತ್ತದೆ. ಅಡಿಕೆ ಬೆಳೆಗಾರರು ಸಹಕಾರಿ ಮತ್ತಿತರೆ ಬ್ಯಾಂಕುಗಳಿಂದ ಪಡೆದ ಸಾಲದ ಮರುಪಾವತಿ ಮಾಡುವ ಅವಧಿ ಇದಾಗಿದೆ. ಅಡಿಕೆ ಧಾರಣೆಗಳ ಕುಸಿತದಿಂದ ಕೈಗೆ ಹಣ ಮತ್ತು ಕೆಲಸ ಸಿಗದೆ ಲಕ್ಷಾಂತರ ಮಂದಿ ತೊಳಲಾಡುವ ಪರಿಸ್ಥಿತಿ ಉದ್ಭವವಾಗಿದೆ. ಆದುದರಿಂದಾಗಿ ಸದನದ ಬಾಕಿ ಎಲ್ಲಾ ಕಾರ್ಯಕಲಾಪವನ್ನು ಬದಿಗೊತ್ತಿ, ಇದನ್ನು ಸಾರ್ವಜನಿಕ ಮಹತ್ವದ ವಿಚಾರವೆಂದು ಪರಿಗಣಿಸಿ ಈ ವಿಚಾರದ ಬಗ್ಗೆ ಇಂದೇ, ಈಗಲೇ

ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ. ನಿನ್ನೆ ಮಾನ್ಯ ರಾಜ್ಯಪಾಲರ ಭಾಷಣ ಇದ್ದುದರಿಂದಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇಲ್ಲದಿದ್ದರೆ ಈ ವಿಚಾರವನ್ನು ನಿನ್ನೆಯೇ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೆವು. ರಾಜ್ಯದ ಇಡೀ ರೈತಾಪಿ ವರ್ಗದ ಜನರ ಜೀವನ ಸಂಕಷ್ಟಕ್ಕೆ ಸಿಲುಕಿದೆ. ಅವರುಗಳು, ಈ ವಿಚಾರವನ್ನು ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡಬೇಕೆಂದು, ಆ ಮೂಲಕ ನಮ್ಮಗಳ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಕೊಳ್ಳುವ ಕೆಲಸವನ್ನು ಮಾಡಿ ಎಂದು ನಮ್ಮನ್ನು ಒಕ್ಕೊರಲಿನಿಂದ ಕೇಳುತ್ತಿದ್ದಾರೆ. ಸರ್ಕಾರ ರೈತರ ಸರಣಿ ಆತ್ಮಹತ್ಯೆ ಆಗದಂತೆ ನೋಡಿಕೊಳ್ಳಲಿ. ಕೆಲಸವಿಲ್ಲದೆ ರೈತರು ಎಲ್ಲೆಲ್ಲೋ ತಿರುಗಾಡುವ ಹಾಗೆ ಆಗದಂತೆ ನೋಡಿಕೊಳ್ಳಿ ಎಂದು ಲಕ್ಷಾಂತರ ಜನರು ನಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದಾರೆ. ಆದುದರಿಂದ ಇದನ್ನು ಸಾರ್ವಜನಿಕ ಮಹತ್ವದ ವಿಚಾರವೆಂದು ಪರಿಗಣಿಸಿ ಈಗಲೇ ಈ ವಿಷಯದ ಬಗ್ಗೆ ಚರ್ಚೆಯನ್ನು ಪ್ರಾರಂಭಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಭಾ ನಾಯಕರು ತಮ್ಮ ಅಭಿಪ್ರಾಯವನ್ನು ಹೇಳಬೇಕು. ಆಗಲೇ ಒಂದು ಸಲ ಹೇಳಿದ್ದೀರಿ. ಈಗ ಅವರ ಮಾತುಗಳನ್ನು ಕೇಳಿದ ನಂತರ ತಾವು ಏನು ಹೇಳುತ್ತೀರಿ ಎಂಬುದನ್ನು ನಾನು ಕೇಳಬೇಕಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ರೈತರ ಬಗ್ಗೆ ಸಾಕಷ್ಟು ಚಿಂತನೆಯನ್ನು ಹೊಂದಿದಂತಹ ಸರ್ಕಾರವಾಗಿದೆ. ಅಡಿಕೆ ಬೆಳೆಗಾರರಿಗೆ ಆಗಿರುವಂತಹ ತೊಂದರೆಯ ಬಗ್ಗೆ ಅವರು ಇಲ್ಲಿ ಏನು ಪ್ರಸ್ತಾಪ ಮಾಡಬೇಕೆಂದಿದ್ದಾರೆ ಅದು ಬಹಳ ಮಹತ್ವದ ವಿಚಾರವಾಗಿದೆ. ನಾವು ಈ ಚರ್ಚೆ ಬೇಡವೆಂದು ಹೇಳುವುದಿಲ್ಲ. The Government is prepared for discussion. ಆದರೆ ನಿಯಮ 59ರಲ್ಲಿ ಬೇಡ ಅದರ ಬದಲಾಗಿ ನಿಯಮ 68ರ ಅಡಿಯಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡರೆ ಈ ಸದನದ ಎಲ್ಲಾ ಸದಸ್ಯರಿಗೂ ಮಾತನಾಡುವುದಕ್ಕೆ

ಅವಕಾಶ ದೊರೆಯುತ್ತದೆ. ಈ ಸರ್ಕಾರ ಗುಟ್ಕಾ ಮಾರಾಟವನ್ನು ರದ್ದು ಮಾಡಿದೆ. ಕೇಂದ್ರಾಡಳಿತದ ಎರಡು ಪ್ರದೇಶಗಳಲ್ಲಿ ಮತ್ತು ಇತರ 25 ರಾಜ್ಯಗಳಲ್ಲಿ ಇದನ್ನು ರದ್ದು ಮಾಡಿದ್ದಾರೆ. ಇವೆಲ್ಲದರ ಜೊತೆಗೆ ಗುಟ್ಕಾ ಮಾರಾಟವನ್ನು ರದ್ದು ಮಾಡಬೇಕೆಂದು ಸುಪ್ರೀಂ ಕೋರ್ಟಿನ ಆದೇಶ ಕೂಡ ಆಗಿದೆ. ಈ ಕುರಿತು ಸುಪ್ರೀಂ ಕೋರ್ಟಿನಲ್ಲಿ ಒಂದು Affidavit ಅನ್ನು ಹಾಕುವುದಕ್ಕೆ ನಮ್ಮ ಸರ್ಕಾರಕ್ಕೆ ತಿಳಿಸಿದ್ದಾರೆ. Immediately you have to file an Affidavit as to what action you have taken. ಸುಪ್ರೀಂ ಕೋರ್ಟಿನ ನಿರ್ಣಯ ಇರುವುದರಿಂದ ಗುಟ್ಕಾ ನಿಷೇಧ ಮಾಡುವ ನಿರ್ಣಯವನ್ನು ನಮ್ಮ ಸರ್ಕಾರ ಕೈಗೊಂಡಿದೆ. ನಾವು ಅಡಿಕೆಯನ್ನು ಬ್ಯಾನ್ ಮಾಡಿಲ್ಲ. ಗುಟ್ಕಾವನ್ನು ಮಾತ್ರ ಬ್ಯಾನ್ ಮಾಡಿದ್ದೇವೆ. ಇದರಿಂದಾಗಿ ಸಾಕಷ್ಟು ಗೊಂದಲವಾಗುತ್ತಿದೆ. ಸಚಿವರಾದ ಮಾನ್ಯ ದೇಶಪಾಂಡೆಯವರು ಹೇಳಿದ ಹಾಗೆ, ಆಮದು ಮೇಲಿನ ಸುಂಕವನ್ನು ಹೆಚ್ಚು ಮಾಡಿದ್ದರಿಂದ ಬೇರೆ ಕಡೆಯಿಂದ ಅಡಿಕೆ ಬರುವುದು ಕಡಿಮೆಯಾಗಿದೆ. ಆ ಮೂಲಕ ನಾವು ಅಡಿಕೆ ಬೆಳೆಗಾರರ ರಕ್ಷಣೆಯನ್ನು ಮಾಡಿದ್ದೇವೆ. ಶ್ರೀ ಗೋರಖ್‌ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಾವು ನೇಮಕ ಮಾಡಿದ್ದೆವು. ಆ ವರದಿಯನ್ನು ಇಂಪ್ಲಿಮೆಂಟ್ ಮಾಡುವುದರ ಬಗ್ಗೆ ಚಿಂತನೆ ಇದೆ. ಅಡಿಕೆ ಬೆಳೆಗಾರರ ಬಗ್ಗೆ ನಮಗೆ ಸಾಕಷ್ಟು ಕಾಳಜಿ, ಕಕ್ಕುಲಾತಿ ನಮ್ಮ ಸರ್ಕಾರಕ್ಕೆ ಇದೆ. ಅಷ್ಟೇ ಅಲ್ಲ ಕೇಂದ್ರದ ಯು.ಪಿ.ಎ ಸರ್ಕಾರಕ್ಕೂ ಕೂಡ ಇದೆ. ಅವರೂ ಕೂಡ ಸಾಕಷ್ಟು ಶ್ರಮ ವಹಿಸಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ:-** ಸನ್ಮಾನ್ಯ ಸಭಾಪತಿಯವರೇ, ನೂರಕ್ಕೆ ನೂರಾ ಎಂಟು ಪರ್ಸೆಂಟ್ ಇದನ್ನು ನಮ್ಮ ವಾಜಪೇಯಿಯವರ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಮಾಡಿದ್ದು. ನಿಮ್ಮ ಯು.ಪಿ.ಎ. ಸರ್ಕಾರ ಅಲ್ಲ. ನಿಮಗೆ ಅಡಿಕೆ ಬೆಳೆಗಾರರ ಬಗ್ಗೆ ಕಾಳಜಿ ಇಲ್ಲ.

**(ಗೊಂದಲ)**

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, it is done by the UPA Government. ನೀವು ಚಾಲೆಂಜ್ ತೆಗೆದುಕೊಳ್ಳುತ್ತೀರಾ? ನಾನು ನಂತರ ಮಾತನಾಡುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ನೂರಕ್ಕೆ ನೂರಾ ಎಂಟು ಪರ್ಸೆಂಟ್ ಇದನ್ನು ನಮ್ಮ ವಾಜಪೇಯಿಯವರ ಸರ್ಕಾರ ಇದ್ದಾಗ ಮಾಡಿದ್ದು.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಕೆಲವು ಮಹತ್ವದ ಸಂಗತಿಗಳನ್ನು ಹೇಳಿದ್ದಾರೆ. ನೀವು ಆಗಲೇ ಮಾತನಾಡುತ್ತಾ ಒಂದು ಮಾತನ್ನು ಹೇಳಿದ್ದೀರಿ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಜನತೆಗೆ ತಪ್ಪು ಸಂದೇಶ ಹೋಗಬಾರದು. ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕೆ ಅನುಗುಣವಾಗಿ ನಡೆಯಬೇಕಾಗುತ್ತದೆ. ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುವುದಕ್ಕೆ ಆಗುವುದಿಲ್ಲ. ರಾಜ್ಯದಲ್ಲಿ ಗುಟ್ಕಾವನ್ನು ಬ್ಯಾನ್ ಮಾಡದೇ ಇರುವುದಕ್ಕೆ ಆಗುವುದಿಲ್ಲ. It amounts to contempt of Court. ಇದೆಲ್ಲಾ ಅತ್ಯಂತ ಗಹನವಾದ ವಿಚಾರವಾಗಿದೆ. ಪ್ರತಿ ಪಕ್ಷದ ನಾಯಕರು ಹಿಂದೆ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ನನಗೆ ವೈಯುಕ್ತಿಕವಾಗಿ ಅವರ ಬಗ್ಗೆ ಬಹಳ ಗೌರವ ಇದೆ. ಅದನ್ನು ಸುತ್ತಿ ಬಳಸಿ ಬೇರೆ ರೀತಿಯ ಸಂದೇಶ ಈ ರಾಜ್ಯದ ಜನತೆಗೆ ಹೋಗುವುದು ಬೇಡ. ಸುಪ್ರೀಂ ಕೋರ್ಟ್ ನಿರ್ಣಯ ಕೊಟ್ಟಿದೆ. The Supreme Court has given its judgement. ನಾವು ಹೇಳುವುದಕ್ಕೆ ಕೇಳುವುದಕ್ಕೆ ಸ್ವಲ್ಪ ತಾಳ್ಮೆ ಇರಬೇಕು.

**ಶ್ರೀ ಡಿ.ವಿ. ಸದಾನಂದಗೌಡ:–** ಸುಪ್ರೀಂ ಕೋರ್ಟಿನ ಆದೇಶದ ಬಗ್ಗೆ ನಮ್ಮ ವಿರೋಧ ಇಲ್ಲ ಎಂದು ನಾವು ಪ್ರಾರಂಭದಲ್ಲಿಯೇ ಹೇಳಿದ್ದೇವೆ. ಅದರ ಬಗ್ಗೆ ಇಲ್ಲಿ ಚರ್ಚೆ ಏಕೆ ಮಾಡುತ್ತೀರಿ? ರೈತರ ಬಗ್ಗೆ, ಅವರ ಸಮಸ್ಯೆಯ ಬಗ್ಗೆ ಚರ್ಚೆ ಮಾಡದೆಯೇ ಆತುರದ ನಿರ್ಧಾರವನ್ನು ಮಾಡಿದ್ದೀರಿ ಎಂದು ನಾವು ಹೇಳುತ್ತಿದ್ದೇವೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ತಮಗೆ ಬಹಳ ತಾಳ್ಮೆ ಇದೆ ಎಂದು ನಾನು ಭಾವಿಸಿದ್ದೆನು.

**ಶ್ರೀ ನಾರಾಯಣ ಸಾ. ಬಾಂಡಗೆ:–** ಸುಪ್ರೀಂ ಕೋರ್ಟಿನ ನಿರ್ಣಯವೆಂದು ಹೇಳಬೇಡಿ. ಹಾಗೆ ನೋಡುವುದಾದರೆ ಬಹಳಷ್ಟು ವಿಚಾರಗಳಲ್ಲಿ ಸುಪ್ರೀಂ ಕೋರ್ಟಿನ ನಿರ್ಣಯಗಳು ಇವೆ.

**ಶ್ರೀ ಎಸ್.ಆರ್. ಪಾಟೀಲ್:–** ಈ ವಿಚಾರವನ್ನು ಚರ್ಚೆಗೆ ಕೈಗೆತ್ತಿಕೊಳ್ಳುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ನಿಯಮ 59ರ ಬದಲಾಗಿ ನಿಯಮ 68ರ ಅಡಿಯಲ್ಲಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡರೆ ಈ ಸದನದ ಎಲ್ಲಾ ಸದಸ್ಯರೂ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಸಿಗುತ್ತದೆ. ದಯಮಾಡಿ ತಾವು ಇದಕ್ಕೆ ಒಂದು ಸಮಯವನ್ನು ನಿಗದಿ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಬಹಳ ಮಹತ್ವದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅಡಿಕೆ ಮತ್ತು ಭತ್ತ ಬೆಳೆಯುವ ರೈತರು ಇರಬಹುದು ಇವರೆಲ್ಲರೂ ರೈತ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಇವರ ವಿಚಾರದ ಬಗ್ಗೆ ಎಲ್ಲಾ ರಾಜಕೀಯ ಪಕ್ಷದವರಿಗೆ ಸದನದ ಎಲ್ಲಾ ಸದಸ್ಯರಿಗೆ ಚಿಂತನೆ ಇದೆ. ಗುಟ್ಕಾವನ್ನು ರದ್ದುಗೊಳಿಸಿರುವುದರ ಬಗ್ಗೆ ನಮ್ಮದು ಯಾರದ್ದೂ ವಿರೋಧವಿಲ್ಲವೆಂದು ಹೇಳಿದರು. ಕೇಂದ್ರಾಡಳಿತದ ಎರಡು ಪ್ರದೇಶಗಳ ಮತ್ತು ಇತರ 25 ರಾಜ್ಯಗಳಲ್ಲಿ ಇದನ್ನು ರದ್ದು ಮಾಡಿದ್ದಾರೆ. ತಾವು ಆಡಳಿತ ನಡೆಸುತ್ತಿದ್ದಾಗ ಈ ಆದೇಶ ಆಯಿತು. ಆಗ, 'ಚುನಾವಣಾ ನೀತಿ ಸಂಹಿತೆ (Code of Conduct) ಇದೆ, ಆದ್ದರಿಂದ ಈ ಗುಟ್ಕಾ ನಿಷೇಧದ ನಿರ್ಣಯ ತೆಗೆದುಕೊಳ್ಳುವುದನ್ನು ಮುಂದಕ್ಕೆ ಹಾಕುತ್ತೇವೆ' ಎಂದು ಆ ಸಂದರ್ಭದಲ್ಲಿ ಸುಪ್ರೀಂ ಕೋರ್ಟಿಗೆ ಅರ್ಜಿಯನ್ನು ಸಲ್ಲಿಸಲಾಗಿತ್ತು. ನಾವು ಈ ಸರ್ಕಾರದ ಜವಾಬ್ದಾರಿಯನ್ನು ತೆಗೆದುಕೊಂಡ ನಂತರ ಈ ಕುರಿತು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ನಾವು ನಾಲ್ಕು ತಿಂಗಳೊಳಗಾಗಿ ಆದೇಶವನ್ನು ಮಾಡಬೇಕೆಂದು ಸುಪ್ರೀಂ ಕೋರ್ಟಿನ ಆದೇಶ ಇತ್ತು. ಮೊದಲೇ ಗುಟ್ಕಾ ನಿಷೇಧದ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ Special Leave Petititon ನ್ನು ಸಲ್ಲಿಸಬಹುದಿತ್ತು. ಆದರೆ, ಒಮ್ಮೆ ಅಲ್ಲಿ ಈ ಒಂದು ನಿರ್ಣಯ

ಆದ ನಂತರ ಚರ್ಚೆಗೆ ಅವಕಾಶ ಕೊಡುವುದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಆದರೆ ಈ ಅಡಿಕೆ ಬೆಳೆಗಾರರ ಸಮಸ್ಯೆಯ ಬಗ್ಗೆ ಚರ್ಚೆಗೆ ಅವಕಾಶ ಕೊಡಬಾರದೆಂದು ಅಲ್ಲ. ಅವರ ಹಿತರಕ್ಷಣೆ ಬಗ್ಗೆ ಈ ಸದನದ ಸದಸ್ಯರುಗಳಿಂದ ಒಳ್ಳೆಯ ಸಲಹೆ ಬರಬೇಕು. ಇದರ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಗಬೇಕೆಂದು ಮಾನ್ಯ ಸಭಾ ನಾಯಕರು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಅಡಿಕೆ ಬೆಳೆಗಾರರ ಹಿತವನ್ನು ಸರ್ಕಾರ ಸಂರಕ್ಷಣೆ ಮಾಡುತ್ತೇವೆ ಎಂದು ಹೇಳಿರುವುದು ಈಗಾಗಲೇ ತಮ್ಮ ಗಮನಕ್ಕೆ ಬಂದಿದೆ ಎಂದು ಭಾವಿಸುತ್ತೇನೆ. ಅಡಿಕೆ ಬೆಳೆಗಾರರ ಬಗ್ಗೆ . . . . .

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ಶುರು ಮಾಡಿದ್ದಾರೆ. He is going into the details. ಈಗ ನಮ್ಮ ಮುಂದೆ ಈ ವಿಚಾರಗಳು ಇಲ್ಲ. ಅಡಿಕೆ ಬೆಳೆಗಾರರ ಬಗ್ಗೆ ನಿಯಮ 59ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೋ, ಇಲ್ಲವೇ ನಿಯಮ 68ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೋ ಎಂಬುದಷ್ಟೆ ವಿಷಯ ನಮ್ಮ ಮುಂದೆ ಇರುವುದು. First of all, let the Chair say whether it should be taken under Rule 59 or under Rule 68.

**ಶ್ರೀ ಆರ್.ವಿ. ದೇಶಪಾಂಡೆ:–** ಸನ್ಮಾನ್ಯ ಸಭಾಪತಿಯವರೇ, ಅಡಿಕೆ ಬೆಳೆಗಾರರ ಡೆಲಿಗೇಷನ್‌ನಲ್ಲಿ ನಾವೂ ಕೂಡ ಇದ್ದೆವು. ಅಡಿಕೆ ಬೆಳೆಗಾರರ ಬಗ್ಗೆ ಇಷ್ಟು ಚಿಂತನೆಯಿಂದ ಹೇಳುತ್ತಿದ್ದಾರಲ್ಲಾ? ಹಿಂದೆ ಅಡಿಕೆ ದರ 6000–7000 ರೂಪಾಯಿ ಇತ್ತು. ಆದರೆ, ಈಗ 16 ರಿಂದ 18 ಸಾವಿರ ರೂಪಾಯಿಗೆ ಹೋಗಿದ್ದು ಹೇಗೆ? ನೀವೇನಾದರೂ ಆದೇಶ ಕೊಟ್ಟಿದ್ದರೇನು? ಯು.ಪಿ.ಎ ಸರ್ಕಾರ ಇದ್ದಾಗ ಇದನ್ನು ಮಾಡಿದ್ದು. ಇದರ ಬಗ್ಗೆ ನಿಮ್ಮ ಸ್ನೇಹಿತರಾದ ಕ್ಯಾಂಪ್ಕೋದ ಅಧ್ಯಕ್ಷರನ್ನು ಬೇಕಿದ್ದರೆ ಫೋನ್ ಮಾಡಿ ಕೇಳಿ.

**ಶ್ರೀ ಡಿ.ವಿ. ಸದಾನಂದಗೌಡ :–** ಸನ್ಮಾನ್ಯ ಸಭಾಪತಿಯವರೇ, ಅಡಿಕೆ ಬೆಲೆ ಕುಸಿದಾಗ 50,000 ಜನ ಸೇರಿ ಪಾದಯಾತ್ರೆ ಮಾಡಿ ಸರ್ಕಾರದ ಗಮನವನ್ನು ಸೆಳೆದಿದ್ದೆವು. ಆಗ ಮುಖ್ಯಮಂತ್ರಿಯಾಗಿದ್ದ ಮಾನ್ಯ

ಎಸ್.ಎಂ.ಕೃಷ್ಣಾರವರ ಗಮನವನ್ನು ಸೆಳೆದಿದ್ದೆವು. ನಮ್ಮ ಹೋರಾಟವನ್ನು ನೋಡಿ ಅವರು ನಮ್ಮನ್ನು ಕರೆಸಿ ಮಾತನಾಡಿ ಅದನ್ನು ಮುಂದುವರೆಸಿದ್ದರು. ಅದನ್ನು ತಿಳಿದುಕೊಳ್ಳಿ.

(1.00 ಗಂಟೆ)

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಅವರು ಈಗ NDA ಸರ್ಕಾರ ಇದ್ದಾಗ ಮಾಡಿದ್ದಾರೆಂದು ಹೇಳಿದ್ದರು. ಈಗ ಎಸ್.ಎಂ.ಕೃಷ್ಣಾರವರಿಗೆ ಬಂದಿದ್ದಾರೆ. ಈಗ ನಾನು ಅವರಿಗೆ UPA ಗೆ ತರುತ್ತೇನೆ. ಆ ಕಾರಣಕ್ಕಾಗಿ ಅದನ್ನು ಹೇಳಬೇಕಾಯಿತು. NDA ಸರ್ಕಾರ ಮಾಡಿಲ್ಲ. UPA ಸರ್ಕಾರ ಮಾಡಿದೆ.

(ಗೊಂದಲ)

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ಅವರು ವಿಷಯಾಂತರ ಮಾಡಿ ಉತ್ತರವನ್ನು ಕೊಡುತ್ತಿದ್ದಾರೆ.

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ನಾನು ವಿಷಯಾಂತರ ಮಾಡುತ್ತಿಲ್ಲ. Commerce Minister ಅನಂತ ಶರ್ಮಾರವರಿಗೆ ಭೇಟಿಯಾಗಿ ಅಡಿಕೆ ಏನು import ಆಗುತ್ತಿದೆ.

(ಗೊಂದಲ)

**ಡಾ|| ಎ.ಹೆಚ್. ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ನೀವು ಅವರಿಗೆ ಉತ್ತರವನ್ನು ನೀಡುವುದಕ್ಕೆ allow ಮಾಡಿದ್ದೀರಾ?

(ಗೊಂದಲ)

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಅಡಿಕೆ smuggling ಆಗುತ್ತಿದೆ. Inferior quality ಅಡಿಕೆ ಬರುತ್ತಿರುವುದಕೋಸ್ಕರ Import Duty 22ರೂಪಾಯಿ ಏನಿತ್ತು ಅದು 76 ರೂಪಾಯಿ ಆಯಿತು.

ಅಡಿಕೆ ಬೆಲೆ improve ಆಯಿತು. ಈಗ Commerce Ministry 76 ರೂಪಾಯಿ ಇದ್ದಿದ್ದನ್ನು ₹ 110 ಮಾಡಿದ್ದಾರೆ. ಹಾಗಾಗಿ ಅಡಿಕೆ ಬೆಲೆ ಹೆಚ್ಚಾಯಿತು. ಇದನ್ನು ನೀವು ಮರೆಯಬಾರದು. ಹಾಗಾಗಿ UPA ಸರ್ಕಾರ, ಈ ಸರ್ಕಾರ ಎಲ್ಲಾ ರೈತರ ಹಿತವನ್ನು ಸಂರಕ್ಷಣೆ ಮಾಡುತ್ತದೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ನನ್ನ ವಿನಂತಿ ಏನೆಂದರೆ ನಮ್ಮ ನಾಯಕರು ಈಗಾಗಲೇ ವಿಷಯವನ್ನು ಸದನದ ಗಮನಕ್ಕೆ ತರುತ್ತಾ ತಮಗೆ convince ಮಾಡುವುದಕ್ಕೆ entire ಟಿಪ್ಪಣಿಯನ್ನು ಕೊಟ್ಟಿದ್ದಾರೆ. ಮಾನ್ಯ ಸಭಾನಾಯಕರು ಹಾಗೂ ಮಾನ್ಯ ಸಚಿವರಾದ ಶ್ರೀ ಆರ್.ವಿ.ದೇಶಪಾಂಡೆಯವರು ಕೂಡ ಬಹಳ ಚಿಂತಾಜನಕವಾದ ಸಮಸ್ಯೆ ನಮ್ಮ ಕಾಲದಲ್ಲಿಯೂ ನಾವು ಮಾಡಿದ್ದೆವು ಎಂದೆಲ್ಲಾ ಒಪ್ಪಿಕೊಂಡಿದ್ದಾರೆ. ಆದರೆ ಇಲ್ಲಿ ಇರುವ ಪ್ರಶ್ನೆ ಏನೆಂದರೆ ಇಬ್ಬರೂ ಒಪ್ಪಿದ ಮೇಲೆ ಈಗ ಚರ್ಚೆಯನ್ನು ನಿಯಮ 59ರಡಿಯಲ್ಲಿ ತೆಗೆದುಕೊಳ್ಳಬೇಕೋ, ಅಥವಾ ನಿಯಮ 69ರಡಿಯಲ್ಲಿ ತೆಗೆದುಕೊಳ್ಳಬೇಕೋ ಎಂದು ಇದೆ. Let us wait for him. ಅದನ್ನು ಮಾಡುವ ಮೊದಲೇ ಅವರು ಉತ್ತರವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದರೆ ಹೇಗೆ? ದಯಮಾಡಿ ತಾವು ruling ಅನ್ನು ನೀಡಿ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಅವರು NDA ಸರ್ಕಾರ Import Duty ಅನ್ನು ಜಾಸ್ತಿ ಮಾಡಿದೆ ಎಂದು ಹೇಳಿರುವುದು ಕಡತಕ್ಕೆ ಹೋದರೆ ಸರಿಯಾಗುವುದಿಲ್ಲ, ಕಡತ ಸರಿ ಆಗಬೇಕು, ಅದನ್ನು UPA ಸರ್ಕಾರ ಮಾಡಿದೆ ಎಂದು ಕಡತಕ್ಕೆ ಹೋಗಬೇಕು. ಆ ಕಾರಣಕ್ಕಾಗಿ ಹೇಳುತ್ತಿದ್ದೇನೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಅವರು ಹೇಳುವುದಕ್ಕೆ ಬೇಡ ಎಂದು ಯಾರು ಹೇಳಿದ್ದಾರೆ. ಅವರು ಅದನ್ನೆಲ್ಲಾ ಉತ್ತರವನ್ನು ಕೊಡುವಾಗ ಹೇಳಲಿ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, Import Duty ಅನ್ನು ಜಾಸ್ತಿ ಮಾಡಿದ್ದು NDA ಸರ್ಕಾರ ಎಂದು ಹೇಳಿರುವುದಕ್ಕೆ ನಾನು ಈಗಲೂ ಬದ್ಧ ಆಗಿದ್ದೇನೆ.

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, let him produce the relevant documents. This is my challenge to the Hon'ble Leader of Opposition. ಎರಡು ಬಾರಿ Import Duty ಹೆಚ್ಚು ಮಾಡಿದ್ದು UPA ಸರ್ಕಾರದ Commerce Ministry. I am taking a challenge with him.

**Sri D.V.SADANANDAGOWDA ( Leader of Opposition ):-** I will place the papers before the House.

**ಸಭಾಪತಿಯವರು:-** ಅದನ್ನು ಆಮೇಲೆ ನೋಡೋಣ. ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, 'challenge' – ಈ ರೀತಿಯ ಪದಗಳ ಬಳಕೆ ಬೇಡ. ಇಲ್ಲಿ ಕುಳಿತಾಗ ಮಡ್ಡಿ ಹೊಡೆದಿದ್ದೀರಿ ಅದು ನಮಗೆ ಗೊತ್ತಿದೆ. ಸುಮ್ಮನೆ ಏಕೆ ಮಾತನಾಡುತ್ತೀರಿ. ಈಗ ಈ ವಿಷಯಕ್ಕೆ ತಾವು ಒಪ್ಪಿದ್ದೀರಿ.

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ನಿಮಗೆ ಬಿ.ಜೆ.ಪಿ.ಯವರ ಪರಿಣಾಮ ಏನಾಗಿದೆ?

**ಶ್ರೀ ಕೆ.ಬಿ. ಶಾಣಪ್ಪ:-** ಅವರು ಚರ್ಚೆಗೆ ತಯಾರಾಗಿದ್ದಾರೆ, ತಾವು ಒಂದು ruling ಕೊಡಿ.

**ಶ್ರೀ ಗೋ. ಮಧುಸೂದನ್ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರ ಬಹಳ ಆತುರದಲ್ಲಿ ಉತ್ತರವನ್ನು ಕೊಡುವುದಕ್ಕೆ ತಯಾರಾಗಿದೆ. ನಾವು ನಿಯಮ 59ರಡಿಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಅವರು ನಿಯಮ 59ರಡಿಯಲ್ಲಿಯೇ ಉತ್ತರವನ್ನು ಕೊಡುವುದಕ್ಕೆ ತಯಾರಾಗಿದ್ದಾರೆ. ಖಂಡಿತ ತಾವು ದಯಮಾಡಿ ಅದಕ್ಕೆ

ಅವಕಾಶ ಮಾಡಿಕೊಡಿ. ಅವರು ನಿಯಮ 59ರಡಿಯಲ್ಲಿಯೇ ಉತ್ತರವನ್ನು ಕೊಡಲಿ. ಅದಾದ ಮೇಲೆ voting ಆಗುತ್ತದೆ. ಅದರ ಬಗ್ಗೆ ತೀರ್ಮಾನ ಆಗಲಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ನೇರವಾಗಿ ನಿಯಮ 68ರಡಿಯಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಿ ಎಂದು ಸುಮಾರು ಹತ್ತು ಬಾರಿ ಹೇಳಿದ್ದೇನೆ. ಅವರ ಕಿವಿ ಕೇಳುವುದಿಲ್ಲ ಎಂದರೆ ನಾನೇನು ಮಾಡಲಿ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ಅವರು ನೇರವಾಗಿ ನಿಯಮ 59ರಡಿಯಲ್ಲಿ ಉತ್ತರವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರಲ್ಲ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಅವರು ಉತ್ತರವನ್ನು ನೀಡುವುದು ಬೇಡ. ನೇರವಾಗಿ ನಿಯಮ ಮಾತ್ರ ಹೇಳಲಿ. ನಾವು ಹೇಳುವುದನ್ನು ಕೇಳಲಿ.

**ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಸಭಾನಾಯಕರು ಎತ್ತಿರತಕ್ಕಂಥ ತಕರಾರು ಏನಿತ್ತು, ಯಾವ ನಿಯಮದಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವಂಥ ಒಂದು ಸಲಹೆ ಏನಿತ್ತು ಆ ಸಂದರ್ಭದಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು, ತಾವು ಸಾಕಷ್ಟು ಚರ್ಚೆ, ವಾದ, ವಿವಾದ ಮಾಡಿದ್ದೀರಿ. ಆಗ ತಮ್ಮ ಬೆಂಬಲಕ್ಕೆ ಮಾನ್ಯ ಶಾಣಪ್ಪನವರು, ಮಾನ್ಯ ಮಧುಸೂದನ್‌ರವರು ಇನ್ನೇನು ಗುಟ್ಕಾ ಬಂದ್ ಆಗಿ ಬಿಡುತ್ತದೆಂದು ಬಹಳ ಆತುರ, ಆತುರದಿಂದ ಧಾವಿಸಿ ಬಂದಿದ್ದಾರೆ ಇರಲಿ. ಆ ಸಂದರ್ಭದಲ್ಲಿ ತಾವು ಒಂದು ಮಾತನ್ನು ಹೇಳಿದ್ದೀರಿ. ಅಡಿಕೆ ಬೆಲೆ ಕುಸಿತ ಆದಾಗ ನೀವು ಹೋರಾಟ ಮಾಡಿದ್ದೀರಿ, ನೀವು ಒತ್ತಡ ತಂದಿದ್ದೀರಿ ಎಂದು ಹೇಳಿದ್ದೀರಿ. ಆದರೆ ಒಂದು ಮಾತನ್ನು ತಾವು ಇಲ್ಲಿ ನೆನಪು ಇಟ್ಟುಕೊಳ್ಳಬೇಕು. ಮೊಟ್ಟ ಮೊದಲ ಬಾರಿಗೆ ಶ್ರೀ ಎಸ್.ಎಂ.ಕೃಷ್ಣಾರವರ ಸರ್ಕಾರ ಬಂದಾಗ ಯಾವಾಗ ಅಡಿಕೆ ಬೆಲೆ ಕುಸಿದು ಬಿತ್ತು ಆಗ ನಾನು ಕೃಷಿ ಸಚಿವನಾಗಿದ್ದೆ, ನಾವು ಅಡಿಕೆಗೆ ಬೆಂಬಲ ಬೆಲೆಯನ್ನು ಕೊಟ್ಟಿದ್ದೇವೆ ಎನ್ನುವಂಥದ್ದನ್ನು ತಾವು

ನೆನಪು ಇಟ್ಟುಕೊಳ್ಳಬೇಕು. ಆಗ ಗುಟ್ಕಾ ನಿಷೇಧ ಆಗುತ್ತದೆಂದು ಅಡಿಕೆ ಬೆಲೆ ಕುಸಿದಿಲ್ಲ. ಆ ಅಡಿಕೆ ಬೆಲೆ ಕುಸಿಯುವುದಕ್ಕೆ ಹಲವಾರು ಕಾರಣಗಳಿದ್ದವು. ಈ ಸಂದರ್ಭದಲ್ಲಿ ಗುಟ್ಕಾ ನಿಷೇಧ ಕಾರಣದಿಂದ ಅಡಿಕೆ ಬೆಲೆ ಕುಸಿಯುತ್ತಿದೆ ಎನ್ನುವ ರಾಜಕೀಯ ಚರ್ಚೆಗಳೇನು ಇವೆ, ಅವು ನಮ್ಮ ರಾಜ್ಯದ ಅಡಿಕೆ ಬೆಳೆಗಾರರಿಗೆ ತಪ್ಪು ದಾರಿಗೆ ಎಳೆಯುತ್ತವೆ. ಅದಕ್ಕಿಂತ ಹೆಚ್ಚಾಗಿ ಗುಟ್ಕಾವನ್ನು ಯಾವ ಕಾರಣದಿಂದ ನಿಷೇಧ ಮಾಡುತ್ತಿದ್ದೇವೆ ಎಂದು ವೈಜ್ಞಾನಿಕವಾದ ಕಾರಣ ತಿಳಿದುಕೊಳ್ಳದೆ ಹೋದರೆ ನೀವು ವಿಫಲ ಆಗುತ್ತೀರಿ.

**ಶ್ರೀ ಆರ್.ಕೆ. ಸಿದ್ಧರಾಮಣ್ಣ:–** ಮಾನ್ಯ ಸಭಾಪತಿಯವರೇ, ನಾವೆಲ್ಲಾ ಈ ಆತಂಕದಿಂದ ಹೊರಗೆ ಬರಬೇಕಾಗಿದೆ. ಗುಟ್ಕಾ ನಿಷೇಧ ಆಗುವಂಥ ಸಂದರ್ಭದಲ್ಲಿ ಅಡಿಕೆ ಬೆಂಬಲ ಬೆಲೆಯ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಅಡಿಕೆ ಬೆಳೆಯುವ ರೈತರ ಬಗ್ಗೆ ಯೋಚನೆ ಮಾಡಿ ನಿರ್ಧಾರ ತೆಗೆದುಕೊಂಡಿದ್ದರೆ ಇವೊತ್ತು ಆತಂಕ ಸೃಷ್ಟಿ ಆಗುತ್ತಿರಲಿಲ್ಲ. ಇವೊತ್ತು ಶಿವಮೊಗ್ಗ ಜಿಲ್ಲೆಯ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂಥ ಸ್ಥಿತಿಗೆ ತಲುಪುತ್ತಿದ್ದಾರೆ. ಅವರನ್ನು ಆತಂಕದಿಂದ ಹೊರಗೆ ತರತಕ್ಕಂಥ ಕೆಲಸವನ್ನು ಯಾರು ಮಾಡಬೇಕು?

**ಸಭಾಪತಿಯವರು:–** ಈಗ ವಿರೋಧ ಪಕ್ಷದ ನಾಯಕರು ನನಗೆ ನಿಯಮ 59ರಡಿಯಲ್ಲಿ ನೋಟೀಸ್ ಅನ್ನು ನೀಡಿದ್ದಾರೆ. ವಿಷಯ ಗಂಭೀರವಾಗಿದೆ, ಮಹತ್ವದ್ದಾಗಿದೆ. ಅದರಲ್ಲಿ ಏನೂ ಅನುಮಾನವಿಲ್ಲ. ಆದರೆ ನಮ್ಮ ಸದನದ ಹಿಂದಿನ ನಡವಳಿಕೆಗಳು, ನಮ್ಮ ಪರಂಪರೆಗಳು ಇವುಗಳನ್ನೆಲ್ಲವನ್ನು ನಾನು ಗಮನಿಸಿದಾಗ ಅದರ ಹಿನ್ನಲೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 59ರ ಮಹತ್ವದ ಪ್ರಸ್ತಾಪವನ್ನು ಮಾಡಿದ್ದಾರೆ. ತುಂಬಾ ನಿರ್ಧಿಷ್ಟವಾಗಿ ಅದನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯ ಇಲ್ಲ. ಹಾಗಾಗಿ ಇದನ್ನು ನಿಯಮ 59ರಡಿಯಲ್ಲಿ ಚರ್ಚೆ ಮಾಡುವುದಕ್ಕಿಂತ ನಿಯಮ 68ರಡಿಯಲ್ಲಿ ಚರ್ಚೆ ಮಾಡೋಣ. ಅದರ ಸಮಯವನ್ನು ನಾನು ಮಧ್ಯಾಹ್ನ ಸದನ ಪ್ರಾರಂಭವಾದಾಗ ಹೇಳುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಿಮ್ಮ ಆದೇಶವನ್ನು ನಾವು ಗೌರವಿಸುತ್ತೇವೆ. ಆದರೆ ಇವೊತ್ತೇ ಮಧ್ಯಾಹ್ನ ಸಮಯವನ್ನು ನಿಗದಿ ಮಾಡಿ.

**ಸಭಾಪತಿಯವರು:–** ಇವೊತ್ತು ಸದನ ಭೋಜನ ವಿರಾಮದ ನಂತರ ಸೇರುತ್ತದೆ. ಆಗ ತಾವು ಚರ್ಚೆ ಪ್ರಾರಂಭ ಮಾಡಬೇಕಾಗುತ್ತದೆ. ಸರ್ಕಾರದ ಪರವಾಗಿ ಅದಕ್ಕೆ ಉತ್ತರವನ್ನು ನೀಡುತ್ತಾರೆ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ತಾವು ನಿಯಮ 68ರಡಿಯಲ್ಲಿ ಚರ್ಚೆ ಮಾಡೋಣ ಎಂದು ಹೇಳಿರುವ ವಿಷಯವನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಕೂಡ ಚರ್ಚೆಯಾಗಬೇಕು. ಆ ವಿಷಯಕ್ಕೂ ಅವಕಾಶ ಸಿಗಬೇಕು.

**ಸಭಾಪತಿಯವರು:–** ನಮ್ಮ ಕಾರ್ಯಕಲಾಪಗಳ ಪಟ್ಟಿಯಲ್ಲಿ ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮಂಡಿಸುವುದಕ್ಕೆ ಇಬ್ಬರು ಸದಸ್ಯರ ಹೆಸರುಗಳನ್ನು ಸೇರಿಸಿದ್ದೇನೆ. ಅದನ್ನು ಅವರು ಮಾಡುತ್ತಾರೆ. ಅವರು ನಿರ್ಣಯ ಮಂಡಿಸುತ್ತಾರೆ. ಆ ನಿರ್ಣಯ ಮಂಡಿಸಿದ ನಂತರ ಈ ವಿಚಾರದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ನಿಯಮ 59ರಡಿಯಲ್ಲಿ ಚರ್ಚೆಯ ಅವಕಾಶವನ್ನು ತಾವು ನಿಯಮ 68ಕ್ಕೆ ಪರಿವರ್ತನೆ ಮಾಡಿದ್ದೀರಿ. ಕಾನೂನಿನಡಿಯಲ್ಲಿ ನಿಯಮ 59ನ್ನು ತಾವು ಒಪ್ಪದ್ದಿದ್ದರೆ, ನಿಯಮ 59ರಡಿಯಲ್ಲಿ ಚರ್ಚೆಯಾಗಿದ್ದರೆ, ಇನ್ನೊಂದು ನಿಲುವಳಿ ಸೂಚನೆ ಮಂಡಿಸುವುದಕ್ಕೆ ಅವಕಾಶ ಇರಲಿಲ್ಲ. ಈಗ ನೀವು ಅದನ್ನು ನಿಯಮ 68ಕ್ಕೆ ತಂದಿದ್ದರಿಂದ ನನ್ನ ನಿಲುವಳಿ ಸೂಚನೆಯನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇದೆ.

**ಸಭಾಪತಿಯವರು:–** ಆದರೆ, ನಮ್ಮ ನಡವಳಿಕೆಗಳ ಪ್ರಕಾರ ನಾವು ನಡೆದುಕೊಂಡು ಬಂದಿರುವುದು ಹೇಗೆಂದರೆ ಒಂದು ನಿಲುವಳಿ ಸೂಚನೆ ಬಗ್ಗೆ ಚರ್ಚೆ . . . . . .

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಆದರೆ ಕಾನೂನಿನಡಿಯಲ್ಲಿ ನನಗೆ ಅವಕಾಶವಂತು ಇದೆ.

**ಸಭಾಪತಿಯವರು:–** ನಿಮ್ಮ ನೋಟೀಸ್ ಬಗ್ಗೆ ಮಧ್ಯಾಹ್ನ ನಾನೊಂದು ನಿರ್ಣಯವನ್ನು ಹೇಳಿಬಿಡುತ್ತೇನೆ. ಆದ್ದರಿಂದ ಸುಲಭವಾಗಿ ಆ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಆಗುತ್ತದೆ.

**ಶ್ರೀ ಯಂ.ಸಿ. ನಾಣಯ್ಯ:–** ಮಾನ್ಯ ಸಭಾಪತಿಯವರೇ, ಮಧ್ಯಾಹ್ನದ ಮೇಲೆ ಈ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಇದ್ದರೆ ನಿಜವಾಗಿಯೂ ಒಳ್ಳೆಯ ಚರ್ಚೆಯಾಗುತ್ತದೆ. ಅವರು ಇರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅವರು ಬಹುಶಃ ಮಧ್ಯಾಹ್ನ ದೆಹಲಿಗೆ ಹೋಗುತ್ತಾರೆಂದು ಕೇಳಲ್ಪಟ್ಟಿದ್ದೇನೆ. ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಒಂದು ಮನವಿಯನ್ನು ಮಾಡುತ್ತೇನೆ. ಈ ಒಂದು ವಿಚಾರ ಚರ್ಚೆಗೆ ಬರುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿದ್ದರೆ ಖಂಡಿತ ಒಳ್ಳೆಯದು. ಕಾರಣವೇನೆಂದರೆ, ತಾವು ಈ ಚರ್ಚೆಯನ್ನು ಇವೊತ್ತು ತೆಗೆದುಕೊಂಡರೆ ಇವತ್ತು ಮುಗಿಸಲೇಬೇಕಾಗುತ್ತದೆ. ನಾಳೆಗೆ ಮುಂದೂಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದ ಚಿಂತನೆ, ಇದರ ಬಗ್ಗೆ ಒಂದು ಕಡೆ ಸರ್ವೋಚ್ಚ ನ್ಯಾಯಾಲಯದ ತೀರ್ಪು, ಆ ತೀರ್ಪಿನ ಹಿನ್ನಲೆಯಲ್ಲಿ ಗುಟ್ಕಾ ನಿಷೇಧ ಮಾಡದೆ ಇರತಕ್ಕಂಥ ರಾಜ್ಯಗಳಲ್ಲಿ ಸರ್ವೋಚ್ಚ ನ್ಯಾಯಾಲಯದವರು ಆ ರಾಜ್ಯದ ಮುಖ್ಯ ಕಾರ್ಯದರ್ಶಿಗಳಿಗೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕಂಥ ವಿಚಾರ, ಈ ಆತಂಕವನ್ನು ಬಗೆಹರಿಸುವುದಕ್ಕೆ ಎಲ್ಲಾದರೂ ರೈತರ ಬೆಳೆ ಕಡಿಮೆಯಾದರೆ ಏನು ಮಾಡಬೇಕೆನ್ನುವ ವಿಚಾರ ಬರುತ್ತದೆ. ಆದ್ದರಿಂದ ಆ ಸಂದರ್ಭದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿರಬೇಕಾಗುತ್ತದೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು

ಚರ್ಚೆಯಾಗುವಂತಹ ಸಮಯದಲ್ಲಿ ಸದನದಲ್ಲಿ ಇದ್ದು ಆ ತೀರ್ಮಾನವನ್ನು ತಿಳಿಸಿದರೆ ಒಳ್ಳೆಯದು. ಕಾರಣ ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ, ಸಚಿವ ಸಂಪುಟದಲ್ಲಿ ಈ ವಿಷಯ ಚರ್ಚೆಗೆ ಬರಲಿಲ್ಲ. ಆತುರ ಆತುರವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಆ ಒಂದು ವಿಷಯವನ್ನು ತಿಳಿಸಬೇಕಾಗಿತ್ತು. ತಿಳಿಸುವಂತಹ ಹಿನ್ನಲೆಯಲ್ಲಿ ತೀರ್ಮಾನವನ್ನು ತೆಗೆದುಕೊಂಡಿರಬಹುದೆಂದು ನನ್ನ ಭಾವನೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಪ್ಪುವುದಾದರೆ ನಾಳೆ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದಾಗಲೇ ಈ ವಿಷಯವನ್ನು ಚರ್ಚೆ ಮಾಡುವುದು ಒಳ್ಳೆಯದೆನ್ನುವುದು ನನ್ನ ಬಯಕೆ ಅಷ್ಟೇ. ಬಾಕಿ ಇರತಕ್ಕಂಥದ್ದು ಅವರಿಗೆ ಬಿಟ್ಟಿರತಕ್ಕಂಥದ್ದು.

**ಸಭಾಪತಿಯವರು:-** ಮಾನ್ಯ ಆಡಳಿತ ಪಕ್ಷದ ಸಚೇತಕರೆ, ಇವೊತ್ತು ಮಧ್ಯಾಹ್ನ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರುತ್ತಾರೆಯೆ?

**ಶ್ರೀ ಎಸ್.ಆರ್. ಪಾಟೀಲ್(ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಇವತ್ತು ಮಧ್ಯಾಹ್ನದ ಬದಲು ನಾಳೆಯ ದಿವಸ ಈ ವಿಷಯವನ್ನು ತೆಗೆದುಕೊಳ್ಳಿ. ನಾಳೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರಬಹುದು.

**ಶ್ರೀ ಡಿ.ವಿ. ಸದಾನಂದಗೌಡ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾಳೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಬರುತ್ತಾರೆಂದು ಏನು ಗ್ಯಾರಂಟಿ? ಮಾನ್ಯ ಸಭಾ ನಾಯಕರು ಮಾನ್ಯ ಮುಖ್ಯಮಂತ್ರಿಗಳು ನಾಳೆ ಸದನಕ್ಕೆ ಬರುತ್ತಾರೆಂದು ಗ್ಯಾರಂಟಿಯನ್ನು ಕೊಡುತ್ತಾರೆಯೇ?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ವಿಷಯದ ಗಾಂಭೀರ್ಯವನ್ನು ಅರಿತುಕೊಂಡು, ಹಿರಿಯ ಸದಸ್ಯರಾದಂತಹ ಶ್ರೀ ಯಂ.ಸಿ.ನಾಣಯ್ಯನವರು ಮಾನ್ಯ ಮುಖ್ಯಮಂತ್ರಿಗಳು ಇದ್ದಾಗ

ವಿಷಯವನ್ನು ಪ್ರಸ್ತಾಪ ಮಾಡಿದರೆ ಒಳ್ಳೆಯದೆಂದು ಸಲಹೆ ಮಾಡಿದ್ದಾರೆ. ಅವರು ಒಳ್ಳೆಯ ಸಲಹೆಯನ್ನು ಮಾಡಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಅವರ ಸಲಹೆ ಬಗ್ಗೆ ನನ್ನದು ಎರಡು ಮಾತುಗಳಿಲ್ಲ. ಅವರು ಹೇಳಿರತಕ್ಕಂಥದ್ದು ನಿಜ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಇವತ್ತು ಸಂಜೆ ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಹೋಗುತ್ತಿದ್ದಾರೆ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ನಾಳೆ ದಿವಸ ಅವರು ಸದನಕ್ಕೆ ಬರುತ್ತಾರೆಂದು ಗ್ಯಾರಂಟಿ ಇದೆಯೇ?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾಳೆ ಸಂಜೆ ಅವರು ವಾಪಸ್ಸು ಬರುತ್ತಾರೆಯೇ ಎಂದು ನೋಡೋಣ.

**ಶ್ರೀ ಡಿ.ವಿ. ಸದಾನಂದಗೌಡ:-** ಮಾನ್ಯ ಸಭಾಪತಿಯವರೇ, ಮತ್ತೆ ಇದಾಗುವುದಿಲ್ಲ.

**ಸಭಾಪತಿಯವರು:-** ಭೋಜನದ ನಂತರ ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಇದ್ದರೆ ಬಹಳ ಒಳ್ಳೆಯದು. ಅವರು ಇರಬೇಕೆಂದು ಇಲ್ಲಿಯ ಎಲ್ಲಾ ಸದಸ್ಯರ ಅಭಿಪ್ರಾಯ. ಮಾನ್ಯ ಸಭಾ ನಾಯಕರೆ, ಈ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಪ್ರಸ್ತಾಪ ಮಾಡಿ. ಅವರು ಈ ಚರ್ಚೆ ನಡೆಯುವಂತಹ ಸಮಯದಲ್ಲಿ ಇದ್ದರೆ ಬಹಳ ಸಂತೋಷ. ಅವರು ಇಲ್ಲದೇ ಹೋದರೆ, ಸಭಾ ನಾಯಕರು ಇರುತ್ತಾರೆ ಮತ್ತು ಬೇರೆ ಬೇರೆ ಸಚಿವರು ಕೂಡ ಸದನದಲ್ಲಿರುತ್ತಾರೆ. ಚರ್ಚೆಯನ್ನು ಮುಂದುವರೆಸೋಣ. ಮಾನ್ಯ ಮುಖ್ಯಮಂತ್ರಿಗಳು ಏನಾದರೂ, ಇಲ್ಲ ಇವತ್ತು ಚರ್ಚೆ ಮಾಡುವುದು ಬೇಡ. ನಾಳೆ ನಾನೇ ಸದನಕ್ಕೆ ಬರುತ್ತೇನೆಂದು ಸಂದೇಶವನ್ನು ಕೊಟ್ಟರೆ ನನಗೆ ತಿಳಿಸಿ. ಹಾಗೆಯೇ ಮಾಡೋಣ. ಏಕೆಂದರೆ, ಇದನ್ನು ವೇಗ್ ಆಗಿ ಇಡುವುದು ಬೇಡ.

**ಶ್ರೀ ಎಸ್.ಆರ್. ಪಾಟೀಲ್:-** ನಾನು ತಿಳಿಸುತ್ತೇನೆ.

**ಸಭಾಪತಿಯವರು:–** ನನಗೆ ಮಾನ್ಯ ಮುಖ್ಯಮಂತ್ರಿಗಳು ನಾಳೆ ಬರುತ್ತೇನೆಂದು ಹೇಳಿದ್ದಾರೆ. ನಾಳೆ ಈ ವಿಷಯವನ್ನು ತೆಗೆದುಕೊಳ್ಳಿ ಎಂದರೆ ನಾನು ಮಾನ್ಯ ವಿರೋಧ ಪಕ್ಷದ ನಾಯಕರ ಜೊತೆಗೆ communicate ಮಾಡುತ್ತೇನೆ. ಆಕಸ್ಮಾತ್ ಅವರಿಗೆ ನಾಳೆ ಕೂಡ ಸದನಕ್ಕೆ ಬರುವುದು ಕಷ್ಟವಾದರೆ ಈ ವಿಷಯವನ್ನು ಇವತ್ತೇ ಚರ್ಚೆಗೆ ತೆಗೆದುಕೊಂಡು ಮುಗಿಸಿಬಿಡೋಣ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾಳೆ ದಿವಸ ತೆಗೆದುಕೊಳ್ಳಿ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಮಧ್ಯಾಹ್ನ ಈ ಚರ್ಚೆಯಲ್ಲಿ ಭಾಗವಹಿಸಿ ಆಮೇಲೆ ದೆಹಲಿಗೆ ಹೋಗುತ್ತೇನೆಂದು ಹೇಳಿದರೆ?

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆಂದು ಕೇಳೋಣ. ಒಂದು ವಿಷಯ ಇದೆ. ಸಭೆಯನ್ನು ನಡೆಸುವುದಕ್ಕಾಗಿ ಗಮನಸೆಳೆಯುವ ಸೂಚನೆ, ನಿಯಮ 330 ಇದನ್ನೆಲ್ಲಾ ನಡೆಸುತ್ತೇವೆಂದು ತಿಳಿಸಿದ್ದೆವು. ಮಾನ್ಯ ಗೌರವಾನ್ವಿತ ಸದಸ್ಯರುಗಳ ಗಮನಸೆಳೆಯುವ ಸೂಚನೆ, ನಿಯಮ 330ರ ಮೇಲೆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನೋಟೀಸ್ ಕೊಟ್ಟಿರುತ್ತೀರಿ. ವಿಷಯದ ಮಹತ್ವ ಮತ್ತು ನಮ್ಮ ಸದನದಲ್ಲಿರತಕ್ಕಂತಹ ಪಕ್ಷಗಳನ್ನು ನೆನಪಿನಲ್ಲಿ ಇಟ್ಟುಕೊಂಡು, ಎಲ್ಲಾ ಪಕ್ಷದವರಿಗೂ ಅವಕಾಶ ಸಿಗಬೇಕೆಂಬ ದೃಷ್ಟಿಯಿಂದ ಮೂರು ವಿಷಯಗಳನ್ನು ಇವತ್ತು ಅಜೆಂಡಾದಲ್ಲಿ ಸೇರಿಸಲಾಗಿದೆ. ಆದರೆ ಸರ್ಕಾರದ ಕಡೆಯಿಂದ ಒಂದೆರಡು ಸಲಹೆಗಳು ಬಂದಿದೆ. 'ನನಗೆ ಇನ್ನು ಉತ್ತರವನ್ನು ತಯಾರು ಮಾಡಿ ಕೊಡುವುದಕ್ಕೆ ಸಮಯ ಸಾಕಾಗಲಿಲ್ಲ. ನಾನು ಉತ್ತರವನ್ನು ಕೊಟ್ಟ ಮೇಲೆ ಚರ್ಚೆಯಾದರೆ ಸರಿಯಾಗಿರಬೇಕಾಗುತ್ತದೆ. ಆದ್ದರಿಂದ, ನನಗೆ ಸ್ವಲ್ಪ ವಿನಾಯಿತಿಯನ್ನು ಕೊಡಿ' ಎಂದು ಇಬ್ಬರು ಸಚಿವರು ಈಗಾಗಲೇ ನನಗೆ ಹೇಳಿದ್ದಾರೆ. ಆದರೂ ನಾನು ನನ್ನ ಕಾರ್ಯವಿಧಾನ ಪಟ್ಟಿಯಂತೆ

ಕರೆಯುತ್ತೇನೆ. ಆಮೇಲೆ ನೀವು ಸರ್ಕಾರದ ಪರವಾಗಿ ಏನು ಹೇಳುತ್ತೀರೋ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಇನ್ನು ಅಧಿವೇಶನ ನಡೆಯುವುದು 4 ದಿನಗಳು ಮಾತ್ರ, ಅದರಲ್ಲಿ ಈಗ ಅರ್ಧ ದಿವಸ ಮುಗಿದು ಹೋಗಿದೆ. ಇನ್ನು ಉಳಿದಿರುವಂಥದ್ದು ಮೂರುವರೆ ದಿವಸಗಳು ಮಾತ್ರ. ಹಲವಾರು ಗಂಭೀರವಾದಂತಹ ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆನ್ನುವುದು ನಮ್ಮ ಎಲ್ಲಾ ಸದಸ್ಯರ ಭಾವನೆಯಾಗಿದೆ. ಆದಕಾರಣ ತಮ್ಮ ಮುಖಾಂತರ ಸರ್ಕಾರದಲ್ಲಿ ನಮ್ಮ ಒಂದು ವಿನಂತಿ ಏನೆಂದರೆ, ವಿಷಯಗಳ ಪ್ರಸ್ತಾಪವನ್ನು ಯಾವ ಸಮಯದಲ್ಲಿ ಮಾಡಬೇಕೋ ಆ ಸಮಯದಲ್ಲಿಯೇ ಮಾಡಿಬಿಡುತ್ತೇವೆ. ಸರ್ಕಾರ ಸಂಬಂಧಪಟ್ಟಂತಹ ಮಂತ್ರಿಗಳಿಂದ ಮಾರನೆಯ ದಿವಸ ಉತ್ತರಗಳನ್ನು ಕೊಡಿಸುವಂತಹ ಪ್ರಯತ್ನವನ್ನು ಮಾಡಲಿ. ವಿಷಯಗಳನ್ನು ಪ್ರಸ್ತಾಪ ಮಾಡುವುದೇ ತಡವಾದರೆ ಉತ್ತರಗಳನ್ನು ಪಡೆಯುವುದಕ್ಕೆ ನಾಲ್ಕು ದಿವಸಗಳಲ್ಲಿ ಸಾಧ್ಯವಾಗುವುದಿಲ್ಲ. ತಮ್ಮ ಮುಖಾಂತರ ಮಾನ್ಯ ಸಭಾ ನಾಯಕರಲ್ಲಿಯೂ ಕೂಡ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಬೇಗ ಬೇಗ ಉತ್ತರವನ್ನು ಕೊಡುವಂಥವರಾಗಿದ್ದೀರಿ. ಹಾಗಾಗಿ ಇದಕ್ಕೂ ಕೂಡ ಬೇಗ ಬೇಗ ಉತ್ತರವನ್ನು ಕೊಟ್ಟರೆ ಊರಿಗೆ, ಸಮಾಜ ಮತ್ತು ರಾಜ್ಯಕ್ಕೂ ಒಳ್ಳೆಯದಾಗುತ್ತದೆ.

**ಸಭಾಪತಿಯವರು:–** ಅದಕ್ಕಾಗಿ ನಾನು ಅಜೆಂಡಾದಲ್ಲಿರುವ ಪಟ್ಟಿಯ ಪ್ರಕಾರವಾಗಿ ಕರೆಯುತ್ತಾ ಹೋಗುತ್ತೇನೆ. ಎಷ್ಟಕ್ಕೆ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಅಷ್ಟಕ್ಕೆ ಈಗ ಉತ್ತರವನ್ನು ಕೊಡಿ. ಎಷ್ಟು ಅಡ್ಜೆಸ್ಟ್ ಮಾಡಿಕೊಳ್ಳುವುದಕ್ಕೆ ಸಾಧ್ಯವೋ ಅಷ್ಟನ್ನು ಮಾಡಿಕೊಳ್ಳೋಣ.

## 6. ಗಮನ ಸೆಳೆಯುವ ಸೂಚನೆ.

**(ಅ) ರಾಜ್ಯ ಸರ್ಕಾರವು ಅತಿಥಿ ಉಪನ್ಯಾಸಕರ ವೇತನ ಬಾಕಿ ಬಿಡುಗಡೆ ಮಾಡದಿರುವುದರಿಂದ ಅವರುಗಳು ಸಂಕಷ್ಟದಲ್ಲಿರುವರಲ್ಲದೆ ಯು.ಜಿ.ಸಿಯಿಂದ ನಿಗದಿಪಡಿಸಿದ ವೇತನವನ್ನು ನೀಡದೆ ಬೇರೆ ಬೇರೆ ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಕಾಲೇಜುಗಳಲ್ಲಿ ಬೇರೆ ಬೇರೆ ವೇತನ ನೀಡಲಾಗುತ್ತಿದ್ದು, ಆ ವೇತನ ತಾರತಮ್ಯವನ್ನು ಸರಿಪಡಿಸುವ ಬಗ್ಗೆ.**

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯ ಸರ್ಕಾರವು ಅತಿಥಿ ಉಪನ್ಯಾಸಕರ ವೇತನ ಬಾಕಿ ಬಿಡುಗಡೆ ಮಾಡದಿರುವುದರಿಂದ ಅವರುಗಳು ಸಂಕಷ್ಟದಲ್ಲಿರುವರಲ್ಲದೆ ಯು.ಜಿ.ಸಿ.ಯಿಂದ ನಿಗದಿಪಡಿಸಿದ ವೇತನವನ್ನು ನೀಡದೆ ಬೇರೆ ಬೇರೆ ವಿಶ್ವವಿದ್ಯಾಲಯಗಳ ವ್ಯಾಪ್ತಿಯ ಕಾಲೇಜುಗಳಲ್ಲಿ ಬೇರೆ ಬೇರೆ ವೇತನ ನೀಡಲಾಗುತ್ತಿದ್ದು, ಆ ವೇತನ ತಾರತಮ್ಯವನ್ನು ಸರಿಪಡಿಸುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತಿದ್ದೇನೆ.

**ಶ್ರೀ ಆರ್.ವಿ. ದೇಶಪಾಂಡೆ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಲಿಖಿತವಾದಂತಹ ಉತ್ತರವನ್ನು ಕೊಡದೇ ಇದ್ದರೂ ಸಹ ಮೌಖಿಕವಾಗಿ ಉತ್ತರವನ್ನು ಕೊಡುತ್ತೇನೆ. ಮಾನ್ಯ ಸದಸ್ಯರುಗಳು ಬೇಕಾದರೆ ಅದರ ಮೇಲೆ ಉಪ ಪ್ರಶ್ನೆಗಳನ್ನು ಕೇಳಬಹುದು.

**ಸಭಾಪತಿಯವರು:-** ಮಾನ್ಯ ಉನ್ನತ ಶಿಕ್ಷಣ ಸಚಿವರು, 'ಲಿಖಿತ ಉತ್ತರ ಈಗ ನನ್ನ ಹತ್ತಿರ ಇಲ್ಲ. ಮೌಖಿಕವಾಗಿ ಉತ್ತರವನ್ನು ಹೇಳುತ್ತೇನೆ' ಎಂದು ಹೇಳುತ್ತಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ಸಚಿವರು ಉತ್ತರವನ್ನು ಕೊಡಲಿ. ಆದರೆ ಗಮನ ಸೆಳೆಯುವ ಸೂಚನೆಗೆ ಲಿಖಿತವಾದಂತಹ ಉತ್ತರವನ್ನು ಕೊಡುವಂತಹ ಪದ್ಧತಿ ಹೋಗಬಾರದು.

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮೌಖಿಕವಾಗಿ ಈಗ ಉತ್ತರವನ್ನು ಕೊಡುತ್ತೇನೆ. ನಾಳೆಯ ದಿವಸ ಬೇಕಾದರೆ ಲಿಖಿತ ಉತ್ತರವನ್ನು ಕೊಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈ ಸಾರಿ ಮಾತ್ರ ಈ ಗಮನ ಸೆಳೆಯುವ ಸೂಚನೆಗೆ ಮೌಖಿಕವಾಗಿ ಉತ್ತರವನ್ನು ಕೊಡಲಿ. ಮುಂದಿನ ಸಾರಿಯಿಂದ ಈ ರೀತಿಯಾಗಬಾರದು.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಮುಂದಿನ ಸಾರಿಯಿಂದ ಈ ರೀತಿಯಾಗುವುದಿಲ್ಲ. ಏಕೆಂದರೆ, ಈ ವಿಷಯದ ಬಗ್ಗೆ ನನಗೆ ಸಕಾಲಕ್ಕೆ File ಬಂದು ಮುಟ್ಟಿಲ್ಲ. ಮೊದಲೇ ನೋಟೀಸ್ ಕೊಡಬೇಕಲ್ಲವೆ?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ನೋಟೀಸ್ ಕೊಟ್ಟಿದ್ದೇನೆ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ಶ್ರೀ ಬಸವರಾಜ ಹೊರಟ್ಟಿಯವರು ನೋಟೀಸ್ ಕೊಟ್ಟಿರಬಹುದು. Approval ಮಾಡುವುದಕ್ಕೆ ನನಗೆ file ಬಂದು ಮುಟ್ಟಬೇಕಲ್ಲವೇ? ಅದು ಆಗಿಲ್ಲ. ಹಾಗಾಗಿ ಮೌಖಿಕವಾಗಿ ಉತ್ತರವನ್ನು ಕೊಡುತ್ತೇನೆ.

**ಯಂ.ಸಿ.ನಾಣಯ್ಯ(ವಿಧಾನಸಭಾ ಕ್ಷೇತ್ರ):–** ಮಾನ್ಯ ಉನ್ನತ ಶಿಕ್ಷಣ ಸಚಿವರೇ you are one of the senior most Ministers. How did not the file come to you?

**Sri R.V. DESHPANDE:-** Please allow me to speak.

**ಶ್ರೀ ಯಂ.ಸಿ.ನಾಣಯ್ಯ:–** ನಿಮ್ಮ ಹತ್ತಿರ ಇದಕ್ಕೆ ಸಂಬಂದಪಟ್ಟಂತಹ ಕಡತ ಬಂದಿಲ್ಲವೆಂದರೆ, ನಿಮ್ಮಲ್ಲಿರತಕ್ಕಂತಹ ಅಧಿಕಾರಿಗಳು ಕಡತವನ್ನು ಕಳುಹಿಸುವುದಕ್ಕೆ ವಿಳಂಬವನ್ನು ಮಾಡುತ್ತಾರೆಯೇ?

**Sri R.V. DESHPANDE:-** No, no ಆ ರೀತಿ ಅಲ್ಲ.

**Sri M.C. NANAIAH:-** I can understand, if it is a case of a new Minister, I am prepared co-operate. But, there is a statement made by the Hon'ble Minister that the file has not come for his signature. Is it the style of functioning of the Government?

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ನಾನು ಹೇಳುವುದನ್ನು ದಯಮಾಡಿ ಸ್ವಲ್ಪ ಕೇಳಬೇಕು.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ಹಿಂದೆ ಇದ್ದಂತಹ ಸರ್ಕಾರ ಈ ರೀತಿಯಾಗಿ ಮಾಡಿದ್ದರಿಂದ ಜನರು ಕಾಂಗ್ರೆಸ್ ಪಕ್ಷದವರನ್ನು ಅಧಿಕಾರ ನಡೆಸುವುದಕ್ಕೆ ತೆಗೆದುಕೊಂಡು ಬಂದಿರುವುದು. ಪುನಃ ಕಾಂಗ್ರೆಸ್ ಪಕ್ಷದವರು ಅದೇ ರೀತಿಯಾಗಿ ಮಾಡಿ, ಅದೇ ದಾರಿಯಲ್ಲಿ ಹೋಗುತ್ತಿದ್ದಾರೆ.

**ಶ್ರೀ ಆರ್.ವಿ. ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿವಸ ರಾಜ್ಯಪಾಲರು ಜಂಟಿ ಸದನವನ್ನು ಉದ್ದೇಶಿಸಿ ಭಾಷಣವನ್ನು ಮಾಡಿದರು. ಮುಂಜಾನೆ ನನ್ನ ಹತ್ತಿರ ಅಧಿಕಾರಿಗಳು ಬೆಳಿಗ್ಗೆ 9 ಗಂಟೆ ಅಥವಾ 10 ಗಂಟೆಗೆ ಉತ್ತರವನ್ನು ತೆಗೆದುಕೊಂಡು ಬಂದರು. ಆ ಉತ್ತರ ಸರಿ ಇರಲಿಲ್ಲ.

**Sri M.C. NANAIAH:-** You should have made the Minister to correct it.

**ಶ್ರೀ ಆರ್.ವಿ.ದೇಶಪಾಂಡೆ:-** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ತಯಾರು ಮಾಡಿಕೊಂಡು ಬಂದಿದ್ದಂತಹ ಉತ್ತರ ಸರಿ ಇರಲಿಲ್ಲ. ಉತ್ತರ ಸರಿ ಇಲ್ಲದೇ ಅದನ್ನು ಅಪ್ರೂವಲ್ ಮಾಡುವಂಥದ್ದು ಸರಿಯಲ್ಲ. ಅದಕ್ಕಾಗಿ ನಾನು ಆ ಫೈಲ್‌ನ್ನು ವಾಪಸ್ಸು ಕಳುಹಿಸಿದೆ. ಸರಿಯಾದ ಉತ್ತರ ಬಂದ ಮೇಲೆ, ಅದನ್ನು ಅಪ್ರೂವಲ್ ಮಾಡಿದ ಮೇಲೆ ಪ್ರತಿಗಳನ್ನು ತೆಗೆಯಬೇಕು. ಅದನ್ನು ಮಾನ್ಯ ಸದಸ್ಯರುಗಳಿಗೆ ಬೆಳಿಗ್ಗೆಯೇ ತಲುಪುವಂತೆ ಮಾಡಬೇಕು. ಸದಸ್ಯರುಗಳಿಗೂ ಕೂಡ ಅದನ್ನು ಓದಿ ಅಭ್ಯಾಸ ಮಾಡುವುದಕ್ಕೆ ಸಮಯವನ್ನು ಕೊಡಬೇಕಲ್ಲವೇ? ಎಲ್ಲಾ ಸದಸ್ಯರಿಗೆ ಮಧ್ಯಾಹ್ನ 12 ಗಂಟೆಗೆ ಉತ್ತರವನ್ನು ಕಳುಹಿಸುವುದಕ್ಕಾಗುತ್ತದೆಯೇ? ಹಾಗಾಗಿ ತಡವಾಗಿದೆ.

**ಶ್ರೀ ಯಂ.ಸಿ. ನಾಣಯ್ಯ:-** ಮಾನ್ಯ ಸಭಾಪತಿಯವರೇ, ಶ್ರೀ ಆರ್.ವಿ.ದೇಶಪಾಂಡೆಯವರು ಐದು ವರ್ಷಗಳು ಸರ್ಕಾರದಲ್ಲಿ ಇರಲಿಲ್ಲ.

ಆದರೆ, ಅಧಿಕಾರಿಗಳು ಬಹಳ ವರ್ಷದಿಂದ ಸರ್ಕಾರದಲ್ಲಿಯೇ ಇದ್ದವರು. ಎಲ್ಲಾ ಸಂದರ್ಭಗಳಲ್ಲಿಯೂ ಉತ್ತರಗಳನ್ನು ಕೊಡುವವರು ಆ ಅಧಿಕಾರಿಗಳೇ ಆಗಿದ್ದಾರೆ. ಉತ್ತರ ಸರಿ ಇಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಸರಿ ಇಲ್ಲದೇ ಇರುವಂತಹ ಉತ್ತರವನ್ನು ಆ ಅಧಿಕಾರಿಗಳು ಏಕೆ ಕೊಟ್ಟರು, ಆ ಅಧಿಕಾರಿಗಳನ್ನು ಏಕೆ ಇಟ್ಟುಕೊಳ್ಳಬೇಕು?

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸಭಾಪತಿಯವರೇ, ನಾಳೆ ಲಿಖಿತರೂಪದ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದೇನೆ. ನನಗೆ ವಿಷಯ ಗೊತ್ತಿದೆ. ಈ ವಿಷಯದ ಬಗ್ಗೆ ಚರ್ಚೆ ಮಾಡಿದ್ದೇನೆ. ಈಗ ಮೌಖಿಕವಾಗಿ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದೇನೆ. ಇವತ್ತು ಯಾವ್ಯಾವ ಸದಸ್ಯರು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅವರಿಗೆ ಲಿಖಿತರೂಪದ ಉತ್ತರ ಬೇಕಾಗಿದ್ದರೆ ನಾಳೆ ದಿವಸ ಕೊಡುತ್ತೇನೆ. ನಾಳೆ ಚರ್ಚೆ ಮಾಡೋಣ. ಆದರೆ ಮೌಖಿಕ ಉತ್ತರವನ್ನು ಕೇಳುವುದಕ್ಕೆ ತಯಾರಿದ್ದರೆ ನಾನು ಮೌಖಿಕವಾಗಿ ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇನೆ. ಮಾನ್ಯ ಸಭಾಪತಿಯವರೇ, ನನಗೆ ವಿಷಯ ಗೊತ್ತಿದೆ ಮತ್ತು ಇದರ ಬಗ್ಗೆ ಅಧಿಕಾರಿಗಳ ಜೊತೆಯಲ್ಲಿ ಚರ್ಚೆಯನ್ನು ಕೂಡ ಮಾಡಿದ್ದೇನೆ. ಇವತ್ತಿನ ದಿವಸ ಮೌಖಿಕವಾಗಿ ಉತ್ತರವನ್ನು ಕೊಡುತ್ತೇನೆ. ಸದಸ್ಯರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಕ್ಕೆ ನಾಳೆ ದಿವಸ ಬೇಕಾದರೆ ಲಿಖಿತ ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ನಮ್ಮ ಮಾನ್ಯ ಸಚಿವರು ಸರ್ಕಾರದ ಪರವಾಗಿ ಅತ್ಯಂತ ವಿಶಾಲ ಹೃದಯದಿಂದ 'ನಾನು ಉತ್ತರವನ್ನು ಕೊಡುತ್ತೇನೆ' ಎಂದು ಹೇಳಿದರು. ಲಿಖಿತ ಮೂಲಕ ಉತ್ತರವನ್ನು ಕೊಟ್ಟು ಅದರ ಮೇಲೆ ಸದಸ್ಯರ ಅಭಿಪ್ರಾಯ ಕೇಳಿ ಅದರಲ್ಲಿ ಏನಾದರೂ ಇದ್ದರೆ ಅದಕ್ಕೆ ಅವರು ಮೌಖಿಕವಾಗಿ ಉತ್ತರವನ್ನು ಕೊಡಬಹುದು. ಅದಕ್ಕೋಸ್ಕರವಾಗಿ ಈ ವಿಷಯವನ್ನು ಹೆಚ್ಚು ಚರ್ಚೆ ಮಾಡದೇ ನಾಳೆ ದಿವಸ ಅವರು ಲಿಖಿತ ಉತ್ತರವನ್ನು ಕೊಟ್ಟ ಮೇಲೆ ಚರ್ಚೆ ಮಾಡುವುದು ಒಳ್ಳೆಯದು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗ ಒಂದು ರೀತಿಯಲ್ಲಿ ಮೌಖಿಕವಾಗಿ ಉತ್ತರ ಹೇಳುವುದು, ನಾಳೆ ದಿವಸ ಮತ್ತೊಂದು ರೀತಿಯಲ್ಲಿ ಲಿಖಿತ ಉತ್ತರವನ್ನು ಕೊಡುವುದು ಬೇಡ. ಮೊದಲು ಲಿಖಿತ ಉತ್ತರವನ್ನು ಕೊಡಲಿ. ಅದರ ಮೇಲೆ ಚರ್ಚೆಯನ್ನು ಮಾಡುತ್ತೇವೆ.

**ಸಭಾಪತಿಯವರು:-** ಸಚಿವರೇ, ನಾಳೆ ಲಿಖಿತ ಉತ್ತರವನ್ನು ಕೊಡಿ. ಅದರ ಮೇಲೆ ಚರ್ಚೆಯಾಗಲಿ. ನಾಳೆ ಈ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ಶ್ರೀಯುತ ಅಮರನಾಥ ಪಾಟೀಲ್‌ರವರು ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿ ಹೈದ್ರಾಬಾದ್-ಕರ್ನಾಟಕಕ್ಕೆ ಸಂಬಂಧಿಸಿದ ವಿಷಯವೊಂದನ್ನು ಪ್ರಸ್ತಾಪಿಸ ಬಯಸಿದ್ದಾರೆ. ಲಿಖಿತ ಉತ್ತರ ತಯಾರಿದೆಯೇ, ಪೌರಾಡಳಿತ ಸಚಿವರು ಈ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರ ಕೊಡಲು ಸಿದ್ಧರಿದ್ದಾರೆಯೇ?

**ಶ್ರೀ ಖಮರುಲ್ ಇಸ್ಲಾಂ(ಪೌರಾಡಳಿತ ಮತ್ತು ಸಾರ್ವಜನಿಕ ಉದ್ದಿಮೆ, ಹಜ್ ಮತ್ತು ವಕ್ಫ್, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೇ, I have given a letter to you. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಲಿರುವಂತಹ ವಿಷಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾವಣೆಯಾಗಬೇಕಾಗುತ್ತದೆ. ಅದಕ್ಕೆ ಅವರು ಉತ್ತರ ಕೊಡುತ್ತಾರೆ.

**ಶ್ರೀ ಹೆಚ್.ಕೆ. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ವಿಷಯವನ್ನೇನು ಪ್ರಸ್ತಾಪಿಸಬಯಸಿದ್ದಾರೆ ಅದನ್ನು ನಮ್ಮ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾವಣೆ ಮಾಡಬೇಕೆಂದು ಮಾನ್ಯ ಸಚಿವರು ತಮ್ಮಲ್ಲಿ ಅರಿಕೆ ಮಾಡಿಕೊಂಡಿದ್ದಾರೆ. ಅದನ್ನು ತಾವು ನಮಗೆ ವರ್ಗಾಯಿಸುವುದಾದರೆ, ಈ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಇವೊತ್ತು ಮಧ್ಯಾಹ್ನ ಸದನದಲ್ಲಿ ಉತ್ತರ ಕೊಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಾನು 2 ಭಾಗಗಳಲ್ಲಿ ಕೇಳಲಿಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಪೌರಾಡಳಿತ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಂಬಂಧ ಕೂಡ ಇದೆ.

**ಸಭಾಪತಿಯವರು:-** ಇದು ಗಮನ ಸೆಳೆಯುವ ಸೂಚನೆಯಾದ್ದರಿಂದ ಕಾರ್ಯಕಲಾಪಗಳ ಪಟ್ಟಿಯಲ್ಲಿರುವ ವಿಷಯವನ್ನಷ್ಟೆ ಪ್ರಸ್ತಾಪ ಮಾಡಿ ಸಚಿವರ ಗಮನವನ್ನು ಸೆಳೆಯಿರಿ.

**ಶ್ರೀ ಅಮರನಾಥ ಪಾಟೀಲ್(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಪ್ರತಿನಿಧಿಸುತ್ತಿರುವ ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ಕುಡಿಯುವ ನೀರಿನ ಹಾಹಾಕಾರ ಮತ್ತು ಕಲುಷಿತವಾದಂತಹ ನೀರಿನ ಸಮಸ್ಯೆ ಮತ್ತು ಫ್ಲೋರೈಡ್‌ಯುಕ್ತ ನೀರಿನ ಪರಿಣಾಮದಿಂದ ಬಹಳ ಗಂಭೀರವಾದ ರೋಗಗಳು ಹರಡುತ್ತಿವೆ. ಈ ಕುರಿತು ಮಾನ್ಯ ಪೌರಾಡಳಿತ ಮತ್ತು ಸಾರ್ವಜನಿಕ ಉದ್ಯಮ, ವಕ್ಫ್ ಮತ್ತು ಅಲ್ಪಸಂಖ್ಯಾತ ಸಚಿವರ ಗಮನವನ್ನು ಸೆಳೆಯಬಯಸುತ್ತಿದ್ದೇನೆ. ಇದನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ವರ್ಗಾವಣೆ ಮಾಡಬೇಕೆಂದು ಮಾನ್ಯ ಪೌರಾಡಳಿತ ಮತ್ತು ವಕ್ಫ್ ಸಚಿವರು ವಿನಂತಿಸಿದ್ದಾರೆ. ಇದರಲ್ಲಿ ಪೌರಾಡಳಿತ ಸಚಿವರ ಇಲಾಖೆಗೆ ಬರುವಂಥದ್ದು, ನಮ್ಮ ಗುಲ್ಬರ್ಗಾ ನಗರದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾನು ಅವರ ಗಮನವನ್ನು ಸೆಳೆಯಬಯಸುತ್ತಿದ್ದೇನೆ. **'ಗುಲ್ಬರ್ಗಾ ಜನತೆಗೆ ಗಟಾರದ ನೀರು'** ಎನ್ನುವಂತಹ ಶೀರ್ಷಿಕೆಯ ಅಡಿಯಲ್ಲಿ ಸಾಕಷ್ಟು ವಿಚಾರಗಳು ಪತ್ರಿಕೆಯಲ್ಲಿ ಕೂಡ ವರದಿಯಾಗಿವೆ. ಸುಮಾರು ದಶಕಗಳಿಂದ ಗುಲ್ಬರ್ಗಾ ನಗರವನ್ನು ಪ್ರತಿನಿಧಿಸುತ್ತಿರುವಂತಹ, ಅಲ್ಲಿನ ಪರಿಸ್ಥಿತಿಯನ್ನು ಅರಿತು ನುರಿತಂತಹ ಅನುಭವಸ್ಥ ಸಚಿವರು ಆ ಇಲಾಖೆಗಳನ್ನು ನಿರ್ವಹಿಸುತ್ತಿದ್ದಾರೆ. ಆ ಇಬ್ಬರು ಸಚಿವರು ಇದರ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಖಮರುಲ್ ಇಸ್ಲಾಂ ಅವರು ನನಗೆ ಒಂದು ಪತ್ರವನ್ನು ಕಳುಹಿಸಿಕೊಟ್ಟು ಈ ವಿಚಾರ ಗ್ರಾಮೀಣಾಭಿವೃದ್ಧಿ ಮತ್ತು

ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ಬರುವುದರಿಂದ ದಯವಿಟ್ಟು ಇದನ್ನು ಅವರಿಗೆ ವರ್ಗಾಯಿಸಬೇಕೆಂದು ಆ ಪತ್ರದಲ್ಲಿ ವಿನಂತಿಸಿಕೊಂಡಿದ್ದಾರೆ. ಆದ್ದರಿಂದ ಈ ವಿಷಯವನ್ನು ಈಗ ಚರ್ಚೆಗೆ ತೆಗೆದುಕೊಳ್ಳುವುದೋ ಅಥವಾ ನಾಳೆ ತೆಗೆದುಕೊಳ್ಳೋಣವೋ?

**ಶ್ರೀ ಅಮರನಾಥ ಪಾಟೀಲ್:–** ಈ ವಿಷಯ ಇಬ್ಬರು ಸಚಿವರ ಎರಡು ಖಾತೆಗಳಿಗೆ ಸಂಬಂಧಿಸಿರುವುದರಿಂದ ಇದನ್ನು ಎರಡು ಭಾಗಗಳಲ್ಲಿ ತೆಗೆದುಕೊಳ್ಳಬೇಕಾಗುತ್ತದೆ.

**ಶ್ರೀ ದಿನೇಶ್ ಗುಂಡೂರಾವ್(ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):–** ಮಾನ್ಯ ಸಭಾಪತಿಯವರೇ, ಹೈದ್ರಾಬಾದ್–ಕರ್ನಾಟಕ regionಗೆ ಸಂಬಂಧಿಸಿದಂತೆ ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಹೈದ್ರಾಬಾದ್ ಕರ್ನಾಟಕ ಎಂದರೆ ಕೇವಲ ಒಂದು ಜಿಲ್ಲೆ ಅಲ್ಲ, ಅದರ ವ್ಯಾಪ್ತಿಯಲ್ಲಿ ಒಟ್ಟು ಆರು ಜಿಲ್ಲೆಗಳು ಬರುತ್ತವೆ. ಬೀದರ್, ಗುಲ್ಬರ್ಗ, ಯಾದಗಿರಿ, ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ ಇವೆಲ್ಲಾ ಹೈದ್ರಾಬಾದ್–ಕರ್ನಾಟಕ ಪ್ರದೇಶಗಳಲ್ಲಿ ಬರುವಂತಹ ಜಿಲ್ಲೆಗಳಾಗಿರುವುದರಿಂದ ಇದನ್ನು ಗ್ರಾಮೀಣಾಭಿವೃದ್ಧಿ ಸಚಿವರಿಗೆ ವರ್ಗಾವಣೆ ಮಾಡುವುದು ಸೂಕ್ತವೆನಿಸುತ್ತದೆ.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೇ, ವಿಷಯದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಾದಂತಹ ಶ್ರೀ ವಿನಯಕುಮಾರ್ ಸೊರಕೆ ಅವರು ಸಹ ಗಮನಹರಿಸಿ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಆಯಿತು, ಈ ವಿಷಯವನ್ನು ನಾಳೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಿಕೊಳ್ಳೋಣ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೈದ್ರಾಬಾದ್ ಕರ್ನಾಟಕ ಪ್ರದೇಶದ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಏನು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಅದರ ವ್ಯಾಪ್ತಿಗೆ

ಗುಲ್ಬರ್ಗಾ ಹಾಗೂ ಕೆಲವು ಪಟ್ಟಣಗಳು ಕೂಡ ಬರುತ್ತವೆ. ಈ ವಿಷಯ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶ ಈ ಎರಡಕ್ಕೂ ಸಂಬಂಧಿಸಿದೆ. ಆದುದರಿಂದ ಅವರು ಈ ವಿಷಯವನ್ನು ಪ್ರತ್ಯೇಕವಾಗಿ ಕೇಳಬೇಕಾಗಿತ್ತು.

**ಶ್ರೀ ಅಮರನಾಥ ಪಾಟೀಲ್:–** ಮಾನ್ಯ ಸಭಾಪತಿಯವರೇ, ಗುಲ್ಬರ್ಗಾ ವಿಭಾಗದಲ್ಲಿ ನಾವು ಈಗ ಬಹಳ ಗಂಭೀರ ಸ್ವರೂಪದ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ.

**ಶ್ರೀ ಯಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಅಮರನಾಥ ಪಾಟೀಲರು ಕೇಳಿರುವಂತಹ ಪ್ರಶ್ನೆ ಹೈದ್ರಾಬಾದ್–ಕರ್ನಾಟಕಕ್ಕೆ ಸಂಬಂಧಿಸಿದಂತಹ ಪ್ರಶ್ನೆಯಾಗಿರುವುದರಿಂದ ವಸ್ತುಸ್ಥಿತಿಯ ಆಧಾರದಲ್ಲಿ ಇದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವ್ಯಾಪ್ತಿಗೆ ಬರುತ್ತದೆ ಎನ್ನುವಂತಹ ವಿಚಾರವನ್ನು ನಾವು ಒಪ್ಪಬಹುದು. ಆದರೆ ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಸ್ಪಷ್ಟವಾಗಿ ತಿಳಿಸಬೇಕಾಗುತ್ತದೆ. How long these people will have to be on probation? ಅದನ್ನು ಒಂದು ಸಲ ಹೇಳಿಬಿಟ್ಟರೆ ಅದಕ್ಕನುಗುಣವಾಗಿ we are prepared to do that.

**ಶ್ರೀ ಆರ್.ವಿ. ದೇಶಪಾಂಡೆ(ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):–** ಮಾನ್ಯ ಸಭಾಪತಿಯವರೇ, ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಗುಲ್ಬರ್ಗ ಕೂಡ ಇದೆ ಎಂದು ಮಾನ್ಯ ಸದಸ್ಯರು ಹೇಳಬಹುದು. ಆದರೆ ಗುಲ್ಬರ್ಗ ಎಂದರೆ ಅದು ನಗರಾಭಿವೃದ್ಧಿ ಇಲಾಖೆ ಸಚಿವರಿಗೆ ಬರುತ್ತದೆ. Entrire Gulbarga region ಎಂದರೆ ಅದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಿಗೆ ಬರುತ್ತದೆ. ಆದರೆ, ಮಾನ್ಯ ಸದಸ್ಯರು ಕೇಳಿರುವಂತಹ ವಿಷಯದಲ್ಲಿ ಸ್ಪಷ್ಟತೆ ಇಲ್ಲ. ಆದುದರಿಂದ ಇದರ ಬಗ್ಗೆ ತಾವು ತೆಗೆದುಕೊಳ್ಳಬಹುದಾದ ತೀರ್ಮಾನದ ಪ್ರಕಾರ ನಾವು ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಸಭಾಪತಿಯವರು:–** ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೋರಿ ನನಗೆ ಸೂಚನಾ ಪತ್ರವನ್ನೇನು

ಕಳುಹಿಸಿಕೊಡುತ್ತೀರಿ ಅದರಲ್ಲಿ ಯಾರಾದರೂ ಒಬ್ಬರು ನಿರ್ದಿಷ್ಟ ಸಚಿವರಿಗೆ ಸಂಬಂಧಪಡುವಂತಹ ವಿಚಾರವಿರಬೇಕಾಗುತ್ತದೆ. ಎರಡು–ಮೂರು ಇಲಾಖೆಗೆ ಸೇರಿ ಒಂದು ಗಮನ ಸೆಳೆಯುವ ಸೂಚನೆಯಲ್ಲಿ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಬರುವುದಿಲ್ಲ. ಆದುದರಿಂದ ದಯಮಾಡಿ ಇದನ್ನು ತಾವು ಮತ್ತೊಮ್ಮೆ ಪರಿಶೀಲಿಸಿ. ನಾಳೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ಇದನ್ನು ಯಾವ ರೀತಿ list ಮಾಡುವುದಕ್ಕಾಗುತ್ತದೆಯೋ ನೋಡೋಣ. ಈಗ ಮುಂದಿನ ವಿಷಯಕ್ಕೆ ಹೋಗೋಣ.

**ಶ್ರೀ ಡಿ.ವಿ. ಸದಾನಂದಗೌಡ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು, 'ಈ ವಿಷಯವನ್ನು ನಮ್ಮ ಇಲಾಖೆಗೆ ವರ್ಗಾವಣೆ ಮಾಡಿದರೆ ನಾನು ಅದಕ್ಕೆ ಉತ್ತರ ಕೊಡುತ್ತೇನೆ' ಎನ್ನುವಂತಹ ವಿಚಾರವನ್ನು ಈಗಾಗಲೇ ತಿಳಿಸಿದ್ದಾರೆ. ಆದಕಾರಣ ಈ ವಿಷಯವನ್ನು ಅವರಿಗೆ ವರ್ಗಾವಣೆ ಮಾಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇನೆ.

**ಶ್ರೀ ಆರ್.ವಿ. ದೇಶಪಾಂಡೆ:–** ಮಾನ್ಯ ಸದಸ್ಯರಿಗೆ ಗುಲ್ಬರ್ಗಾದ ಬಗ್ಗೆ ಉತ್ತರ ಬೇಕಾಗಿದೆ. ಅದಕ್ಕೆ ಮಾನ್ಯ ನಗರಾಭಿವೃದ್ಧಿ ಸಚಿವರು ಉತ್ತರ ಕೊಡಬೇಕಾಗುತ್ತದೆ. ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದಂತೆ ಬೇಕಾದರೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಉತ್ತರ ಕೊಡುತ್ತಾರೆ.

**ಸಭಾಪತಿಯವರು:–** ಮಾನ್ಯ ಅಮರನಾಥ ಪಾಟೀಲರೇ ಈ ವಿಷಯದಲ್ಲಿ ನಗರ ಮತ್ತು ಗ್ರಾಮೀಣ ಎರಡನ್ನೂ ಸೇರಿಸುವುದಕ್ಕೆ ಬರುವುದಿಲ್ಲ.

**ಶ್ರೀ ಡಿ.ವಿ. ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಒಟ್ಟಾರೆ ಹೈದ್ರಾಬಾದ್–ಕರ್ನಾಟಕ ಗ್ರಾಮೀಣ ಪ್ರದೇಶಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕೊಡಲಿ, ಬಾಕಿ ಇರುವಂಥದ್ದು ಬೇಡ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಇದು ಪೌರಾಡಳಿತ ಇಲಾಖೆಗಷ್ಟೇ ಸೀಮಿತವಾಗಿಲ್ಲ, ಗ್ರಾಮೀಣಾಭಿವೃದ್ಧಿ ಮತ್ತು

ಪಂಚಾಯತ್ ರಾಜ್ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆ ಹೀಗೆ ಒಟ್ಟು ಮೂರು ಇಲಾಖೆಗಳಿಗೂ ಸಂಯೋಜನೆಗೊಂಡಿರುತ್ತದೆ.

**ಶ್ರೀ ಡಿ.ವಿ.ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರ ಮಾತನ್ನು ನಾನು ಸಹ ಒಪ್ಪುತ್ತೇನೆ, ಆದರೆ ಈ ಪ್ರಶ್ನೆಯಲ್ಲಿ ಸ್ವಲ್ಪಮಟ್ಟಿಗೆ ಗೊಂದಲವಿದೆ.

**ಸಭಾಪತಿಯವರು:–** ಮಾನ್ಯ ಅಮರನಾಥ ಪಾಟೀಲರೇ, ತಾವು ಪ್ರಸ್ತಾಪಿಸಬಯಸಿರುವ ವಿಷಯ ಬಹಳ ಗಂಭೀರವಾದಂತಹ ವಿಚಾರವನ್ನೊಳಗೊಂಡಿರಬಹುದು. ಅದರಲ್ಲಿ ಗಂಭೀರವಾದಂತಹ ಕೇವಲ 3 ವಿಷಯಗಳಷ್ಟೆ ಅಲ್ಲ, 30 ವಿಷಯಗಳಿರಬಹುದು, 300 ವಿಷಯಗಳಿರಬಹುದು. ಆದರೆ ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ಅವಕಾಶ ಕೋರಿ ಕಳುಹಿಸಿಕೊಡುವಂತಹ ವಿಷಯ ನಿರ್ದಿಷ್ಟವಾಗಿ ಒಂದು issue, ಒಬ್ಬರು ಸಚಿವರ ಗಮನವನ್ನು ಸೆಳೆಯುವಂತಿರಬೇಕು. ಇಬ್ಬರು–ಮೂವರು ಸಚಿವರ ಗಮನವನ್ನು ಒಟ್ಟಿಗೆ ಸೆಳೆಯುವುದಕ್ಕೆ ಬರುವುದಿಲ್ಲ. ಆದುದರಿಂದ ಇದನ್ನು ಯಾವ ರೀತಿ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಬಹುದೆಂಬ ಬಗ್ಗೆ ನಂತರ ವಿಚಾರ ಮಾಡೋಣ.

**ಶ್ರೀ ಡಿ.ವಿ.ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನನ್ನದೊಂದು ವಿನಂತಿ ಇದೆ. ಮಾನ್ಯ ಸದಸ್ಯರು ಪ್ರಸ್ತಾಪಿಸಬಯಸಿರುವಂತಹ ಈ ಗಮನ ಸೆಳೆಯುವ ಸೂಚನೆಯಡಿಯಲ್ಲಿನ ವಿಷಯವನ್ನು bifurcate ಮಾಡಿ ನಿರ್ದಿಷ್ಟವಾಗಿ ಯಾವ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ ಎಂಬುದನ್ನು ತಮಗೆ ಸ್ಪಷ್ಟವಾಗಿ ಕಳುಹಿಸಿದ ನಂತರ ಅದನ್ನು ತಾವು rectify ಮಾಡಬೇಕೆಂದು ವಿನಂತಿಸುತ್ತೇನೆ.

**ಸಭಾಪತಿಯವರು:–** ಆಗಲಿ, ಈಗ ಮುಂದಿನ ವಿಷಯಕ್ಕೆ ಹೋಗೋಣ.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಿಯಮ 330ರ ಅಡಿಯಲ್ಲಿ ಶ್ರೀಯುತ ಪಟೇಲ್ ಶಿವರಾಂ ಅವರು ಪ್ರಸ್ತಾಪಿಸಲಿರುವ ವಿಷಯಕ್ಕೆ ಉತ್ತರ ಕೊಡಲು ಸಂಬಂಧಪಟ್ಟ ಸಚಿವರು ಸಿದ್ಧರಿದ್ದಾರೆಯೇ ಅಥವಾ ತಾವೇ ಅದಕ್ಕೆ ಉತ್ತರವನ್ನು ಕೊಡುವುದಾದರೆ ಏನೂ ತೊಂದರೆ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಈ ವಿಷಯಕ್ಕೆ ಸಂಬಂಧಪಟ್ಟಂತಹ ಸಚಿವರು ಕೆಳಮನೆಯಲ್ಲಿದ್ದಾರೆ. ಅವರು ಮಧ್ಯಾಹ್ನದ ನಂತರ ಈ ಸದನಕ್ಕೆ ಬರಲಿದ್ದಾರೆ. ಆ ಸಂದರ್ಭದಲ್ಲಿ ಈ ವಿಷಯವನ್ನು ತೆಗೆದುಕೊಳ್ಳಬಹುದು.

**ಸಭಾಪತಿಯವರು:-** ಉತ್ತರ ಸಿದ್ಧವಿದ್ದರೆ ತಾವೇ ಕೊಡಬಹುದಾಗಿತ್ತು,

**ಶ್ರೀ ಎಸ್.ಆರ್. ಪಾಟೀಲ್:-** ಉತ್ತರ ಇದೆ, ತಾವು ಓದಿ ಎಂದರೆ ಓದಿಬಿಡುತ್ತೇನೆ. ಆದರೆ, ಹೆಚ್ಚಿನ ಮಾಹಿತಿಯನ್ನು ಮಾನ್ಯ ಸದಸ್ಯರು ಬಯಸುವುದಾದರೆ ಸಂಬಂಧಪಟ್ಟ ಸಚಿವರು ಈ ಸದನಕ್ಕೆ ಬಂದ ನಂತರ ಈ ವಿಷಯವನ್ನು ತೆಗೆದುಕೊಳ್ಳುವುದೇ ಹೆಚ್ಚು ಸೂಕ್ತವೆನಿಸುತ್ತದೆ.

(ಗೊಂದಲ)

**ಶ್ರೀ ಇ.ಕೃಷ್ಣಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರದವರು ವಿರೋಧ ಪಕ್ಷದವರು ಪ್ರಸ್ತಾಪಿಸಿರುವಂತಹ ಯಾವುದೇ ವಿಷಯಗಳಿಗೂ ಉತ್ತರ ಕೊಡುತ್ತಿಲ್ಲ. ಗಮನ ಸೆಳೆಯುವ ಸೂಚನೆಯ ಅಡಿಯಲ್ಲಿರುವಂತಹ ಎಲ್ಲಾ ವಿಷಯಗಳಿಗೂ ಸರ್ಕಾರದವರು, 'ನಾಳೆ ಉತ್ತರ ಕೊಡಿಸುತ್ತೇವೆ, ನಾಳೆ ಉತ್ತರ ಕೊಡಿಸುತ್ತೇವೆ' ಎಂದರೆ ಹೇಗೆ?

**ಶ್ರೀ ಪಟೇಲ್ ಶಿವರಾಂ:-** ಮಾನ್ಯ ಸಭಾಪತಿಯವರೇ, . . .

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪಿಸುವುದಾದರೆ ನಾನು ಉತ್ತರವನ್ನು ಓದಿಬಿಡುತ್ತೇನೆ. I am prepared. I am ready.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಯಾವುದೇ ವಿಷಯಗಳಿಗೆ ಯಾವುದೇ ಸಚಿವರು ಉತ್ತರ ಕೊಡುವುದಕ್ಕೆ ತಯಾರಾಗಿ ಬಂದಿಲ್ಲ. ಆದುದರಿಂದ ಅವರು ಈ ಎಲ್ಲ ವಿಷಯಗಳಿಗೂ ಯಾವಾಗ ಉತ್ತರ ಕೊಡಲಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕು. ಇಲ್ಲದಿದ್ದರೆ ಎಲ್ಲವೂ ಗೊಂದಲಮಯವಾಗುತ್ತದೆ, ಯಾವುದೇ ಸಮಸ್ಯೆಗಳಿಗೂ ಕೂಡ ಸರಿಯಾದ ರೀತಿಯಲ್ಲಿ ಪರಿಹಾರ ಸಿಗುವುದಿಲ್ಲ. ಆ ರೀತಿಯ ಪರಿಸ್ಥಿತಿ ನಿರ್ಮಾಣ ಆಗಬಾರದು. ಇವೊತ್ತು ಈ ಅಧಿವೇಶನದಲ್ಲಿ ಪ್ರಥಮವಾಗಿ ಬೇರೆಲ್ಲಾ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಲಾಗಿದೆ. ಸರ್ಕಾರದವರು ಇನ್ನೂ probationary period ನಲ್ಲಿರುವುದರಿಂದ ನಾನು ಸರ್ಕಾರದ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾನು ವಿರೋಧ ಪಕ್ಷದ ನಾಯಕರ ಮಾತನ್ನು ಒಪ್ಪುತ್ತೇನೆ. ಸಂಬಂಧಪಟ್ಟ ಸಚಿವರು ಕೆಳಮನೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದಾರೆ. ಮಾನ್ಯ ಪಟೇಲ್ ಶಿವರಾಂ ಅವರು ವಿಷಯವನ್ನು ಪ್ರಸ್ತಾಪಿಸುವುದಾದರೆ ಆ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಉತ್ತರ ಕೊಡುತ್ತೇನೆ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ನಾನು ಈ ವಿಚಾರವನ್ನು ಇವೊತ್ತಷ್ಟೆ ಸದನದಲ್ಲಿ ಪ್ರಸ್ತಾಪ ಮಾಡುತ್ತಿಲ್ಲ. ಇದಕ್ಕೆ ಮೊದಲು ಆ ವಿದ್ಯಾರ್ಥಿಗಳು ಮುಷ್ಕರ ಮಾಡಿದಾಗ ನಾನು ಸಂಬಂಧಪಟ್ಟ ಸಚಿವರು ಮತ್ತು ಮುಖ್ಯಮಂತ್ರಿಯವರಿಗೆ ಕೂಡ ಈ ವಿಚಾರವಾಗಿ ಪತ್ರ ಬರೆದಿದ್ದೇನೆ. ಅದಕ್ಕೆ ಕೂಡ ಉತ್ತರ ಬರದಿದ್ದಂತಹ ಸಂದರ್ಭದಲ್ಲಿ ನಿಯಮ 330ರ ಅಡಿಯಲ್ಲಿ ಈಗ ವಿಷಯವನ್ನು ಪ್ರಸ್ತಾಪಿಸಿದ್ದೇನೆ. ಈಗಾಗಲೇ ಅಲ್ಲಿ ವ್ಯಾಸಂಗ ಮಾಡಿ ಎರಡು batchನಲ್ಲಿ ಬಿಡುಗಡೆಯಾಗಿರುವಂತಹ ವಿದ್ಯಾರ್ಥಿಗಳಿಗೆ ವೈದ್ಯರು ಎಂದು ಸರ್ಟಿಫಿಕೇಟ್ ಕೊಟ್ಟಿಲ್ಲ. ಶಿವಮೊಗ್ಗ ಕಾಲೇಜ್‌ನ ಪರಿಸ್ಥಿತಿ ಕೂಡ ಬಹುಶಃ ಇದೇ ರೀತಿಯಾಗಿರಬಹುದೆನಿಸುತ್ತಿದೆ. ಇದು ಅನಾಹುತಕ್ಕೆ

ಕಾರಣವಾಗುವುದರಿಂದ ಇದರ ಬಗ್ಗೆ ಮಾನ್ಯ ಸಭಾನಾಯಕರು ಉತ್ತರ ಕೊಡುವುದಾದರೆ ಕೊಡಲಿ.

**ಶ್ರೀ ಯಂ.ಸಿ. ನಾಣಯ್ಯ:–** ಸನ್ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಪಟೇಲ್ ಶಿವರಾಂ ಅವರು ಈ ವಿಚಾರವನ್ನೇನು ಪ್ರಸ್ತಾಪಿಸುತ್ತಿದ್ದಾರೆ ಇದಕ್ಕೆ ಸಂಬಂಧಪಟ್ಟ ಸಚಿವರು ಈ ಸದನಕ್ಕೆ ಉತ್ತರವನ್ನು ಕಳುಹಿಸಿಕೊಟ್ಟಿದ್ದಾರೆ. ಸಂಬಂಧಪಟ್ಟ ಸಚಿವರು ಕೆಳಮನೆಯಲ್ಲಿರುವುದರಿಂದ ಮಾನ್ಯ ಸಭಾನಾಯಕರು ಈ ಕೆಲಸವನ್ನು ಮಾಡಬಹುದಾಗಿದೆ. ಆದ್ದರಿಂದ ಅವರು ಉತ್ತರ ಕೊಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕಾಗುತ್ತದೆ. ಅವರು ಉತ್ತರ ಕೊಡಲಿ, ನಾವು ಒಪ್ಪುತ್ತೇವೆ.

(1.30 ಗಂಟೆ)

## 7. ನಿಯಮ 330ರ ಮೇರೆಗೆ

**2006–07ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಪಶು ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಿ, ಸರ್ಕಾರವು ಮೂಲಭೂತ ಸೌಕರ್ಯವನ್ನು ಒದಗಿಸದೆ ಇರುವುದು ಅಲ್ಲದೆ ಕಳೆದ 5 ವರ್ಷಗಳ ಪದವಿಯನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರವನ್ನು ನೀಡದೆ ವಿದ್ಯಾರ್ಥಿಗಳು ಅತಂತ್ರ ಪರಿಸ್ಥಿತಿಯಲ್ಲಿರುವ ಬಗ್ಗೆ**

**ಶ್ರೀ ಪಟೇಲ್ ಶಿವರಾಂ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, 2006–07ನೇ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಪಶು ಕಾಲೇಜನ್ನು ಪ್ರಾರಂಭಿಸಿ, ಸರ್ಕಾರವು ಮೂಲಭೂತ ಸೌಕರ್ಯವನ್ನು ಒದಗಿಸದೆ ಇರುವುದು ಅಲ್ಲದೆ ಕಳೆದ 5 ವರ್ಷಗಳ ಪದವಿಯನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಅರ್ಹತಾ ಪ್ರಮಾಣ ಪತ್ರವನ್ನು ನೀಡದೆ ವಿದ್ಯಾರ್ಥಿಗಳು ಅತಂತ್ರ ಸ್ಥಿತಿಯಲ್ಲಿದ್ದಾರೆ. ಇದು ಎರಡು ಬ್ಯಾಚ್‌ನಲ್ಲಿ ವಿದ್ಯಾರ್ಥಿಗಳು ತೇರ್ಗಡೆಯಾಗಿ ಹೊರಗೆ ಬಂದಿದ್ದಾರೆ. ಅವರೆಲ್ಲರೂ ಅತಂತ್ರ ಸ್ಥಿತಿಯಲ್ಲಿದ್ದಾರೆ. ಇವತ್ತಿನ ದಿವಸ ಪಶುವೈದ್ಯರ ಮತ್ತು ಬೇರೆ ವೈದ್ಯರ ಕೊರತೆ ಇದೆ ಎಂದು ಹೇಳುತ್ತೀರಿ. ಇವತ್ತು ಆ ಪದವಿಯನ್ನು ಪಡೆದಿರುವಂಥವರಿಗೆ

ನೀವು ಅರ್ಹತಾ ಪತ್ರವನ್ನು ಕೊಟ್ಟಿಲ್ಲವೆಂದು ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸಂಬಂಧಪಟ್ಟಂತಹ ಸಚಿವರಿಗೆ ಮನವಿಯನ್ನು ಮಾಡುತ್ತಿದ್ದೇವೆ. ಮಾನ್ಯ ಪಾಟೀಲರ ಬಳಿ ಯಾವ ಉತ್ತರ ಇದೆ ಎಂದು ನನಗೆ ಗೊತ್ತಿಲ್ಲ, ಇವರು ಹಾರಿಕೆ ಉತ್ತರ ಕೊಡಬಾರದು. ಅವರಿಗೆ ಏನಾದರು ಪರಿಹಾರ ಕೊಡುತ್ತೇವೆ ಎನ್ನುವುದಾದರೆ ಉತ್ತರ ಕೊಡಲಿ.

**ಸಭಾಪತಿಯವರು:–** ಮೊದಲು ಮಾನ್ಯ ಸಭಾ ನಾಯಕರು ಉತ್ತರ ಕೊಡಲಿ. ಅದರಿಂದ ನಿಮಗೆ ಸಮಾಧಾನ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಈ ಸಂದರ್ಭದಲ್ಲಿ ಮಾನ್ಯ ಸಭಾ ನಾಯಕರಿಗೆ ತಿಳಿಸುವುದೇನೆಂದರೆ, ಪಶು ವೈದ್ಯಕೀಯ ಕಾಲೇಜು ಹಾಸನದಲ್ಲಿ ಮಾತ್ರ ಇಲ್ಲ, ಶಿವಮೊಗ್ಗದಲ್ಲಿಯೂ ಇದೆ. ಅಲ್ಲಿಯ ವಿದ್ಯಾರ್ಥಿಗಳು ಹಾಗೂ ಹಾಸನದ ವಿದ್ಯಾರ್ಥಿಗಳು similar ಇದ್ದಾರೆ. ಮಾನ್ಯ ಸದಸ್ಯರು ಹಾಸನದವರು ಆಗಿರುವುದರಿಂದ ಹಾಸನದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಶಿವಮೊಗ್ಗ ವಿದ್ಯಾರ್ಥಿಗಳು ನನ್ನ ಬಳಿ ಬಂದಿದ್ದರು. You include Shimoga district also in it. It is similar. ಏನು ವ್ಯತ್ಯಾಸ ಇಲ್ಲ. ಸರ್ಕಾರದಿಂದ ಏನು ಉತ್ತರ ಇದೆ ಅದನ್ನು ಓದಿ ಬಿಡಿ.

**ಶ್ರೀ ಎಸ್.ಆರ್. ಪಾಟೀಲ್(ಸಭಾನಾಯಕರು, ಕಾನೂನು, ನ್ಯಾಯ ಮತ್ತು ಮಾನವ ಹಕ್ಕು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನೆ ಸಚಿವರ ಪರವಾಗಿ):–** ಮಾನ್ಯ ಸಭಾಪತಿಯವರೇ,

ಭಾರತೀಯ ಪಶುವೈದ್ಯಕೀಯ ಪರಿಷತ್ತು ಮೂಲಭೂತ ಸೌಲಭ್ಯಗಳ ಕೊರತೆಯ ಕಾರಣ ನೀಡಿ ಹಾಸನ ಪಶುವೈದ್ಯಕೀಯ ಕಾಲೇಜಿಗೆ ಮಾನ್ಯತೆ ನೀಡಲು ನಿರಾಕರಿಸಿದ್ದು, ಪ್ರಸ್ತುತ ಸಾಲಿನಲ್ಲಿ ಹಾಸನದ ಪಶುವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳಿಗೆ ದಾಖಲಾತಿ ನೀಡಬಾರದೆಂದು ನಿರ್ದೇಶಿಸಿದೆ. ಆದರೆ ಸರ್ಕಾರವು ಈಗಾಗಲೇ ಹಾಸನ ಪಶುವೈದ್ಯಕೀಯ ಕಾಲೇಜಿನ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ₹ 8255.75 ಲಕ್ಷಗಳನ್ನು ಈವರೆವಿಗೆ ಬಿಡುಗಡೆ ಮಾಡಿದ್ದು, ಈಗಾಗಲೇ ₹ 8580.71 ಲಕ್ಷಗಳನ್ನು ಖರ್ಚು ಮಾಡಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಮಾಡಲಾಗಿದೆ.

ಹೆಚ್ಚುವರಿ ವೆಚ್ಚವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲಾಗಿದೆ.

ಹಾಸನ ಪಶುವೈದ್ಯಕೀಯ ಕಾಲೇಜಿನ ಹೊಸ ಕ್ಯಾಂಪಸ್ಸಿನ ಕಟ್ಟಡ ಬಹುತೇಕ ಮೂಲಭೂತ ಸೌಕರ್ಯಗಳೊಂದಿಗೆ ಸಂಪೂರ್ಣವಾಗಿದ್ದು, 2013–14 ನೇ ಶೈಕ್ಷಣಿಕ ವರ್ಷದಲ್ಲಿ ಜೂನ್ 2013ರಿಂದ ಈ ಕಾಲೇಜು ಹೊಸ ಕ್ಯಾಂಪಸ್ಸಿನಲ್ಲಿ ಪ್ರಾರಂಭವಾಗಲಿದೆ. ಉಳಿದಿರುವ ಅತ್ಯಲ್ಪ ಕಾಮಗಾರಿಗಳನ್ನು ಇನ್ನೂ 4–5 ತಿಂಗಳುಗಳೊಳಗೆ ಪೂರ್ಣಗೊಳಿಸಲಿದ್ದು, ಇದಕ್ಕಾಗಿ ಬೇಕಾಗಿರುವ ಅನುದಾನವನ್ನು ಒದಗಿಸಲು ಸರ್ಕಾರವು ಬದ್ಧವಾಗಿದೆ. ಭಾರತೀಯ ಪಶುವೈದ್ಯಕೀಯ ಪರಿಷತ್ತಿನ ಮಾನದಂಡದಂತೆ ಅಗತ್ಯವಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ನೇಮಕಾತಿಗೆ ಪಶುವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಅನುಮತಿ ನೀಡಲು ಸರ್ಕಾರ ಕ್ರಮ ವಹಿಸಿದೆ. ನೇಮಕಾತಿ ಪ್ರಕ್ರಿಯೆ ಮುಗಿಯುವವರೆವಿಗೆ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಿಂದ ಅರ್ಹ ಸಿಬ್ಬಂದಿಗಳ ಸೇವೆಯನ್ನು ನಿಯೋಜನೆ ಮೇರೆಗೆ ಪಶುವೈದ್ಯಕೀಯ ವಿಶ್ವವಿದ್ಯಾನಿಲಯಕ್ಕೆ ನೀಡಲಾಗುವುದು.

ದಿನಾಂಕ: 28–5–2013 ರಂದು ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಕೃಷಿ ಸಚಿವರಿಗೆ ಪತ್ರ ಬರೆದು ಹಾಸನ ಮತ್ತು ಶಿವಮೊಗ್ಗ ಪಶುವೈದ್ಯಕೀಯ ಕಾಲೇಜುಗಳಿಗೆ ಮಾನ್ಯತೆ ನೀಡುವಂತೆ, ಈಗಾಗಲೇ ತೇರ್ಗಡೆ ಹೊಂದಿರುವ ಪದವೀಧರರ ನೋಂದಣಿಗೆ ಅನುಮತಿ ನೀಡುವಂತೆ ಹಾಗೂ 2013–14ನೇ ಶೈಕ್ಷಣಿಕ ವರ್ಷದಲ್ಲಿ ಬೀದರ್, ಹಾಸನ ಮತ್ತು ಶಿವಮೊಗ್ಗ ಈ ಮೂರು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ನೀಡುವಂತೆ ಭಾರತೀಯ ಪಶುವೈದ್ಯಕೀಯ ಪರಿಷತ್ತಿಗೆ ಸೂಚನೆ ನೀಡುವಂತೆ ಕೇಂದ್ರ ಕೃಷಿ ಸಚಿವರನ್ನು ಕೋರಿರುತ್ತಾರೆ. ಈ ಕುರಿತು ದಿನಾಂಕ: 23–5–2013 ರಂದು ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ರವರು ಕಾರ್ಯದರ್ಶಿಗಳು, ಪಶುಸಂಗೋಪನೆ ಇಲಾಖೆ, ಕೃಷಿ ಮಂತ್ರಾಲಯ, ಭಾರತ ಸರ್ಕಾರ ಇವರಿಗೂ ಸಹ ಪತ್ರ ಬರೆದಿರುತ್ತಾರೆ. ಇಷ್ಟರಲ್ಲೇ ನಾನು ಕೇಂದ್ರ ಕೃಷಿ

ಸಚಿವರನ್ನು ಖುದ್ದಾಗಿ ಭೇಟಿ ಮಾಡಿ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಬಾಧ್ಯತೆ ಬಗ್ಗೆ ಮಾನ್ಯ ಕೇಂದ್ರ ಸಚಿವರಿಗೆ ಮನವರಿಕೆ ಮಾಡಲಿದ್ದು, ಭಾರತೀಯ ಪಶುವೈದ್ಯಕೀಯ ಪರಿಷತ್ತಿನಿಂದ ಸಕಾರಾತ್ಮಕ ಪ್ರತಿಕ್ರಿಯೆಯನ್ನು ನಿರೀಕ್ಷಿಸಬಹುದಾಗಿದೆ.

**ಸಭಾಪತಿಯವರು:–** ಇದರಲ್ಲಿ ಒಂದು ವಿಷಯವನ್ನು ಸೇರಿಸಿದ್ದರೆ ಚೆನ್ನಾಗಿತ್ತು. ಈ ವಿಷಯದ ಬಗ್ಗೆ ಹಾಸನ, ಬೀದರ್ ಮತ್ತು ಶಿವಮೊಗ್ಗ ವಿದ್ಯಾರ್ಥಿಗಳು ನನ್ನನ್ನು ಭೇಟಿ ಮಾಡಿದಾಗ ನಾನು ಮಾನ್ಯ ಸಚಿವರ ಜೊತೆ ದೂರವಾಣಿ ಮುಖಾಂತರ ಮಾತನಾಡಿದೆ. ಮಾನ್ಯ ಸಚಿವರು 'ನಾನೇ ದೆಹಲಿಗೆ ಹೋಗುತ್ತೇನೆ' ಎಂದು ಹೇಳಿದ್ದಾರೆ. ಆದುದರಿಂದ ಅವರು ಬೇಗ ದೆಹಲಿಗೆ ಹೋಗಬೇಕು. ಇಲ್ಲದಿದ್ದರೆ ಮಕ್ಕಳಿಗೆ ಅನ್ಯಾಯವಾಗುತ್ತದೆ.

**Sri S.R. PATIL:-** We will take steps.

**ಸಭಾಪತಿಯವರು:–** ಅದನ್ನು ನೀವು communicate ಮಾಡಿ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ನಿಖರವಾಗಿ ಮಾಡುತ್ತೇವೆ ಅಥವಾ ಇಲ್ಲ ಎಂದು ಏನಾದರು ತಿಳಿಸಿದ್ದಾರೆಯೇ?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಕ್ಷಣ ದೆಹಲಿಗೆ ಹೋಗಿ ಸಂಬಂಧಪಟ್ಟವರನ್ನು ಭೇಟಿ ಮಾಡುತ್ತೇನೆ ಎಂದು ತಿಳಿಸಿದ್ದಾರೆ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ಕೇಂದ್ರದಲ್ಲಿ ಅವರದೇ ಪಕ್ಷದ ಸರ್ಕಾರ ಇದೆ.

**ಶ್ರೀ ಎಸ್.ಆರ್.ಪಾಟೀಲ್:–** ಅದು ನಮ್ಮೆಲ್ಲರ ಸರ್ಕಾರ ಕೂಡ ಆಗಿದೆ. ಇಡೀ ಭಾರತ ದೇಶದ 120 ಕೋಟಿ ಜನರಿಗೆ ಸಂಬಂಧವಿದೆ.

**ಶ್ರೀ ಪಟೇಲ್ ಶಿವರಾಂ:–** ಮಾನ್ಯ ಸಭಾಪತಿಯವರೇ, ಈ ವರ್ಷ ಮಕ್ಕಳನ್ನು ದಾಖಲು ಮಾಡಿಕೊಳ್ಳುತ್ತಿಲ್ಲ. ಎರಡು ವರ್ಷದ ಪದವಿ

ಪಡೆದವರಿಗೆ ಅರ್ಹತಾ ಪತ್ರವನ್ನು ಕೊಟ್ಟಿಲ್ಲ. ಆದಕಾರಣ ಮುಂದೆ ಆಗುವಂತಹ ಅನಾಹುತಗಳಿಗೆ ಈ ಸರ್ಕಾರವೇ ಕಾರಣವಾಗುತ್ತದೆ ಎಂದು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಪಟೇಲ್ ಶಿವರಾಂರವರೇ, ನಾವು ಬಂದ ಮೇಲೆ ಇದು ಪ್ರಾರಂಭವಾಗಿಲ್ಲ.

**ಶ್ರೀ ಪಟೇಲ್ ಶಿವರಾಂ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಈ ರೀತಿ ಹಾರಿಕೆಯ ಉತ್ತರವನ್ನು ಕೊಡುವುದನ್ನು ಬಿಟ್ಟು, ಕಡ್ಡಾಯವಾಗಿ ಈ ರೀತಿ ಮಾಡುತ್ತೇವೆ, ಅರ್ಹತಾ ಪತ್ರವನ್ನು ಕೊಡುತ್ತೇವೆ ಎಂದಾದರು ಹೇಳಬೇಕೆಂದು ತಮ್ಮ ಮೂಲಕ ಮಾನ್ಯ ಸಭಾ ನಾಯಕರನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಪಟೇಲ್ ಶಿವರಾಂರವರೇ, ಈಗೇನು ಅವಾಂತರವಾಗಿದೆ, ತೊಂದರೆಯಾಗಿದೆ ಇದರ ಬಗ್ಗೆ ಮಾನ್ಯ ಪಶುಸಂಗೋಪನಾ ಸಚಿವರು ಸ್ವತಃ ದೆಹಲಿಗೆ ಹೋಗಿ ಸಂಬಂಧಪಟ್ಟವರನ್ನು ಭೇಟಿ ಆಗಿ ಇದಕ್ಕೆ ಒಂದು ಪರಿಹಾರ ಕಂಡುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆಂದು ತಮಗೆ ತಿಳಿಸಬಯಸುತ್ತೇನೆ. Government is committed.

**ಶ್ರೀ ಪಟೇಲ್ ಶಿವರಾಂ:-** ಮಾನ್ಯ ಸಭಾಪತಿಯವರೇ, ಕೇವಲ ಪತ್ರ ಬರೆದರೆ ಆಗುವುದಿಲ್ಲ, ನಾನು ಬೇಕಾದರೆ ಪತ್ರವನ್ನು ಬರೆಯುತ್ತೇನೆ. ನಾನು ಈ ಮಕ್ಕಳು ಮುಷ್ಕರ ಮಾಡಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಪಶುಸಂಗೋಪನಾ ಇಲಾಖಾ ಸಚಿವರೊಂದಿಗೆ ಪತ್ರ ವ್ಯವಹಾರ ಮಾಡಿದ್ದೇನೆ. ಅದಕ್ಕೆ ಉತ್ತರ ಬರದೆ ಇದ್ದ ಕಾರಣ ಈ ಸದನದಲ್ಲಿ ಈ ವಿಚಾರವನ್ನು ನಿಯಮ 330ರ ಅಡಿಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ದಯವಿಟ್ಟು ಇದು ನಮ್ಮ ನಿಮ್ಮ ವೈಯುಕ್ತಿಕ ವಿಚಾರವಲ್ಲ, ಇದು ಮಕ್ಕಳ ಭವಿಷ್ಯದ ಪ್ರಶ್ನೆ. ಎರಡು ಬ್ಯಾಚ್ ತೇರ್ಗಡೆ ಆಗಿ ಹೋಗಿದ್ದಾರೆ. ಅವರಿಗೆ ವೈದ್ಯರು ಎಂಬ ಅರ್ಹತಾ ಪತ್ರವನ್ನು ಕೊಟ್ಟಿಲ್ಲ. ಅಲ್ಲದೆ ಈ ವರ್ಷ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳುತ್ತಿಲ್ಲ. ಆ ಸರ್ಕಾರ ಮಾಡಬೇಕಾಗಿತ್ತು, ಈ ಸರ್ಕಾರ

ಮಾಡಬೇಕಾಗಿತ್ತು ಎಂಬುದಲ್ಲ ಇದರ ಜವಾಬ್ದಾರಿ ಸರ್ಕಾರದ್ದು. ಸರ್ಕಾರ ಈಗ ಕೊಟ್ಟಿರುವುದು ಉತ್ತರವೆ? ಇದನ್ನು ಯಾರು ಉತ್ತರ ಎಂದು ಹೇಳುತ್ತಾರೆ? ಇದು ಜಾರಿಕೊಳ್ಳುವಂತಹ ಉತ್ತರ. ಈಗ ಸರ್ಕಾರ ಕೊಟ್ಟಿರುವಂತಹ ಉತ್ತರದಲ್ಲಿ ನಾವು degree certificate ಕೊಡಿಸುತ್ತೇವೆ ಎಂದು ನಂಬಿಕೆ ಹುಟ್ಟಿಸುವಂತಹ ಉತ್ತರ ಇದಾಗಿಲ್ಲ.

**ಶ್ರೀ ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೇ, ಇದರಲ್ಲಿ ಪ್ರಮುಖವಾದಂತಹ ಒಂದು ಅಂಶ ಅಡಗಿದೆ. ನಮ್ಮ ಸರ್ಕಾರ ಪಶುವೈದ್ಯರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಈಗ 391 ಹುದ್ದೆಗಳಿಗೆ ಅರ್ಜಿಯನ್ನು ಕರೆದಿದ್ದಾರೆ. ಆದರೆ ಆ ಹುದ್ದೆಗಳಿಗೆ ಅರ್ಜಿ ಹಾಕುವುದಕ್ಕೆ ಈ ಅಭ್ಯರ್ಥಿಗಳಿಗೆ ಅವಕಾಶ ಇಲ್ಲ. ಇವರು ಕೋರ್ಸ್ ಮುಗಿಸಿದ್ದಾರೆ ಆದರೆ ಅರ್ಜಿ ಹಾಕುವುದಕ್ಕೆ ಅವಕಾಶ ಇಲ್ಲ. ನಮ್ಮದೇ ಸರ್ಕಾರ ಪಶುವೈದ್ಯರನ್ನು call for ಮಾಡಿದೆ, ನಮ್ಮದೇ ಇರುವಂತಹ ಸರ್ಕಾರಿ ಕಾಲೇಜುಗಳಲ್ಲಿ ಪದವಿ ಪಡೆದಿರುವಂತಹ ಮಕ್ಕಳಿಗೆ ಅರ್ಹತಾ ಪತ್ರ ಸಿಕ್ಕಿಲ್ಲ, ಅವರಿಗೆ degree certificate ಸಿಕ್ಕಿಲ್ಲ ಎನ್ನುವ ಕಾರಣಕ್ಕಾಗಿ ಅರ್ಜಿ ಹಾಕುವುದಕ್ಕೆ ಆಗುತ್ತಿಲ್ಲ. ಇದು ಈಗ ಬಂದಿರುವಂತಹ ಸಮಸ್ಯೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಮಧುಸೂದನ್‌ರವರೇ, ಈ ರಾಡಿ ಮಾಡಿದ್ದು ನೀವೇ, ಈಗ ಅವರು ರಾಡಿ ತೊಳೆಯಬೇಕಾಗಿದೆ.

**ಸಭಾಪತಿಯವರು:–** ಈಗ ಯಾರು ರಾಡಿ ಮಾಡಿದ್ದು ಎನ್ನುವುದು ಬೇಡ. ಮಕ್ಕಳ ಭವಿಷ್ಯದ ಬಗ್ಗೆ ಚರ್ಚೆ ಮಾಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈಗ ಮಕ್ಕಳಿಗೆ ಎರಡು ವರ್ಷದಿಂದ ಸರ್ಟಿಫಿಕೇಟ್ ಸಿಕ್ಕಿಲ್ಲ. ಈಗ ಆ ಮಕ್ಕಳ ಪರಿಸ್ಥಿತಿ ಏನು, ಇದರ ಬಗ್ಗೆ ಸರ್ಕಾರ ಯಾವ ರೀತಿಯಾದಂತಹ ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ತಿಳಿಸಬೇಕು. ಮಕ್ಕಳು ಅಪ್ಲಿಕೇಶನ್ ಹಾಕಲಿಲ್ಲ ಎಂದರೆ, ಅಥವಾ application ಹಾಕಿದ್ದರೆ appointment ನಿಲ್ಲಿಸುತ್ತೀರಾ ಹೇಗೆ? ಏಕೆಂದರೆ ಬೇಕಾದಷ್ಟು ಜನ distinction ನಲ್ಲಿ ಪಾಸ್ ಮಾಡಿದವರು

ಇದ್ದಾರೆ. ಅವರಿಗೆ ತುರ್ತಾಗಿ ಸರ್ಕಾರ ಯಾವ ರೀತಿಯಾದಂತಹ ಕ್ರಮ ತೆಗೆದುಕೊಳ್ಳುತ್ತದೆ? ಯಾರೋ ಮಾಡಿದ ತಪ್ಪಿಗೆ ಮಕ್ಕಳು ಶಿಕ್ಷೆಯನ್ನು ಅನುಭವಿಸಬಾರದು. ಆದುದರಿಂದ ಶಿವಮೊಗ್ಗ, ಬೀದರ್ ಮತ್ತು ಹಾಸನ ಈ ಮೂರೂ ಕಾಲೇಜುಗಳಲ್ಲಿ ಬೃಹದಾಕಾರವಾದಂತಹ ಸಮಸ್ಯೆ ಇದೆ ಅದಕ್ಕೆ ಸರ್ಕಾರ ಸ್ಪಷ್ಟವಾಗಿ ಹೇಳಬೇಕು. ಈಗೇನು 350 application call for ಮಾಡಿದ್ದೀರಿ ಅವುಗಳನ್ನು stay ಮಾಡುತ್ತೀರಾ? ಏಕೆಂದರೆ, ಈಗ eligible ಇಲ್ಲದೆ ಇರುವವರೆಲ್ಲರೂ ನೇಮಕವಾಗುತ್ತಾರೆ ಆದರೆ distinction ತೆಗೆದುಕೊಂಡವರು ನೇಮಕ ಆಗುವುದಿಲ್ಲ. ಕೇವಲ 55 ಅಂಕಗಳನ್ನು ಪಡೆದಿರುವಂತಹ ಮಕ್ಕಳು ಅರ್ಜಿ ಹಾಕುತ್ತಾರೆ. ಅವರು ನೇಮಕಾತಿ ಹೊಂದುತ್ತಾರೆ. ಆದುದರಿಂದ 'ಇವರುಗಳಿಗೆ ಸರ್ಟಿಫಿಕೇಟ್ ಸಿಗುವವರೆವಿಗೂ ನೇಮಕಾತಿಯನ್ನು ನಿಲ್ಲಿಸುತ್ತೇವೆ, ಈ ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟ ಆಡುವುದಿಲ್ಲ' ಎಂದು ಸರ್ಕಾರ ಇದರ ಬಗ್ಗೆ ಸ್ಪಷ್ಟವಾದಂತಹ ಉತ್ತರ ಹೇಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿಸುತ್ತೇನೆ.

**ಪ್ರೊ॥ ಪಿ.ವಿ. ಕೃಷ್ಣಭಟ್ಟ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರತಕ್ಕ ಉತ್ತರದಲ್ಲಿ ಪ್ರಸ್ತುತ ಸಾಲಿನಲ್ಲಿ ಹಾಸನದ ಪಶುವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳಿಗೆ ದಾಖಲಾತಿಯನ್ನು ನೀಡಬಾರದೆಂದು ನಿರ್ದೇಶಿಸಿದೆ ಎಂದಿದೆ. ಈ ವರ್ಷ ದಾಖಲಾತಿಯನ್ನು ನೀಡಬಾರದೆಂದು ನಿರ್ದೇಶಿಸಿದ್ದಲ್ಲಿ, ಅದು ಮುಂಚಿತವಾಗಿಯೇ ಪಾಲನೆಯಾಗಿರುತ್ತದೆ. ಹಾಗಿದ್ದಲ್ಲಿ ಎರಡು ವರ್ಷ ಮುಂಚಿತವಾಗಿಯೇ ದಾಖಲಾತಿ ಮಾಡಿರುವವರ ಸ್ಟೇಟಸ್ ಏನು? ಅವರ ದಾಖಲಾತಿಯೇ ರದ್ದಾಗುವುದೇ? ಅವರು ಇಷ್ಟು ವರ್ಷ ಅಧ್ಯಯನ ಮಾಡಿರುವುದಕ್ಕೆ ಮಾನ್ಯತೆ ದೊರೆಯುವುದೇ? ಈಗಾಗಲೇ ಯಾರು ಪರೀಕ್ಷೆಗಳನ್ನು ಬರೆದು ಪಾಸ್ ಮಾಡಿದ್ದಾರೆ ಅವರಿಗೆ ಕೊಡಬೇಕಾದ ಸರ್ಟಿಫಿಕೇಟನ್ನು ನೀಡಬೇಕು. ಅವರು ಅಧ್ಯಯನ ಮಾಡುತ್ತಿರುವ ಕಾಲೇಜುಗಳಲ್ಲಿ ಅವಶ್ಯ ಮೂಲಭೂತ ಸೌಕರ್ಯಗಳಿಲ್ಲದಿದ್ದರೆ ಮುಂದಿನ ದಿವಸಗಳಲ್ಲಿ ಸರ್ಕಾರ ಅದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಈ ವಿಚಾರದಲ್ಲಿ

ಸರ್ಕಾರ ಸರಿಯಾದ ರೀತಿಯಲ್ಲಿ ವ್ಯವಹರಿಸಿ ಈಗಾಗಲೇ ಪಾಸ್ ಮಾಡಿರುವವರಿಗೆ ಸರ್ಟಿಫಿಕೇಟ್ ನೀಡುವ ವ್ಯವಸ್ಥೆಯನ್ನು ಮಾಡಬೇಕು. ಅದನ್ನು ಬಿಟ್ಟು ಅಷ್ಟು ಜನ ವಿದ್ಯಾರ್ಥಿಗಳ ಜೀವನದಲ್ಲಿ ಚೆಲ್ಲಾಟ ಆಡುವುದು ಸರಿಯಲ್ಲ. ಆದ್ದರಿಂದ ಸಚಿವರು ನೀಡಿರತಕ್ಕ ಉತ್ತರದ ಬಗ್ಗೆ ಮರುಪರಿಶೀಲನೆಯನ್ನು ಮಾಡಬೇಕು.

**ಡಾ॥ ದೊಡ್ಡರಂಗೇಗೌಡ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಗಳೇ, ಈ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಅರ್ಜಿ ಹಾಕಲು ಅವಕಾಶ ದೊರೆಯದಿರುವುದರ ಜೊತೆಗೆ ಅವರು ಉದ್ಯೋಗ ಪಡೆಯುವುದರಲ್ಲಿಯೂ ಸಹ ಅವಕಾಶ ವಂಚಿತರಾಗುತ್ತಾರೆ. ಹಾಗಾಗಿ ಈ ಸಮಸ್ಯೆಯನ್ನು ಮತ್ತಷ್ಟು ಬೃಹದಾಕಾರವಾಗಿ ಬೆಳೆಸುವುದು ಬೇಡ. ಮತ್ತೇನಾದರೂ ಪರಿಹಾರ ಇದ್ದಲ್ಲಿ ಅವರಿಗೆ ಸೂಚನೆ ನೀಡಬೇಕು, ಅಥವಾ ಅದರ ಗಡುವನ್ನು ಸರ್ಕಾರ ವಿಸ್ತರಿಸಬೇಕು. ಇಲ್ಲದಿದ್ದಲ್ಲಿ ವಿದ್ಯಾರ್ಥಿಗಳು ಬಲಿಪಶು ಆಗುತ್ತಾರೆ.

**ಶ್ರೀ ಪಟೇಲ್ ಶಿವರಾಂ:–** ಕಾಲೇಜಿನಲ್ಲಿರುವ ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲನೆಯನ್ನು ಮಾಡಲಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಈಗಾಗಲೇ ಸಮಸ್ಯೆ ಉದ್ಭವ ಆಗಿದೆ, ಅದನ್ನು ಪರಿಹರಿಸುವ ಕೆಲಸವನ್ನು ಸರ್ಕಾರ ಮಾಡುತ್ತದೆ.

**ಶ್ರೀ ಯಂ.ಸಿ. ನಾಣಯ್ಯ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಗಳೇ, ನಾನು ಹೇಳುವುದೇನೆಂದರೆ ವಿಷಯದ ಗಾಂಭೀರ್ಯವನ್ನು ನಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಇವೆಲ್ಲವೂ ಸರ್ಕಾರಿ ಪಶುವೈದ್ಯಕೀಯ ಕಾಲೇಜುಗಳು, ರಾಜ್ಯದ ಮೂರು ಸ್ಥಳಗಳಲ್ಲಿ ಸರ್ಕಾರಿ ಪಶುವೈದ್ಯಕೀಯ ಕಾಲೇಜುಗಳಿವೆ. ಇವತ್ತಿಗೆ ಕರ್ನಾಟಕ ರಾಜ್ಯದಲ್ಲಿ ಸುಮಾರು 1500 ಕ್ಕಿಂತಲೂ ಹೆಚ್ಚು ಪಶು ವೈದ್ಯರ ಹುದ್ದೆಗಳು ಖಾಲಿಯಿವೆ. ಶೇಕಡ 25ರಷ್ಟು ವೈದ್ಯರು ಮಾತ್ರ ಪಶು ವೈದ್ಯಕೀಯ ಆಸ್ಪತ್ರೆಗಳಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಅದರಲ್ಲಿ ಕೆಲವರು ಅಲ್ಲಿ ಕೆಲಸ ಮಾಡಲು ಇಚ್ಛಿಸದೇ ನಿಯೋಜನೆ ಮೇರೆಗೆ ಬೇರೆ

ಕಡೆಗಳಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಈ ವಿದ್ಯಾರ್ಥಿಗಳು 2012ರಲ್ಲಿ ಪರೀಕ್ಷೆಯನ್ನು ಕಟ್ಟಿ ಪಾಸ್ ಮಾಡಿದ್ದಾರೆ. ಇವತ್ತು ಈ ಸರ್ಟಿಫಿಕೇಟ್ ಸಿಗಲಿಲ್ಲ ಎನ್ನುವ ಪರಿಸ್ಥಿತಿ ಉಂಟಾದಲ್ಲಿ ಸಾಮಾನ್ಯವಾಗಿ ರಾಜಕಾರಣಿಗಳು ಮತ್ತು ಮಂತ್ರಿಗಳ ಮೇಲೆ ಗೂಬೆಯನ್ನು ಕೂರಿಸುತ್ತಾರೆ. ಈ ಸಂದರ್ಭದಲ್ಲಿ ಅಧಿಕಾರಿಗಳು ಏನನ್ನು ಮಾಡುತ್ತಿದ್ದರು, ಅವರಿಗೆ ಇದರ ಬಗ್ಗೆ ತಿಳಿವಳಿಕೆ ಇರಲಿಲ್ಲವೇ? ಇದಕ್ಕೋಸ್ಕರವೇ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಮೇಲೆ ಅವರು ಪರೀಕ್ಷೆಗಳನ್ನು ಸಹ ನಡೆಸಿದ್ದಾರೆ. ಈ ಕಾಲೇಜುಗಳಿಗೆ ಮಾನ್ಯತೆಯನ್ನು ನೀಡದಿರುವ ಸಂದರ್ಭದಲ್ಲಿ ಇವರು ಪರೀಕ್ಷೆಗಳನ್ನು ಹೇಗೆ ನಡೆಸಿದ್ದಾರೆ? ಆ ಸಂದರ್ಭದಲ್ಲಿ ಸರ್ಕಾರ, 'ನೀವು ಪರೀಕ್ಷೆಗಳನ್ನು ನಡೆಸಿ, ಅಷ್ಟರಲ್ಲಿ ನಾವು ಮಾನ್ಯತೆಯನ್ನು ತರುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ' ಎಂದು ಹೇಳಿತ್ತು. ಇದರ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದವರು ಪರೀಕ್ಷೆಗಳನ್ನು ನಡೆಸಿದರು. ಈ ಸಂದರ್ಭದಲ್ಲಿ ಮಾನ್ಯತೆಯನ್ನು ಪಡೆಯುವ ಸಲುವಾಗಿ ಅಧಿಕಾರಿಗಳು ದೆಹಲಿಗೆ ಹೋಗುವ ಪರಿಸ್ಥಿತಿ ನಿರ್ಮಾಣ ಆಗಬೇಕೇ ಅಥವಾ ಕೇವಲ ಒಂದು ಪತ್ರವನ್ನು ಇಲ್ಲಿಂದ ಕಳುಹಿಸುವುದರ ಮೂಲಕ ಮಾಡಬೇಕೇ, ಒಂದು ಪತ್ರ ಮೇಲಕ್ಕೆ ಹೋಗಬೇಕಾದರೆ 3 ತಿಂಗಳ ಕಾಲಾವಕಾಶ ಬೇಕಾಗುತ್ತದೆ. ಇಂತಹ ಪರಿಸ್ಥಿತಿಗಳನ್ನು ಸರ್ಕಾರದಲ್ಲಿರುವ ಅಧಿಕಾರಿಗಳು ನಿರ್ಮಾಣ ಮಾಡುವುದಾದರೆ ನಾವು ಎಲ್ಲಿಗೆ ಹೋಗಿ ತಲುಪುತ್ತೇವೆ ಎನ್ನುವುದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗುತ್ತದೆ. Don't you think it? It reflects on the very Government itself. ಆದ್ದರಿಂದ ನಾನು ಹೇಳುವುದೇನೆಂದರೆ, ಸಚಿವರಾದ ಮಾನ್ಯ ಜಯಚಂದ್ರರವರು ಇದರ ಬಗ್ಗೆ ಅಧ್ಯಯನ ಮಾಡಿರಬಹುದು ಮತ್ತು ಅಧಿಕಾರಿಗಳ ಜೊತೆಯಲ್ಲಿಯೂ ಸಹ ವ್ಯಾಪಕವಾಗಿ ಚರ್ಚೆ ನಡೆಸಿರಬಹುದು. If he is available in the afternoon, let him come to this House. ಏಕೆಂದರೆ, ಇದು ನಮ್ಮ ಮಕ್ಕಳ ಭವಿಷ್ಯದ ಪ್ರಶ್ನೆ. ಈಗಾಗಲೇ ಇಲಾಖೆಯವರು 300–400 ಹುದ್ದೆಗಳಿಗೆ ಅರ್ಜಿಯನ್ನು ಕರೆದಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಟಿಫಿಕೇಟ್ ಹೊಂದಿಲ್ಲದ ಇಂತಹ ಮಕ್ಕಳ ಪರಿಸ್ಥಿತಿ ಏನಾಗಬೇಕು? ಸರ್ಕಾರ retrospective effect ಆಗಿ ಮಾನ್ಯತೆಯನ್ನು ನೀಡಬೇಕಲ್ಲವೇ? ಸರ್ಕಾರ retrospective effect

ಕೊಡುವುದಿಲ್ಲವೆಂದರೆ then what is the position? Sir, this is such a serious matter. Don't take it very lightly. Ultimately, decision will have to be taken by the Central Agriculture Minister. ಕೇಂದ್ರ ಕೃಷಿ ಸಚಿವರ ಒಂದು ಪರಿಷತ್ತು ಇದೆ, it is an independent body. ನಮ್ಮಲ್ಲಿ MCA DCA ಮತ್ತು –Sir, in the afternoon, kindly ask the Minister to come here, let him answer on behalf of the Government. What are the Secretaries doing? Why did they not go to Delhi? Why did they not meet the Secretaries at the Central level? ಈ ರೀತಿಯ ಕೆಲಸಗಳನ್ನು ಮಾಡದೆ, ಬಹಳ ಸುಲಭವಾಗಿ ಮಂತ್ರಿಗಳು ಮತ್ತು ಸರ್ಕಾರದ ಮೇಲೆ ಇದನ್ನು ಹಾಕುತ್ತಾರೆ. Sir, this is the matter we should be looked into and I want a high level enquiry to be ordered about this wide such a thing has taken place now. Let Mr.Jayachandra come and answer this.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗಾಗಲೇ ಬೀದರ್‌ನಲ್ಲಿರುವ ಪಶುವೈದ್ಯಕೀಯ ಕಾಲೇಜಿಗೆ ಮಾನ್ಯತೆ ದೊರೆತಿದೆ. ಆದರೆ ಹಾಸನ ಮತ್ತು ಶಿವಮೊಗ್ಗದ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಹೊಂದಿಲ್ಲದ ಕಾರಣ Veterinary Council of India ನಿಂದ ಮಾನ್ಯತೆ ದೊರೆತಿಲ್ಲ. ಇದಕ್ಕೆ ಅವರು objection ಮಾಡಿದ್ದಾರೆ. ಈ ವಿಚಾರದ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ರಾಜಸ್ಥಾನದವರ ಒಂದು ರಿಟ್ ಪಿಟಿಷನ್ ಪೆಂಡಿಂಗ್ ಇದೆ. ಅದಕ್ಕೆ ಈ ವಿಚಾರವನ್ನು ಲಿಂಕ್ ಮಾಡಿದ್ದಾರೆ, Veterinary Council of India ನವರು ರಾಜಸ್ಥಾನದವರು ಮೂವ್ ಮಾಡಿರುವ ಕೇಸಿನ ಮೇಲೆ ತೀರ್ಪು ಬರುವ ತನಕ ಇದನ್ನು ಸಹ ತಡೆಹಿಡಿಯುವ ಒಂದು ವಿಚಾರವಿದೆ. ಆ ವಿಚಾರವನ್ನು ನಾನು ಸದನದ ಗಮನಕ್ಕೆ ತರಬೇಕಾಗುತ್ತದೆ. ಇನ್ನೊಂದು ತಿಂಗಳಿನಲ್ಲಿ ಇದರ ನಿರ್ಧಾರ ಆಗುವುದಿದೆ. It is due for judgement ಇದನ್ನು ಲಿಂಕ್ ಮಾಡಿದ್ದಾರೆ. ಆದರೂ ಸಹ ಮಕ್ಕಳ ಭವಿಷ್ಯದ ಬಗ್ಗೆ ಚಿಂತನೆಯನ್ನು ಮಾಡಬೇಕಾಗುತ್ತದೆ. ಈಗ ಅರ್ಜಿ ಕರೆದಿರುವ ಹುದ್ದೆಗಳಲ್ಲಿ 71 ಜನ ಹಾಸನ ಮತ್ತು ಶಿವಮೊಗ್ಗದ ವಿದ್ಯಾರ್ಥಿಗಳಿಗೆ ಅರ್ಜಿಯನ್ನು ಸಲ್ಲಿಸಲು

ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಮಾನ್ಯತೆ ಸಿಗದಿದ್ದರೂ ಸಹ process ಮಾಡುವುದನ್ನು ಡಿಲೇ ಮಾಡಿದ್ದೆವು. ಅದರ registration certificate at the time of appointment, produce ಮಾಡಲಿಕ್ಕೂ ಸಹ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಈಗ ಅವರಿಗೆ ಅರ್ಜಿಸಲ್ಲಿಸಲು ತೊಂದರೆ ಇಲ್ಲ. Already, 71 graduates from Hassan and Shimoga have applied.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ, ಇದರಲ್ಲಿ ಒಂದು ಟೆಕ್ನಿಕಲ್ ಪ್ರಾಬ್ಲಂ ಇದೆ. ಯಾವುದೇ ಹುದ್ದೆಗೆ ಅರ್ಜಿ ಕರೆದಾಗ ಅರ್ಜಿ ಸಲ್ಲಿಸತಕ್ಕ ದಿನಾಂಕದಂದು ಅಭ್ಯರ್ಥಿಗಳು ಅರ್ಹ ವಿದ್ಯಾರ್ಹತೆಯನ್ನು ಹೊಂದಿರಬೇಕು. ನಾಳೆ ಯಾರಾದರೂ ಈ ಬಗ್ಗೆ ಕೋರ್ಟಿಗೆ ಹೋದಲ್ಲಿ ತೊಂದರೆಯಾಗುತ್ತದೆ. ಇದಕ್ಕೆ ಸಚಿವರು ಉತ್ತರವನ್ನು ನೀಡಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ನೀವು ಆ ವಿದ್ಯಾರ್ಥಿಗಳ ಭವಿಷ್ಯತ್ತಿನ ಬಗ್ಗೆ ಚಿಂತನೆ ಮಾಡುತ್ತಿಲ್ಲ. Anything may happen. We cannot predict.

**ಶ್ರೀ ಬಸವರಾಜ ಹೊರಟ್ಟಿ:–** ಈ ವಿಚಾರ ಕೋರ್ಟಿಗೆ ಹೋದಲ್ಲಿ ಸರಿಯಾಗುವುದಿಲ್ಲ, ಏಕೆಂದರೆ, ನಮ್ಮ ಬಳಿ ಈ ರೀತಿಯ ಹಲವು ತೀರ್ಪುಗಳಿವೆ, ಅವುಗಳನ್ನು ನೋಡಿದಾಗ ಇದು ಸರಿಯಾಗುವುದಿಲ್ಲ ಎನಿಸುತ್ತದೆ. ಹಾಗಾಗಿ ಈ ವಿಚಾರದಲ್ಲಿ ಯಾವ ತಿದ್ದುಪಡಿಯನ್ನು ತರಲಾಗುತ್ತದೆ ಎನ್ನುವುದನ್ನು ಸದನದ ಗಮನಕ್ಕೆ ತರಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಆಯ್ಕೆ ಪ್ರಕ್ರಿಯೆ ಮುಗಿದ ಮೇಲೂ ಸಹ ಯಾರು ಬೇಕಾದರೂ ಕೋರ್ಟಿಗೆ ಹೋಗಬಹುದು. It is the fundamental right of every citizen. ಒಂದು ಸಣ್ಣ ವಿಚಾರದ ಬಗ್ಗೆಯೂ ಕೋರ್ಟಿಗೆ ಹೋಗಬಹುದು.

(ಗೊಂದಲ)

**ಸಭಾಪತಿಯವರು:–** ಮೊದಲು ಸಚಿವರು ಏನು ಉತ್ತರ ನೀಡುತ್ತಿದ್ದಾರೆ ಎನ್ನುವುದನ್ನು ನೋಡಿ, ನಂತರ ನಾನು ನಿಮಗೆ ಅವಕಾಶಗಳನ್ನು ನೀಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, recruitment ಕರೆದಾಗ ಕ್ವಾಲಿಫೈಡ್ ಇಲ್ಲದಿದ್ದರೆ ಅರ್ಜಿ ಹೇಗೆ ಹಾಕುತ್ತಾರೆ? ಇದು ತಾಂತ್ರಿಕ ಸಮಸ್ಯೆಯಾಗಿದೆ. ಆದ್ದರಿಂದ ಅವರು ಅಪ್ಲೈ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಅದರ ಬಗ್ಗೆ ಚರ್ಚೆ ಮಾಡಲು ಇದೇನು ನ್ಯಾಯಾಲಯವೇ? Is it a Court of law?

**ಡಾ॥ ಎ.ಹೆಚ್.ಶಿವಯೋಗಿಸ್ವಾಮಿ:–** ಯಾವುದೇ ಒಂದು ಹುದ್ದೆಗೆ ಅರ್ಜಿ ಹಾಕಬೇಕಾದರೆ, ಡಿಗ್ರಿ ಸರ್ಟಿಫಿಕೇಟ್ ಇರಲೇಬೇಕು. ಅವರು ತಿಳಿದುಕೊಂಡ ಹಾಗೆ ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮೊದಲು ವಿಷಯವನ್ನು ಕೇಳಲಿ, ನಂತರ ಊಹಾಪೋಹ, ಹೀಗಾದರೆ ಆ ರೀತಿಯಾಗುತ್ತದೆ ಇತ್ಯಾದಿ ವಿಷಯಗಳನ್ನು ಹೇಳಲಿ. ಮಾನ್ಯ ಸಭಾಪತಿಯವರು ಅವರ ಭವಿಷ್ಯದ ಬಗ್ಗೆ ಹೇಳಿದರು. ಅವರಿಗೆ ತೊಂದರೆ ಆಗಬಾರದು ಎಂಬ ಉದ್ದೇಶದಿಂದ ಆಯ್ಕೆ ಪ್ರಕ್ರಿಯೆಯನ್ನು drag on ಮಾಡಿ, recognize ಆದ ನಂತರ, at the time of appointment and at the time of joining service ಸಂದರ್ಭದಲ್ಲಿ ಡಿಗ್ರಿ ಸರ್ಟಿಫಿಕೇಟ್ ಕೊಡಬೇಕೆಂಬ ವಿಚಾರ ಇದೆ. ನಾವು ಇದರ ಬಗ್ಗೆ ಚಿಂತನೆ ಮಾಡಿದ್ದು, ಈ ಅವಾಂತರಗಳೆಲ್ಲಾ ಏಕೆ ಆದವು? ಇದಕ್ಕೆಲ್ಲಾ ಯಾರು ಕಾರಣ? ನಿನ್ನೆ ಆಯ್ಕೆಯಾದ ಕಾಂಗ್ರೆಸ್ ಸರ್ಕಾರ ಕಾರಣವೇ? ಹಿಂದೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಅವರಿಗೆ ಏನಾಗಿತ್ತು? ವಿದ್ಯಾರ್ಥಿಗಳ ಭವಿಷ್ಯತ್ತಿನ ಬಗ್ಗೆ ಬಹಳಷ್ಟು ಮಾತನಾಡುವವರು ಏಕೆ ಮಾಡಲಿಲ್ಲ? Veterinary Council of Indiaರವರಿಂದ recognise ಆಗುವಂತೆ ಮತ್ತು ಅವರು ಕೇಳಿದಂತಹ formalities ಗಳನ್ನು ಏಕೆ ಪೂರೈಸಲಿಲ್ಲ? You are resposible. ಈ ವಿದ್ಯಾರ್ಥಿಗಳಿಗೆ ಏನಾದರೂ ಅನ್ಯಾಯವಾದರೆ ಹಿಂದೆ ಇದ್ದ ಅವರೇ ಜವಾಬ್ದಾರರಾಗುತ್ತಾರೆ. ಅವರು ಮಾಡುವುದನ್ನೆಲ್ಲಾ ಮಾಡಿ ನಮ್ಮ ಕೊರಳಿಗೆ ಹಾಕಿದರು.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಅವಕಾಶ ಕೊಡುತ್ತೇನೆ. ಇದು ತಾಂತ್ರಿಕವಾಗಿರುವ ವಿಚಿತ್ರ ಸನ್ನಿವೇಶವಾಗಿದ್ದು, ಈ ವಿಚಾರದ ಬಗ್ಗೆ ಗೊತ್ತಿರುವುದರಿಂದ ಸಮಾಧಾನದಿಂದ ಕುಳಿತಿದ್ದೇನೆ. ಇದರಲ್ಲಿ ತಪ್ಪು ಯಾರದ್ದು ಎಂದು ಹುಡುಕುತ್ತಾ ಹೋದರೆ ಮಕ್ಕಳ ಗತಿ ಏನು? ತಪ್ಪು ಆಗಿ ಹೋಗಿದೆ. Government is Government. ತಪ್ಪು ಹುಡುಕಿ ಶಿಕ್ಷೆ ಕೊಡುವ ಬಗ್ಗೆ ನಂತರ ಚರ್ಚೆ ಮಾಡೋಣ. ಮಕ್ಕಳ ಭವಿಷ್ಯದ ಬಗ್ಗೆ ಚಿಂತೆ ಇರುವ ಕಾರಣಕ್ಕೆ ನಾನು ಮಾನ್ಯ ಸದಸ್ಯರಿಗೆ ಅವಕಾಶ ಕೊಟ್ಟೆ. ಮಾನ್ಯ ಹೊರಟ್ಟಿಯವರು ಸಮಂಜಸವಾದ ವಿಷಯವನ್ನು ಪ್ರಸ್ತಾಪಿಸಿದ್ದು, ಇವತ್ತು ಅಪ್ಲಿಕೇಷನ್ ಕರೆದು ಡಿಗ್ರಿ ಸರ್ಟಿಫಿಕೇಟ್ ಇಲ್ಲದೇ ಇರುವವರು ಅರ್ಜಿ ಹಾಕಿದರೆ ಬಿದ್ದು ಹೋಗುತ್ತದೆ ಎಂದು ಹೇಳಿದರು. ಇದಕ್ಕೆ ಮಾನ್ಯ ಸದಸ್ಯರಾದ ವೀರಣ್ಣ ಮತ್ತಿಕಟ್ಟಿಯವರು ಸಹಮತ ವ್ಯಕ್ತ ಮಾಡಿದ್ದಾರೆ. ಅದು ಹಾಗಾಗುವುದಿಲ್ಲ. ಸರ್ಕಾರವನ್ನು ಸರಿಯಾದ ರೀತಿಯಲ್ಲಿ ಕೇಳಬೇಕಾಗಿದ್ದು, ಇದಕ್ಕೆ ಅಧಿಕಾರಿಗಳು ಸ್ಪಂದಿಸಬೇಕಾಗುತ್ತದೆ. ಇದಕ್ಕೆ ಪರಿಹಾರ ಏನು ಎಂದು ಸಭಾಪತಿಯಾಗಿ ನಾನು ಹೇಳಬಾರದು. ಆದರೆ ವಿಷಯ ಗೊತ್ತಿರುವುದರಿಂದ ಹೇಳುತ್ತೇನೆ, ನೇಮಕಾತಿ ಪ್ರಕ್ರಿಯೆಯನ್ನೇ ಮುಂದಕ್ಕೆ ಹಾಕಬೇಕಾಗುತ್ತದೆ.

**ಶ್ರೀ ಬಿ.ರಾಮಕೃಷ್ಣ:–** ಕಾಲೇಜಿನ ಮಾನ್ಯತೆ ರದ್ದಾದ ಮೇಲೆ ಮಕ್ಕಳನ್ನು ಬೇರೆ ಕಾಲೇಜಿಗೆ ಸೇರಿಸಬಹುದಾಗಿತ್ತು ಮತ್ತು ಪರೀಕ್ಷೆ ಬರೆಯಲು ಅನುಕೂಲ ಮಾಡಬಹುದಾಗಿತ್ತು. ಆದರೆ, ಕಾಲೇಜಿನ ಮಾನ್ಯತೆಯನ್ನು ರದ್ದು ಮಾಡಿದ ಮೇಲೆ ಪರೀಕ್ಷೆಗೆ ಏಕೆ ಕೂರಿಸಿದರು ಎನ್ನುವುದು ಬಹಳ ಮುಖ್ಯ. ಇದು ಬಹಳ ತಾಂತ್ರಿಕತೆಯ ಅಂಶವಾಗಿದ್ದು, ಕಾನೂನು ತಜ್ಞರ ಜೊತೆ ಮಾತನಾಡಿ ಡಿಗ್ರಿ ಕೊಡುವ ವ್ಯವಸ್ಥೆ ಮಾಡಬೇಕು.

**ಸಭಾಪತಿಯವರು:–** ಈ ಸಮಸ್ಯೆ ತಾವು ಹೇಳಿದಂತೆ ಇಲ್ಲ. ಇದು ಬೇರೆ ರೀತಿ ಇದೆ. ನನಗೂ ಸ್ವಲ್ಪ ವಿಷಯ ಗೊತ್ತಿದೆ ಮತ್ತು ಇದರಲ್ಲಿ ಮಕ್ಕಳ ಭವಿಷ್ಯ ಅಡಗಿದೆ. ಇದರಿಂದ ಮಕ್ಕಳಿಗೆ ತಕ್ಷಣವೇ ತೊಂದರೆಯಾಗುತ್ತದೆ. ಕಾಲೇಜಿನ ಮಾನ್ಯತೆಯನ್ನು ರದ್ದು ಮಾಡಿಲ್ಲ. ಆದರೆ, ಮಾನ್ಯತೆಯನ್ನು ಕೊಟ್ಟೇ ಇಲ್ಲ. ಈಗ ಇದಕ್ಕೆ ಸರ್ಕಾರ ಮತ್ತು ಸದನ ಸೇರಿ ಹಾಗೂ ಹಿರಿಯರ

ಅನುಭವಗಳನ್ನು ಇಟ್ಟುಕೊಂಡು ಮಕ್ಕಳ ಭವಿಷ್ಯಕ್ಕೆ ತೊಂದರೆಯಾಗದಂತೆ ದಾರಿ ಹುಡುಕಬೇಕು. ನಂತರ ತಪ್ಪು ಮಾಡಿರುವವರಿಗೆ ಶಿಕ್ಷೆ ಕೊಡುವ ಬಗ್ಗೆ ಇನ್ನೊಮ್ಮೆ ಚರ್ಚೆ ಮಾಡೋಣ. ಕಾಲೇಜಿಗೆ ಮಾನ್ಯತೆ ಸಿಕ್ಕಿಲ್ಲ ಎಂದು ಮಾನ್ಯತೆಯನ್ನು ಕೊಡಿಸುವ ಬಗ್ಗೆ ನಾನು ಹಿಂದಿನ ಹಾಗೂ ಈಗಿನ ಮಂತ್ರಿಗಳ ಜೊತೆ ವೈಯಕ್ತಿಕವಾಗಿ ಸಭಾಪತಿಯಾಗಿ ಮಾತನಾಡಿದ್ದೇನೆ. ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಇದರ ಬಗ್ಗೆ ನಾನೂ ಸ್ವಲ್ಪ ಪ್ರಯತ್ನ ಮಾಡಿದ್ದೇನೆ. ನನಗೆ ಮಕ್ಕಳ ಗತಿ ಏನು ಎಂಬುದರ ಬಗ್ಗೆ ಆಸಕ್ತಿ ಇದೆ. ಅದಕ್ಕಾಗಿ ದಾರಿ ಹುಡುಕಬೇಕು. ನಾನು ಮಾನ್ಯ ಮಂತ್ರಿಗಳಿಗೆ ಕೂಡಲೇ ದೆಹಲಿಗೆ ಹೋಗಿ ಮಾನ್ಯತೆಯನ್ನು ತೆಗೆದುಕೊಂಡು ಬರಬೇಕೆಂದು ಹೇಳಿದೆ. ಅದಕ್ಕೆ ಅವರು, 'ಹೋಗುತ್ತೇನೆ' ಎಂದು ಹೇಳಿದ್ದಾರೆ. ಸದನ ನಡೆಯುತ್ತಿದ್ದು, ಈಗ ಹೋಗಲು ತಯಾರಿದ್ದಾರೋ ಇಲ್ಲವೋ ಗೊತ್ತಿಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):–** ನಮ್ಮೆಲ್ಲರಿಗೂ ತಿಳಿದಿರುವಂತೆ ಮಾನ್ಯತೆಯನ್ನು ಪಡೆಯುವ ಕೆಲಸ ಹಿಂದೆ ಆಗಬೇಕಾಗಿತ್ತು. ಅದು ಆಗಲಿಲ್ಲ. ಅದರಿಂದಾಗಿ ಮಕ್ಕಳಿಗೆ ತೊಂದರೆಯಾಗುತ್ತದೆ. ಅವರಿಗೆ ಆಮೇಲೆ ಅವಕಾಶ ಕೊಡುತ್ತೇನೆ ಎಂದರೆ ನಡೆಯುವುದಿಲ್ಲ. ಅದು ಕಾನೂನು ಬಾಹಿರವಾಗುತ್ತದೆ. ಆದ್ದರಿಂದ ಸರ್ಕಾರವು ಇದನ್ನು ಯುದ್ಧೋಪಾದಿಯಲ್ಲಿ ಮಾಡಬೇಕು. ಸಂಬಂಧಪಟ್ಟ ಮಂತ್ರಿ ಮತ್ತು ಅಧಿಕಾರಿಗಳು ದೆಹಲಿಗೆ ಹೋಗಿ, ಸಂಬಂಧಪಟ್ಟ Animal Husbandry Council ಅನ್ನು ಭೇಟಿಯಾಗಿ ಮತ್ತು ಒತ್ತಡ ತಂದು ಈ ಕೆಲಸವನ್ನು ಮಾಡಬೇಕು. ಅದು ಪ್ರಾರಂಭಗೊಂಡ ದಿನದಿಂದಲೇ recognition ಕೊಡಬೇಕು. ಅಂದಾಗ ಮಾತ್ರ ಡಿಗ್ರಿ ಕೊಡಲು ಆಗುತ್ತದೆ. ಮಾನ್ಯ ಸಭಾಪತಿಯವರು ಹೇಳಿದಂತೆ, ಮಾನ್ಯ ಸಚಿವರು ಹಾಗೂ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಒಪ್ಪಿಗೆ ತರಬೇಕು ಹಾಗೂ ಅಲ್ಲಿಯವರೆಗೂ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸಿ, ಹೊಸ ನೋಟಿಫಿಕೇಷನ್ ಮಾಡಬೇಕು. ಇಲ್ಲದಿದ್ದರೆ ಇದು ಆಗುವುದಿಲ್ಲ. ಇದು ಸತ್ಯ.

**ಶ್ರೀ ವೈ.ಎ. ನಾರಾಯಣಸ್ವಾಮಿ:–** ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಮಂತ್ರಿಮಂಡಲದಲ್ಲಿ ಇರಬೇಕಾಗಿತ್ತು.

**ಸಭಾಪತಿಯವರು:–** ಅವರು ಮಾನ್ಯ ಸದಸ್ಯರಾಗಿ ಸಲಹೆಯನ್ನು ಕೊಟ್ಟಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ನಾನು ಸದಸ್ಯನಾಗಿ ಸಲಹೆಯನ್ನು ಕೊಟ್ಟಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ವಿಶ್ವವಿದ್ಯಾಲಯದವರು ಡಿಗ್ರಿ ಸರ್ಟಿಫಿಕೇಟ್ ಕೊಟ್ಟಿದ್ದಾರೆ. Degree Certificates have been issued by the concerned University. ಆದರೆ, Veterinary Council of India ನವರು recognition ಕೊಟ್ಟಿಲ್ಲ. That process is delayed. ಹಿರಿಯ ಸದಸ್ಯರಾದ ಶ್ರೀ ಹೊರಟ್ಟಿಯವರು ಕೋರ್ಟು-ಕಛೇರಿಗಳ ಬಗ್ಗೆ ಪ್ರಸ್ತಾಪಿಸಿದರು. ಈಗಾಗಲೇ ನೋಟಿಫಿಕೇಷನ್‌ಗೆ corrigendum issue ಮಾಡಿದ್ದಾರೆ. After getting the recognition by the Veterinary Council of India to the concerned University, registration certificate will be issued. Such registration certificate is to be produced at the time of appointment ಈಗ corrigendum ಮಾಡಿದ್ದಾರೆ. ಈ ಅವಸರ ಪ್ರವೃತ್ತಿ ಬೇಡ. ಹಾಸನ, ಶಿವಮೊಗ್ಗ ಕಾಲೇಜಿನ 71 ಜನರಿಗೆ ಡಿಗ್ರಿ ಸರ್ಟಿಫಿಕೇಟ್ ಇದೆ. ಆದರೆ registration certificate ಯಾವಾಗ ಸಿಗುತ್ತದೆ? Veterinary Council of India ನವರು recognize ಮಾಡಿದ ಕೂಡಲೇ ಬರುತ್ತದೆ. Recognition incur ಮಾಡಿಲ್ಲ. Because of some lacunas, it has been delayed. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಇನ್ನೂ ಮೂರುವರೆ ದಿವಸ ಅಧಿವೇಶನ ಇದೆ. ನಂತರ ಸಂಬಂಧಪಟ್ಟ ಸಚಿವರು ದೆಹಲಿಗೆ ಹೋಗಿ, ವಿದ್ಯಾರ್ಥಿಗಳ ಭವಿಷ್ಯತ್ತಿನ ದೃಷ್ಟಿಯಿಂದ ಸಾಕಷ್ಟು ಕಾಳಜಿಪೂರ್ವಕವಾಗಿ ಹಿಂದೆ ಆಗಿರುವ ಅವಾಂತರಗಳನ್ನು ಮರೆತು, ವಿದ್ಯಾರ್ಥಿಗಳ ಭವಿಷ್ಯತ್ತಿಗೆ ತೊಂದರೆಯಾಗದಂತೆ ಪರಿಹಾರ ಕಂಡುಕೊಳ್ಳಲು ಕ್ರಮ ಕೈಗೊಳ್ಳುತ್ತೇವೆ.

ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ 391 ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅದರಲ್ಲಿ 71 ಜನ Bachelor of

Veterinary Science (BVSc) ಪದವೀಧರರು ಅರ್ಜಿ ಹಾಕಿಕೊಂಡಿದ್ದಾರೆ. ಅವರು ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ನೀಡುವುದು ತಡವಾದರೂ ಸಹ selection process will go on. ಆ ಕಾಲೇಜುಗಳಿಗೆ ಮಾನ್ಯತೆ ನೀಡಿದ ಮೇಲೆ ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ಬರುತ್ತದೆ. ಆಗ ಅದನ್ನು ಪರಿಗಣಿಸಲಾಗುತ್ತದೆ. ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ನಾವು ಸಾಕಷ್ಟು ಚಿಂತನೆ ಮಾಡುತ್ತೇವೆ. ಅವರ ಭವಿಷ್ಯಕ್ಕೆ ತೊಂದರೆ ಆಗದೇ ಇರುವಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುತ್ತೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಈ ರೀತಿಯಾದ ಗೊಂದಲಗಳು ಬೇಡ. ಮಾನ್ಯತೆ ಪಡೆದು, ರಿಜಿಸ್ಟ್ರೇಶನ್ ಸರ್ಟಿಫಿಕೇಟ್ ಬರುವವರೆಗೆ ಸರ್ಕಾರ ನೇಮಕಾತಿ ಪ್ರಕ್ರಿಯೆಗೆ ಸ್ಟೇ ತರಲಿ. ಹೀಗೆ ಮಾಡುವುದರಿಂದ ಸರ್ಕಾರಕ್ಕೆ ಆಗುವಂತಹ ತೊಂದರೆ ಏನು ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಸುಮಾರು 750 ಹುದ್ದೆಗಳು ಖಾಲಿ ಇವೆ. ಅವುಗಳಲ್ಲಿ 391 ಹುದ್ದೆಗಳ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅದಕ್ಕೆ ಸುಮಾರು 250ರಷ್ಟು ಅರ್ಜಿಗಳು ಮಾತ್ರ ಬಂದಿವೆ. ಈಗಾಗಲೇ ಖಾಲಿ ಇರುವ 750 ಹುದ್ದೆಗಳನ್ನು ತುಂಬಬೇಕಾಗಿರುವಂತಹ ಆತಂಕಕಾರಿ ಬೆಳವಣಿಗೆ ನಮ್ಮ ರಾಜ್ಯದಲ್ಲಿದೆ. ಆದಷ್ಟು ಬೇಗ ಮಾನ್ಯತೆಯನ್ನು ಪಡೆದುಕೊಂಡು ನೇಮಕಾತಿ ಪ್ರಕ್ರಿಯೆಯನ್ನು ಚಾಲನೆಯಲ್ಲಿ ಇಡುತ್ತೇವೆ. ಸ್ಟೇ ತರುವುದು ಅಥವಾ ಈ ಪ್ರಕ್ರಿಯೆಯನ್ನು ಮಂದಗತಿಯಲ್ಲಿ ಮಾಡುವುದು ಎಂದರೆ ಅದರ ಅರ್ಥವೇನು? We should not dragon this selection process. ಏಕೆಂದರೆ, ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕು ಮತ್ತು ಅವರ ಭವಿಷ್ಯ ಹಾಳಾಗಬಾರದು ಎನ್ನುವುದು ನಮ್ಮ ಉದ್ದೇಶವಾಗಿದೆ. ಈ ಪಶು ವೈದ್ಯಕೀಯ ಕಾಲೇಜಿನಲ್ಲಿ ಪದವಿಯನ್ನು ಪಡೆದುಕೊಂಡಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗದಿರುವಂತೆ ಭಾರತೀಯ ಪಶು ವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆಯನ್ನು ಪಡೆದು Selection process on ಇಡುತ್ತೇವೆ. Dragon ಮಾಡುತ್ತೇವೆಂದರೆ ಏನು ಇದರ ಅರ್ಥ?

It is as good as delaying. ವಿದ್ಯಾರ್ಥಿಗಳ ಭವಿಷ್ಯ ಹಾಳಾಗಬಾರದು. ಅವರಿಗೆ ತೊಂದರೆ ಆಗದೇ ಇರುವ ರೀತಿಯಲ್ಲಿ ನಮ್ಮ ಸರ್ಕಾರ ನೋಡಿಕೊಳ್ಳುತ್ತದೆ.

**ಸಭಾಪತಿಯವರು:–** ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆ ಆಗದೇ ಇರುವ ಹಾಗೆ ಮತ್ತು ಅನ್ಯಾಯ ಆಗದೇ ಇರುವ ಹಾಗೆ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂದು ಮಾನ್ಯ ಸಭಾ ನಾಯಕರು ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ನಾವು ಅದಕ್ಕೆ ಬದ್ಧರಾಗಿದ್ದೇವೆ. It is binding on us and we will look into the welfare of those students.

**ಶ್ರೀ ಬಸವರಾಜ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಉತ್ತರ ನೀಡುವ ಪದ್ಧತಿಯೇ ಇದು? 750 ಹುದ್ದೆಗಳು ಖಾಲಿ ಇವೆ, ಅದರಲ್ಲಿ 391 ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎನ್ನುವಂತಹ ಉತ್ತರ ನೀಡುವುದು ಸರ್ಕಾರದ ಬದ್ಧತೆಯನ್ನು ತೋರಿಸುತ್ತದೆಯೇ? ನೇಮಕಾತಿ ಪ್ರಕ್ರಿಯೆಯಲ್ಲಿ ಇರುವಂತಹ ತಾಂತ್ರಿಕ ಸಮಸ್ಯೆಯನ್ನು ನಾವು ಹೇಳುತ್ತಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, We have solved the technical problem and we have issued the corrigendum. Registration Certificate can be delayed; it should be produced at the time of appointment. We have taken up a good step.

**ಶ್ರೀ ಬಸವರಾಜ ಹೊರಟ್ಟಿ:–** ಸರ್ಕಾರದ ನೇಮಕಾತಿ ಪ್ರಕ್ರಿಯೆಗೆ ಮೊದಲು ಸ್ಟೇ ತರದೇ ಈ ರೀತಿ ಮಾಡುವುದು ತಪ್ಪು. ಮೊದಲು ನೇಮಕಾತಿ ಪ್ರಕ್ರಿಯೆಗೆ ಸ್ಟೇ ತರಬೇಕೆನ್ನುವುದು ನಮ್ಮ ಸಲಹೆಯಾಗಿದೆ.

**ಸಭಾಪತಿಯವರು:–** ಈ ವಿಷಯದ ಮೇಲಿನ ಚರ್ಚೆಯನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಈಗ ಸದನವನ್ನು ಭೋಜನ ವಿರಾಮಕ್ಕಾಗಿ 3.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಭೋಜನ ವಿರಾಮಕ್ಕಾಗಿ ಅಪರಾಹ್ನ 2 ಗಂಟೆ 2 ನಿಮಿಷಗಳಿಗೆ ಮುಂದೂಡಲ್ಪಟ್ಟ ಸದನವು ಪುನ: 3.00 ಗಂಟೆ 23 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ನೂತನ ಸಚಿವರಾದ ಮಾನ್ಯ ರಾಮಲಿಂಗಾರೆಡ್ಡಿ, ಸಾರಿಗೆ ಸಚಿವರು ಸದನಕ್ಕೆ ಬಂದಿದ್ದಾರೆ. ಅವರನ್ನು ಸದನಕ್ಕೆ ಪರಿಚಯಿಸುತ್ತಿದ್ದೇನೆ.

**ಸಭಾಪತಿಯವರು:–** ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಶ್ರೀಯುತ ವೀರಣ್ಣ ಮತ್ತಿಕಟ್ಟಿಯವರು ಮಂಡನೆ ಮಾಡಬೇಕು. ತಮಗೆ ಸುದೀರ್ಘವಾಗಿ ಭಾಷಣ ಮಾಡುವುದಕ್ಕೆ ಅವಕಾಶವಿಲ್ಲ. ಸ್ವಲ್ಪ ಸಮಯವಷ್ಟೆ ಮಾತನಾಡಬೇಕು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಹೆಚ್ಚು ಮಾತನಾಡಲು ಏಕೆ ಅವಕಾಶ ಕೊಡುವುದಿಲ್ಲ?

**ಸಭಾಪತಿಯವರು:–** ಆಮೇಲೆ ಮತ್ತೆ ಮಾತನಾಡಲು ತಮಗೆ ಅವಕಾಶ ಕೊಡುತ್ತೇನೆ. ಪ್ರಸ್ತಾವವನ್ನು ಮಂಡಿಸುವಾಗಲೇ ಬಹಳ ಉದ್ದ ಮಾತನಾಡಿಬಿಟ್ಟರೆ ಕಷ್ಟ. ವಿರೋಧ ಪಕ್ಷದ ನಾಯಕರು ಇನಿಶಿಯೇಟ್ ಮಾಡಬೇಕಾಗುತ್ತದೆ.

**ಶ್ರೀ ಎಂ.ಆರ್.ಹುಲಿನಾಯ್ಕರ್:–** ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಸಮಾಧಾನಕರವಾಗಿ ಮಾತನಾಡಲಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಅವರ ಪ್ರೀತಿ ವಿಶ್ವಾಸಕ್ಕೆ ಧನ್ಯವಾದಗಳು. ನಾನೇನು ಬೇಜಾರಿನಲ್ಲಿ ಇಲ್ಲ. ನನ್ನ ಜೀವನದ ಎಲ್ಲಾ ಹಂತದಲ್ಲಿ ಎಲ್ಲವನ್ನು ಅನುಭವಿಸಿ ಬಂದಿದ್ದೇನೆ. ಬೇಜಾರು ಎನ್ನುವುದೇ ಇಲ್ಲ. ನಾವೇನು ಸಾಧಿಸಬೇಕಾಗಿತ್ತು ಅದನ್ನು ಸಾಧಿಸಿದ್ದೇವೆ. ಈ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರವನ್ನು ಅಧಿಕಾರಕ್ಕೆ ತಂದಿದ್ದೇವೆ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ಅವರಂಥವರು ನಮ್ಮ ಎದುರಿಗೆ ಕುಳಿತರೆ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಒಳ್ಳೆಯದಾಗುತ್ತದೆ ಎಂಬುದು ನಮ್ಮೆಲ್ಲರ ಅಪೇಕ್ಷೆ ಆಗಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಾನಂದಗೌಡರು ಹಿರಿಯ ನಾಯಕರು. ಮಾಜಿ ಮುಖ್ಯಮಂತ್ರಿಗಳು ಈ ಸದನದಲ್ಲಿ ನನಗಿಂತಲೂ ಅತ್ಯಂತ ಸಮರ್ಥರು ಬಹಳಷ್ಟು ಜನರಿದ್ದಾರೆ. ಉತ್ತಮವಾಗಿ ಕೆಲಸ ಮಾಡತಕ್ಕಂಥ ಅಪಾರ ಅನುಭವವುಳ್ಳವರು ಬಂದಿದ್ದಾರೆ. ಅವರೆಲ್ಲರಿಗೂ ನಾನು ಶುಭಾಶಯಗಳನ್ನು ಹೇಳುತ್ತೇನೆ. ಈಗ ಇದರ ಬಗ್ಗೆ ಬಹಳ ಮಾತನಾಡುವುದು ಬೇಡ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ವೀರಣ್ಣ ಮತ್ತಿಕಟ್ಟಿಯವರೇ, ತಾವು ಸಭಾಪತಿಯಾಗಿ ಸಭಾಪೀಠದಲ್ಲಿ ಕುಳಿತ್ತಿದ್ದೀರಿ, ಇಲ್ಲಿ ಮುಂದಿನ ಸಾಲಿನಲ್ಲಿ ಇದ್ದೀರಿ, ಆದ್ದರಿಂದ ತಾವು ಮುಂದೆ ಬರಬೇಕು ಎನ್ನುವ ಅಪೇಕ್ಷೆ ನಮ್ಮ ಮನಸ್ಸಿನಲ್ಲಿ ಇದೆ.

**ಶ್ರೀ ಬಸವರಾಜ ಹೊರಟ್ಟಿ:–** ಕಾಂಗ್ರೆಸ್‌ನಲ್ಲಿ ಒಬ್ಬರು ಮುಂದೆ ಬರಬೇಕಾದರೆ ಕೋಣ, ಕುರಿ ಬಿದ್ದು ಹೋಯಿತು. ಇನ್ನು ಇಲ್ಲಿ ಉಳಿದವರ ಗತಿ ಏನು? ವಿಧಾನ ಪರಿಷತ್ತಿನಲ್ಲಿ ಕಾಯ್ದೆ ಮಾಡಿದ್ದಾರೆ ಎಂದು ನೀವು ಬಂದಿದ್ದೀರಿ. ಕಾಯ್ದೆ ಮಾಡದೇ ಹೋಗಿದ್ದರೆ ನೀವು ಹಿಂದೆಯೇ ಕುಳಿತಿರುತ್ತಿದ್ದಿರಿ. ಕಾಯ್ದೆ ಮಾಡಿದ್ದಾರೆ ಎಂದು ಬಂದಿದ್ದೀರಿ ಅಷ್ಟೆ.

**ಡಾ॥ ಎ.ಹೆಚ್. ಶಿವಯೋಗಿಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಹೇಳುವುದು ಸರಿಯಾಗಿದೆ. ಇವತ್ತಿನ ದಿವಸ ಮಾನ್ಯ ಎಸ್.ಆರ್.ಪಾಟೀಲ್‌ರವರು ಮುಂದೆ ಬರುವುದಕ್ಕೆ ನಮ್ಮ ಸರ್ಕಾರ ಏನು ಕಾಯ್ದೆ ಮಾಡಿದ್ದರು ಅದೇ ಕಾರಣವಾಯಿತು. ಕನಿಷ್ಠ ಮೂರು ಜನವಾದರೂ ಬರಬೇಕೆಂದು ನಾವು ಕಾಯ್ದೆ ಮಾಡಬೇಕಾಗಿತ್ತು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಅವರು ಹೇಳಿರುವ ಮಾಹಿತಿ ಕಡತಕ್ಕೆ ಹೋಗಬಾರದು. ಮಾನ್ಯ ಸುದರ್ಶನ್‌ರವರು

ಸಭಾಪತಿಯಾಗಿದ್ದಾಗ ಈ ಕಾನೂನು ಆಗಿದೆ. ಸನ್ಮಾನ್ಯ ಎಚ್.ಕೆ.ಪಾಟೀಲ್ ರವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿದ್ದರು. ಅವತ್ತು ಈ ಸದನದ ಕಾರ್ಯಕಲಾಪ ಸಲಹಾ ಸಮಿತಿಯಲ್ಲಿ ಚರ್ಚೆಯಾಗಿ, ಮುಂದೆ Special Board ನಲ್ಲಿ ಚರ್ಚೆಯಾಗಿ ಇದಕ್ಕೆ ತಿದ್ದುಪಡಿಯನ್ನು ತಂದಿದ್ದಾರೆ. ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ Cabinet rank ಕೊಡಿಸತಕ್ಕಂಥದ್ದು ಅವರ ಸರ್ಕಾರದ ಪ್ರಯತ್ನ, ನನ್ನ ಪ್ರಯತ್ನವಾಗಿತ್ತು. ವಿರೋಧ ಪಕ್ಷದ ಉಪ ನಾಯಕರಿಗೂ Cabinet rank ಕೊಡಿ ಎಂದು ನಾನು ಬಹಳ ಪ್ರಯತ್ನಪಟ್ಟೆ. ಏಕೆಂದರೆ, ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸದನ ಚೆನ್ನಾಗಿ ನಡೆಯಬೇಕು, ಎಲ್ಲಾ ನಾಯಕರಿಗೂ ಗೌರವ ಇರಬೇಕು, ಎಲ್ಲರೂ ಒಂದಾಗಿ ಜನರ ಸೇವೆ ಮಾಡಬೇಕು, ಇಲ್ಲಿ ಉತ್ತಮವಾಗಿ ಚರ್ಚೆಯಾಗಬೇಕು ಎನ್ನುವ ಉದ್ದೇಶದಿಂದ ನಾನು ಹೇಳಿದ್ದೇನೆ. ಆ ಚರ್ಚೆಯಲ್ಲಿ ಮಾನ್ಯ ಶಿವಯೋಗಿಸ್ವಾಮಿಯವರು ಕೂಡ ಇದ್ದರು.

**ಡಾ॥ ಎ.ಎಚ್. ಶಿವಯೋಗಿಸ್ವಾಮಿ:-** ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ನಿಮ್ಮಲ್ಲಿ ಇನ್ನೂ ಮುಖ್ಯ ಸಚೇತಕರನ್ನು ಮಾಡಿಲ್ಲ. ಏನೋ ಸಣ್ಣ ಗೊಂದಲ ಇದೆ ಎಂದು ಕಾಣುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಗೊಂದಲ ಇಲ್ಲ, ಕಾದು ನೋಡಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಸದನಕ್ಕೆ ಸರಿಯಾದ ಮಾಹಿತಿಯನ್ನು ಕೊಡುತ್ತೇನೆ. ನಮ್ಮ "ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳು" ಪುಸ್ತಕದಲ್ಲಿ ಏನಿದೆ ಎಂದರೆ;

> **"ಸಭಾನಾಯಕ"** ಎಂದರೆ, ಮುಖ್ಯಮಂತ್ರಿಯವರು ಪರಿಷತ್ತಿನ ಸದಸ್ಯರಾಗಿದ್ದರೆ ಅವರು ಅಥವಾ ಒಬ್ಬರಿಗಿಂತ ಹೆಚ್ಚು ಸಚಿವರು ಇದ್ದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಂದ ನಾಮ ನಿರ್ದೇಶಿತರಾದ ಸಚಿವರು ಅಥವಾ ಸದನದ ನಾಯಕರಾಗಿ ಕಾರ್ಯನಿರ್ವಹಿಸಲು

ಮುಖ್ಯಮಂತ್ರಿಯವರಿಂದ ನಾಮ ನಿರ್ದೇಶಿತರಾದ ಪರಿಷತ್ತಿನ ಸದಸ್ಯರು.

**'ಸದಸ್ಯ'** ಎಂದರೆ "ವಿಧಾನ ಪರಿಷತ್ತಿನ ಸದಸ್ಯ"

2006 ರಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿ ಇತ್ತು. ಆ ಸಂದರ್ಭದಲ್ಲಿ ಈ ಕಾನೂನನ್ನು ನಾವು ಮಾಡಿದ್ದೇವೆ. ಅವರು ಮಾಡಿರುವಂತಹದ್ದಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಆಗ ಎಚ್.ಕೆ.ಪಾಟೀಲ್‌ರವರು ಮಂತ್ರಿಯಾಗಿದ್ದರು.

**ಶ್ರೀ ಬಸವರಾಜ ಹೊರಟ್ಟಿ:–** ನಾನು ಮಂತ್ರಿಯಾಗಿದ್ದೆ. ಸುಮ್ಮನೆ ಸದನದಲ್ಲಿ ಏನೇನೋ ಹೇಳಬೇಡಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಆಗ ಸಮ್ಮಿಶ್ರ ಸರ್ಕಾರ ಇತ್ತು. ಅದರಲ್ಲಿ ಅವರ ಪಾತ್ರ ಮಹತ್ತರವಾದದ್ದು. ನೀವೇ ಮಾಡಿರಲಿ, ಅವರೇ ಮಾಡಿರಲಿ, ಒಳ್ಳೆಯದನ್ನು ಮಾಡಿ ಈ ಸದನದ ಗೌರವವನ್ನು ಕಾಪಾಡಿದ್ದೀರಿ, ಧನ್ಯವಾದಗಳು.

**ಶ್ರೀ ಬಸವರಾಜ ಹೊರಟ್ಟಿ:–** ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಎಲ್ಲರೂ ಮಂತ್ರಿಯಾಗಲು ದೆಹಲಿಗೆ ಹೋಗಿಬಿಟ್ಟರಿ. ಮಂತ್ರಿಯಾಗುವುದಕ್ಕೆ ಕಳೆದ 30 ವರ್ಷದ ಯಾವ ಸರ್ಕಾರದಲ್ಲೂ ವಿಧಾನ ಪರಿಷತ್ತಿನ ಸದಸ್ಯರು ಇಷ್ಟು ಭಿಕ್ಷೆ ಬೇಡಿರಲಿಲ್ಲ. ಆದರೆ, ಎಲ್ಲರೂ ಹೋಗಿ ಇಷ್ಟು ಗುದ್ದಾಟವಾಡಿದ ಮೇಲೆ ಒಬ್ಬರು ಮಾತ್ರ ಮಂತ್ರಿಯಾಗಿದ್ದಾರೆ. ಇನ್ನೊಬ್ಬರ ಕಥೆ ಏನು ಎಂದು ನಾನು ಕೇಳುತ್ತಿದ್ದೇನೆ. ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿದ್ದಾಗ ನಾಲ್ಕು ಮಂದಿ ವಿಧಾನ ಪರಿಷತ್ತಿನ ಸದಸ್ಯರು ಮಂತ್ರಿಯಾಗಿದ್ದರು. ಇನ್ನಿಬ್ಬರನ್ನು ಮಂತ್ರಿ ಮಾಡಿ ನೋಡೋಣ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಬಸವರಾಜ ಹೊರಟ್ಟಿಯವರೇ, ಅದಕ್ಕೇ ಇನ್ನೂ ನಾಲ್ಕು ಮಂತ್ರಿ ಹುದ್ದೆಗಳನ್ನು ಉಳಿಸಿದ್ದೇವೆ.

**ಡಾ|| ಎ.ಎಚ್. ಶಿವಯೋಗಿಸ್ವಾಮಿ:-** ನಾಲ್ಕು ಸಚಿವ ಸ್ಥಾನಗಳನ್ನು ಮೇಲ್ಮನೆ ಸದಸ್ಯರುಗಳಿಗೆ ಕೊಡುತ್ತೀರಾ?

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಶಿವಯೋಗಿಸ್ವಾಮಿಯವರೇ, ತಾವು ಹಿರಿಯರು, ತಾವು ಒಳ್ಳೆಯ ಸಂಸದೀಯ ಪಟುಗಳು ಎಂದು ನಾನು ಭಾವಿಸಿದ್ದೇನೆ. It is the prerogative power of the Chief Minister. He can include anybody in the Cabinet and exclude anybody from the Cabinet. It is the prerogative power of the Chief Minister.

ನಮ್ಮ ಜೊತೆಗೆ ಅತ್ಯಂತ ಪ್ರತಿಭಾವಂತ ಸದಸ್ಯರುಗಳಿದ್ದಾರೆ. ಈ ಬಗ್ಗೆ ನಾನು ಬಹಳಷ್ಟು ಬಾರಿ ಹೊರಗಡೆಯೂ ಹೇಳಿದ್ದೇನೆ. ತಮ್ಮದೇ ಆದಂತಹ ಛಾಪೂ ಮೂಡಿಸಿದಂತಹ, ಹೆಜ್ಜೆ ಗುರುತು ಮೂಡಿಸಿದಂತಹವರು, ಒಂದೊಂದು ಕ್ಷೇತ್ರದಲ್ಲಿ ಅಪಾರವಾದಂತಹ ಅನುಭವ ಹೊಂದಿದಂತಹ ಸ್ನೇಹಿತ ಶಾಸಕರುಗಳು ನಮ್ಮ ಪಕ್ಷದಲ್ಲಿದ್ದಾರೆ. ಉಳಿದಿರುವ 4 ಸ್ಥಾನಗಳಲ್ಲಿ ನಮಗೂ ಕೊಡಿ ಎಂದು . .

**ಶ್ರೀ ಬಸವರಾಜ ಹೊರಟ್ಟಿ:-** ನಮಗೂ ಕೊಡಿ ಎಂದು ಕೇಳುತ್ತೀರಿ.

**ಶ್ರೀ ಎಸ್.ಆರ್. ಪಾಟೀಲ್:-** ಕೇಳುವುದಿಲ್ಲ. Let us hope for the good. ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:-** ಗಮನಸೆಳೆಯುವುದಷ್ಟೇ ನಿಮ್ಮ ಕೆಲಸ. ನಿಮ್ಮದೇನೂ ನಡೆಯುವುದಿಲ್ಲ.

(ಗೊಂದಲ)

**ಶ್ರೀ ಬಿ.ಜೆ. ಪುಟ್ಟಸ್ವಾಮಿ:-** ಶ್ರೀಯುತ ಮತ್ತಿಕಟ್ಟಿ ವೀರಣ್ಣನವರೇ, ನೀವು ಸಭಾಪತಿಗಳಾಗಿ ಅಲ್ಲಿ ಕುಳಿತಿದ್ದೀರಿ, ಮತ್ತೆ ಇಲ್ಲಿ ಕುಳಿತಿದ್ದೀರಿ. ನಿಮ್ಮನ್ನು ಹಿಂದಕ್ಕೆ ಕಳುಹಿಸಿರುವುದು demotion ತಾನೇ ಮಾಡಿರುವುದು. ತಾವು ಚುನಾವಣಾ ಪ್ರಣಾಳಿಕೆಯ ಅಧ್ಯಕ್ಷರಾಗಿದ್ದೀರಿ. ಪ್ರಚಾರ ಸಮಿತಿಯ ಅಧ್ಯಕ್ಷರಾಗಿ

ಪಕ್ಷವನ್ನು ಅಧಿಕಾರಕ್ಕೆ ತಂದಿರುವ ನಿಮ್ಮನ್ನು demote ಮಾಡಿರುವುದು ಸರಿಯೇ?

**ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ:–** ನಾವು ಸರಿಯಾಗಿಯೇ ಇದ್ದೇವೆ. ನಿಮ್ಮ ಕೆಲಸವನ್ನು ನೀವು ನೋಡಿಕೊಳ್ಳಿ.

**ಶ್ರೀ ಬಸವರಾಜ ಹೊರಟ್ಟಿ:–** ನಿಮ್ಮವರು ನಿಮಗೆ ಪ್ರಚಾರ ಸಮಿತಿಯ ಅಧ್ಯಕ್ಷ ಸ್ಥಾನವನ್ನು ಕೊಟ್ಟಿದ್ದಾರೆ. ಅಲ್ಲಿಗೆ ಮುಗಿಯಿತು ಎಂದು ನಾಳೆ ಹೇಳುತ್ತಾರೆ ಬಿಡಿ.

**ಶ್ರೀ ಎಸ್.ಆರ್.ಪಾಟೀಲ್:–** ಇಲ್ಲಿ promotion, demotion ಪ್ರಶ್ನೆ ಇಲ್ಲ. ಆಗ ವಿರೋಧ ಪಕ್ಷದಲ್ಲಿದ್ದೆವು, ಈಗ ಆಡಳಿತ ಪಕ್ಷವಾಗಿ ಬಂದಿದ್ದೇವೆ. ಆಗ ನೀವು ಇಲ್ಲಿ ಇದ್ದೀರಿ, ಈಗ ಅಲ್ಲಿಗೆ ಹೋಗಿದ್ದೀರಿ. ನನ್ನ ದೃಷ್ಟಿಯಲ್ಲಿ ಪ್ರತಿಪಕ್ಷವು ಬಹಳ ಪರಿಣಾಮಕಾರಿಯಾಗಿ ಕೆಲಸ ಮಾಡುವಂತಹದ್ದು. ಆಳುವ ಪಕ್ಷ ಮತ್ತು ಪ್ರತಿಪಕ್ಷ ಒಂದೇ ನಾಣ್ಯದ ಎರಡು ಮುಖಗಳಿದ್ದ ಹಾಗೆ.

## 8. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮಂಡನೆ.

**ಶ್ರೀ ಮತ್ತಿಕಟ್ಟಿ ವೀರಣ್ಣ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಕರ್ನಾಟಕ ರಾಜ್ಯದ ರಾಜ್ಯಪಾಲರು ಸೋಮವಾರ, ದಿನಾಂಕ 3–6–2013 ರಂದು ರಾಜ್ಯದ ವಿಧಾನಮಂಡಲದ ಎರಡು ಸದನಗಳ ಗೌರವಾನ್ವಿತ ಸದಸ್ಯರುಗಳನ್ನು ಉದ್ದೇಶಿಸಿ ಮಾತನಾಡಿದ್ದಾರೆ. ಅದಕ್ಕೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಅರ್ಪಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ತಮಗೆಲ್ಲಾ ಗೊತ್ತಿರುವ ಹಾಗೆ ಪ್ರಜಾಪ್ರಭುತ್ವದಲ್ಲಿ ಭಾರತದ ಸಂವಿಧಾನದ ಪ್ರಕಾರ ರಾಜ್ಯಪಾಲರಿಗೆ ತಮ್ಮದೇ ಆದ ವಿಶಿಷ್ಠ ಸ್ಥಾನ ಇದೆ. ಸಂವಿಧಾನಬದ್ಧವಾಗಿ ಎರಡು ಸದನಗಳಿಗೆ ನಿರ್ದೇಶನ ಕೊಡತಕ್ಕಂತಹ ಮತ್ತು ಚುನಾಯಿತ ನೂತನ ಸರ್ಕಾರ ವರ್ಷದ ಆದಿಯಲ್ಲಿ ಅಂದರೆ, ಮೊದಲನೆಯ ಅಧಿವೇಶನದಲ್ಲಿ ಯಾವಾಗಲೂ ಎರಡು ಸದನಗಳನ್ನು ಉದ್ದೇಶಿಸಿ ರಾಜ್ಯಪಾಲರು, ಒಂದು ವರ್ಷದ ಕಾಲ ಆ ಸರ್ಕಾರ

ತೆಗೆದುಕೊಳ್ಳುವಂತಹ ನಿಲುವು ಹಾಗೂ ನಿರ್ಧಾರಗಳ ಬಗ್ಗೆ ಭಾಷಣವನ್ನು ಮಾಡುತ್ತಾರೆ. ಇದು ನಡೆದು ಬಂದಂತಹ ಪರಂಪರೆ. ಇದು ಪ್ರಜಾಪ್ರಭುತ್ವದ ಅಂತಃಸತ್ವವೂ ಹೌದು. ಆದರೆ, ಎರಡು ಸದನಗಳನ್ನುದ್ದೇಶಿಸಿ ಮಾಡಿದ ಈ ಬಾರಿಯ ರಾಜ್ಯಪಾಲರ ಭಾಷಣ ಬಹಳ ಮಹತ್ವ ಪೂರ್ಣವಾದುದು. ತಮಗೆಲ್ಲಾ ಗೊತ್ತಿರುವಂತೆ ಪ್ರಜಾಪ್ರಭುತ್ವಕ್ಕೆ ಮೂಲ ಶಕ್ತಿ ಕೊಡುವಂತಹವರು ಪ್ರಜೆಗಳು, ಮತದಾರರು. ಮತದಾರರ ಅಭಿಪ್ರಾಯದ ಮೇಲೆ ಚುನಾಯಿತವಾದಂತಹ ಸರ್ಕಾರ ಇದಾಗಿದೆ. ಸಂವಿಧಾನಬದ್ಧವಾಗಿ ಅಧಿಕಾರ ತೆಗೆದುಕೊಂಡ ನಂತರ ಮೊದಲನೆಯ ಈ ಜಂಟಿ ಅಧಿವೇಶನ ದಿನಾಂಕ: 3–6–2013 ರಂದು ನಡೆದಿದೆ.

ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕದ ಎರಡು ಸದನಗಳಿಗೆ ಹಾಗೂ ಪ್ರಜಾಪ್ರಭುತ್ವಕ್ಕೆ ತನ್ನದೇ ಆದ ಮಹತ್ವಪೂರ್ಣ ತಳಹದಿ ಇದೆ. ಇಡೀ ರಾಷ್ಟ್ರದಲ್ಲಿ ಅತ್ಯಂತ ಮಹತ್ವಪೂರ್ಣವಾದಂತಹ ಕೊಡುಗೆಯನ್ನು ಅಂದಿನ ಮೈಸೂರು ಮಹಾರಾಜರು ಕೊಟ್ಟಿದ್ದಾರೆ. ಪ್ರಜಾ ಪ್ರತಿನಿಧಿಗಳ ಸಭೆ, ವಿಷಯಾಧಾರಿತ ಸಭೆ ಈ ಎರಡೂ ಸಭೆಗಳನ್ನು ಅಂದು ಮಾಡಿ ಇಡೀ ಕರ್ನಾಟಕಕ್ಕೆ ಮಾತ್ರವಲ್ಲದೆ, ಇಡೀ ವಿಶ್ವಕ್ಕೆ ಮಾದರಿಯಾದ ರೀತಿಯಲ್ಲಿ ಅವರು ನಡೆದುಕೊಂಡಿದ್ದಾರೆ.

ನಾವು ಅದನ್ನು ಸ್ಮರಿಸಬೇಕಾಗಿದೆ. ಆ ಪರಂಪರೆಯ ಕೂಸು ನಾವು. ನಮ್ಮ ಸ್ನೇಹಿತರಾದ ಸನ್ಮಾನ್ಯ ಶ್ರೀ ಡಿ.ವಿ.ಸದಾನಂದಗೌಡರು, ಶ್ರೀಯುತ ಬಸವರಾಜ ಹೊರಟ್ಟಿಯವರು, ಶ್ರೀಯುತ ಕೆ.ಬಿ.ಶಾಣಪ್ಪನವರು ಹಾಗೂ ಇನ್ನು ಹಲವು ಹಿರಿಯ ಸದಸ್ಯರಿದ್ದಾರೆ. 2008ರಲ್ಲಿ ಬಿಜೆಪಿ ಪಕ್ಷ ಸುಮಾರು 32% ರಷ್ಟು ಮತಗಳನ್ನು ತೆಗೆದುಕೊಂಡು 110 ಸ್ಥಾನಗಳನ್ನು ಗೆದ್ದು, 6 ಜನ ಪಕ್ಷೇತರ ಸದಸ್ಯರ ಬೆಂಬಲದಿಂದ ಸರ್ಕಾರವನ್ನು ಮಾಡಿತು. ಅಂದು ಜನರು ಬದಲಾವಣೆಯನ್ನು ಬಯಸಿದ್ದರು. ನಾವು ರಾಜ್ಯವನ್ನು ಪ್ರಗತಿಯತ್ತ ಮುನ್ನಡೆಸುತ್ತೇವೆ, ಹಿಂದಿನ ಎಲ್ಲಾ ಸರ್ಕಾರಗಳು ಮಾಡದೇ ಇರತಕ್ಕಂತಹ ಮಹತ್ತರವಾದ ಕೊಡುಗೆಯನ್ನು ಕರ್ನಾಟಕದ ಜನಕ್ಕೆ ಕೊಡುತ್ತೇವೆ, ಕರ್ನಾಟಕ ಏನು 2–3ನೇ ಸ್ಥಾನದಲ್ಲಿದೆ, ಅದನ್ನು ಅದಕ್ಕಿಂತಲೂ ಎತ್ತರ ಒಯ್ಯುತ್ತೇವೆ,

ಎನ್ನುವಂತಹ ವಾಗ್ದಾನವನ್ನು ಮಾಡಿದ್ದರು. ಅಂದು ಸುಮಾರು 35% ಗಿಂತ ಹೆಚ್ಚು ಮತಗಳನ್ನು ಕಾಂಗ್ರೆಸ್ ಪಕ್ಷ ಪಡೆದಿದ್ದರೂ ಸಹಿತ ಎಂಎಲ್‌ಎ ಗಳ ಸಂಖ್ಯೆಯ ಆಧಾರದ ಮೇಲೆ ಸರ್ಕಾರವನ್ನು ನಾವು ರಚನೆ ಮಾಡಲಿಕ್ಕೆ ಆಗಲಿಲ್ಲ. ನಮಗೆ ಬೇರೆ ಬೇರೆ ಒತ್ತಡಗಳಿದ್ದರೂ ಸಹಿತ ಜನರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು, ಮತದಾರರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು, ಅಂದು ಸರ್ಕಾರವನ್ನು ಮಾಡಲಿಕ್ಕೆ ನಾವು ಹಿಂದಿನ ಸರ್ಕಾರಕ್ಕೆ ಅವಕಾಶ ಮಾಡಿಕೊಟ್ಟಿದ್ದು ತಮಗೆಲ್ಲಾ ಗೊತ್ತಿದೆ. ಇದು ಇಡೀ ಭಾರತದಲ್ಲಿಯೇ ಕಾಂಗ್ರೆಸ್ ಹಾಕಿಕೊಟ್ಟಂತಹ ಅತ್ಯಂತ ನೀತಿ ಬದ್ಧವಾದಂತಹ ಸಂವಿಧಾನಕ್ಕೆ ಬದ್ಧತೆ ಇರತಕ್ಕಂತಹ ನಿರ್ದೇಶನ ಎನ್ನುವುದನ್ನು ನಾನು ಹೆಮ್ಮೆಯಿಂದ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇಡೀ ರಾಷ್ಟ್ರದಲ್ಲಿ ಕರ್ನಾಟಕದ ರಾಜಕಾರಣಿಗಳು, ಕರ್ನಾಟಕದ ನಾಯಕರುಗಳಿಗೆ, ಕರ್ನಾಟಕದ ಸರ್ಕಾರದಲ್ಲಿ ಇರುವವರಿಗೆ ಮಾತ್ರವಲ್ಲದೆ, ವಿರೋಧ ಪಕ್ಷದಲ್ಲಿ ಇರತಕ್ಕಂತಹವರಿಗೂ ಮಹತ್ತರವಾದಂತಹ ಗೌರವ ಈ ದೇಶದಲ್ಲಿತ್ತು.

ಮಾನ್ಯರುಗಳಾದ ಎಸ್.ನಿಜಲಿಂಗಪ್ಪನವರು, ಕೆಂಗಲ್ ಹನುಮಂತಯ್ಯನವರು, ತದನಂತರ ಬಂದಂತಹ ಎಸ್.ಆರ್.ಕಂಠಿಯವರು, ಬಿ.ಡಿ.ಜತ್ತಿಯವರು, ವಿರೇಂದ್ರ ಪಾಟೀಲ್‌ರಾಗಲೀ, ದೇವರಾಜ ಅರಸ್ ರವರಂತಹವರು ಇದಕ್ಕೆ ತಮ್ಮದೇ ಆದ ರೀತಿಯಲ್ಲಿ ಅತ್ಯಂತ ಮಹತ್ವದ ಕೊಡುಗೆಯನ್ನು ಕೊಟ್ಟು, ಜನರ ಅಭಿಪ್ರಾಯ, ಈ ರಾಜ್ಯದ ಅಭಿವೃದ್ಧಿಗೆ ಮಹತ್ವಪೂರ್ಣವೆಂದು ಹೇಳಿದರು. ತದನಂತರ ಬಂದಂತಹ ಮಾನ್ಯ ರಾಮಕೃಷ್ಣ ಹೆಗಡೆಯವರು ಇರಬಹುದು. ಶ್ರೀ ಎಸ್.ಎಂ.ಕೃಷ್ಣರವರು ಇರಬಹುದು, ಅವರುಗಳು ಈ ರಾಜ್ಯದ ಗೌರವವನ್ನು ಹೆಚ್ಚಿಸುವಲ್ಲಿ ತಮ್ಮದೇ ಆದಂತಹ ಕೊಡುಗೆಯನ್ನು ಕೊಟ್ಟಿದ್ದಾರೆ. ಇವತ್ತು ದುರ್ದೈವ ಎಂದರೆ, ಹಲವಾರು ಘಟನೆಗಳಿಂದ ಕರ್ನಾಟಕದ ಘನತೆ ಗೌರವ ಕುಂದಿದೆ ಎನ್ನುವುದನ್ನು ನಾನು ಇವತ್ತು ಬಹಳ ನೋವಿನಿಂದ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ತಮಗೆ ಗೊತ್ತಿರುವ ಹಾಗೇ ಮೊದಲು ವಿರೋಧ ಪಕ್ಷದ ಉಪ ನಾಯಕನಾಗಿ, ವಿರೋಧ ಪಕ್ಷದ ನಾಯಕನಾಗಿ, ಸಭಾಪತಿಯಾಗಿ,

ನಾನು ಕೆಲಸ ನಿರ್ವಹಿಸಿರುತ್ತೇನೆ. ರಾಜ್ಯದ ಮತ್ತು ರಾಷ್ಟ್ರದ ಯಾವುದೇ ಮೂಲೆಗೆ ಹೋಗಲಿ, ಕರ್ನಾಟಕದ ಸ್ಪೀಕರ್ ಇರಬಹುದು, ಸಭಾಪತಿಗಳಿರಬಹುದು, ಮಂತ್ರಿಗಳು ಇರಬಹುದು, ಅವರುಗಳಿಗೆ ಎಲ್ಲರಿಗೂ ಸಮಾನ ಗೌರವವನ್ನು ಕೊಡುತ್ತಿದ್ದರು. ಅದು ಕಾಮನ್‌ವೆಲ್ತ್ ಮೀಟಿಂಗ್ ಇರಬಹುದು, ರಾಷ್ಟ್ರಮಟ್ಟದ ಪೀಠಾಸೀನಾಧಿಕಾರಿಗಳ ಸಭೆ ಇರಬಹುದು, ಕರ್ನಾಟಕ ಎಂದರೆ ಬಹಳ ಗೌರವದಿಂದ ಕಾಣುತ್ತಿದ್ದರು. ಇವತ್ತು ದುರ್ದೈವದ ಸಂಗತಿ ಎಂದರೇ, ಯಾವ ಮಾನ–ಗೌರವದಿಂದ ಕರ್ನಾಟಕ ಜನ ತಲೆ ಎತ್ತಿ ಈ ರಾಷ್ಟ್ರದಲ್ಲಿ ಮಾತ್ರವಲ್ಲದೆ, ವಿಶ್ವದಲ್ಲಿ ಬದುಕುತ್ತಿದ್ದರೋ ಅವರ ಮನಸ್ಸಿಗೆ, ಮಾನಕ್ಕೆ ಪೆಟ್ಟಾಗಿದೆ. ಅದರ ಪ್ರತಿಫಲವೇ ಇವತ್ತು ಈ ಚುನಾವಣೆ ನಡೆದಿದೆ. ಹಲವಾರು ಜನ ನಮ್ಮ ಸ್ನೇಹಿತರು ಒಂದು ವಿಚಾರವನ್ನು ಹೇಳಿದರು. ನಾನು ಪ್ರಚಾರ ಸಮಿತಿಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಇಂದಿನ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಅಂದಿನ ಶಾಸಕಾಂಗ ಪಕ್ಷದ ನಾಯಕರಾದ ಸನ್ಮಾನ್ಯ ಸಿದ್ಧರಾಮಯ್ಯನವರು ಮತ್ತು ಡಾ|| ಜಿ. ಪರಮೇಶ್ವರ್‌ರವರು ಹಾಗೂ ನಮ್ಮವರೇ ಈ ಸದನದ ವಿರೋಧ ಪಕ್ಷದ ನಾಯಕರಾಗಿ ಸೇವೆ ಸಲ್ಲಿಸಿ, ಇಂದು ಸಭಾ ನಾಯಕರಾದ ಶ್ರೀಯುತ ಎಸ್.ಆರ್.ಪಾಟೀಲ್‌ರವರು ಈ ಮೂರು ಜನರ ನಾಯಕತ್ವದಲ್ಲಿ ಕೆಲಸ ಮಾಡಿ ಜನರ ಅಭಿಪ್ರಾಯವನ್ನು ಕ್ರೋಢೀಕರಿಸಿ, ಕರ್ನಾಟಕದ ಗೌರವವನ್ನು ಎತ್ತಿ ಹಿಡಿಯುವಂತಹ, ಈ ರಾಜ್ಯದಲ್ಲಿ ಮತ್ತೊಮ್ಮೆ ಸುಭದ್ರ, ಜನಪರ ಮತ್ತು ಅಭಿವೃದ್ಧಿ ಪರವಾದಂತಹ ಸರ್ಕಾರವನ್ನು ತರಬೇಕೆನ್ನುವ ಸಂದೇಶದೊಂದಿಗೆ ಚುನಾವಣೆಗೆ ಹೋದೆವು. ತಮಗೆಲ್ಲಾ ಗೊತ್ತಿರುವ ಹಾಗೆ ಕರ್ನಾಟಕದ ಜನತೆ ಅತ್ಯಂತ ವಿಶಾಲ ಮನೋಭಾವನೆಯುಳ್ಳವರು. ಅವರು ಸಣ್ಣ–ಪುಟ್ಟ ನ್ಯೂನತೆಗಳಿಗೆ ಹೆಚ್ಚು ಬೆಲೆ ಕೊಡುವುದಿಲ್ಲ. ದ್ವೇಷ, ಅಸೂಯೆ, ಅಹಂಭಾವದ ನಾಯಕತ್ವಕ್ಕೆ ಅವರು ಬೆಂಬಲ ಕೊಡುವುದಿಲ್ಲ. ತಮಗೆಲ್ಲಾ ಗೊತ್ತಿರುವಂತೆ ಕರ್ನಾಟಕದಲ್ಲಿ ನಡೆದಿರುವಂತಹ ಹಲವಾರು ಘಟನೆಗಳು ನಮ್ಮನ್ನು ಇಂದಿಗೂ ನೋವಿನಲ್ಲಿಟ್ಟಿದೆ.

ನಾನು ಕರ್ನಾಟಕದ ಜನತೆಗೆ ಈ ಮೂಲಕ ಅತ್ಯಂತ ವಿನಮ್ರತೆಯಿಂದ ಧನ್ಯವಾದವನ್ನು ಅರ್ಪಿಸುತ್ತೇನೆ. ಯಾವುದೇ ಜಂಜಾಟ ಇಲ್ಲವೇ ಯಾವುದೇ ಪಕ್ಷಾಂತರ, ಆಪರೇಷನ್ ಮಾಡದೇ ಸುಭದ್ರವಾದ ಸರ್ಕಾರವಾಗಿ ನಮ್ಮ ಸರ್ಕಾರ ಹೊರ ಹೊಮ್ಮಿದೆ. ತನ್ನ ಮೇಲೆ, ತನ್ನ ಶಕ್ತಿಯ ಮೇಲೆ ಶಾಸಕರ ಸಂಖ್ಯೆಯ ಮೇಲೆ ಬಹುಮತದ ಆಧಾರದ ಮೇಲೆ ಸರ್ಕಾರ ರಚಿಸತಕ್ಕಂಥಹ ಒಂದು ಆದೇಶವನ್ನು ಬೆಂಬಲವನ್ನು ಕೊಟ್ಟಂತಹ ಕರ್ನಾಟಕದ ಮಹಾ ಜನತೆಯನ್ನು ನಾನು ಮೊಟ್ಟ ಮೊದಲಿಗೆ ಅಭಿನಂದಿಸುತ್ತೇನೆ. ಮತ್ತು ನಮ್ಮ ಪಕ್ಷದ ಸರ್ಕಾರವನ್ನು ಅಧಿಕಾರಕ್ಕೆ ತಂದದ್ದಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಬೇಕು.

**ಸಭಾಪತಿಯವರು:–** ಅವರು ನಿರ್ಣಯವನ್ನು ಮಂಡಿಸಿ ಬಿಡಲಿ. ಆಮೇಲೆ ನಿಮಗೂ ಅವಕಾಶವನ್ನು ಕೊಡುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ನಿರ್ಣಯವನ್ನು ಮಂಡಿಸುವಾಗ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಯಾವುದೋ ಒಂದು ಪರಿಸ್ಥಿತಿಯಿಂದ ಈ ರಾಜ್ಯದಲ್ಲಿ ಹೀಗಾಯಿತು, ಹಾಗಾಯಿತು ಎಂದು ಹೇಳಿದ್ದೀರಿ. ಕಾಂಗ್ರೆಸ್‌ನವರು ವಿರೋಧ ಪಕ್ಷದ ಸ್ಥಾನದಲ್ಲಿ ಇದ್ದೀರಿ. 5 ವರ್ಷ ನೀವು ವಿರೋಧ ಪಕ್ಷದಲ್ಲಿ ಇದ್ದೀರಿ. ಆಗ ನೀವು ಏನು ಮಾಡಿದ್ದೀರಿ ಅದನ್ನು ಹೇಳಿ. ಜನರು ನಿಮ್ಮ ಸಲುವಾಗಿ ಮತವನ್ನು ಹಾಕಿದ್ದಾರೆಂದು ತಿಳಿದುಕೊಳ್ಳಬೇಡಿ. ನೀವು ಮೊದಲು ಏನು ಹೇಳಿದ್ದಿರಲ್ಲಾ ಅದರ ಸಲುವಾಗಿ ಮತವನ್ನು ಹಾಕಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಈ ವಿಚಾರಕ್ಕೆ ನಾನು ನಂತರ ಬರುತ್ತಿದ್ದೆ. ಸ್ವಲ್ಪ ಸಮಾಧಾನವಾಗಿ ಇರಿ. ಮಾನ್ಯ ಹೊರಟ್ಟಿಯವರು ಎಚ್ಚರಿಸಿದರು. ನಮ್ಮ ಮಾಧ್ಯಮ ಮಿತ್ರರಿಗೆ ಮತ್ತು ಈ ರಾಜ್ಯದ ಜನರಿಗೆ ಗೊತ್ತಿದೆ. ಸರ್ಕಾರ ಅಂದರೆ ಏನು ಸಭಾಪತಿಗಳೇ? ಕಾನೂನು ಬದ್ಧವಾಗಿ ಶಾಂತಿ ಸೌಹಾರ್ದತೆಯನ್ನು ಕಾಪಾಡುವುದರ ಜೊತೆಗೆ ಎಲ್ಲಾ ಜಾತಿಯ ಜನಾಂಗವನ್ನು, ಎಲ್ಲಾ ವರ್ಗದ

ಜನತೆ, ಜನಾಂಗದವರನ್ನೂ ಮತ್ತು ಎಲ್ಲಾ ಭಾಗಗಳನ್ನು ಅಭಿವೃದ್ಧಿ ಪಥದತ್ತ ಒಯ್ಯುವುದರ ಜೊತೆಗೆ ರಾಜ್ಯದ ನೈಸರ್ಗಿಕ ಸಂಪತ್ತು ಮತ್ತು ಸಂಪನ್ಮೂಲ ಏನು ಇದೆ ಅದನ್ನು ರಕ್ಷಿಸತಕ್ಕಂತಹ ಕೆಲಸವನ್ನು ನಮ್ಮ ಸರ್ಕಾರ ಮಾಡಬೇಕಾಗಿದೆ. ಅದನ್ನು ಮುಂದಿನ ಪೀಳಿಗೆಗೆ ರಕ್ಷಿಸಿ ನಾವು ನೀವು ರಾಜ್ಯವನ್ನು ಅಭಿವೃದ್ಧಿ ಪಥದತ್ತ ಒಯ್ಯುವುದಕ್ಕೆ ಮಾಡತಕ್ಕಂತಹ ಕೆಲಸ ಹಿಂದಿನ ಸರ್ಕಾರದಿಂದ ಆಗಲಿಲ್ಲ. ಅಂದು ಸರ್ಕಾರದಲ್ಲಿ ಇರತಕ್ಕಂಥ ಮಂತ್ರಿಗಳೇ ಈ ರಾಜ್ಯದ ನೈಸರ್ಗಿಕ ಸಂಪನ್ಮೂಲವನ್ನು ಲೂಟಿ ಮಾಡಿದರೆ, ಹೇಗೆ ಈ ರಾಜ್ಯ ಅಭಿವೃದ್ಧಿಯಾಗುತ್ತದೆ? ನೀವು ಏನು ಮಾಡಿದ್ದೀರಿ ಎಂದು ಕೇಳಿದ್ದೀರಲ್ಲಾ ನಮ್ಮ ನಾಯಕರು ಅಂದರೆ ನನ್ನನ್ನೂ ಸೇರಿಸಿಕೊಂಡು, ನಾನು ಆಗ ಸಭಾಪತಿಯಾಗಿರಲಿಲ್ಲ. ನಾವೆಲ್ಲರೂ ಸೇರಿ ಈ ರಾಜ್ಯದ ನೈಸರ್ಗಿಕ ಸಂಪತ್ತನ್ನು ಕಾಪಾಡಲು, ಈ ರಾಜ್ಯದ ಮಾನ ಮರ್ಯಾದೆಯನ್ನು ಕಾಪಾಡುವುದಕ್ಕೆ ಬೆಂಗಳೂರಿನಿಂದ ಹಿಡಿದು ಬಳ್ಳಾರಿಯವರೆಗೆ ಪಾದಯಾತ್ರೆಯನ್ನು ಮಾಡಿದ್ದೆವು.

**ಶ್ರೀ ಬಸವರಾಜ ಹೊರಟ್ಟಿ:–** ಒಂದು ನಿಮಿಷ ತಾವು ಯೀಲ್ಡ್ ಆಗಿ.

**ಶ್ರೀ ಕೆ.ಬಿ .ಶಾಣಪ್ಪ:–** ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಯಾವ ರಾಜ್ಯಪಾಲರು ಇದ್ದರು ಈಗಲೂ ಕೂಡ ಅದೇ ರಾಜ್ಯಪಾಲರು ಅಧಿಕಾರದಲ್ಲಿ ಇದ್ದಾರೆ. ಅವರಿಗೆ ಇದಕ್ಕಾಗಿ thanks ಹೇಳಬೇಕೇ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಶಾಣಪ್ಪನವರು ಏನು ಹೇಳಿದರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮತ್ತೊಬ್ಬರು ಏನು ಹೇಳಿದರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏನು ಸತ್ಯ ಇದೆ, ಆ ಸತ್ಯವನ್ನು ನಾನು ಹೇಳುತ್ತೇನೆ. ಕರ್ನಾಟಕದ ಜನತೆ ಏನು ನಮಗೆ ಆಶೀರ್ವಾದ ಮಾಡಿದ್ದಾರೆ ಅದನ್ನು ನಾನು ಹೇಳುತ್ತಿದ್ದೇನೆ. ಎಂದೂ ಕಂಡು ಕೇಳರಿಯದ ಬೃಹತ್ ಬೆಂಬಲವನ್ನು ನಮಗೆ ಕೊಟ್ಟಿದ್ದಾರೆ.

**ಶ್ರೀ ಕೆ.ಬಿ.ಶಾಣಪ್ಪ:–** ಇದುವರೆವಿಗೂ ಯಾವ ರಾಜ್ಯಪಾಲರು ಈ ರೀತಿ ಮಾತನಾಡಿದ್ದನ್ನು ಎಂದೂ ನೋಡಿಲ್ಲ. ನಾವು ಬಹಳ ವರ್ಷಗಳಿಂದ ಇದ್ದೇವೆ,

No Governor has said like that. . . .

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಶಾಣಪ್ಪನವರೇ, ತಾವು ಹಿರಿಯರು. ಹಿಂದೆ ಮಂತ್ರಿಯಾಗಿದ್ದವರು, ರಾಜ್ಯಸಭೆಯ ಸದಸ್ಯರಾಗಿದ್ದವರು, ಮಂತ್ರಿಗಳಾಗಿ ಕೆಲಸವನ್ನು ನಿರ್ವಹಿಸಿದ್ದೀರಿ ಮತ್ತು ನಿಮ್ಮ ಪಕ್ಷದ ಪಾರ್ಲಿಮೆಂಟ್ ಬೋರ್ಡಿನ ಅಧ್ಯಕ್ಷರಾಗಿದ್ದವರು. ಸ್ವಲ್ಪ ಸಮಾಧಾನದಿಂದ ನಮ್ಮ ಮಾತನ್ನು ಕೇಳಿ ನಂತರ ತಾವು ತಮ್ಮ ಅಭಿಪ್ರಾಯವನ್ನು ಹೇಳಿ. ಈಗ ವಿರೋಧ ಪಕ್ಷದ ಉಪ ನಾಯಕರಾಗಿದ್ದೀರಿ. ನಾನೇ ಸಭಾಪತಿಯಾಗಿ ಇದ್ದಿದ್ದರೆ ನಾನು ತಮಗೂ ಸಚಿವ ಸಂಪುಟದಲ್ಲಿ ಸ್ಥಾನವನ್ನು ಕೊಡಿಸುತ್ತಿದ್ದೆ. ಬೇಕಿದ್ದರೆ ಮಾನ್ಯ ಶಿವಯೋಗಿಸ್ವಾಮಿಯವರನ್ನು ಕೇಳಿ. ನನ್ನ ವಿಚಾರ ಹಾಗೆ.

**ಶ್ರೀ ಬಿ.ಜಿ. ಪುಟ್ಟಸ್ವಾಮಿಗೌಡ:–** ನಿಮ್ಮದೇ ಸರ್ಕಾರ ಇದೆ ಕೊಡಿಸಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, 6 ಲಕ್ಷಕ್ಕಿಂತಲೂ ಹೆಚ್ಚು ಜನ ನಮ್ಮನ್ನು ಸ್ವಾಗತಿಸಿ ನಮಗೆ ಮುಂದಿನ ಬದಲಾವಣೆಗೆ ಸಂಕೇತವನ್ನು ಕೊಟ್ಟರು. ಅದೇ ನಮಗೆ ಒಂದು ಶಕ್ತಿಯಾಯಿತು. ಕ್ಷಮಿಸಿ ಸದಾನಂದಗೌಡರೇ, ಈ ರಾಜ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಅತ್ಯಂತ ಪ್ರಗತಿಪರವಾದ ವಿಚಾರಗಳಲ್ಲಿ ಮತ್ತು ಶೈಕ್ಷಣಿಕವಾಗಿ, ಎಲ್ಲಾ ಹಂತದಲ್ಲಿ ಮೊದಲನೆಯ ಸ್ಥಾನದಲ್ಲಿ ಇತ್ತು. ಅಂದಿನ ಮಂಗಳೂರು, ಉಡುಪಿ ಜಿಲ್ಲೆಯ ಜನರು ಈ ರಾಜ್ಯದ ಶೈಕ್ಷಣಿಕ, ಔದ್ಯೋಗಿಕ ಅಭಿವೃದ್ಧಿಯಲ್ಲಿ ಮುಂದೆ ಇದ್ದರು. ಸೌಹಾರ್ದಯುತವಾಗಿ ಬಾಳತಕ್ಕಂತಹ ಜನರಲ್ಲಿ ಜಾತಿ ಮತ್ತು ಧರ್ಮದ ಹೆಸರಿನಲ್ಲಿ ವಿಭಜಿಸತಕ್ಕಂತಹ ಮತ್ತು ಮಕ್ಕಳಿಗೆ ತೊಂದರೆ ಕೊಡತಕ್ಕಂಥ ಅದರಲ್ಲೂ ಹೆಣ್ಣುಮಕ್ಕಳು ಶಾಲಾ ಕಾಲೇಜುಗಳಲ್ಲಿ ಕೂಡಿ ಮಾತನಾಡುವ ಹಾಗಿಲ್ಲ ಒಂದು ಕಪ್ ಕಾಫಿ ಕುಡಿಯುವ ಹಾಗಿಲ್ಲ. ಅಂತಹ ಒಂದು ಪರಿಸ್ಥಿತಿ ಇತ್ತು. ಮಾನ್ಯ ಹೊರಟ್ಟಿಯವರೇ, ನೀವು ಏನು ಮಾಡಿದ್ದೀರಿ ಎಂದು ಕೇಳಿದಿರಲ್ಲ. ನಾವು ಉಳ್ಳಾಲದಿಂದ ಉಡುಪಿಯವರೆಗೆ ಕೃಷ್ಣನ ಕರ್ಮಸ್ಥಳ ಏನಿದೆ ಅಲ್ಲಿಯವರೆಗೆ ಸೌಹಾರ್ದಯುತವಾಗಿ ಯಾತ್ರೆಯನ್ನು ಮಾಡಿ ಎಲ್ಲರೂ

ಒಂದಾಗಿ ಬದುಕೋಣ ಎಂದು ಹೇಳಿದ್ದೆವು. ಅದಕ್ಕೆ ಬೆಂಬಲ ಸಿಕ್ಕಿತು. 5 ವರ್ಷಗಳ ಕಾಲ ಕೃಷ್ಣೆಯ ನೀರಾವರಿ ಯೋಜನೆಗೆ ಯಾವುದೇ ಮಹತ್ವವನ್ನು ಕೊಡಲಿಲ್ಲ. ಕೃಷ್ಣೆಯ ಎ ಮತ್ತು ಬಿ ಯೋಜನೆಯಲ್ಲಿ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳಬೇಕಲ್ಲವೇ? ತಮಗೆ ಗೊತ್ತಿರುವ ಹಾಗೆ, ನಮ್ಮ ರಾಜ್ಯದಲ್ಲಿ ಕಾವೇರಿ ಮತ್ತು ಕೃಷ್ಣಾ ಜೀವ ನದಿಗಳಾಗಿವೆ. ಕೃಷ್ಣಾ ಎ ಮತ್ತು ಬಿ ಯೋಜನೆಯಲ್ಲಿ ನಾವು ಆ ನದಿಯ ನೀರನ್ನು ಬಳಸಿಕೊಳ್ಳಬೇಕಾಗಿದೆ. ಈ ನದಿಗಳು ನಮ್ಮ ಬದುಕಿನ ಶಕ್ತಿಯಾಗಿವೆ. ಅದರ ಒಂದೊಂದು ಹನಿ ನೀರೂ ಕೂಡ ಬಹಳ ಮಹತ್ವ ಪೂರ್ಣವಾಗಿದೆ. ನಮ್ಮ ರಾಜ್ಯದ ರೈತ ಹಗಲಿರಳು ದುಡಿದು ಇಡೀ ವರ್ಷ ಪರಿಶ್ರಮದಿಂದ ದುಡಿದರೂ ಬರಗಾಲ ವಿಕೋಪಗಳಿಗೆ ತುತ್ತಾಗಿ ಸಂತ್ರಸ್ತನಾಗಿ ಬಹಳ ತೊಂದರೆಗೆ ಒಳಪಡುತ್ತಾನೆ. ಅವನ ಜೀವನವನ್ನು ಹಸನು ಮಾಡಬೇಕಾಗಿದೆ. ನಾವು ನೀರಾವರಿಗೆ ಹೆಚ್ಚಿನ ಒತ್ತು ಕೊಟ್ಟು ಅವನ ಜೀವನವನ್ನು ಹಸನು ಮಾಡಬೇಕೆಂಬ ಒಂದು ಪ್ರಯತ್ನ ಪಟ್ಟಾಗಲೂ ಹಿಂದೆ ಈ ಕೆಲಸ ಆಗಿರಲಿಲ್ಲ. ಹೊಸಪೇಟೆಯಿಂದ ಕೂಡಲಸಂಗಮದವರೆಗೆ ಕೃಷ್ಣೆಯ–ಎಡೆಗೆ ನಮ್ಮ ನಡಿಗೆ ಎಂದು ನಾವು ಹೊರಟೆವು. ಹೋರಾಡಿದೆವು. ನೀವು ಏನು ಮಾಡಿದ್ದೀರಿ ಎಂದು ತಾವು ಕೇಳಿದ್ದೀರಲ್ಲ ಇದು ಸರಿಯಲ್ಲ. ಇದನ್ನು ಆಮೇಲೆ ಹೇಳುತ್ತಿದ್ದೆ. ಜನರು ನಮಗೆ ಬೆಂಬಲವನ್ನು ಕೊಟ್ಟರು. ಇಂದಿನ ಮುಖ್ಯಮಂತ್ರಿಗಳಿಂದ ಹಿಡಿದು ಮಾನ್ಯ ಜಿ.ಪರಮೇಶ್ವರ್‌ರವರೆಗೆ ಎಲ್ಲ ನಾಯಕರೂ ನಮ್ಮೊಂದಿಗೆ ಇದ್ದರು. ಅವರೆಲ್ಲರೂ ನಮಗೆ ಬೆಂಬಲವನ್ನು ಕೊಟ್ಟರು. ಅಲ್ಲಿ ನಾವು ಬದ್ಧತೆಯಿಂದ ಪ್ರಮಾಣ ಮಾಡಿದ್ದೇವೆ. ನಮ್ಮ ಆಯವ್ಯಯದಲ್ಲಿ ಒಂದು ವರ್ಷಕ್ಕೆ 10,000 ಕೋಟಿ ರೂಪಾಯಿ ನೀರಾವರಿಗೆಂದು ಇಡುತ್ತೇವೆ. ಕೃಷ್ಣಾ ಪ್ರಾಧಿಕಾರದ ನಿರ್ಧಾರ ಏನಿದೆ ಅದರ ಪ್ರಕಾರ ನೀರಾವರಿ ಯೋಜನೆಗಳನ್ನು 5 ವರ್ಷಗಳಲ್ಲಿ ಪೂರ್ಣ ಮಾಡಿ ಆ ಭಾಗದ ಜನರಿಗೆ ಒಂದು ಹೊಸ ಶಕ್ತಿಯನ್ನು ಕೊಡತಕ್ಕಂಥ ಕೆಲಸ ಮಾಡುತ್ತೇವೆಂದು ಹೇಳಿದ್ದೇವೆ. ಅದಕ್ಕಾಗಿ ಜನರು ನಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ರಾಜ್ಯದ ಉದ್ದಗಲಕ್ಕೂ ಮತ್ತು ಎರಡೂ ಸದನಗಳಲ್ಲಿ ರಾಜ್ಯದ ಜನರ ಸಮಸ್ಯೆಗಳ ಪರವಾಗಿ ನಾವು ಸರ್ಕಾರವನ್ನು ಸರಿದಾರಿಗೆ ತರಲು ಸಾಕಷ್ಟು ಪ್ರಯತ್ನವನ್ನು ಮಾಡಿದ್ದೇವೆ. ಅದೆಲ್ಲವನ್ನೂ

ಗಮನಿಸಿದ ಕರ್ನಾಟಕ ರಾಜ್ಯದ ಜನರು ನಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ. ಈ ದೇಶದ ಇತಿಹಾಸದ ಬಗ್ಗೆ ನಿಮಗೇ ಗೊತ್ತಿದೆ. ಪೂಜ್ಯ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರಿಂದ ಹಿಡಿದು ಸಾವಿರಾರು ವರ್ಷಗಳಿಂದ ಈ ದೇಶದ ಮೂಲಶಕ್ತಿ ವಿವಿಧತೆಯಲ್ಲಿ ಏಕತೆ ಎನ್ನುವುದೇ ಆಗಿದೆ. ಈ ದೇಶದ ಮೂಲ ಚೈತನ್ಯ ಎಲ್ಲಾ ವರ್ಗದ ಜನರು ಬೇರೆ ಬೇರೆ ಭಾಷೆಗಳನ್ನು ಮಾತನಾಡತಕ್ಕಂತಹ ಜನರು ಎಲ್ಲರೂ ಐಕ್ಯತೆಯಿಂದ ಒಂದಾಗಿ ಬದುಕಿ ಬಾಳುವುದೇ ಈ ದೇಶದ ಮೂಲಶಕ್ತಿ. ಆ ಶಕ್ತಿಯ ಆಧಾರ, ಆ ಶಕ್ತಿಯ ಪ್ರತೀಕ ರಾಷ್ಟ್ರಪಿತ ಮಹಾತ್ಮಾಗಾಂಧಿಯವರು ಎಂದರೆ ತಪ್ಪಾಗಲಿಕಿಲ್ಲ. ಅವರು 'ಈಶ್ವರ ಅಲ್ಲಾ ತೇರೇ ನಾಮ್ ಸಬ್ ಕೋ ಸನ್ಮತಿ ದೇ ಭಗವಾನ್' ಎಂದು ಹೇಳಿದರು. ಎಲ್ಲರೂ ಒಂದಾಗಿ ಎಂದು ನಾವು ಹೇಳುತ್ತೇವೆ. ಯಾರು ಆ ರೀತಿ ಹೇಳಲಿಲ್ಲ ಅವರಿಗೆ ತೊಂದರೆಯಾಗಿದೆ.

**ಶ್ರೀ ಗೋ ಮಧುಸೂದನ್(ಪದವೀಧರ ಕ್ಷೇತ್ರ):-** ಸ್ವಲ್ಪ give and take ಇರಬೇಕಾಗುತ್ತದೆ. ಅಧಿಕಾರಕ್ಕೆ ಬಂದಾಗಲಾದರೂ ಸ್ವಲ್ಪ ಸಮಾಧಾನದಿಂದ ಕೇಳಿ. ಪೂಜ್ಯ ಮಹಾತ್ಮಾ ಗಾಂಧಿಯವರ ಬಗ್ಗೆ ಕಾಂಗ್ರೆಸ್ಸಿನ ಬಗ್ಗೆ ಇತಿಹಾಸದ ಬಗ್ಗೆ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಹೇಳುತ್ತಿದ್ದಾರೆ. ವಿವಿಧತೆಯಲ್ಲಿ ಏಕತೆ ಬಗ್ಗೆ ಅವರು ಹೇಳಿದರು.

ಆ ಎಲ್ಲಾ ಸಂಗತಿಗಳನ್ನು ಹೇಳುತ್ತಾ ಅವರು ಒಂದು ಮಾತನ್ನು ಹೇಳಿದ್ದಾರೆ. ಆ ಸಂಗತಿ ತಮಗೆಲ್ಲಾ ಮರೆತು ಹೋಗಿದೆ. ಈ ದೇಶ ಇಭ್ಭಾಗ ಆಗುವುದಕ್ಕಿಂತ ಮುಂಚೆ ಅಂದರೇ 1947ನೇ ಆಗಸ್ಟ್ 15ಕ್ಕಿಂತ ಮುಂಚೆ Congress was a Hindu Party; Muslim League was a Muslim Party. The Congress was not considered as a Party of everybody.

**Sri VEERANNA MATHIKATTI:-** No. Congress is considered as a Party of the Nation. You don't know that.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ಮಹಾತ್ಮಾ ಗಾಂಧಿಜೀಯವರು ಹೇಳಿರುವಂಥ ಅನೇಕ ಸಂಗತಿಗಳು ಇವರಿಗೆ ಗೊತ್ತಿಲ್ಲ.

I am proud to call a Hindu ಎಂದು ಹೇಳಿದರು. 'ನನಗೆ ಅಧಿಕಾರ ಸಿಕ್ಕರೆ ನಾನು ಮಾಡುವಂಥ ಮೊದಲನೆ ಕೆಲಸ ಅಂದರೆ ಗೋಹತ್ಯೆ ನಿಷೇಧವನ್ನು ಮಾಡುತ್ತೇನೆ, ಪಾನ ನಿಷೇಧವನ್ನು ಮಾಡುತ್ತೇನೆ' ಎಂದು ಹೇಳಿದ್ದಾರೆ. ಆದರೆ, ನೀವು ಇವೊತ್ತು ಎರಡನ್ನು ಮರೆತು ಬಿಟ್ಟಿದ್ದೀರಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಗೋಹತ್ಯೆ ನಿಷೇಧ ಮಸೂದೆ ಮೊದಲೇ ಈ ದೇಶದಲ್ಲಿದೆ. ಅದು ತಮಗೂ ಗೊತ್ತಿದೆ. ಅದು perverted ಅಲ್ಲ.

**ಶ್ರೀ ಹೆಚ್.ಕೆ. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ಶ್ರೀ ಗೋ.ಮಧುಸೂದನ್ ರವರು ಅತ್ಯಂತ ಅಭಿಮಾನದಿಂದ, ಗೌರವದಿಂದ ರಾಷ್ಟ್ರಪಿತ ಮಹಾತ್ಮಾ ಗಾಂಧಿಜೀಯವರ ಮಾತುಗಳನ್ನು ಉಲ್ಲೇಖಿಸಿ ಒಳ್ಳೆಯ ಮಾತುಗಳನ್ನಾಡಿದ್ದಾರೆ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷದವರಿಗೆ ಗಾಂಧಿ ಅಂದರೆ ಸೋನಿಯಾ ಗಾಂಧಿ ಮಾತ್ರ ಗೊತ್ತು. ಇವೊತ್ತು ಮಹಾತ್ಮಾ ಗಾಂಧಿ ಎಂದು ಹೇಳುವವರು ನಾವು ಮಾತ್ರ. ಏಕೆಂದರೆ ನಮ್ಮ ಬಿ.ಜೆ.ಪಿ.ಯ ತತ್ವ ಸಿದ್ಧಾಂತದಲ್ಲಿ ಗಾಂಧಿ ಪ್ರೇರಿತ ಸಮಾಜವಾದವನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ, ಅದನ್ನು ನೀವು ಬಿಟ್ಟಿದ್ದೀರಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸೈಡ್ ಬೈ ಸೈಡ್ ಗೋಡ್ಸೆಯವರ ಹೆಸರನ್ನು ಕೂಡ ಹೇಳುತ್ತಾರೆ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಹೊರಟ್ಟಿಯವರು ಸೈಡ್ ಬೈ ಸೈಡ್ ಘೋಡ್ಸೆಯವರ ಹೆಸರನ್ನು ಕೂಡ ಹೇಳುತ್ತಾರೆ ಎಂದು ಹೇಳಿದ್ದಾರೆ. ಅದನ್ನು ನೀವು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಮಹಾತ್ಮಾ ಗಾಂಧಿಜೀಯವರ ಬಗ್ಗೆ ಇಷ್ಟು ಅಭಿಮಾನದಿಂದ ಹೇಳಿಕೊಳ್ಳುವವರು ನಿಮಗೆ ಸಂಬಂಧ ಇದ್ದಂಥ ಯಾವ ಸಂಘಟನೆಗಳು ಘೋಡ್ಸೆಯವರನ್ನು ನಮ್ಮ ಕರ್ನಾಟಕದ ಯಾವುದೋ

ಭಾಗದಲ್ಲಿ ಅವರ ಹೆಸರನ್ನು ನೆನಪಿಸಿಕೊಂಡು ಕೆಲವರಿಗೆ ಸನ್ಮಾನ ಮಾಡತಕ್ಕಂಥದ್ದು ಏನು ನಡೆಯುತ್ತಿದೆ ಅದು ನಡೆಯಬಾರದು ಎಂದು ಹೇಳಬೇಕು.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ಸಂಘ ಪರಿವಾರದ, ಬಿ.ಜೆ.ಪಿ.ಯ ಯಾವ ಸಂಘಟನೆಯೂ ಸಹ ಘೋಡ್ಸೆ ಹೆಸರಿನಲ್ಲಿ ಯಾವುದೇ ಪ್ರಶಸ್ತಿಯನ್ನು ಕೊಟ್ಟಿಲ್ಲ. ಯಾವುದೇ ಸನ್ಮಾನವನ್ನು ಮಾಡಿಲ್ಲ. ಪ್ರತಿನಿತ್ಯ ಸಂಘದ ಕಾರ್ಯಕರ್ತನಾಗಿ ನಾನು ಸುಪ್ರಭಾತವನ್ನು ಹೇಳುತ್ತೇನೆ. ಪ್ರಾತಃಸ್ಮರಣೆಯನ್ನು ಮಾಡುತ್ತೇವೆ. ಅದರಲ್ಲಿ ಗಾಂಧಿಜೀಯವರ ಹೆಸರನ್ನು ನಾವು ಹೇಳಿಕೊಂಡಿದ್ದೇವೆ. ಗಾಂಧಿಜೀಯವರ ಬಗ್ಗೆ ನಮಗೆ ಪ್ರಚಾರ ಬೇಕಾಗಿಲ್ಲ, ಘೋರಂಗಳು ಬೇಕಾಗಿಲ್ಲ. ಗಾಂಧಿಜೀಯವರು ವಾದ್ರಾದ ಆರ್.ಎಸ್.ಎಸ್. ಕ್ಯಾಂಪ್‌ಗೆ ಬಂದಿದ್ದರು. ಇದು ಸುಳ್ಳಲ್ಲ ಸ್ವಾಮಿ, ಗಾಂಧಿಜೀಯವರ ಬಗ್ಗೆ ನಿಮಗೆ ಗೊತ್ತಿಲ್ಲದ ಅನೇಕ ಸಂಗತಿಗಳಿವೆ. ನೀವು ಅದನ್ನೆಲ್ಲಾ ಮರೆತುಬಿಟ್ಟಿದ್ದೀರಿ. ನಿಮಗೆ ಗೊತ್ತಿರುವುದು ಕೇವಲ ಇಬ್ಬರು ಗಾಂಧಿಗಳು ಅದು ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಸಂಜಯ್ ಗಾಂಧಿ ಗೊತ್ತಿಲ್ಲ, ರಾಜೀವ್ ಗಾಂಧಿ ಕೂಡ ಗೊತ್ತಿಲ್ಲ.

**ಶ್ರೀ ಹೆಚ್.ಕೆ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್‌ರವರು ಪರಿವರ್ತನೆಯನ್ನು ಏನು ತೋರಿಸುತ್ತಿದ್ದಾರೆ ಅದನ್ನು ನಾನು ಬಹಳಷ್ಟು ಮೆಚ್ಚುತ್ತೇವೆ. ಈ ಪರಿವರ್ತನೆ ಆಗಬೇಕೆನ್ನುವುದೇ ನಮ್ಮ ಅಪೇಕ್ಷೆ. ಮಹಾತ್ಮಾ ಗಾಂಧಿಜೀಯವರು ತಮ್ಮನ್ನು ಕೊಲೆ ಮಾಡಿದವರಿಗೆ ಕ್ಷಮೆ ನೀಡಿದ್ದಾರಂತೆ, ನೀವು ಪರಿವರ್ತನೆ ಆಗುವಂಥ ಸಂದರ್ಭದೊಳಗೆ ಜನ ನಿಮ್ಮನ್ನು ಕ್ಷಮಿಸುವುದಿಲ್ಲವೇ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಇದೆಲ್ಲಾ ಇತಿಹಾಸ ಈಗ ಬೇಡ.

**ಸಭಾಪತಿಯವರು:–** ಈಗ ಅದು ಆಯಿತು. ನೀವು ಮುಂದಕ್ಕೆ ಹೋಗಿ.

**ಶ್ರೀ ಆರ್.ಕೆ.ಸಿದ್ಧರಾಮಣ್ಣ:-** ಮಾನ್ಯ ಸಭಾಪತಿಯವರೇ, ಮಹಾತ್ಮಾ ಗಾಂಧಿಜೀಯವರ ಬಗ್ಗೆ ನಮಗೂ ಗೌರವ ಇದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಅದನ್ನು ನೀವು ಒಪ್ಪಿಕೊಂಡರೆ ಅದು ಒಂಭತ್ತನೇ ಅದ್ಭುತ.

**ಶ್ರೀ ಆರ್.ಕೆ. ಸಿದ್ಧರಾಮಣ್ಣ:-** ಮಾನ್ಯ ಸಭಾಪತಿಯವರೇ, ಅದು ಒಂಬತ್ತನೆ ಅಥವಾ ಹತ್ತನೇ ಅದ್ಭುತ ಇರಲಿ ಆದರೆ ನೀವು ಒಪ್ಪಿಕೊಂಡಿದ್ದೀರಲ್ಲ ನಮಗೆ ಅದೇ ಸಂತೋಷ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ನೀವು ಹೀಗೆ ಹೇಳಿ ಹೇಳಿ ಯಾರು ನಿಮಗೆ ಅಧಿಕಾರಕ್ಕೆ ತಂದಿದ್ದಾರೆ ಅವರನ್ನು ನೀವು ಮೂಲೆಗುಂಪು ಮಾಡಿದ್ದೀರಿ. ಅದಕ್ಕಾಗಿ ಅವರು ನಿಮಗೆ ಇವೊತ್ತು ಅಲ್ಲಿ ಕೂಡಿಸಿದ್ದಾರೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮ್ಮ ದೇಶದ ಪ್ರಧಾನ ಮಂತ್ರಿಯವರ ಭಾಷಣ ಕೇಳಿ.

**ಶ್ರೀ ಭಾನುಪ್ರಕಾಶ್:-** ಮಾನ್ಯ ಸಭಾಪತಿಯವರೇ, ಇಲ್ಲಿ ಒಂದು ಪುಸ್ತಕದಲ್ಲಿ ಒಂದು ವಿಚಾರ ಇದೆ ಅದನ್ನು ಓದುತ್ತೇನೆ. ಸಂಬೋಧನೆ ಮಾಡುವಾಗ "ಬೇರೆ ಯಾವ ಸಂಬೋಧನೆಗಳನ್ನು ಬಳಸಲು ಸಾಧ್ಯವಿಲ್ಲ. ಹೀಗಾಗಿ ಕೇಂದ್ರ ಸರ್ಕಾರ ಮಹಾತ್ಮಾ ಗಾಂಧಿಜೀಯವರನ್ನು 'ರಾಷ್ಟ್ರಪಿತ' ಎಂದು ಸಂಬೋಧಿಸುವುದಿಲ್ಲವೆಂದು" ಗೃಹ ಸಚಿವಾಲಯ ಸ್ಪಷ್ಟನೆ ನೀಡಿದೆ. ಇದು ಸಭೆಯ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ಏನೇ ಹೇಳಲಿ, ಮಧುಸೂದನ್‌ರವರು ಹೇಳಲಿ, ಮತ್ಯಾರೋ ನಿಮ್ಮವರು ಹೇಳಲಿ ಮಹಾತ್ಮಾ ಗಾಂಧಿಜೀ ವಿಶ್ವ ಕಂಡ ಶ್ರೇಷ್ಠ ಮಾನವತಾವಾದಿ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೆ, ಮತ್ತಿಕಟ್ಟಿವರಿಗೂ ಮಹಾತ್ಮಾ ಗಾಂಧಿಜೀಯವರಿಗೂ ಏನೂ ಸಂಬಂಧವಿಲ್ಲ. ಆ

ಗಾಂಧಿಯವರೇ ಬೇರೆ, ಈ ಗಾಂಧಿಯವರೇ ಬೇರೆ. ಆ ಮೂರರಲ್ಲಿಯೂ ಈ ಅಮ್ಮ ಹುಟ್ಟಲಿಲ್ಲ. ಈ ಅಮ್ಮನಿಗೆ ಏನೂ ಗೊತ್ತಿಲ್ಲ.

**ಶ್ರೀ ಅಲ್ಲಮ ಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೆ, ಶ್ರೀಮತಿ ಸೋನಿಯಾ ಗಾಂಧಿಯವರು ಪ್ರಧಾನ ಮಂತ್ರಿ ಪಟ್ಟಕ್ಕೆ ಹೋಗಿ ಅಂದರೂ ಅವರು ನಿರಾಕರಣೆಯನ್ನು ಮಾಡಿದ್ದಾರೆ. ಅಂತಹ ವ್ಯಕ್ತಿತ್ವ ಅವರದು. ನೀವು ಅವರನ್ನು ಅಷ್ಟೊಂದು ಅವಗಣನೆ ಮಾಡಬೇಡಿ.

(ಗೊಂದಲ)

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ಅವರು ಅದನ್ನೆಲ್ಲಾ ಹೇಳುವುದು ಬೇಡ. ಯಾರೋ ಒಬ್ಬ ಕಠ್‌ಪುತ್ಥಳಿಯನ್ನು ಪ್ರಧಾನ ಮಂತ್ರಿ ಮಾಡಿಕೊಂಡು ಅವರನ್ನು ಆಟ ಆಡಿಸುತ್ತಿದ್ದಾರೆ.

(ಗೊಂದಲ)

**ಶ್ರೀ ಹೆಚ್.ಕೆ. ಪಾಟೀಲ್:-** ಮಾನ್ಯ ಸಭಾಪತಿಯವರೇ, ತಾವು ಆ ಪದವನ್ನು ಕಡತದಿಂದ ತೆಗೆದು ಹಾಕಿ ಎಂದು ಅಷ್ಟೇ ಹೇಳುವುದಿಲ್ಲ. ಮಧುಸೂದನ್‌ರವರಿಗೆ ತಾವು ವಾರ್ನ್ ಮಾಡಬೇಕಾಗುತ್ತದೆ. ಜಗತ್ ಕಂಡಂಥ ಒಬ್ಬ ಶ್ರೇಷ್ಠ Economist ಎಂದು ನಾವಷ್ಟೆ ಅಲ್ಲ ಅಮೇರಿಕಾ ಕೂಡ ಹೇಳುತ್ತದೆ. ಅತ್ಯಂತ ದೊಡ್ಡ ರಾಷ್ಟ್ರವಾದ ಅಮೇರಿಕಾ ಕೂಡ ನಮ್ಮ ದೇಶದ ಪ್ರಧಾನ ಮಂತ್ರಿಯವರ ಭಾಷಣವನ್ನು ಕೇಳಿ ತಮ್ಮ ನಿಲುವುಗಳನ್ನು ನಿರ್ಮಾಣ ಮಾಡುತ್ತದೆ.

**ಸಭಾಪತಿಯವರು:-** ಈಗ ಆ ಚರ್ಚೆ ಬೇಡ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಯವರೇ, ಹಾಗಾದರೆ ಇವರು ಅವರನ್ನು ಬರೀ ಹುಬ್ಬಳ್ಳಿಗೆ ಮಾತ್ರ ಕರೆದುಕೊಂಡು ಬಂದು ಏಕೆ ಭಾಷಣ ಮಾಡಿಸಿದರು? ಅವರು ಬೇರೆ ಕಡೆ ಎಲ್ಲೂ ಏಕೆ ಬರಲಿಲ್ಲ? ಎಲ್ಲಾ ಕಡೆಗೆ ಅವರನ್ನು ಕರೆಯಿಸಿ ಭಾಷಣ ಮಾಡಿಸಬೇಕಾಗಿತ್ತು.

**ಸಭಾಪತಿಯವರು:–** ಈಗ ಸಾಕು, ಆ ಚರ್ಚೆ ಬೇಡ. ವಿಷಯಕ್ಕೆ ಬನ್ನಿ. ಅದರ ಬಗ್ಗೆ ಚರ್ಚೆ ಬೇಡ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮನ್‌ಮೋಹನ್ ಸಿಂಗ್‌ರವರ ಬಗ್ಗೆ ಮಧುಸೂದನ್‌ರವರು ಮಾತನಾಡಿದ್ದಾರೆ. ನಾನು ಒಂದು ವಿಷಯ ಬಹಳ ನೋವಿನಿಂದ ಹೇಳಬೇಕಾಗಿದೆ. ನೀವು ಒಬ್ಬ ಉತ್ತಮ ಸದಸ್ಯ ಹಾಗೂ ಒಬ್ಬ ಉತ್ತಮ ನಾಗರಿಕ ಎಂದು ಕೂಡ ನಂಬಿದ್ದೇನೆ.

**ಶ್ರೀ ಆರ್.ಕೆ. ಸಿದ್ಧರಾಮಣ್ಣ:–** ಮಾನ್ಯ ಸಭಾಪತಿಯವರೇ, ನಾವು ಕೂಡ ಉತ್ತಮ ನಾಗರಿಕರು. ಅವರು ಒಬ್ಬರೇ ಉತ್ತಮ ನಾಗರಿಕರು ಎಂದು ನಂಬಿದರೆ ಹೇಗೆ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ನೀವು ಅಲ್ಲ ಎಂದು ನಾನು ಹೇಳಿಲ್ಲ. ಅವರು ಕೂಡ ಇದ್ದಾರೆಂದು ನಾನು ಹೇಳಿದ್ದೇನಷ್ಟೆ. ಈ ದೇಶದ ಮಾನ, ಮರ್ಯಾದೆ ಹರಾಜು ಆಗಿತ್ತು, ನಮ್ಮ ಬಂಗಾರವನ್ನು England ನಲ್ಲಿ ಒತ್ತೆ ಇಟ್ಟಿದ್ದರು. ಆಗ ಮಾನ್ಯ ಪಿ.ವಿ.ನರಸಿಂಹರಾವ್‌ರವರ ಸರ್ಕಾರದಲ್ಲಿ ಶ್ರೀ ಮನಮೋಹನ್ ಸಿಂಗ್‌ರವರು ಹಣಕಾಸಿನ ಸಚಿವರಾಗಿದ್ದರು, ಅವರು ಆ ಬಂಗಾರವನ್ನು ಮತ್ತೆ ವಾಪಸ್ಸು ತಂದಿದ್ದಾರೆ. ಅದು ತಮಗೆ ಗೊತ್ತಿರಲಿ. ವಿಶ್ವದಲ್ಲಿಯೇ ಆರ್ಥಿಕ ಸಂಕಷ್ಟ ಇದ್ದಾಗ America ದಂಥ ರಾಷ್ಟ್ರ ಆರ್ಥಿಕ ಸಂಕಷ್ಟದಲ್ಲಿದ್ದಾಗ, America ದ ನೂರಾರು ಬ್ಯಾಂಕ್‌ಗಳು ದಿವಾಳಿ ತೆಗೆದಾಗ ಈ ರಾಷ್ಟ್ರಕ್ಕೆ ಈ ರಾಜ್ಯಕ್ಕೆ ಭದ್ರವಾದ ಬುನಾದಿ ಹಾಕಿದ್ದಾರೆ. ಅವರು ನಮ್ಮ ಬಂಗಾರವನ್ನು ಮರಳಿ ವಾಪಸ್ಸು ತಂದಿದ್ದಾರೆ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, ಆ ಬಂಗಾರವನ್ನು ನಾವು ಒತ್ತೆ ಇಟ್ಟಿದ್ದಲ್ಲ. ಆ ಬಂಗಾರವನ್ನು ಶ್ರೀ ಚಂದ್ರಶೇಖರ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ, ಶ್ರೀ ರಾಜೀವ್ ಗಾಂಧಿಯವರು ಶ್ರೀ ಚಂದ್ರಶೇಖರ್ ರವರಿಗೆ ಸಪೋರ್ಟ್ ಮಾಡಿದ ಸರ್ಕಾರ ಇದ್ದಾಗ ಆ ಬಂಗಾರ ಒತ್ತೆ ಇಟ್ಟಿದ್ದು.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಅವೆಲ್ಲಾ ನಿಮ್ಮ ಪ್ರೊಡಕ್ಷನ್. ತಾವು ಸ್ವಲ್ಪ ಸುಮ್ಮನೆ ಇರುವುದು ಕಲಿತುಕೊಳ್ಳಿ. ಪ್ರಧಾನ ಮಂತ್ರಿಯವರ ಬಗ್ಗೆ ಹಾಗೆ ಮಾತನಾಡಬಾರದು. ವಿಶ್ವದ ಬಲಾಢ್ಯ ಹೊಂದುತ್ತಿರುವ ಹತ್ತು ರಾಷ್ಟ್ರಗಳಲ್ಲಿ ಭಾರತ ದೇಶವೂ ಒಂದಾಗಿದೆ. ಅಂತಹ ಶಕ್ತಿ ತಂದು ಕೊಟ್ಟಿರುವಂಥವರು ಪ್ರಧಾನಿ ಶ್ರೀ ಮನಮೋಹನ್ ಸಿಂಗ್‌ರವರು ಅದನ್ನು ನೀವು ತಿಳಿದುಕೊಳ್ಳಬೇಕು. ನಾನು ನಿಮ್ಮಲ್ಲಿ ಹಗರಣ ಮಾಡಿರುವವರ ಎಷ್ಟೋ ಹೆಸರು ಹೇಳಲಿಲ್ಲ. ಆದರೂ ನಿಮಗೆ ತಿಳುವಳಿಕೆ ಇಲ್ಲ ಎಂದರೆ ಏನು ಹೇಳಲಿ. ಆದಕಾರಣ ದಯಮಾಡಿ ಆ ರೀತಿ ಹೋಗಬೇಡಿ.

**ಸಭಾಪತಿಯವರು:-** ಸದನದ ಸದಸ್ಯರಲ್ಲದವರ ಹೆಸರನ್ನು ಸದನದಲ್ಲಿ ಹೇಳುವುದು ಬೇಡ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯ 2004ರವರೆಗೆ ಈ ರಾಷ್ಟ್ರದಲ್ಲಿ 3-4ನೇ ಸ್ಥಾನದಲ್ಲಿ ಇದ್ದಿದ್ದು 5 ವರ್ಷದ ಹಿಂದೆ, 14ನೇ ಸ್ಥಾನಕ್ಕೆ ಬಂದಿದೆ. ನಮ್ಮ ಜನರು ವಿಶಾಲ ಹೃದಯವಂತಿಕೆ, ಸಹಕಾರವನ್ನು ಬಯಸುತ್ತಾರೆ. ನೀವು ಅದನ್ನು ಮಾಡದಿದ್ದಕ್ಕಾಗಿ ಕಳೆದ ಬಾರಿ ನಿಮಗೆ ಶೇಕಡಾ 35ರಷ್ಟು ಮತವನ್ನು ಕೊಟ್ಟಿರುವಂಥದ್ದನ್ನು ಈಗ ಶೇಕಡಾ 22ಕ್ಕೆ ಇಳಿಸಿದ್ದಾರೆ. ಅದಕ್ಕೆ ಕಾರಣವೇನೆಂದು ತಾವು ತಿಳಿದುಕೊಳ್ಳಬೇಕು.

ನಾನು ಹಲವಾರು ಸಾರಿ ಹೇಳಿದ್ದೇನೆ. ನಾವು ಇಲ್ಲಿಂದ ಮನೆಗೆ ಹೋದ ಮೇಲೆ ಮನೆಯಲ್ಲಿ ಅರ್ಧ ಗಂಟೆ ಕಾಲ ಕುಳಿತುಕೊಂಡು ನಾವು ಇವತ್ತಿನ ದಿವಸ ಏನು ಮಾಡಿದೆವು, ನಮ್ಮ ಜೊತೆಯಲ್ಲಿ ಯಾರ್‍ಯಾರು ಏನೇನು ಮಾಡಿದರೆಂದು ಯೋಚನೆ ಮಾಡಬೇಕು. ಆಗ ನಮ್ಮ ಆತ್ಮವೇ ನಮಗೆ ಗೈಡ್ ಅಗುತ್ತದೆ. ನಮ್ಮ ಆತ್ಮ ಇವತ್ತು ಇದನ್ನು ತಪ್ಪು ಮಾಡಿದೆ, ಇದನ್ನು ಮಾಡಬಾರದಿತ್ತೆಂದು ಹೇಳುತ್ತದೆ. ಈ ರೀತಿಯಾಗಿ ಪ್ರತಿಯೊಬ್ಬರ ಆತ್ಮ ಕೂಡ ಹೇಳುತ್ತದೆ. ನೀನು ತಪ್ಪು ನಿರ್ಧಾರಕ್ಕೆ ಬೆಂಬಲಿಸಿದರೆ, ನೀನು ತಪ್ಪು ಮಾಡುವವರ ಜೊತೆಯಲ್ಲಿರುವೆ ಎಂದು ಆತ್ಮ ಹೇಳುತ್ತದೆ. ಈ ರಾಜ್ಯದಲ್ಲಿ ನಾನು ಹಲವಾರು ಸಾರಿ ಪ್ರಚಾರ ಸಮಿತಿಗಳ ಸಭೆಗಳಲ್ಲಿ ಹೇಳಿದ್ದೇನೆ. ವ್ಯಕ್ತಿಗತ ನಿಂದನೆ, ದುರಂಹಕಾರ, ವೈಯಕ್ತಿಕ ಆಸೆ-ಆಕಾಂಕ್ಷೆಗಳು, ಆಸೆಗಿಂತ

ದುರಾಸೆಯಿಂದ ನಾವು ಇಡೀ ವ್ಯವಸ್ಥೆಯನ್ನೇ ಬಲಿಕೊಡತಕ್ಕಂತಹ ಕೆಲಸವನ್ನು ಕೆಲವರು ಮಾಡಿದ್ದಾರೆ. ಅದು ಆಗಬಾರದು. ನಾವು ಯಾವಾಗಲೂ ಒಂದಾಗಿ ಬದುಕಬೇಕು. ಇವತ್ತಿನ ದಿವಸ ನಮ್ಮ ಪಕ್ಷ ಅಧಿಕಾರಕ್ಕೆ ಬಂದಿದ್ದರೆ ಎಲ್ಲಾ ನಾಯಕರುಗಳ ಪರಿಶ್ರಮ, ನಮ್ಮ ಸಾಮಾನ್ಯ ಲಕ್ಷಾಂತರ ಕಾರ್ಯಕರ್ತರ ನಿಷ್ಠೆ, ಅದರ ಜೊತೆಗೆ ಎಲ್ಲಕ್ಕೂ ವಿಶೇಷವಾಗಿ ಕರ್ನಾಟಕದ ಜನರು, ಆ ಜನರ ಅಭಿಪ್ರಾಯ ಮತ್ತು ಆ ಜನರ ಆಶೀರ್ವಾದ ಇದು ಬಹಳ ಮುಖ್ಯ. ಕರ್ನಾಟಕ ರಾಜ್ಯದ ಜನ ಯಾರೇ ಆಗಲಿ ಅನ್ಯಾಯವನ್ನು, ದುರಂಹಕಾರವನ್ನು, ದಬ್ಬಾಳಿಕೆಯನ್ನು, ಭ್ರಷ್ಟತೆಯನ್ನು ಸಹಿಸುವುದಿಲ್ಲ ಎನ್ನುವುದಕ್ಕೆ ಇದು ನಿದರ್ಶನ ಎನ್ನುವಂತಹ ಮಾತನ್ನು ತಮ್ಮ ಮುಖಾಂತರ ಹೇಳುತ್ತಿದ್ದೇನೆ. ಇನ್ನೊಂದು ಮಾತು ಏನೆಂದರೆ, ಇಲ್ಲಿ ಕರ್ನಾಟಕ ರಾಜ್ಯ ಎಂದ ಕೂಡಲೇ, ನಾನು ಹೇಳಿದಂತೆ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಬಗ್ಗೆ ಹೇಳಿದ್ದೇನೆ. ಈ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಸಾಮಾಜಿಕ ಪರಿವರ್ತನಾ ಕ್ರಾಂತಿ, ಹುಟ್ಟಿನ ಆಧಾರದ ಮೇಲೆ ಮೇಲು–ಕೀಳು ಎಂಬ ಭಾವನೆ ಏನಿತ್ತು ಅದನ್ನು ತೊಡೆದು ಹಾಕಿ ಸರ್ವಜನರಿಗೆ ಸಮಾನತೆಯ ಅವಕಾಶವನ್ನು ಕಲ್ಪಿಸಿದಂತಹ 12ನೇ ಶತಮಾನದ ಶರಣರ ಮಹಾಕ್ರಾಂತಿ ಏನಿದೆ ಅದು ಪರಿವರ್ತನೆಯ ಕ್ರಾಂತಿ. ಅದರಲ್ಲಿ ಎರಡು ಅಂಶಗಳಿಗೆ ಒತ್ತನ್ನು ಕೊಟ್ಟರು. ಒಂದು ಕಾಯಕ ಅಂದರೆ ಕೆಲಸ, ಕ್ರಿಯೆ. ಕಾಯಕ ಮಾಡಬೇಕು. ಜೊತೆಗೆ ಗಳಿಸುವಂತಹ ಆದಾಯದಲ್ಲಿ ಸ್ವಲ್ಪ ಹಣವನ್ನು ಬೇರೆ ಜನರಿಗೆ, ಸಮಾಜಕ್ಕೆ ಋಣಿಯಾಗಿರಬೇಕೆಂದು ಹೇಳಿದರು. ಚಪ್ಪಲಿ ಹೊಲೆಯುವ ಕಾಯಕ್ಕಕೂ ಗೌರವವನ್ನು ಕೊಟ್ಟರು. ದೊಡ್ಡ ದೊಡ್ಡ ಕೆಲಸಕ್ಕೂ ಗೌರವ ಕೊಟ್ಟರು. ಕಾಯಕದ ಬಗ್ಗೆ ಪ್ರಧಾನ ಮಂತ್ರಿಗಳಾಗಿದ್ದಂತಹ ಶ್ರೀಮಾನ್ ಜವಹರಲಾಲ್ ನೆಹರುರವರು "work is work ship" ಎಂದು ಹೇಳಿದರು. ಈ ಭೂಮಿಕೆಯ ಹಿನ್ನೆಲೆಯಲ್ಲಿ ಮೈಸೂರು ಮಹಾರಾಜರು ಮೊಟ್ಟಮೊದಲ ಬಾರಿಗೆ ಹಿಂದುಳಿದ ವರ್ಗದ ಆಯೋಗವನ್ನು ರಚಿಸಿ, ಹೊಸ ಒಂದು ಬದಲಾವಣೆಗೆ ಅವರು ಪ್ರಯತ್ನ ಮಾಡಿದರು. ಇಂತಹ ಒಂದು ಮಹತ್ತರವಾದ, ಸಾಮಾಜಿಕ ಕ್ರಾಂತಿ ಹಿನ್ನಲೆ ಕರ್ನಾಟಕ ರಾಜ್ಯಕ್ಕೆ, ಕರ್ನಾಟಕದ ಜನತೆಗೆ ಇದೆ. ಅದನ್ನೇ ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಯಾವ

ವರ್ಗ ಶೋಷಣೆಗೆ ಒಳಗಾಗಿದೆ, ದೀನರಿದ್ದಾರೆ, ದಲಿತರಿದ್ದಾರೆ, ಅಲ್ಪಸಂಖ್ಯಾತರಿದ್ದಾರೆ ಅವರಿಗೆಲ್ಲಾ ಶಕ್ತಿಯನ್ನು ಕೊಟ್ಟು ಮುನ್ನಡೆಸತಕ್ಕಂತಹ ಕೆಲಸವನ್ನು ನಾವು ಮಾಡಬೇಕು. ಗೌರವಾನ್ವಿತ ರಾಜ್ಯಪಾಲರು ಈ ಸರ್ಕಾರದ ಬದ್ಧತೆ ಮತ್ತು ಮುಂದೆ ಮಾಡತಕ್ಕಂತಹ ನಿರ್ಧಾರಗಳೇನಿವೆ, ಅವುಗಳ ಬದ್ಧತೆಗಳನ್ನು ಅವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾನು ಮತ್ತೊಂದು ಮಾತನ್ನು ಹೇಳುವುದೇನೆಂದರೆ, ಇಲ್ಲಿ ತಾವು ನೋಡಿರಬಹುದು. ಒಂದು ಉತ್ತಮವಾದಂತಹ ರಾಜ್ಯವನ್ನು ರಚಿಸಬೇಕಾದರೆ, ಅಭಿವೃದ್ಧಿ ಪರವಾದಂತಹ ರಾಜ್ಯವನ್ನು ನಿರ್ಮಾಣ ಮಾಡಬೇಕಾದರೆ, ಬಹಳಷ್ಟು ಉತ್ತಮವಾದಂತಹ ನಿರ್ಧಾರಗಳನ್ನು, ಮೂಲಭೂತವಾದಂತಹ ಅನುಕೂಲತೆಗಳನ್ನು ಜನರಿಗೆ ತಲುಪಿಸಬೇಕು. ಇದಕ್ಕಿಂತಲೂ ಹೆಚ್ಚಾಗಿ ಈ ರಾಜ್ಯದ ಶಾಂತಿಯನ್ನು ಕಾಪಾಡುವುದು. ಒಂದು ಉತ್ತಮವಾದ ಶಾಂತಯುತವಾದಂತಹ ವಾತಾವರಣವನ್ನು ಈ ರಾಜ್ಯದಲ್ಲಿ ತರಬೇಕು. ಒಬ್ಬರಿಗೊಬ್ಬರು ದ್ವೇಷ ಮಾಡದೇ ಇರತಕ್ಕಂತಹ ವಾತಾವರಣ ಇದ್ದರೆ ಅಲ್ಲಿ ದುಡಿಮೆಯಾಗುತ್ತದೆ, ಅಭಿವೃದ್ಧಿಯಾಗುತ್ತದೆ. ಅಭಿವೃದ್ಧಿಯಿಂದ ಸಂಪತ್ತು ವೃದ್ಧಿಯಾಗುತ್ತದೆ. ಈ ಎಲ್ಲಾ ಕೆಲಸಗಳನ್ನು ಮಾಡತಕ್ಕಂಥದ್ದು ಸರ್ಕಾರದ ಕೆಲಸವಾಗಿರುತ್ತದೆ. ಆ ರೀತಿಯ ಕೆಲಸಗಳನ್ನು ಮಾಡುವುದಕ್ಕೆ ಈಗಾಗಲೇ ನಮ್ಮಲ್ಲಿ ಕೋಮು ಆಧಾರದ ಮೇಲೆ, ಧರ್ಮದ ಆಧಾರದ ಮೇಲೆ ನಡೆಯತಕ್ಕಂತಹ ಎಲ್ಲಾ ವಿಭಜನೆಯ ಕಾರ್ಯಕ್ರಮಗಳನ್ನು ನಿಲ್ಲಿಸತಕ್ಕಂತಹ, ಸಶಕ್ತವಾಗಿ ಅವುಗಳನ್ನು ದಂಡಿಸತಕ್ಕಂತಹ ಕೆಲಸವನ್ನು ಇವತ್ತು ಈ ಸರ್ಕಾರ ಮಾಡುವುದಾಗಿ ಈಗಾಗಲೇ ತಿಳಿಸಿದೆ. ಮಾನ್ಯ ಸಭಾಪತಿಗಳೇ, ಈ ಚುನಾವಣೆಯ ಮುಂಚೆ ನಮ್ಮ ಪಕ್ಷ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದಾಗ, ಪ್ರದೇಶ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಎಂದರೆ ನಮ್ಮ ಭಗವದ್ಗೀತೆ ಇದ್ದಂತೆ. ಯಾವುದೇ ಪಕ್ಷ ಆ ಪಕ್ಷದ ನಿಷ್ಠೆಗೆ ಅವು ಬದ್ಧತೆಯಾಗಿರುತ್ತದೆ. ನಾವು ನಮ್ಮ ಚುನಾವಣೆಯ ಪ್ರಣಾಳಿಕೆಯನ್ನು ತಯಾರು ಮಾಡುವಾಗ ಯಾವುದನ್ನು ನೀವು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೋ ಅದನ್ನು ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಸೇರಿಸಬಾರದೆಂದು ಮತ್ತು ಯಾವುದನ್ನು ಕಾರ್ಯರೂಪಕ್ಕೆ ತೆಗೆದುಕೊಂಡು ಬರುವುದಕ್ಕಾಗುತ್ತದೆ ಅದನ್ನು ಮಾತ್ರ ಅದರಲ್ಲಿ ಹೇಳಿ ಎಂದು ನಮ್ಮ

ಹೈಕಮಾಂಡ್, ನಮ್ಮ ಅಧಿ ನಾಯಕಿಯವರು ಹೇಳಿದರು. ಕಾಂಗ್ರೆಸ್ ಪಕ್ಷದ ಎಲ್ಲಾ ಹಿರಿಯರು ಅದರಂತೆಯೇ ನಡೆದುಕೊಂಡೆವು. ಅಲ್ಲಿ ಎರಡು ವಿಚಾರಗಳನ್ನು ಹೇಳಿದ್ದೇವೆ. ಸದೃಢವಾದ ಮತ್ತು ಪಾರದರ್ಶಕವಾದಂತಹ ಸರ್ಕಾರ, ಭ್ರಷ್ಟಾಚಾರ ರಹಿತವಾದಂತಹ ಸರ್ಕಾರ ಹಾಗೂ ಎಲ್ಲಾ ವರ್ಗಗಳ ಹಿತವನ್ನು ಕಾಪಾಡತಕ್ಕಂತಹ ಸರ್ಕಾರವನ್ನು ನಾವು ಕೊಡುತ್ತೇವೆಂದು ಹೇಳಿದ್ದೇವೆ. ಇವತ್ತಿನ ದಿವಸ ಶ್ರೀ ಸಿದ್ದರಾಮಯ್ಯನವರ ನಾಯಕತ್ವದಲ್ಲಿ ಜನಸಾಮಾನ್ಯರಿಗೆ ಬೇಕಾದಂತಹ ಅತ್ಯಂತ ಭದ್ರ ನಾಯಕತ್ವ ನಮ್ಮದಾಗಿದೆ. ತಮ್ಮೆಲ್ಲರಿಗೂ ಗೊತ್ತಿರುವಂತೆ ಹಿಂದುಳಿದ ವರ್ಗಕ್ಕೆ ಶೋಷಿತರಿಗೆ ಧ್ವನಿಯನ್ನು ಕೊಟ್ಟಂತಹ ಶ್ರೀ ಡಿ.ದೇವರಾಜ ಅರಸುರವರ ನಂತರ ಆ ವಿಚಾರಧಾರೆಯ ಮೇಲೆ ಕೆಲಸ ಮಾಡತಕ್ಕಂತಹ ಶ್ರೀ ಸಿದ್ದರಾಮಯ್ಯನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಈ ಎಲ್ಲಾ ವಿಚಾರಗಳನ್ನು ನಾನು ತಮ್ಮೆದುರಿಗೆ ತೆಗೆದುಕೊಂಡು ಬರುತ್ತಾ, ಇಲ್ಲಿ ಭಾಷೆ, ಸಂಸ್ಕೃತಿ, ಬಹುಧರ್ಮ ಎಲ್ಲಾ ನಿಮಗೆ ಗೊತ್ತಿದೆ. ರಾಷ್ಟ್ರಕವಿ ಕುವೆಂಪುರವರು ನಮ್ಮ ನಾಡ ಗೀತೆಯಲ್ಲಿ **"ಸರ್ವ ಜನಾಂಗದ ಶಾಂತಿಯ ತೋಟ"** ಎಂದು ಹೇಳಿದ್ದಾರೆ. ಭೇದ-ಭಾವ ಇಲ್ಲ. ಜಾತಿ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಶೋಷಣೆ ಇಲ್ಲ, ವಿಭಜನೆ ಇಲ್ಲ. ಇದು ನಮಗೆ ಅವಶ್ಯಕತೆ ಇತ್ತು. ಜನಕನಂತಹ ಮಹಾರಾಜರು ಈಗ ಮಹಾರಾಜರು ಎಂದರೆ ಮಂತ್ರಿಗಳು ಮತ್ತು ಎರಡು ಸದನದ ಸದಸ್ಯರುಗಳು ಸಣ್ಣ ಸಣ್ಣ ಮರಿ ರಾಜರುಗಳಿದಂತೆ. ಆ ದೃಷ್ಟಿಯಿಂದ, ಅಂತಹ ಉತ್ತಮವಾದ ವಿಚಾರಧಾರೆಯೇ ಭೂಮಿಕೆ ನಮ್ಮದು. ಈ ಎಲ್ಲಾ ದೃಷ್ಟಿಯಿಂದ ಇವತ್ತು ನಮ್ಮ ರಾಜ್ಯಪಾಲರು ಇಲ್ಲಿ ಹಲವಾರು ವಿಚಾರಗಳನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಮುಂಬರುವ ಐದು ವರ್ಷಗಳಲ್ಲಿ ಈ ಸರ್ಕಾರ ಅತ್ಯಂತ ಬದ್ಧತೆಯಿಂದ, ಜನಸಾಮನ್ಯರ ಅಭಿವೃದ್ಧಿಗಾಗಿ ಮಾಡತಕ್ಕಂಥದ್ದನ್ನು ನಿರೂಪಿಸಿದ್ದಾರೆ. ಅವರು ಕರ್ನಾಟಕ ಬಹು ಭಾಷೆ, ಬಹು ಸಂಸ್ಕೃತಿ, ಬಹು ಧರ್ಮದ ನೆಲೆವೀಡಾಗುವುದಕ್ಕೆ ಸೌಹಾರ್ದಯುತವಾದ ಧಾರೆಯೇ ಬಹಳ ಮುಖ್ಯ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಇನ್ನೊಂದು ಭ್ರಷ್ಟಾಚಾರ ಹಗರಣಗಳ ಬಗ್ಗೆ ನಾವು ಹೇಳುವುದಿಲ್ಲ. ನಾವು ಹೇಳಿದ್ದೇವೆಂದು ವಿರೋಧ ಪಕ್ಷದವರು ತಿಳಿದುಕೊಳ್ಳಬಾರದು. ಈ ರಾಜ್ಯದ ಮಾಧ್ಯಮಗಳು ಅಷ್ಟೇ ಅಲ್ಲ.

ರಾಷ್ಟ್ರದ ಮಾಧ್ಯಮಗಳು ಇಡೀ ದೇಶದಲ್ಲಿಯೇ ಭ್ರಷ್ಟವಾದಂತಹ ಸರ್ಕಾರ ಯಾವುದಾದರೂ ಇದೆ ಎಂದರೆ, ಅದು ಕರ್ನಾಟಕ ರಾಜ್ಯದಲ್ಲಿ ಎಂದು ಹೇಳಿದ್ದವು. ಮಾನ್ಯ ಬಸವರಾಜ ಹೊರಟ್ಟಿಯವರೇ, ನಗಬೇಡಿ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಯಾವಾಗ ಹೇಳಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಈ ಐದು ವರ್ಷಗಳಲ್ಲಿ. ಐದು ವರ್ಷಗಳಿಗಿಂತ ಮೊದಲು ಅಲ್ಲ. ಕರ್ನಾಟಕ ರಾಜ್ಯಕ್ಕೆ ತನ್ನದೇ ಆದಂತಹ ಗೌರವ ಇತ್ತು. ಈ ದೇಶದಲ್ಲಿ ಬೇರೆ ಬೇರೆ ರಾಜ್ಯದಲ್ಲಿ ಬಿಜೆಪಿ ಸರ್ಕಾರಗಳು ಇಲ್ಲವೇ? ಬಹಳ ರಾಜ್ಯಗಳಲ್ಲಿ ಇದೆ. ಅವುಗಳ ಬಗ್ಗೆ ಹೇಳಿಲ್ಲ. ಇದನ್ನು ಮೊದಲು ವಿರೋಧ ಪಕ್ಷದವರು ತಿಳಿದುಕೊಳ್ಳಬೇಕು. ಮಾನ್ಯ ಸದಸ್ಯರೇ, ನಮ್ಮ ಬೆನ್ನು ನಮಗೆ ಕಾಣುವುದಿಲ್ಲ. ಈ ರಾಷ್ಟ್ರದಲ್ಲಿ ಆರೇಳು ಕಡೆ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಗಳಿವೆ. ಆದರೆ, ನಿಮಗೆ ಮಾತ್ರ ಏಕೆ ಈ ರೀತಿ ಹೇಳಿದರು? ಅದನ್ನು ತಿಳಿದುಕೊಂಡು ಬಾಳಬೇಕು.

**ಶ್ರೀ ಬಿ.ರಾಮಕೃಷ್ಣ:-** ಮಾನ್ಯ ಸಭಾಪತಿಯವರೇ, ಆ ಸಮಯದಲ್ಲಿ ಕಾಂಗ್ರೆಸ್ ಪಕ್ಷದವರು ವಿರೋಧ ಪಕ್ಷದಲ್ಲಿದ್ದರು. ಅವರ ಜವಾಬ್ದಾರಿ ಕೂಡ ಇದೆ. ಸರ್ಕಾರ ತಪ್ಪುಗಳನ್ನು ಮಾಡಿದಾಗ ಎಚ್ಚರಿಸಬೇಕಾಗಿತ್ತು. ಅದನ್ನು ಮಾಡಲಿಲ್ಲ. ಸರ್ಕಾರವನ್ನು ಎಚ್ಚರಿಸಿದ್ದರೆ ಇಷ್ಟೊಂದು ಹಗರಣಗಳಾಗುತ್ತಿರಲಿಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಸರ್ಕಾರವನ್ನು ಎಚ್ಚರಿಸಿದ್ದರಿಂದ ಜನ ನಮ್ಮ ಪಕ್ಷವನ್ನು ಬೆಂಬಲಿಸಿದ್ದಾರೆ. ಜನತಾದಳವನ್ನು ಬೆಂಬಲಿಸಿಲ್ಲ. ಇದನ್ನು ದಯಾಮಾಡಿ ತಿಳಿದುಕೊಳ್ಳಬೇಕು. ನೀವು ಈ ರೀತಿ ಮಾಡಿಯೇ ಈ ರಾಜ್ಯ, ಈ ರೀತಿಯ ದುಸ್ಥಿತಿಗೆ ಬರುವುದಕ್ಕೆ ಕಾರಣ ಆಗಿದ್ದೀರಿ.

**ಶ್ರೀ ಬಿ.ರಾಮಕೃಷ್ಣ:–** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದವರು ಸುಮ್ಮನೆ ಇದುದ್ದರಿಂದಲೇ ಇಷ್ಟೊಂದು ಹಗರಣಗಳಾಗುವುದಕ್ಕೆ ಕಾರಣವಾಗಿದ್ದು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಶ್ರೀ ವೀರಣ್ಣ ಮತ್ತಿಕಟ್ಟಿಯವರು ಬಹಳಷ್ಟು ಸಾರಿ ಸದನದಲ್ಲಿಯೇ, 'ಹಿಂದೆ ಶ್ರೀ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ 12 ಗಂಟೆ ರಾತ್ರಿಯಲ್ಲಿ ಫೈಲ್‌ಗೆ ಸಹಿ ಮಾಡಿ ಹೋಗುತ್ತಿದ್ದರು' ಎಂದು ಹೇಳಿದ್ದಾರೆ. ಕಾಂಗ್ರೆಸ್‌ನವರು ಎಲ್ಲಾ ಅಡ್ಜೆಸ್ಟ್‌ಮೆಂಟ್ ಸುಮ್ಮನೆ ಇರಿ. ಮಾತಾಡಬೇಡಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ತಪ್ಪು ಸಂದೇಶ ಜನರಿಗೆ ಇಲ್ಲಿಂದ ಹೋಗಬಾರದು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಸದನದಲ್ಲಿ ಮಾತನಾಡಿದಂತಹ ರೆಕಾರ್ಡ್ ಇದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷ ಮೂಲಭೂತವಾಗಿ ಈ ರಾಜ್ಯದಲ್ಲಿ, ರಾಷ್ಟ್ರದಲ್ಲಿ ಎರಡು ರಾಷ್ಟ್ರೀಯ ಪಕ್ಷ ಇರಬೇಕು. ಆ ದೃಷ್ಟಿಯಿಂದ ಕೆಲಸವಾಗಬೇಕು. ಸಮಯ ಸಾಧಕತನ ಇರಬಾರದು.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರದವರು 'ನಾವಿಲ್ಲದೆ ಯಾರೂ ಸರ್ಕಾರವನ್ನು ರಚನೆ ಮಾಡುವುದಕ್ಕೆ ಸಾಧ್ಯವಿಲ್ಲ' ಎಂಬುದಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಬಹಳಷ್ಟು ಮಾತುಗಳನ್ನಾಡಿದ್ದಾರೆ. ಆದರೆ ಅವರ ಪರಿಸ್ಥಿತಿ ಈಗ ಎಲ್ಲಿಗೆ ಬಂದಿದೆ ನೋಡಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು, 'ಧಾರವಾಡದಲ್ಲಿ ನಮ್ಮ ಪಕ್ಷಕ್ಕೆ 3 ಸ್ಥಾನಗಳು ಬರದಿದ್ದರೆ ನಾನು ಬೆಂಗಳೂರಿಗೆ ಬರುವುದಿಲ್ಲ' ಎಂದಿದ್ದರು.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಪಕ್ಷ ಸ್ಪಷ್ಟ ಬಹುಮತ ಪಡೆಯುವುದಿಲ್ಲ, ಅಂತಹ ಹೊತ್ತಿನಲ್ಲಿ ರಾಜ್ಯದಲ್ಲಿ ಮತ್ತೆ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರುವುದರಿಂದ ಮತ್ತೆ ಬೇರೆ ಬೇರೆ ಪಕ್ಷಗಳು ಜೊತೆಗೂಡಿ ಸರ್ಕಾರ ರಚಿಸುವಂತಹ ಪರಿಸ್ಥಿತಿ ಬರುತ್ತದೆ ಎಂದು ಇವರು ತಿರುಕನ ಕನಸನ್ನು ಕಾಣುತ್ತಿದ್ದರು. ಈ ವಿಚಾರದಲ್ಲಿ ಅವರ ವ್ಯವಸ್ಥಿತವಾದ ಪಿತೂರಿ ಇತ್ತು. ಆದರೆ, ರಾಜ್ಯದ ಜನತೆ ಬಹಳ ಜಾಣರಿದ್ದಾರೆ; ಪ್ರಬುದ್ಧರಿದ್ದಾರೆ. ಕಾಂಗ್ರೆಸ್ ಸರ್ಕಾರದಿಂದ ಮಾತ್ರ ಸ್ಥಿರ, ಭ್ರಷ್ಟಾಚಾರಮುಕ್ತ ಹಾಗೂ ಪಾರದರ್ಶಕವಾದ ಸರ್ಕಾರವನ್ನು ಕೊಡಲಿಕ್ಕೆ ಸಾಧ್ಯವಿದೆ. ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎನ್ನುವಂತಹ ತತ್ವದಲ್ಲಿ ನಂಬಿಕೆ ಇರುವವರು ಕಾಂಗ್ರೆಸ್ ಪಕ್ಷದವರು ಎನ್ನುವಂತಹ ಕಾರಣಕ್ಕಾಗಿ 122 ಶಾಸಕರನ್ನು ಆಯ್ಕೆ ಮಾಡಿ ಕಳುಹಿಸಿಕೊಟ್ಟಿರುವುದರಿಂದ ಇವರ ಕನಸೆಲ್ಲಾ ಭಗ್ನಗೊಂಡಿವೆ. ಇದರಿಂದ ಇವರಿಗೆ ಬಹಳ ನೋವಾಗಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಭ್ರಷ್ಟಾಚಾರದ ಬಗ್ಗೆ ಈ ಸಂದರ್ಭದಲ್ಲಿ ಹೆಚ್ಚು ಮಾತನಾಡುವುದು ಬೇಡ. ಮಾನ್ಯ ಎಸ್.ಎಂ.ಕೃಷ್ಣ ಅವರ ಕಾಲದಲ್ಲಿ 3ನೇ ಎರಡರಷ್ಟು ಮೆಜಾರಿಟಿ ಇತ್ತು ಆದರೆ, ಕೊನೆಗೆ ಏನಾಯಿತು? ಮುಂದೆ ನಿಮ್ಮದು ಕೂಡ ಅಷ್ಟೆ. ನಿಮ್ಮಲ್ಲಿಯೂ ನಡೆಯುತ್ತಿದೆ, ಸುಮ್ಮನಿರಿ. ಮರ್ಯಾದೆ ತೆಗೆಸಿಕೊಳ್ಳಬೇಡಿ, ಸುಮ್ಮನೆ ನಡೆಯಿರಿ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಮಗಂತೂ ಇವರನ್ನು ನೋಡಿ ಬಹಳ ಕರುಣೆ ಉಂಟಾಗುತ್ತಿದೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ.ಯವರ ಪುಣ್ಯದಿಂದ ನಿಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದಿದೆ, ಸುಮ್ಮನೆ ಮುಂದುವರೆಯಿರಿ.

**ಶ್ರೀ ಡಿ.ಎಸ್. ವೀರಯ್ಯ:-** ಸನ್ಮಾನ್ಯ ಸಭಾಪತಿಯವರೇ, ಅವರು ಎಷ್ಟು ಸಲ ಈ ಸದನವನ್ನು ಬಹಿಷ್ಕರಿಸಿ ಹೊರಗಡೆ ಹೋಗಿದ್ದಾರೆ, ಸದನದ ಬಾವಿಗಿಳಿದು ಧರಣಿ ಮಾಡಿದ್ದಾರೆ, ಬರಗಾಲ ಪರಿಸ್ಥಿತಿಯ ಬಗ್ಗೆ ಎಷ್ಟು

ಗಂಟೆಗಳ ಕಾಲ ಚರ್ಚೆ ಮಾಡಿದ್ದಾರೆ ಎಂಬ ಬಗ್ಗೆ ದಯವಿಟ್ಟು ತಾವು ದಾಖಲೆಗಳನ್ನು ತೆಗೆಸಿ ನೋಡಿದರೆ ಗೊತ್ತಾಗುತ್ತದೆ.

**ಸಭಾಪತಿಯವರು:–** ಆಯಿತು, ಮಾನ್ಯ ಮತ್ತೀಕಟ್ಟಿಯವರೇ, ತಾವು ಚರ್ಚೆಯನ್ನು ಮುಂದುವರೆಸಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಯ್ಯನವರು ಪ್ರಸ್ತಾಪ ಮಾಡಿರುವಂತಹ ವಿಚಾರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಈ ಅಧಿವೇಶನದಲ್ಲಿ ಬೇರೆ ಬೇರೆ ವಿಷಯಗಳ ಮೇಲಿನ ಚರ್ಚೆ ಇವೊತ್ತು ಪ್ರಾರಂಭವಾಗಿದೆ, ಮುಂದೆ ನೀವು ಏನೇನು ಮಾಡುತ್ತೀರೊ ನೋಡುತ್ತೇವೆ. ನಾವು ವಿರೋಧ ಪಕ್ಷದವರು, ತಿಳುವಳಿಕೆಗಳಿಂದ ಹೇಳತಕ್ಕಂತಹ ವಿಚಾರಗಳನ್ನು, ಸಭಾಪತಿಯವರು ಮಾಡತಕ್ಕಂತಹ ಆದೇಶಗಳನ್ನು ಯಾವುದೇ ಸರ್ಕಾರ ಕಣ್ಣು ತೆರೆದು ಮಾನ್ಯ ಮಾಡದೆ ಇದ್ದಾಗ ಸಂವಿಧಾನಬದ್ಧವಾಗಿ ವಿರೋಧ ಪಕ್ಷದವರಿಗಿರುವುದು ಎರಡೇ ಅಧಿಕಾರ. ಯಾವುದೇ ಮಾತುಗಳಿಗೆ ಸರ್ಕಾರ ಬೆಲೆ ಕೊಡದೆ ಇದ್ದಾಗ ವಿರೋಧ ಪಕ್ಷದಲ್ಲಿರುವವರು ಧರಣಿಗೆ ಮುಂದಾಗುತ್ತಾರೆ, ಇಲ್ಲವೇ ಸಭಾತ್ಯಾಗ ಮಾಡಿ ಹೊರಗಡೆ ಹೋಗುತ್ತಾರೆ. ಇವೆರಡೂ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರಿಗಿರುವ ಅಸ್ತ್ರಗಳು.

**ಶ್ರೀ ಗೋ.ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಬಹಳ ಒಳ್ಳೆಯ ಚರ್ಚೆ ಮಾಡುತ್ತಿದ್ದಾರೆ. ಅವರು ಹೇಗೆ ಅಧಿಕಾರಕ್ಕೆ ಬಂದರು ಎನ್ನುವುದರ ಬಗ್ಗೆ ಬಹಳಷ್ಟು ಮಾತುಗಳನ್ನಾಡಿದ್ದಾರೆ. ಆದರೆ ಎಲ್ಲಿಯೋ ಒಂದು ಕಡೆ ಅವರು ಮತದಾರರಿಗಾಗಬಹುದು ಅಥವಾ ನಾವು ತಪ್ಪು ಮಾಡಿದೆವಲ್ಲಾ, ನಮಗೋಸ್ಕರ ಇರಬಹುದು, ಇವರು ಯಾರಿಗೂ ಕೃತಜ್ಞರಾಗಿರಬೇಕಿರಲಿಲ್ಲ. ಅವರೇನಾದರೂ ಕೃತಜ್ಞರಾಗಿರಬೇಕಾಗಿದ್ದರೆ ಒಬ್ಬರೇ ಒಬ್ಬರಿಗೆ ಕೃತಜ್ಞರಾಗಿರಬೇಕು. ಆದರೆ, ಅವರ ಹೆಸರನ್ನು ಇವರು ಇಲ್ಲಿಯವರೆಗೆ ಉಲ್ಲೇಖ ಮಾಡಿರುವುದಿಲ್ಲ. ಅವರಿಗೆ ಇವರು ಮೊದಲು ಧನ್ಯವಾದಗಳನ್ನು ಹೇಳಬೇಕಾಗುತ್ತದೆ. ಅವರು ಯಾರು

ಗೊತ್ತೇನು? ಯಾರೆಂದು ನಾನೇ ಅವರ ವಿಳಾಸವನ್ನು ಹೇಳುತ್ತೇನೆ ಕೇಳಿ, ಅವರಿಗೆ ನೀವು ಧನ್ಯವಾದಗಳನ್ನು ಹೇಳಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್ ಅವರನ್ನು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರನ್ನು ಯಾರು ಎಂ.ಎಲ್.ಸಿ., ಮಾಡಿದರೋ ಅವರು. . . . .

**ಶ್ರೀ ಗೋ.ಮಧುಸೂದನ್:–** ಆ ರೀತಿಯಲ್ಲ . . . ನಮ್ಮಪ್ಪನಾಣೆಗೂ ಅವರು ಯಾರೂ ಅಲ್ಲ. ಇವರನ್ನು ಅಧಿಕಾರಕ್ಕೆ ತಂದಿದ್ದು ಸಿ.ಬಿ.ಐ. ರಿಪೋರ್ಟ್. ಆದ್ದರಿಂದ ಇವರು 'ಸಿ.ಬಿ.ಐ.ಗೆ ಜಿಂದಾಬಾದ್' ಎಂದು ಹೇಳಬೇಕಾಗುತ್ತದೆ.

**ಸಭಾಪತಿಯವರು:–** ಮಾನ್ಯ ಮತ್ತಿಕಟ್ಟಿ ವೀರಣ್ಣನವರೇ, ತಾವಿನ್ನು ವಿಷಯಕ್ಕೆ ಬನ್ನಿ. ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಮಾತನಾಡಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಸನ್ಮಾನ್ಯ ಸಭಾಪತಿಯವರೇ, ಧಾರವಾಡದಿಂದ 3 ಮಂದಿ ಆಯ್ಕೆಯಾಗಿ ಬರದಿದ್ದರೆ ನಾನು ಬೆಂಗಳೂರಿಗೆ ಬರುವುದಿಲ್ಲ ಎಂದು ಮಾನ್ಯ ಹೊರಟ್ಟಿಯವರು ಹೇಳಿದ್ದರು. ಅವರ ಆ ಮಾತಿನಿಂದ ನನಗೆ ಬಹಳ ನೋವಾಯಿತು. 'ಇಲ್ಲ, ನೀನು ಬೆಂಗಳೂರಿಗೆ ಬರಬೇಕಪ್ಪಾ' ಎಂದು ನಾನು ಹೇಳಿದ್ದೆ. ಈಗ ಅವರೇ ಬಂದಿದ್ದಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಮತ್ತಿಕಟ್ಟಿ ವೀರಣ್ಣನವರ ಮಾತನ್ನು ಕೇಳಿಯೇ ನಾನು ಬೆಂಗಳೂರಿಗೆ ಬಂದಿದ್ದು, ಇಲ್ಲದಿದ್ದರೆ ನಾನು ಬರುತ್ತಿರಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ಮತ್ತಿಕಟ್ಟಿ ವೀರಣ್ಣನವರು ಇನ್ನೂ ಸನ್ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಬಂದಿಲ್ಲ, ಇದುವರೆಗೆ ಮಾತನಾಡಿದ್ದೆಲ್ಲಾ ಹಿನ್ನೆಲೆ ಅಥವಾ ಪೀಠಿಕೆ ಎಂದು ಹೇಳಬಹುದು. ಸನ್ಮಾನ್ಯ ರಾಜ್ಯಪಾಲರು ಹೇಳಿರುವಂತಹ ಅತ್ಯುತ್ತಮ

ಮಾತುಗಳು ಇನ್ನೂ ಪ್ರಾರಂಭವಾಗಿಯೇ ಇಲ್ಲ. ಇಲ್ಲಿಯವರೆಗೆ ಅವರು ಹಿಂದಿನ ಸರ್ಕಾರದ ಕಥೆ-ಪುರಾಣವನ್ನಷ್ಟೇ ಹೇಳಿದ್ದಾರೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಸನ್ಮಾನ್ಯ ಸಭಾಪತಿಯವರೇ, ಬಾಗಲಕೋಟೆಯಲ್ಲಿ ತೋಟಗಾರಿಕೆ ವಿಶ್ವವಿದ್ಯಾಲಯ ಸ್ಥಾಪನೆ ಆಯಿತು. ಬಹಳ ಬದ್ಧತೆಯಿಂದ ನಮ್ಮೊಂದಿಗೆ ಬಂದರು, ಇದಕ್ಕೆ disturbed ಆಗಬೇಡಿರಿ, ಬಿಡಬೇಡಿರಿ ಎಂದು ನಮಗೆಲ್ಲಾ ಹೇಳಿದರು. ಆಮೇಲೆ ನಡೆದ ಘಟನೆ ತಮಗೆ ಗೊತ್ತಿದೆ. ನೀವು ನಮ್ಮ ಜೊತೆಗಿರಿ ಎಂದು ನಾವು ಅವರಿಗೆ ಹೇಳಿದೆವು, ಇದ್ದರು. ಅದು ಒಂದು ನಿಶ್ಚಿತ ಹಂತಕ್ಕೆ ಬಂದಾಗ ಅವರು ಕಾಣೆಯಾಗಿಬಿಟ್ಟರು. ಹೌದಲ್ಲವೇ ಹೊರಟ್ಟಿಯವರೇ? ಅದಕ್ಕೋಸ್ಕರ ನಮ್ಮ ಜನ, ನಮ್ಮ ನೆಲ-ಜಲದ ಬಗ್ಗೆ ಬದ್ಧತೆ ಇದ್ದವರು ಯಾರಿಗೂ ಹೆದರಬೇಕಾಗಿಲ್ಲ. ಅವರು ಇವೊತ್ತು ನಿಮ್ಮ ಜೊತೆ ಇಲ್ಲ. ಅದಕ್ಕೆ ನಿಮ್ಮ ತತ್ವ, ನೀತಿ, ನಿಮ್ಮ ಜನಾಂಗ ಅಂದರೆ ನಿಮ್ಮ ಜಾತಿಯವರು ಎಂದು ಅರ್ಥವಲ್ಲ, ನಿಮ್ಮ ಭಾಗದವರು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಅವರ ಅಭಿವೃದ್ಧಿಗೆ ಚಿಂತನೆ ಮಾಡಿ ಕೆಲಸ ಮಾಡಬೇಕು. ಈ ಎಲ್ಲ ದೃಷ್ಟಿಯಿಂದ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:-** ಮಾನ್ಯ ಮತ್ತಿಕಟ್ಟಿ ವೀರಣ್ಣನವರ ಮಾತುಗಳನ್ನು ಕೇಳಿ ನನಗೆ ಜಗದ್ಗುರುಗಳು ಆಶೀರ್ವಚನ ನೀಡಿದಂತೆನಿಸಿತು.

**ಶ್ರೀ ಎಂ.ವಿ. ರಾಜಶೇಖರನ್ (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ರಾಜಕೀಯದಲ್ಲಿ symbols and signals are very important. ನಮ್ಮ ಕರ್ನಾಟಕದ ಜನ ಅತ್ಯಂತ ಪ್ರಬುದ್ಧರು ಎಂಬುದಕ್ಕೆ ಮೊನ್ನೆ ನಡೆದ ವಿಧಾನಸಭೆ ಚುನಾವಣೆಯೇ ಒಂದು ನಿದರ್ಶನವಾಗಿದೆ. 2008ರಲ್ಲಿ ಯಾವ ಜನ ತಮ್ಮ ಪಕ್ಷದ 110 ಶಾಸಕರನ್ನು ಜಯಶೀಲರನ್ನಾಗಿ ಮಾಡಿದರು, ಅದೇ ಪ್ರಬುದ್ಧ ಜನ ಅದೇ ಪಕ್ಷದ 110 ಜನ ಪ್ರತಿನಿಧಿಗಳಿಗೆ ಠೇವಣಿಯನ್ನು ಕಳೆದಿದ್ದಾರೆ. ಇದು ಎಲ್ಲ ರಾಜಕೀಯ ಪಕ್ಷಗಳಿಗೆ ನಮ್ಮ ಜನ ಸಾಮಾನ್ಯರಾದಂತಹ ಪ್ರಬುದ್ಧ ಮತದಾರರು ಅತ್ಯಂತ ವಿಶಿಷ್ಟವಾದಂತಹ

ಸಂಕೇತವನ್ನು ಕೊಟ್ಟಿದ್ದಾರೆ. ಇದರಲ್ಲಿ ನಾವೆಲ್ಲರೂ ಎಚ್ಚರಿಕೆಯನ್ನು ವಹಿಸತಕ್ಕಂಥದ್ದು ಬಹಳ ಮುಖ್ಯ.

ಇವೊತ್ತಿನ ದಿವಸ ನಾವು ಸುಭದ್ರವಾದಂತಹ, ಪರಿಶುದ್ಧವಾದಂತಹ ಸರ್ಕಾರವನ್ನು ನೀಡಿ, ನಾನಾ ರೀತಿಯಲ್ಲಿ ನಡೆದಿರುವ ಅನಾಚಾರ ದುರಾಡಳಿತಗಳಿಗೆ ವಿರುದ್ಧವಾಗಿ ನಮ್ಮ ಪ್ರಬುದ್ಧ ಮತದಾರರೇನು ಮತವನ್ನು ಕೊಟ್ಟಿದ್ದಾರೆ, ಅದನ್ನು ಮುಂದೆ ಬರುವಂತಹ ಯಾವುದೇ ಪಕ್ಷದ ಸರ್ಕಾರದವರೂ ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಂಡು ಸುಭದ್ರವಾದ ಸರ್ಕಾರವನ್ನು ಕೊಡದೆ ಹೋದರೆ ನಾವು ನಿಮ್ಮನ್ನು ಬಿಡುವುದಿಲ್ಲ, ಕ್ಷಮಿಸುವುದಿಲ್ಲ ಎನ್ನುವಂತಹ ಸಂಕೇತವನ್ನು ಇಡೀ ರಾಜ್ಯಕ್ಕೆ, ರಾಷ್ಟ್ರಕ್ಕೆ ಮತ್ತು ಎಲ್ಲ ರಾಜಕೀಯ ಪಕ್ಷಗಳಿಗೆ ಕೊಟ್ಟಿದ್ದಾರೆ. ಇದನ್ನು ನಾವೆಲ್ಲಾ ಅರಿತುಕೊಂಡು ಕೆಲಸ ಮಾಡತಕ್ಕಂಥದ್ದು ಬಹಳ ಮುಖ್ಯ ಎನ್ನುವಂತಹ ವಿಚಾರವನ್ನು ನಾನು ಈ ಸಂದರ್ಭದಲ್ಲಿ ತಿಳಿಸಬಯಸುತ್ತಿದ್ದೇನೆ.

**ಶ್ರೀ ಮತ್ತಿಕಟ್ಟಿ ವೀರಣ್ಣ:-** ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರು ಈ ಸರ್ಕಾರ ಮಾಡತಕ್ಕಂತಹ ಕೆಲಸಗಳ ಬಗ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸಾಮಾಜಿಕ ಸೇವೆಗೆ ನೂರಾರು ದಾರಿಗಳಿವೆ. ಆದರೆ ಆಡಳಿತದಲ್ಲಿ ಶಾಸಕಾಂಗದ ಶಕ್ತಿ ಏನಿದೆ ಇದು ಬಹಳ ಮಹತ್ತರವಾದುದು. ನೀತಿ-ನಿರ್ಧಾರಗಳನ್ನು ಮಾಡುವುದರ ಜೊತೆಗೆ ಅವುಗಳನ್ನು ಕಾರ್ಯರೂಪಕ್ಕೆ ತಂದು ಇಡೀ ರಾಜ್ಯವನ್ನು ಅಭಿವೃದ್ಧಿಪಡಿಸಲು ಅದು ಶಕ್ತಿ ಕೊಡುತ್ತದೆ. ಸಮಾಜದಲ್ಲಿ ಬಡವರಿಗೆ, ಶೋಷಣೆಗೆ ಒಳಗಾದವರಿಗೆ, ನಿರ್ಗತಿಕರಿಗೆ ಆಸರೆ ನೀಡುವಲ್ಲಿ, ಅಶಕ್ತರಿಗೆ ರಕ್ಷಣೆ ನೀಡುವಲ್ಲಿ ಮತ್ತು ಸಾಮಾಜಿಕವಾಗಿ ತಾರತಮ್ಯಕ್ಕೆ ಒಳಗಾದವರಿಗೆ ನ್ಯಾಯ ಒದಗಿಸುವ ದೃಷ್ಟಿಯಲ್ಲಿ ನಮ್ಮ ಸರ್ಕಾರಕ್ಕೆ ಬದ್ಧತೆ ಇದೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಹೆಚ್ಚು-ಕಡಿಮೆ, ಮೇಲು-ಕೀಳು ಯಾವುದೂ ಇಲ್ಲದೆ ಬಹುಪಾಲು ಜನರಿಗೆ ಸಮಪಾಲು, ಸಮಬಾಳು, ಸಹಬಾಳ್ವೆ ಇದೇ ಸಾಮಾಜಿಕ ನ್ಯಾಯ, ಇದಕ್ಕೆ ನನ್ನ ಸರ್ಕಾರ ಬದ್ಧವಾಗಿದೆ ಎಂದು ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ, ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತ ಸಮುದಾಯಕ್ಕೆ ಹಾಗೂ ಸಾಮಾನ್ಯ ವರ್ಗದ ಎಲ್ಲಾ ಜನರ ಕಲ್ಯಾಣಕ್ಕಾಗಿ ಈ ಸರ್ಕಾರ ಬದ್ಧವಾಗಿದೆ. ಒಂದು ಉತ್ತಮ ಸರ್ಕಾರ ಅನ್ನಿಸಿಕೊಳ್ಳಬೇಕಾದರೆ ಆರೋಗ್ಯ, ಶಿಕ್ಷಣ, ಉದ್ಯೋಗ ಹಾಗೂ ಪೌಷ್ಠಿಕ ಆಹಾರ ಇವುಗಳೆಲ್ಲವನ್ನೂ ಒದಗಿಸಿಕೊಡಬೇಕು. ಯಾವ ಒಂದು ವರ್ಗದ ಜನ ಊಟಕ್ಕೂ ಗತಿ ಇಲ್ಲದೆ ಉದ್ಯೋಗ ಅರಸುತ್ತಾ ದೊಡ್ಡ ದೊಡ್ಡ ಪಟ್ಟಣಗಳಿಗೆ ಹಾಗೂ ನೀರಾವರಿ ಇರುವಂತಹ ಸ್ಥಳಗಳಿಗೆ ಗುಳೆ ಹೋಗುತ್ತಿತ್ತು. ಆ ಜನರಿಗೆ ದುಡಿಮೆ ಕೊಡಬೇಕು. ದುಡಿಯುವ ಶಕ್ತಿ ಕೊಡಬೇಕು, ಅನ್ನಕೊಡಬೇಕು ಎನ್ನುವ ದೃಷ್ಟಿಯಿಂದಲೇ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಒಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುವುದಕ್ಕೆ ನಿರ್ಧಾರ ಮಾಡಿದೆ. ಅದು ಜುಲೈ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಸ್ವಾಮಿಯವರು ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿ ಸಾಲ ಮನ್ನಾ ಮಾಡಿದರು. ಆದರೆ ಅದರಿಂದ suffer ಆದವರು ಯಾರು? ಯಾವ ಸೊಸೈಟಿಗೆ ಅವರ ಹಣ ಹೋಗಿಲ್ಲ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮ್ಮ ಸರ್ಕಾರ ಆಯಾಯ ತಿಂಗಳಿನಲ್ಲಿ ಎಷ್ಟು ಕೊಡಬೇಕಾಗಿತ್ತು ಅಷ್ಟು ಹಣವನ್ನು ಕರಾರುವಾಕ್ಕಾಗಿ ಬಿಡುಗಡೆ ಮಾಡಿದೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಸ್ವಾಮಿಯವರು ರೈತರ ಸಾಲ ಮನ್ನಾ ಮಾಡಿ ಶಹಭಾಷ್‌ಗಿರಿ ಪಡೆದುಕೊಂಡರು. ಆದರೆ, 3,600 ಕೋಟಿ ಮೊತ್ತ ನಮ್ಮ ಬೊಕ್ಕಸದ ಮೇಲೆ ಭಾರ ಆಯಿತು ಎಂದು ಹೇಳಿದ್ದೀರಿ. ಆ 3,600 ಕೋಟಿ ರೂಪಾಯಿಗಳಲ್ಲಿ ನೀವು ಎಷ್ಟು ಹಣ ಕೊಟ್ಟಿದ್ದೀರೆಂದು ನೆನಪು ಮಾಡಿಕೊಂಡು ಹೇಳುತ್ತಿರಾ? ಸುಮಾರು 900 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇನ್ನು ಉಳಿದಂತಹ 2,700 ಕೋಟಿ ರೂಪಾಯಿಗಳ ಭಾರವನ್ನು ಹೊಸ ಸರ್ಕಾರ ಹೊತ್ತಿದೆ. ಆದರೆ, ನಿಮ್ಮ

ಸರ್ಕಾರ ಬರಗಾಲದಲ್ಲಿ ತತ್ತರಿಸಿದಂತಹ ರೈತರಿಗೆ ಸಾಲ ಮನ್ನಾ ಮುಖಾಂತರ ಸುಮಾರು 3,600 ಕೋಟಿ ರೂಪಾಯಿಗಳಷ್ಟು ಬೃಹತ್ ಮೊತ್ತದ ಹಣವನ್ನು ಮನ್ನಾ ಮಾಡಿ ಕಾಂತ್ರಿಕಾರಕವಾದಂತಹ ನಿರ್ಣಯವನ್ನು ಕೈಗೊಂಡಿದ್ದೇವೆಂದು ಹೇಳಿ ಹೆಸರು ತೆಗೆದುಕೊಂಡಿದೆ. ಆದರೆ ನಿಮ್ಮ ಸರ್ಕಾರದ ಅವಧಿ ಮುಗಿಯುವುದರೊಳಗೆ ಸುಮಾರು 940 ಕೋಟಿ ರೂಪಾಯಿಗಳಷ್ಟು ಹಣವನ್ನು ಮಾತ್ರ ಕೊಟ್ಟಿದೆ. ಇನ್ನುಳಿದಂತಹ 22,700 ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ಕೊಡಬೇಕು. ಅದೇ ಸಂದರ್ಭದಲ್ಲಿ ನೀವು ಅರ್ಧ ಪರ್ಸೆಂಟ್ VAT ಹೆಚ್ಚಿಗೆ ಮಾಡಿ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಸಂಗ್ರಹ ಮಾಡಿಕೊಂಡಿರಿ. ಅದರಲ್ಲಿಯೂ ಸಹ ಹಣವನ್ನು ಉಳಿಸಿಕೊಂಡಿದ್ದೀರಿ. ಈಗ ಸಾಲ ಮನ್ನಾದ ಲಾಭ ಹೊಸ ಸರ್ಕಾರಕ್ಕೆ ತಟ್ಟುತ್ತಿದೆ. ಹಾಗಾಗಿ ಸಾಲ ಮನ್ನಾವನ್ನು ನಿಮ್ಮ ಸರ್ಕಾರ ಮಾಡಿದ್ದಲ್ಲ, ನಮ್ಮ ಸರ್ಕಾರ ಮಾಡಿದ್ದು ಎಂದು ಹೇಳಬೇಕಾಗಿದೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, 3,600 ಕೋಟಿ ರೂಪಾಯಿಗಳು ಹನ್ನೆರಡು ತಿಂಗಳಿಗೆ spread over ಆಗುತ್ತದೆ. ನಾಳೆ ಬೇಕಾದರೆ ನಿಮಗೆ details ಕೊಡುತ್ತೇನೆ. ಹನ್ನೆರಡು ತಿಂಗಳಿಗೆ spread over ಆದಾಗ ಪ್ರತೀ ತಿಂಗಳಿಗೆ 200 ರಿಂದ 300 ಕೋಟಿ ರೂಪಾಯಿಗಳು ಬರುತ್ತದೆ. ನಾವು ಇರುವವರೆವಿಗೂ ಮೂರು ತಿಂಗಳು ಬಾಕಿ ಇದ್ದುದ್ದನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:–** ಹಿಂದಿನ ಸರ್ಕಾರಗಳು ಸಾಲ ಮನ್ನಾ ಮಾಡಿದಾಗ ವರ್ಷಗಟ್ಟಳೆ spread over ಆಗಿದೆಯೇ? ನೀವು ಅದನ್ನು ಬಹಳ ಜಾಣತನದಿಂದ ಮಾಡಿದ್ದೀರಿ. ನಿಮಗೆ ಮುಂದೆ ನಾವು ಅಧಿಕಾರಕ್ಕೆ ಬರುವುದಿಲ್ಲ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎಂದು ಗೊತ್ತಿತ್ತು. ಹಾಗಾಗಿ ಅವರ ತಲೆಯ ಮೇಲೆ ಭಾರ ಹಾಕೋಣವೆಂದೇ ಈ ರೀತಿ ಮಾಡಿದ್ದೀರಿ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾರ್ಚ್ ತಿಂಗಳವರೆಗೆ ಪ್ರತೀ ತಿಂಗಳು 250 ಕೋಟಿ ರೂಪಾಯಿಯಂತೆ spread over

ಮಾಡಿ ಬ್ಯಾಂಕಿನಲ್ಲಿ ಬಿಡುಗಡೆ ಮಾಡಿದೆ. ಮಾರ್ಚ್ ಆದಮೇಲೆ ಸೆಪ್ಟೆಂಬರ್ ತಿಂಗಳವರೆಗೆ ಬಿಡುಗಡೆ ಮಾಡಬೇಕಾದುದು ಈ ಸರ್ಕಾರದ ಜವಾಬ್ದಾರಿ. ನಮ್ಮದೇ ಸರ್ಕಾರ ಇದ್ದಿದ್ದರೆ ನಾವೇ ಮಾಡುತ್ತಿದ್ದೆವು, ಈಗ ನಿಮ್ಮ ಸರ್ಕಾರ ಇರುವುದರಿಂದ ನೀವು ಮಾಡಬೇಕಾಗಿದೆ. ಆದರೆ ಮಾರ್ಚ್ ತಿಂಗಳವರೆಗೆ ನಮ್ಮ ಸರ್ಕಾರ commitment ಅನ್ನು fulfill ಮಾಡಿದೆ. Announce ಮಾಡಬೇಕಾದರೆ ಸಾಲ ಹೇಗೆ ಕೊಟ್ಟಿದ್ದೇವೆ, ಆಯಾಯಾ ತಿಂಗಳಿನಲ್ಲಿ ಎಷ್ಟು reimburse ಮಾಡಬೇಕು, ಅದೇ ರೀತಿ ಮಾಡಬೇಕು ಎಂದು announce ಮಾಡಿದ್ದೇವೆ. ಬೇಕಾದರೆ ರೆಕಾರ್ಡ್ ತೆಗೆದುನೋಡಿ. I will give the chart.

**ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, 25,000 ರೂಪಾಯಿಗಳನ್ನು ಒಂದು ವರ್ಷದ ಅವಧಿಯಲ್ಲಿ ತೀರಿಸಬೇಕು ಎಂಬ ಉದ್ದೇಶ ಇದ್ದರೂ ಸಹ ಅದಕ್ಕೆ ಎಷ್ಟು ಬಡ್ಡಿಯನ್ನು ಭರಿಸಬೇಕು ಎಂಬುದನ್ನು ಹಿಂದಿನ ಸರ್ಕಾರ ನಿಗದಿಪಡಿಸಲಿಲ್ಲ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೇ, zero percent ನಲ್ಲಿ ಕೊಟ್ಟಿರುವಾಗ ಅಲ್ಲಿ interest ಪ್ರಶ್ನೆ ಬರುವುದಿಲ್ಲ. ಆದುದರಿಂದ 25,000 ರೂಪಾಯಿಗಳವರೆಗೆ ಸಾಲ ಮನ್ನಾ ಮಾಡಿರುವುದು.

**ಶ್ರೀ ಎಂ.ಬಿ. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಅವರು ಸಾಲ ಮನ್ನಾ ಏನೋ ಮಾಡಿದ್ದಾರೆ. ಆದರೆ, ಅದಕ್ಕೆ ಏನು ಬಡ್ಡಿಯನ್ನು ಭರಿಸಬೇಕು ಎಂಬುದನ್ನು ನಿಗದಿ ಪಡಿಸಲಿಲ್ಲ. ಇವತ್ತು ಎಲ್ಲಾ ಡಿ.ಸಿ.ಸಿ. ಬ್ಯಾಂಕುಗಳಲ್ಲಿ ರೈತರು 25,000 ರೂಪಾಯಿ ಸಾಲ ಮರುಪಾವತಿ ಮಾಡುವುದಕ್ಕೆ ಹೋದಂತಹ ಸಂದರ್ಭದಲ್ಲಿ ಅವರಿಗೆ ಮರುಸಾಲವನ್ನು ಕೊಡುವಂತಹ ಸಂದರ್ಭದಲ್ಲಿ 25,000 ರೂಪಾಯಿಗಳನ್ನು ಕೊಡದೆ ಕಳೆದ ಎರಡು ತಿಂಗಳಿನಿಂದ ಎಲ್ಲಾ ಬ್ಯಾಂಕುಗಳಲ್ಲಿಯೂ ಹಾಗೆಯೇ ಠೇವಣಿ ಇಟ್ಟುಕೊಂಡು ಕುಳಿತಿದ್ದರು. ಆದರೆ, ನಾವು ಅಧಿಕಾರಕ್ಕೆ ಬಂದ ಮೇಲೆ ಹಿಂದಿನ ಲೋಪದೋಷಗಳನ್ನು ಸರಿಪಡಿಸಿ 25,000 ರೂಪಾಯಿಗಳನ್ನು ಯಾವುದೇ ರೀತಿಯಲ್ಲಿ ಬ್ಯಾಂಕಿನಲ್ಲಿ ಠೇವಣಿ ಇಟ್ಟುಕೊಳ್ಳದೆಯೇ ಅವರು ಏನು ಸಾಲವನ್ನು ಮರುಪಾವತಿ ಮಾಡಿರುತ್ತಾರೆ ಅದರ ಮೇಲೆ ಶೇಕಡಾ 25ರಷ್ಟು ಹೆಚ್ಚಿಗೆ

ಸಾಲವನ್ನು ಕೊಡಬೇಕು ಎಂದು ಸೂಚನೆ ಕೊಟ್ಟಿದ್ದೇವೆ. ನಿಮ್ಮ ಕಾಲದಲ್ಲಿ 940 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದು ಮಾರ್ಚ್ ತಿಂಗಳಿನವರೆಗೆ adjust ಆಗಿದೆ.

**(ಈ ಹಂತದಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರು ಸಭಾ ಪೀಠವನ್ನಲಂಕರಿಸಿದರು)**

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಅವರು ₹ 300 and odd crores ಬಾಕಿ ಇಟ್ಟುಕೊಂಡು ಹೋಗಿದ್ದಾರೆ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಬೆಳೆ ಸಾಲ ಪಡೆದಂಥವರು ಸಾಮಾನ್ಯವಾಗಿ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಸಾಲ ಮರುಪಾವತಿ ಮಾಡುತ್ತಾರೆ. ಈ ಸಮಯದಲ್ಲಿ ಏನಾಗಿದೆ ಎಂದರೆ, ಸುಮಾರು 400 ರಿಂದ 450 ಕೋಟಿ ರೂಪಾಯಿ ಮರುಪಾವತಿ ಆಗಬೇಕಾಗಿದೆ. ಈಗ ನಾವು ಮೊನ್ನೆ ದಿವಸ 200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಆದರೆ, ಹಿಂದಿನ ಸರ್ಕಾರ ಹದಿನಾಲ್ಕು ಲಕ್ಷ ರೈತರಿಗೆ ಈ ಸೌಲಭ್ಯ ಕೊಡುತ್ತಿದ್ದೇವೆ ಎಂದು ಪ್ರಚಾರ ಮಾತ್ರ ಚೆನ್ನಾಗಿ ತೆಗೆದುಕೊಂಡಿತು. ಆದರೆ, ಕೇವಲ ನಾಲ್ಕು ಲಕ್ಷ ರೈತರಿಗೆ ಮಾತ್ರ ಪಾವತಿ ಮಾಡುವಷ್ಟು ಹಣವನ್ನಿಡಲಾಗಿತ್ತು.

**ಶ್ರೀ ಡಿ.ವಿ. ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹೇಳಿದಂತೆ ನಾವು ಪ್ರಚಾರ ತೆಗೆದುಕೊಂಡೆವು. ಜನ ನಮಗೆ ಆ ಪ್ರಚಾರಕ್ಕೆ ಗೌರವ ಕೊಡಲಿಲ್ಲ ಎಂದು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಮಾರ್ಚ್ 31ರವರೆಗೆ ಎಷ್ಟು ಹಣವನ್ನು ನಾವು ಪಾವತಿ ಮಾಡಬೇಕಾಗಿತ್ತು ಅದನ್ನು ಸರ್ಕಾರ ಸರಿಯಾಗಿ ಪಾವತಿ ಮಾಡುವಂತಹ ಕೆಲಸ ಮಾಡಿದೆ. ಹೊಸ ಬಜೆಟ್ ಬಂದ ಮೇಲೆ ಬಾಕಿ ವಿಚಾರಗಳ ಪ್ರಸ್ತಾಪಗಳನ್ನು ಇಟ್ಟು ಅದನ್ನು ಮುಂದುವರೆಸಿಕೊಂಡು ಹೋಗಬೇಕಾದುದು ಸರ್ಕಾರದ ಕರ್ತವ್ಯ.

ಈ ಕೆಲಸವನ್ನು ನಮ್ಮ ಸರ್ಕಾರ ಇದ್ದಿದ್ದರೆ ನಾವು ಮಾಡಬೇಕಾಗಿತ್ತು, ಈಗ ನಿಮ್ಮ ಸರ್ಕಾರ ಇರುವುದರಿಂದ ನೀವು ಮಾಡಬೇಕು. ಆದಕಾರಣ ಜವಾಬ್ದಾರಿಯನ್ನು ಇನ್ನೊಬ್ಬರಿಗೆ ಹಸ್ತಾಂತರ ಮಾಡಿದ್ದೀರಿ ಎಂದು ಹೇಳುವಂಥದ್ದು ಸರಿ ಅಲ್ಲ. ಏಕೆಂದರೆ, ನಾವು ಮೂರು ತಿಂಗಳ ಕಾಲ ನಮಗೆ ತಿಳಿದ ಮಟ್ಟಿಗೆ ಸುಮಾರು 976 ಕೋಟಿ ರೂಪಾಯಿಗಳನ್ನು ಈಗಾಗಲೇ ಮಾರ್ಚ್ ಕೊನೆಯ ಹಂತದವರೆಗೆ ಸರಿಯಾಗಿ ಬಿಡುಗಡೆ ಮಾಡುವಂತಹ ಕೆಲಸ ಮಾಡಿದ್ದೇವೆ. ಅದರ ನಂತರ ಹೊಸ ಬಜೆಟ್‌ನಲ್ಲಿ ಅದಕ್ಕೆ provisions ಮಾಡಿಕೊಡುವಂತಹ ಕೆಲಸ ಕಾರ್ಯಗಳನ್ನು ನಾವು ಮಾಡಬೇಕು ಹಾಗೂ ನಮ್ಮ Appropriation Bill ನಲ್ಲಿಯೂ ಸಹ ಅದನ್ನು ಇಟ್ಟುಕೊಂಡು ಮಾಡುವಂತಹ ಕಾರ್ಯಗಳನ್ನು ನಾವು ಮಾಡಿದ್ದೇವೆ. ದುರ್ದೈವ ನಮಗೆ ಅಧಿಕಾರ ಬರಲಿಲ್ಲ, ನಿಮಗೆ ಅಧಿಕಾರ ಬಂತು. ಈ ರೀತಿ ಇರುವಾಗ ನೀವು ಲಾಭ ತೆಗೆದುಕೊಂಡು ನಮಗೆ ಕಟ್ಟುವುದಕ್ಕೆ ಕೊಟ್ಟಿರಿ ಎಂದು ಹೇಳುವುದು ಯಾವ ನ್ಯಾಯ? ಇದೊಂದು ಗಂಭೀರವಾದಂತಹ ವಿಚಾರ. ಇವತ್ತು ಯಾರು 25,000 ರೂಪಾಯಿ ಸಾಲ ಮನ್ನಾದ ಲಾಭವನ್ನು ಪಡೆದುಕೊಂಡಂತಹ ರೈತರಿದ್ದಾರೆ ಅವರಿಗೆ ಪುನಃ ಹೊಸ ಸಾಲಗಳು ಡಿಸಿಸಿ ಬ್ಯಾಂಕಿನಿಂದ ಬರುತ್ತಿಲ್ಲ ಎನ್ನುವುದು ಎಲ್ಲಾ ಕಡೆಗಳಿಂದ ಕೇಳಿ ಬರುತ್ತಿರುವಂತಹ ದೂರು. ಕಾರಣ ನಮಗೆ ಸಂಬಂಧಪಟ್ಟಂತಹ ಹಣ ಸರ್ಕಾರ ಬಿಡುಗಡೆ ಮಾಡಿಲ್ಲ ಎನ್ನುವ ದೂರು ಇದೆ. ಇದನ್ನು ಬಿಡುಗಡೆ ಮಾಡುವಂತಹ ಜವಾಬ್ದಾರಿ ಸರ್ಕಾರದ್ದು ತಾನೆ? ನಿಜ, lapses ಆಗಿರಬಹುದು ಅಥವಾ ವ್ಯತ್ಯಾಸ ಆಗಿರಬಹುದು, ಏನಾದರೂ ಆಗಿರಬಹುದು. ಆದರೆ, ಹೊಸ ಸರ್ಕಾರ ಬಂದಮೇಲೆ ಹೊಸ ಸರ್ಕಾರದ ಜವಾಬ್ದಾರಿಗೆ ಮಾರ್ಚ್ 31ರ ನಂತರ ಎಲ್ಲಾ ಬಜೆಟ್‌ನ ವ್ಯವಸ್ಥೆಗಳು, provisions ಬರುವಂತಹ ಹಿನ್ನಲೆಯಲ್ಲಿ ಅದನ್ನು ಕೈಗೆತ್ತಿಕೊಳ್ಳಬೇಕಾದುದು ಹೊಸ ಸರ್ಕಾರದ ಜವಾಬ್ದಾರಿ. ಆದಕಾರಣ ಹಿಂದಿನ ಸರ್ಕಾರದ ಕಡೆ ಬೊಟ್ಟು ಮಾಡಿ, 'ನೀವು 3,600 ಕೋಟಿ ರೂಪಾಯಿ ಲಾಭ ತೆಗೆದುಕೊಂಡು ಈಗ ನಮ್ಮ ಮೇಲೆ ಹೊರೆ ಹಾಕಿದ್ದೀರಿ' ಎಂದು ಹೇಳುವುದು ಸರಿಯಲ್ಲ. ಇವತ್ತು ಜನ ನಿಮ್ಮ ಮೇಲೆ ವಿಶ್ವಾಸ ಇಟ್ಟು ಅಧಿಕಾರ ಕೊಟ್ಟಿದ್ದಾರೆ. ನಮ್ಮ ಹಿರಿಯರು,

'ಕಳೆದ ಸಲ 110 ಸ್ಥಾನ ಇತ್ತು, ಈಗ 110 ಸ್ಥಾನದಲ್ಲಿಯೂ ಇಡುಗಂಟು ಕಳೆದುಕೊಂಡಿದ್ದೀರಿ' ಎಂದು ಹೇಳಿದರು. ಇಂತಹ ಘಟನೆಗಳು ರಾಜಕಾರಣದಲ್ಲಿ ಒಂದು ರೀತಿಯಲ್ಲಿ ಕಾಲಚಕ್ರ ಇದ್ದಂತೆ.

ಆದ್ದರಿಂದ ಈಗ ಮಾಡುವ ಸಾಲವನ್ನು ರಿನ್ಯೂವಲ್ ಮಾಡುತ್ತಾರೋ ಗೊತ್ತಿಲ್ಲ. ಆದರೆ ಸಂಪೂರ್ಣವಾದ ಸಾಲವನ್ನು ರೈತರಿಗೆ ಕೊಡದಿದ್ದರೆ ಕಷ್ಟವಾಗುತ್ತದೆ ಮತ್ತು ಸಮಯ ಮುಗಿದಿದೆ ಅವರಿಗೆ ಬಡ್ಡಿ ಬರುವ ಸಾಧ್ಯತೆಗಳಿವೆ. ಆದ್ದರಿಂದ ಬ್ಯಾಂಕ್‌ಗಳಿಗೆ ಕಾಲಕಾಲಕ್ಕೆ ಹಣ ಬರುವಂತೆ ಮಾಡಬೇಕೆಂದು ಕೋರುತ್ತೇನೆ.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರ ಸಲಹೆಗಳನ್ನು ಸರ್ಕಾರವು ಕಾರ್ಯರೂಪಕ್ಕೆ ತರುತ್ತದೆ ಅದರ ಬಗ್ಗೆ ಚಿಂತೆ ಬೇಡ. ನಾವು ಶೂನ್ಯ ಬಡ್ಡಿದರದಲ್ಲಿ 2 ಲಕ್ಷ ರೂಪಾಯಿಗಳವರೆಗೆ ಮತ್ತು ಶೇಕಡಾ 3ರ ಬಡ್ಡಿ ದರದಲ್ಲಿ 5 ಲಕ್ಷ ರೂಪಾಯಿಗಳನ್ನು ಸಾಲದ ರೂಪದಲ್ಲಿ ಕೊಡುತ್ತೇವೆ ಎಂದು ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದು, ಇದನ್ನು ಜುಲೈನಲ್ಲಿ ಬಜೆಟ್ ಮಂಡಿಸಿದಾಗ ಕಾರ್ಯರೂಪಕ್ಕೆ ತರುತ್ತೇವೆ. ನುಡಿದಂತೆ ನಡೆಯುವ ಬದ್ಧತೆಯನ್ನು ಕಾಂಗ್ರೆಸಿಗರು ಹೊಂದಿದ್ದಾರೆ.

**ಶ್ರೀ ಪಟೇಲ್ ಶಿವರಾಂ:-** ಕೊಡಬೇಕಾಗಿರುವುದನ್ನು ಬೇಗ ಬಿಡುಗಡೆ ಮಾಡಿದರೆ ಸಾಕು.

**ಶ್ರೀ ಎಸ್.ಆರ್. ಪಾಟೀಲ್:-** ಅದನ್ನು ಮಾಡುತ್ತೇವೆ. You need not worry.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:-** ಉತ್ತರನ ಪೌರುಷ ಯುದ್ಧ ಮಾಡಿದಾಗ ಗೊತ್ತಾಗುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** 5 ವರ್ಷ ಆಡಳಿತ ಮಾಡಿದಾಗ ಮಾಡಲಿಲ್ಲ. ನಾವು ಅಧಿಕಾರಕ್ಕೆ ಬಂದ ಮೊದಲನೆಯ ದಿವಸವೇ 4200 ಕೋಟಿ ರೂಪಾಯಿಗಳನ್ನು ಘೋಷಣೆ ಮಾಡಿ ಜಾರಿಗೆ ತಂದಿದ್ದೇವೆ. ಇನ್ನೂ ಅವರಿಗೆ ವಿಶ್ವಾಸವಿಲ್ಲವೇ?

**ಶ್ರೀ ವೀರಣ್ಣ ಮತ್ತಿಕಟ್ಟಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಳಿ ತಪ್ಪಿದ ಕರ್ನಾಟಕದ ಆಡಳಿತವನ್ನು ಹಳಿ ಮೇಲೆ ತಂದು, ಸ್ವಚ್ಛತೆ, ದಕ್ಷತೆ ಹಾಗೂ ಪಾರದರ್ಶಕ, ಜನಬದ್ಧತೆ ಮತ್ತು ಅಭಿವೃದ್ಧಿಗೆ ಆದ್ಯತೆಯನ್ನು ಕೊಡುವ ಸರ್ಕಾರವನ್ನು ಪ್ರತಿಷ್ಠಾನ ಮಾಡುವುದೇ ಧ್ಯೇಯ ಎಂಬ ವಾಕ್ಯವನ್ನು ಘನತೆವೆತ್ತ ರಾಜ್ಯಪಾಲರು ಹೇಳಿದ್ದಾರೆ. ಆ ಪ್ರಕಾರ ಮುಂಬರುವ ದಿನಗಳಲ್ಲಿ ಸ್ವಚ್ಛ ಹಾಗೂ ದಕ್ಷ ಆಡಳಿತವನ್ನು ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರ ನಾಯಕತ್ವದಲ್ಲಿ ಕೊಡುತ್ತೇವೆ ಎಂಬ ಮಾತನ್ನು ಘನತೆವೆತ್ತ ರಾಜ್ಯಪಾಲರು ಹೇಳಿದ್ದಾರೆ. ಜೊತೆಗೆ ಅಲ್ಪಸಂಖ್ಯಾತ ಹಿಂದುಳಿದ ವರ್ಗ ಮತ್ತು ದೀನ-ದಲಿತರ ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ನ್ಯಾಯಮೂರ್ತಿಗಳಾದ ರಂಗನಾಥ್ ಮಿಶ್ರಾ ಹಾಗೂ ಸಾಚಾ ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರವು ಕಾರ್ಯರೂಪಕ್ಕೆ ತರುತ್ತದೆ ಎಂದು ಘನತೆವೆತ್ತ ರಾಜ್ಯಪಾಲರು ಹೇಳಿದ್ದಾರೆ. ಶಾಲೆಗಳು, ಉನ್ನತ ಶಿಕ್ಷಣ ಸಂಸ್ಥೆಗಳು.......

(ಮಾನ್ಯ ಉಪ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದು ಹಾಕಲಾಗಿದೆ)

**ಉಪ ಸಭಾಪತಿಯವರು:-** ಇದು ಅಪ್ರಸ್ತುತವಾದ ವಿಷಯವಾದ್ದರಿಂದ ರೆಕಾರ್ಡ್‌ಗೆ ಹೋಗುವುದಿಲ್ಲ. ಎರಡೂ ಕಡೆಯಲ್ಲಿಯೂ ಅಪ್ರಸ್ತುತ ವಿಷಯವನ್ನು ಮಾತನಾಡಿದಾಗ ರೆಕಾರ್ಡ್‌ಗೆ ಹೋಗುವುದಿಲ್ಲ. ದಯವಿಟ್ಟು ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಮಾತನಾಡಿ.

(ಗೊಂದಲ)

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಪ್ರಜಾಪ್ರಭುತ್ವಕ್ಕೆ ಹಾಗೂ ಸದನದ ನಡವಳಿಕೆಗೆ ವಿರೋಧವಾಗಿರುವುದನ್ನು ತೆಗೆದುಹಾಕಬಹುದು. ಸನ್ಮಾನ್ಯ ಸಭಾಪತಿಯವರೇ, ಯಾವುದು ಪ್ರಜಾಪ್ರಭುತ್ವಕ್ಕೆ ಮತ್ತು ಈ ಸದನದ ನಡವಳಿಕೆ ವಿರುದ್ಧವಾಗಿರುತ್ತದೆ ಅಂತಹ ಪದವನ್ನು

ಕಡತದಿಂದ ತೆಗೆದು ಹಾಕಬಹುದು. ಅವರುಗಳು ಇಲ್ಲದ್ದನ್ನು ಮಾತನಾಡಿ, ಇಲ್ಲದ್ದನ್ನು ಸೃಷ್ಟಿ ಮಾಡಿ ಹೇಳುವುದು ಸರಿಯಲ್ಲ.

**ಶ್ರೀ ಕೆ.ಬಿ.ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ಅವರುಗಳು ನಮಗೆ ಸಿಟ್ಟು ಬರುವ ಹಾಗೆ ಮತ್ತು ನಮ್ಮನ್ನು ಪ್ರಚೋದಿಸುವ ರೀತಿಯಲ್ಲಿ ಮಾತನಾಡಿದರು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಯಾವುದೇ ತಪ್ಪು ಮಾಹಿತಿ ಕಡತಕ್ಕೆ ಹೋಗಬಾರದು ಎನ್ನುವುದು ನನ್ನ ಭಾವನೆಯಾಗಿದೆ. ಮಾನ್ಯ ಜವಹರಲಾಲ್ ನೆಹರು ಅವರ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಅದನ್ನು ಹೇಳಬೇಕಾಗುತ್ತದೆ. ನೆಹರು ಅವರು ಭಾರತಕ್ಕೆ ಭದ್ರ ಬುನಾದಿಯನ್ನು ಹಾಕಿಕೊಟ್ಟಿದ್ದಾರೆ.

**ಶ್ರೀ ಗೋ.ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಸರ್ದಾರ್ ಪಟೇಲ್‌ರವರು ಸಹ ಕಾಂಗ್ರೆಸಿನವರು ಅಲ್ಲವೇ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಧುಸೂದನ್ ಅವರು ಧರಿಸಿರುವಂತಹ ಷರ್ಟ್‌ನ ಬಣ್ಣ ವಿಷ ಕಲ್ಪಿತವಾಗಿದೆ. ನಾವು ಸರ್ದಾರ್ ಪಟೇಲ್ ಅವರನ್ನು ಇವತ್ತಿಗೂ ಗೌರವಿಸುತ್ತೇವೆ. ಇವರುಗಳು ಸರ್ದಾರ್ ಪಟೇಲ್ ಅವರನ್ನು ನೋಡಿಯೇ ಇಲ್ಲ.

**ಶ್ರೀ ಗೋ.ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಸರ್ದಾರ್ ಪಟೇಲ್‌ರವರು ಬಿ.ಜೆ.ಪಿ. ಪಕ್ಷದವರೇ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಅವರು ನಮ್ಮವರು ಇವರಿಗೆ ಯಾರೂ ಇಲ್ಲ. ಇವರದು ಏನಿದೆ ಹೇಳಿಕೊಳ್ಳುವುದಕ್ಕೆ?

**ಶ್ರೀ ಗೋ.ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲು ಶ್ರಮಿಸಿದ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಹೆಸರನ್ನು ಅವರು ಹೇಳುತ್ತಿಲ್ಲ. ಆದರೆ, ನಾವು ಹೇಳುತ್ತೇವೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಈ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಒಂದು ಸಾರಿ ಇವರುಗಳನ್ನು ಹುಡುಕಿಕೊಂಡು ಹೋದವರನ್ನು ಬಲಿ ಕೊಟ್ಟು ಬಂದಿದ್ದಾರೆ. ಆ ಸತ್ಯವನ್ನು ನಾನು ಈಗ ಹೇಳಬೇಕೇ?

**(ಗೊಂದಲ)**

**ಉಪ ಸಭಾಪತಿಯವರು:–** ಮಾನ್ಯ ಮಧುಸೂದನ್‌ರವರೇ, ಪದೇ ಪದೇ ಮಾತನಾಡಲು ಎದ್ದು ನಿಲ್ಲಬಾರದು. ಹಾಗೊಂದು ಪಕ್ಷ ಎದ್ದು ನಿಂತರೆ, ಈ ಪೀಠಕ್ಕೆ ಅಗೌರವ ತೋರಿಸಿದಂತಾಗುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಅವರನ್ನು ಕಡತದಿಂದ ತೆಗೆದು ಹಾಕಲಾಗಿದೆ.

**ಉಪ ಸಭಾಪತಿಯವರು:–** ಮಾನ್ಯ ವೀರಣ್ಣ ಮತ್ತಿಕಟ್ಟಿಯವರೇ, ನೀವು ಮಾತನಾಡಿ.

**(ಗೊಂದಲ)**

**ಶ್ರೀ ಗೋ.ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ, ಇಲ್ಲಿಗೆ ನಾನು ಪುಕ್ಸಟ್ಟೆ ಬಂದಿಲ್ಲ. ಜನರು ಓಟು ಕೊಟ್ಟು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತಹ ಮಾತುಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.

**(ಗೊಂದಲ)**

**ಶ್ರೀ ಕೆ.ಬಿ.ಶಾಣಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಇಷ್ಟೊಂದು ಭಾವಾವೇಶದಿಂದ ಮಾತನಾಡುವುದು ಸರಿಯಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, **ನಾನು ಕಡತದಿಂದ ತೆಗೆದು ಹಾಕಲಾಗಿದೆ ಎನ್ನುವಂತಹ ಪದವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದೇನೆ.** ಆದರೆ, ಈ ರೀತಿಯ ಕುಹಕತನ, ಈ ರೀತಿಯ ಕೆಟ್ಟ

ವಿಚಾರ ಮತ್ತು ಕಲ್ಮಷ ಮನಸ್ಸು ಯಾವುದೇ ಮನುಷ್ಯನಿಗೆ ಇರಬಾರದು. ಅಂತಹ ಮನುಷ್ಯ ಹಾನಿಯುನ್ನುಂಟು ಮಾಡುತ್ತಾನೆ ಎನ್ನುವ ಸತ್ಯವನ್ನು ಅವರು ತಿಳಿದುಕೊಳ್ಳಬೇಕು. ನಾನು ತಾಯಿ ಹೃದಯದ ಭಾವನೆಗಳ ಬಗ್ಗೆ ಮಾತನಾಡುತ್ತಿದ್ದೆ. ಮಧ್ಯದಲ್ಲಿ ಅವರುಗಳು ಎದ್ದು ನಿಂತು ಮಾತನಾಡಿ ಗದ್ದಲ ಎಬ್ಬಿಸಿದರು.

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಡಾ|| ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಅವರು ಮಾತನಾಡಲೇ ಇಲ್ಲ. ಅವರ ಹೆಸರನ್ನು ಸಹ ಹೇಳಲಿಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಬುದ್ಧ, ಬಸವ ಮತ್ತು ಡಾ|| ಬಿ.ಆರ್.ಅಂಬೇಡ್ಕರ್ ಇವರುಗಳೇ ನಮ್ಮ ಆಸ್ತಿ.

**ಶ್ರೀ ಡಿ.ಎಸ್. ವೀರಯ್ಯ:–** ಸನ್ಮಾನ್ಯ ಸಭಾಪತಿಯವರೇ, ಮೊನ್ನೆ ತಾನೇ ಜವಹರಲಾಲ್ ನೆಹರು ಮತ್ತು ಡಾ|| ಬಿ.ಆರ್.ಅಂಬೇಡ್ಕರ್ ಇವರಿಬ್ಬರಲ್ಲಿ ಯಾರು ವಿಶ್ವದಲ್ಲಿಯೇ ಬಹಳ ತೂಕದ ವ್ಯಕ್ತಿ ಎನ್ನುವ ಬಗ್ಗೆ ಒಂದು ವರದಿ ಬಂದಿತ್ತು. ಅದರಲ್ಲಿ ಡಾ|| ಬಿ.ಆರ್.ಅಂಬೇಡ್ಕರ್ ಮೊದಲಿಗರು ಅನಂತರ ಜವಹರಲಾಲ್ ನೆಹರು ಎಂದು ಉಲ್ಲೇಖವಾಗಿತ್ತು.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಡಾ|| ಬಿ.ಆರ್.ಅಂಬೇಡ್ಕರ್ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ಕೊಟ್ಟಿದ್ದು ನಾವು.

**ಶ್ರೀ ಡಿ.ಎಸ್. ವೀರಯ್ಯ:–** ಸನ್ಮಾನ್ಯ ಸಭಾಪತಿಯವರೇ, ಇವತ್ತು ನಾವುಗಳು ಇಲ್ಲಿ ಕುಳಿತುಕೊಳ್ಳುವುದಕ್ಕೆ ಕಾರಣವಾಗಿರುವಂತಹ ವ್ಯವಸ್ಥೆಯನ್ನು ತಂದವರು ಡಾ|| ಬಿ.ಆರ್.ಅಂಬೇಡ್ಕರ್ ಅವರು, ಆದ್ದರಿಂದ ಮೊದಲು ಅವರ ಹೆಸರನ್ನು ಹೇಳಬೇಕಾಗುತ್ತದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಇವರುಗಳು ಅವರನ್ನು ಗುಡಿ ಹೊರಗೆ ನಿಲ್ಲಿಸುತ್ತಿದ್ದರು. ನಾವು ಒಳಗೆ ಕರೆದುಕೊಂಡೆವು.

**ಶ್ರೀ ಡಿ.ಎಸ್. ವೀರಯ್ಯ:–** ಸನ್ಮಾನ್ಯ ಸಭಾಪತಿಯವರೇ, ಇವರ ಸರ್ಕಾರ ಅಧಿಕಾರದಲ್ಲಿದ್ದಾಗ ಡಾ॥ ಅಂಬೇಡ್ಕರ್ ಅವರಿಗೆ 'ಭಾರತ ರತ್ನ' ಪ್ರಶಸ್ತಿ ಕೊಡಲಿಲ್ಲ. ದಿವಂಗತ ವಿ.ಪಿ. ಸಿಂಗ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ ಅವರು ಡಾ॥ ಅಂಬೇಡ್ಕರ್ ಅವರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಿದ್ದರು.

**ಶ್ರೀ ನಾರಾಯಣ ಸಾ.ಬಾಂಡಗೆ:–** ಸನ್ಮಾನ್ಯ ಸಭಾಪತಿಯವರೇ, ಅವರಿಗೆ ಮಹಾತ್ಮಾ ಗಾಂಧೀಜಿಯವರ ಹೆಸರನ್ನು ಹೇಳುವಂತಹ ನೈತಿಕ ಹಕ್ಕಿಲ್ಲ. ಮಹಾತ್ಮಾ ಗಾಂಧೀಜಿಯವರು ಕಾಂಗ್ರೆಸ್ ಪಕ್ಷವನ್ನು ವಿಸರ್ಜನೆ ಮಾಡಬೇಕೆಂದು ಹೇಳಿದ್ದರು, ಅದು ಅವರಿಗೆ ನೆನಪಿದೆಯೇ?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾರಾಯಣ್ ಸಾ ಬಾಂಡಗೆ ಅವರಿಗೆ 'ಗೊಡ್ಸೆ' ಬಿಟ್ಟರೆ ಬೇರೆ ಯಾರೂ ಗೊತ್ತಿಲ್ಲ. ಬೇರೆ ಏನೂ ಗೊತ್ತಿಲ್ಲ. ಮಾನ್ಯ ಯಡಿಯೂರಪ್ಪನವರು ಸಹ ಪಕ್ಷ ವಿಸರ್ಜನೆ ಮಾಡಿ ಎಂದಿದ್ದರು. ಇವರು ವಿಸರ್ಜನೆ ಮಾಡಿದ್ದಾರೆಯೇ? ನಾನು ತಾಯಿ ಹೃದಯದ ಬಗ್ಗೆ ಮಾತನಾಡುತ್ತಿದ್ದೆ.

**(ಗೊಂದಲ)**

**ಶ್ರೀ ಡಿ.ವಿ.ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಆವೇಶಭರಿತರಾಗಬಾರದು. ಸ್ವಾತಂತ್ರ್ಯ ಸಂಗ್ರಾಮದ ಹೋರಾಟ ಮತ್ತು ತ್ಯಾಗದ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರು ಕೆಲವರ ಹೆಸರುಗಳನ್ನು ಉಲ್ಲೇಖ ಮಾಡಿ ಮಾತನಾಡುತ್ತಿದ್ದರು. ನಮ್ಮ ನಾಯಕರ ಹೆಸರುಗಳನ್ನು ಸಹ ಆ ಪಟ್ಟಿಗೆ ಸೇರಿಸಬೇಕೆನ್ನುವ ಮನಸ್ಸಿನಿಂದ ನಮ್ಮ ಸದಸ್ಯರು ಈ ರೀತಿ ಮಾತನಾಡಿದ್ದಾರೆಯೇ ಹೊರತು ಅವರ ಮೇಲೆ ಸವಾರಿ ಮಾಡಬೇಕೆನ್ನುವ ಮನೋಭಾವ ಯಾರಿಗೂ ಇಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಅವರು ಸವಾರಿ ಮಾಡುವುದು ಅಲ್ಲ, ದಾರಿ ತಪ್ಪಿಸುವಂತಹ ಕೆಲಸವನ್ನು ಬಹಳ ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದಾರೆ.

**ಶ್ರೀ ಡಿ.ವಿ.ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಇಷ್ಟೊಂದು ಆವೇಶಭರಿತರಾಗಿರುವುದನ್ನು ನಾನು ಹಿಂದೆಂದೂ ನೋಡಿರಲಿಲ್ಲ. ಈ ಭಾಗದಿಂದ ಆ ಭಾಗಕ್ಕೆ ಹೋದ ಕೂಡಲೇ ವಿಪರೀತವಾದ ಆವೇಶ ಬರುವುದು ಸರಿಯಲ್ಲ. ಅವರು ಈ ರೀತಿಯ ಆವೇಶಕ್ಕೆ ಒಳಗಾಗಬಾರದು. ಮಾನ್ಯ ಸದಸ್ಯರು ಶಾಂತ ರೀತಿಯಿಂದ ಮಾತನಾಡಬೇಕು. ನಮ್ಮ ಭಾಗದ ಸದಸ್ಯರು ಶಾಂತ ರೀತಿಯಿಂದ ಅವರ ಮಾತುಗಳನ್ನು ಕೇಳುತ್ತಾರೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ಮಧುಸೂದನ್ ಅವರನ್ನು ಶಾಂತ ರೀತಿಯಲ್ಲಿ ಕುಳಿತುಕೊಳ್ಳುವಂತೆ ನೋಡಿಕೊಂಡರೆ ಸಾಕು, ಸದನ ಸುಗಮವಾಗಿ ನಡೆಯುತ್ತದೆ.

**ಶ್ರೀ ಬಸವರಾಜ್ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಸರ್ದಾರ್ ಪಟೇಲ್‌ರವರು ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರು ಕಾಂಗ್ರೆಸ್‌ನವರು. ಆದರೆ, ಅವರುಗಳನ್ನು ಇವರು ನೆನಪು ಮಾಡಿಕೊಳ್ಳುತ್ತಿಲ್ಲ, ಕೆಲವರನ್ನು ಮಾತ್ರ ನೆನಪು ಮಾಡಿಕೊಳ್ಳುತ್ತಿದ್ದಾರೆ ಎನ್ನುವುದು ಮಾನ್ಯ ಮಧುಸೂದನ್‌ರವರ ಭಾವನೆಯಾಗಿದೆ, ಅದರಲ್ಲಿ ತಪ್ಪೇನಿದೆ.

**(ಗೊಂದಲ)**

**ಶ್ರೀ ಡಿ.ಎಸ್. ವೀರಯ್ಯ:–** ಸನ್ಮಾನ್ಯ ಸಭಾಪತಿಯವರೇ, ಪ್ರಸ್ತುತ ವಿಷಯಕ್ಕೆ ಸಂಬಂಧ ಇಲ್ಲದಿದ್ದರು ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತಿದ್ದೇನೆ. ಈ ಸರ್ಕಾರ, 'ರಂಗನಾಥ ಮಿಶ್ರ ಆಯೋಗದವರ ವರದಿಯನ್ನು ಜಾರಿಗೆ ತರುತ್ತೇವೆ' ಎಂದು ಹೇಳಿದೆ. ಕೇಂದ್ರದ ಯು.ಪಿ.ಎ. ಸರ್ಕಾರ ರಂಗನಾಥ ಮಿಶ್ರ ಆಯೋಗವನ್ನು ರಚಿಸಿತು. ಆಯೋಗದವರು ಯು.ಪಿ.ಎ. ಸರ್ಕಾರಕ್ಕೆ ವರದಿಯನ್ನು ಕೊಟ್ಟಿದ್ದಾರೆ. ಅದು ಕೇಂದ್ರದಲ್ಲಿಯೇ ಅಂಗೀಕಾರ ಆಗಿಲ್ಲ, ಅಲ್ಲೇ ಅನುಷ್ಠಾನಕ್ಕೆ ಬಂದಿಲ್ಲ. ಆದರೆ, ಈ ಸರ್ಕಾರದವರು "ನಾವು ಅದನ್ನು ಅನುಷ್ಠಾನಕ್ಕೆ ತರುತ್ತೇವೆ" ಎಂದು

ಘನತೆವೆತ್ತ ರಾಜ್ಯಪಾಲರ ಭಾಷಣದಲ್ಲಿ ಹೇಳಿಸುತ್ತಾರೆ. ಇದು ಹೇಗೆ ಸಾಧ್ಯ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಈ ವಿಚಾರವನ್ನು ಅವರು ಘನತೆವೆತ್ತ ರಾಜ್ಯಪಾಲರ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಭಾಷಣ ಮಾಡುವಂತಹ ಸಂದರ್ಭದಲ್ಲಿ ಹೇಳಲಿ.

**ಉಪ ಸಭಾಪತಿಯವರು:–** ಮಾನ್ಯ ವೀರಯ್ಯನವರೇ, ತಮ್ಮ ಸಮಯ ಬಂದಾಗ ಮಾತನಾಡಿ, ಈಗ ಕುಳಿತುಕೊಳ್ಳಿ.

**ಶ್ರೀ ಡಿ.ಎಸ್. ವೀರಯ್ಯ:–** ಸನ್ಮಾನ್ಯ ಸಭಾಪತಿಯವರೇ, ಪ್ರಾಯೋಗಿಕವಾಗಿ ಅಲ್ಲೇ ಚರ್ಚೆ ಆಗಿಲ್ಲ, ಅಲ್ಲೇ ಪಾಸ್ ಆಗಿಲ್ಲ. ಅಲ್ಲೇ ಅಂಗೀಕಾರವಾಗಿಲ್ಲ. ಇವರು ಹೇಗೆ ಆ ವರದಿಯನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರುತ್ತಾರೆ ಎನ್ನುವುದು ನಮ್ಮ ಪ್ರಶ್ನೆಯಾಗಿದೆ.

**ಉಪ ಸಭಾಪತಿಯವರು:–** ಮಾನ್ಯ ವೀರಯ್ಯನವರೇ, ತಮ್ಮ ಸಮಯ ಬಂದಾಗ ಮಾತನಾಡಿ, ಈಗ ಕುಳಿತುಕೊಳ್ಳಿ. ಮಾನ್ಯ ವೀರಣ್ಣ ಮತ್ತಿಕಟ್ಟಿಯವರೇ, ತಮ್ಮ ಬಗ್ಗೆ ನನಗೆ ಅತೀವವಾದ ಗೌರವವಿದೆ. ತಾವು ಹಿರಿಯರು, ತಿಳಿದಂತಹವರು, ತಾವು ಯಾಕೆ ಇಷ್ಟೊಂದು ಸಿಟ್ಟಿಗೇಳುತ್ತಿದ್ದೀರಿ ಎನ್ನುವುದು ನನಗೂ ಆಶ್ಚರ್ಯವುಂಟು ಮಾಡುತ್ತಿದೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಇವರುಗಳು ಇಲ್ಲದ್ದನ್ನು ಮಾತನಾಡುತ್ತಿದ್ದಾರೆ.

**ಉಪ ಸಭಾಪತಿಯವರು:–** ತಾವು ಸಮಾಧಾನದಿಂದ ಮಾತನಾಡಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತಿದ್ದೇನೆ. ನಾನು ಸಂವಿಧಾನಬದ್ಧವಲ್ಲದ ಪದಗಳನ್ನು ಬಳಸಿದ್ದರೆ, ಸಂವಿಧಾನಕ್ಕೆ ಮತ್ತು ಮಾನ್ಯ ಸದಸ್ಯರಿಗೆ ಅಗೌರವ ತರುವಂತಹ ಪದಗಳನ್ನು ಬಳಸಿದ್ದರೆ ಅವುಗಳನ್ನು ಕಡತದಿಂದ ತೆಗೆದು ಹಾಕಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಡಿ.ವಿ. ಸದಾನಂದಗೌಡ:–** ಸನ್ಮಾನ್ಯ ಸಭಾಪತಿಯವರೇ, ಸಂವಿಧಾನಕ್ಕೆ ಅಪಚಾರ ಆಗುವಂತಹ ಯಾವುದೇ ಮಾತುಗಳನ್ನು ಅವರು ಆಡಿಲ್ಲ. ಅವರು ಹೇಳಿದಂತೆ ಒಂದು ಸಣ್ಣ ಲೋಪವಾಗಿದೆ. ಹಲವಾರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಉಲ್ಲೇಖ ಮಾಡಿದ್ದಾರೆ. ಅವರಷ್ಟೇ ಈ ದೇಶಕ್ಕಾಗಿ ತ್ಯಾಗ ಮಾಡಿದ ಇತರರ ಹೆಸರುಗಳನ್ನು ಸಹ ಅವರು ಹೇಳಬೇಕಾಗಿತ್ತು ಎನ್ನುವುದು ನಮ್ಮ ಸದಸ್ಯರ ಭಾವನೆಯಾಗಿದೆ. ಇನ್ನೊಮ್ಮೆ ಅವರುಗಳು ಹೆಸರುಗಳನ್ನು ಹೇಳಿಬಿಡಲಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಪ್ರಾರಂಭದಲ್ಲಿಯೇ ಅವಸರ ಬೇಡ ಎನ್ನುವುದು ನನ್ನ ಮಾತು.

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:–** ಸನ್ಮಾನ್ಯ ಸಭಾಪತಿಯವರೇ, 'ಅವರನ್ನು ಬಿಟ್ಟಿದ್ದೀರಿ, ಇವರನ್ನು ಬಿಟ್ಟಿದ್ದೀರಿ, ಸೇರಿಸಿಕೊಂಡು ಹೇಳಿ' ಎಂದು ಅವರು ಹೇಳಿದ ಹಾಗೆ ಕೇಳುವುದಕ್ಕೆ ಆಗುವುದಿಲ್ಲ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾನು ಸಭಾಪತಿಯಾಗಿದ್ದಾಗ ಮೊದಲ ಬಾರಿಗೆ ನಾನು ಮಾನ್ಯ ವೀರಯ್ಯನವರು ಸಭಾಪತಿಗಳ ಸ್ಥಾನದಲ್ಲಿ ಕುಳಿತುಕೊಳ್ಳುವ ಹಾಗೆ ಮಾಡಿದೆ. ಆಮೇಲೆ ಯಾವುದೇ ವಿಷಯ ಚರ್ಚೆಗೆ ಬಂದರೂ ಮಾನ್ಯ ವೀರಯ್ಯನವರ ಹೆಸರನ್ನು ಕರೆಯುತ್ತಿದ್ದೆ. ಅದು ನನ್ನ ಬದ್ಧತೆ. ನಾನು ಬೆಳೆದು ಬಂದ ರೀತಿ ಅದು. ನನ್ನ ಬದ್ಧತೆ ಬಸವ–ಬುದ್ಧ. ರಾಷ್ಟ್ರಕವಿ ಕುವೆಂಪು ಅವರ ಬಗ್ಗೆ ಉಲ್ಲೇಖ ಮಾಡಿ, ಅವರು ರಚಿಸಿರುವಂತಹ ನಾಡಗೀತೆಯಲ್ಲಿ ಈ ನಾಡಿನ ಸತ್ವವನ್ನು ಹೇಳಿದ್ದಾರೆ ಎನ್ನುವ ಬಗ್ಗೆ ನಾನು ಮಾತನಾಡುತ್ತಿದ್ದ ಸಂದರ್ಭದಲ್ಲಿ ಅನಾವಶ್ಯಕವಾಗಿ ದಾರಿ ತಪ್ಪಿಸುವಂತಹ ಕೆಲಸವನ್ನು ಅವರುಗಳು ಮಾಡಿದರು.

ಸನ್ಮಾನ್ಯ ಸಭಾಪತಿಯವರೇ, ತಾಯಿ ಹೃದಯದ ಭಾವನೆಗಳ ಬಗ್ಗೆ ನಾನು ಮಾಡನಾಡುತ್ತಿದ್ದೆ. ತಾಯಿ, ಮನೆಯಲ್ಲಿ ಇರುವಂತಹ ದಷ್ಟಪುಷ್ಠ ಮಕ್ಕಳಿಗಿಂತ ಅಶಕ್ತ ಮಕ್ಕಳು ಮತ್ತು ಅನಾರೋಗ್ಯದಿಂದ ಬಳಲುತ್ತಿರುವಂತಹ ಮಕ್ಕಳಿಗೆ ಹಾಲು, ತುಪ್ಪ, ಪೌಷ್ಠಿಕ ಊಟವನ್ನು ನೀಡುವ ಮೂಲಕ ಹೆಚ್ಚು

ಕಾಳಜಿಯನ್ನು ವಹಿಸುತ್ತಾಳೆ. ಅದೇ ರೀತಿಯಲ್ಲಿ ಸರ್ಕಾರಕ್ಕೆ ತಾಯಿಯ ಮನೋಭಾವನೆ ಇರಬೇಕೆಂದು ನಾನು ಹೇಳುತ್ತಿದ್ದೆ. ಅಷ್ಟರಲ್ಲಿಯೇ ಅವರುಗಳು ದೇಶ ವಿಭಜನೆ, ರಾಜ್ಯ ವಿಭಜನೆಯ ಬಗ್ಗೆ ಮಾತನಾಡಿದರು. ನನಗೆ ನೋವಾಯಿತು. ನಾನು ಹೇಳುವುದರಲ್ಲಿ ಏನು ತಪ್ಪಿದೆ? ನಮ್ಮ ಮನೆಯಲ್ಲಿ ಯಾರಾದರೂ ಅನಾರೋಗ್ಯದಿಂದ ಬಳಲುತ್ತಿದ್ದರೆ ಅವರನ್ನು ದವಾಖಾನೆಗೆ ಕರೆದುಕೊಂಡು ಹೋಗುತ್ತೇವೆ. 'ಅವರಿಗೆ ಗಟ್ಟಿ ರೊಟ್ಟಿ ಕೊಡಬೇಡಿ, ಅನ್ನ, ತಂಪು ಹಾಲು ಇಂತಹ ಪದಾರ್ಥಗಳನ್ನು ಕೊಡಿ' ಎಂದು ಅವರ ಬಗ್ಗೆ ಕಾಳಜಿ ವಹಿಸುತ್ತೇವೆ. ಅದೇ ರೀತಿಯಲ್ಲಿ ದೀನ-ದಲಿತರಿಗೆ, ಶೋಷಿತರಿಗೆ ಮತ್ತು ಅಲ್ಪ ಸಂಖ್ಯಾತರಿಗೆ ಹೆಚ್ಚಿನ ಆದ್ಯತೆ ಕೊಡಬೇಕಾಗಿರುವುದು ಸರ್ಕಾರದ ಕರ್ತವ್ಯವಾಗಿರುತ್ತದೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವೀರಣ್ಣ ಮತ್ತಿಕಟ್ಟಿಯವರ ವಿಚಾರವೇನೆಂದರೆ, 'ಮಾತೃ ದೇವೋಭವ' ಅಂದರೆ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ತಾಯಿ ಕರುಳು ಅಥವಾ ತಾಯಿ ಹೃದಯ ಇರಬೇಕಾಗುತ್ತದೆ ಎನ್ನುವ ಉದ್ದೇಶವನ್ನಿಟ್ಟುಕೊಂಡು ಅವರು ಆ ಮಾತನ್ನು ಹೇಳುತ್ತಿದ್ದಾರೆ. ಅವರು ದಾರಿ ತಪ್ಪಿಸಿದರು. ನನ್ನ ದೃಷ್ಟಿಯಲ್ಲಿ ರಾಜಕಾರಣಿಗಳಾಗಲಿ, ಅಧಿಕಾರಿಗಳಾಗಲಿ ತಾಯಿ ಕರುಳು ಇರಬೇಕು. ಅದೇ ಮಾತೃ ಹೃದಯ. ಅಂದಾಗ ಮಾತ್ರ ನಾವು ಜನಪರ ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಎಲ್ಲರನ್ನು ಒಟ್ಟಿಗೆ ಕರೆದುಕೊಂಡು ಹೋಗಿ ಅಭಿವೃದ್ಧಿಯತ್ತ ಮುನ್ನಡೆಯಲಿಕ್ಕೆ ಸಾಧ್ಯವಿದೆ. 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು' ಎನ್ನುವ ತತ್ವ, ಸಿದ್ಧಾಂತ, ನಂಬಿಕೆ ಇದೆ. ಅದು ಕಾರ್ಯರೂಪಕ್ಕೆ ಬರಬೇಕಾದರೆ ರಾಜಕಾರಣಿಗಳಿಗೆ ಮತ್ತು ಅಧಿಕಾರಿಗಳಿಗೆ ತಾಯಿ ಕರುಳು ಅಥವಾ ತಾಯಿ ಹೃದಯ ಇರಬೇಕು ಎನ್ನುವ ಮಾತನ್ನು ಹೇಳುವ ಸಲುವಾಗಿ ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಹೇಳಿದರು. ನಿಮ್ಮಲ್ಲಿ ನನ್ನದೊಂದು ಮನವಿ. ದಯಮಾಡಿ ತಾವು ಮಾನ್ಯ ಮಧುಸೂದನ್‌ರವರನ್ನು ನಿಯಂತ್ರಿಸಬೇಕು.

**ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್ (ಸಹಕಾರ ಸಚಿವರು):–** ಮಾನ್ಯ ಸಭಾಪತಿಯವರೇ, 25,000 ರೂಪಾಯಿ ಸಾಲ ಮನ್ನಾದ ಬಗ್ಗೆ ಚರ್ಚೆಯಾಗುತ್ತಿತ್ತು. ಹಿಂದಿನ ಸಹಕಾರ ಸಚಿವರಾದ ಶ್ರೀ ಪುಟ್ಟಸ್ವಾಮಿಯವರು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಅದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ನಾನು ಈಗ ಸಂಬಂಧಪಟ್ಟ ಇಲಾಖೆಯಿಂದ ಒಂದು ಮಾಹಿತಿಯನ್ನು ತೆಗೆದುಕೊಂಡ ಪ್ರಕಾರ ಜನವರಿ ಕೊನೆಯವರೆವಿಗೂ 231 ಕೋಟಿ ರೂಪಾಯಿ ಪೆಂಡಿಂಗ್ ಬಿಲ್ಸ್ ಇತ್ತು, ಸರ್ಕಾರ ಅದನ್ನು ಪಾವತಿ ಮಾಡಬೇಕಾಗಿತ್ತು. 940 ಕೋಟಿ ರೂಪಾಯಿಯನ್ನು ಏನು ಸರ್ಕಾರ ಬಿಡುಗಡೆ ಮಾಡಿತ್ತು ಆ ಹಣವನ್ನು ವಿತರಣೆ ಮಾಡಿ ಜನವರಿ ಕೊನೆಯವರೆವಿಗೂ 231 ಕೋಟಿ ರೂಪಾಯಿ ಪೆಂಡಿಂಗ್ ಬಿಲ್ಸ್ ಸರ್ಕಾರದ ಮುಂದೆ ಇತ್ತು. ಮಧ್ಯದಲ್ಲಿ ಚುನಾವಣೆ ಬಂದಿದ್ದರಿಂದ ಯಾವುದೇ ಹಣ ಬಿಡುಗಡೆಯಾಗಿರಲಿಲ್ಲ. 231 ಕೋಟಿ ರೂಪಾಯಿ ಅಲ್ಲದೆ, 550 ಕೋಟಿ ರೂಪಾಯಿ ಮಾರ್ಚ್ ಕೊನೆಯವರೆವಿಗೂ ಅಡಿಷನಲ್ ಬಿಲ್ಸ್ ಬಂದಿತ್ತು. ಎರಡೂ ಸೇರಿ ಮಾರ್ಚ್ ಕೊನೆಯವರೆಗೆ 781 ಕೋಟಿ ರೂಪಾಯಿ ಪೇಮೆಂಟ್ ಆಗಬೇಕಾಗಿತ್ತು. ಆದರೆ 940 ಕೋಟಿ ರೂಪಾಯಿಗಳ ಜೊತೆಗೆ ಸುಮಾರು 780 ಕೋಟಿ ರೂಪಾಯಿಗೂ ಸಹ ಹಿಂದಿನ ಸರ್ಕಾರ provision ಮಾಡಬೇಕಾಗಿತ್ತು. ಆದರೆ, ಹಿಂದಿನ ಸರ್ಕಾರ ಅದನ್ನು ಮಾಡಿರಲಿಲ್ಲ. ಈ ಬಾರಿ ಈ ಬಜೆಟ್‌ನಲ್ಲಿ 800 ಕೋಟಿ ರೂಪಾಯಿಗಳ provision ಮಾಡಿದ್ದರು. ಅದರಲ್ಲಿ quarterly ಎಂದು 200 ಕೋಟಿ ರೂಪಾಯಿಗಳನ್ನು ನಾವು ಮೊನ್ನೆ ಬಿಡುಗಡೆ ಮಾಡಿದ್ದೇವೆ. ಮೇ 31ಕ್ಕೆ 200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದ ಪೈಕಿಯಲ್ಲಿ ಜನವರಿ ಕೊನೆಯವರೆವಿಗೂ ಪೆಂಡಿಂಗ್ ಬಿಲ್ಸ್ ಏನು 231 ಕೋಟಿ ರೂಪಾಯಿ ಇತ್ತು, ಅದರಲ್ಲಿ 200 ಕೋಟಿ ರೂಪಾಯಿಗಳು ವಜಾ ಆಗುತ್ತದೆ. ಇನ್ನುಳಿದಂತೆ 31 ಕೋಟಿ ರೂಪಾಯಿಗಳು ಮತ್ತು 550 ಕೋಟಿ ರೂಪಾಯಿಗಳು ಎಂದರೆ ಒಟ್ಟು 581 ಕೋಟಿ ರೂಪಾಯಿಗಳನ್ನು ಈ ವರ್ಷದಲ್ಲಿ ನಾವು ಕೊಡಬೇಕಾಗುತ್ತದೆ. ಆದ್ದರಿಂದ ಮಾರ್ಚ್ 31ರವರೆವಿಗೂ ಯಾವುದೇ ಪಾವತಿ ಆಗದೇ ಇರುವ ಹಾಗೆ ಅಷ್ಟೂ

ಹಣವನ್ನು ಭರಿಸಿದ್ದೆವು ಎಂದು ಏನು ಅವರು ಹೇಳುತ್ತಿದ್ದಾರೆ, ಅದು ಅಷ್ಟು ಸೂಕ್ತವಾದ ಉತ್ತರವಲ್ಲ.

**ಶ್ರೀ ಕೆ.ಬಿ.ಶಾಣಪ್ಪ(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, Code of Conduct ಬಂದ ನಂತರ ನೀವೆಲ್ಲರೂ ತೆಪ್ಪಗೆ ಕುಳಿತಿರಿ.

**ಶ್ರೀ ಹೆಚ್.ಎಸ್.ಮಹದೇವ್‌ಪ್ರಸಾದ್:–** ಮಾರ್ಚ್ ಕೊನೆಯವರೆವಿಗೂ ನೀವು provision ಮಾಡಬೇಕಾಗಿತ್ತು. ಬಜೆಟ್‌ನಲ್ಲಿ 1700 ಕೋಟಿ ರೂಪಾಯಿಗಳನ್ನು ಇಡಬೇಕಾಗಿತ್ತು ಆದರೇ, 940 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು.

**ಶ್ರೀ ಎಸ್.ಆರ್. ಪಾಟೀಲ್:–** ನನಗೆ ಗೊತ್ತಿದೆ, ಬಾಕಿ ಹಣ ಬಿಡುಗಡೆ ಮಾಡುವುದಕ್ಕೆ Code of Conduct ಬರುವುದಿಲ್ಲ. Fresh loan sanction ಮಾಡಲಿಕ್ಕೆ Code of Conduct ಬರುತ್ತದೆ. ಆದರೆ, ಬಾಕಿ ಹಣ ಬಿಡುಗಡೆ ಮಾಡುವುದಕ್ಕೆ ಬರುವುದಿಲ್ಲ. It is a lapse on the part of the previous Government.

**ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್:–** ಮಾನ್ಯ ಸಭಾಪತಿಯವರೇ, ಮಾರ್ಚ್ ಕೊನೆಯವರೆವಿಗೂ ಹಿಂದಿನ ಸರ್ಕಾರದ ಜವಾಬ್ದಾರಿ ಇತ್ತು. ಅದರ ಪ್ರಕಾರ ನಾವು 1700 ಕೋಟಿ ರೂಪಾಯಿಗಳನ್ನು ಇಡಬೇಕಾಗಿತ್ತು. ಕೇವಲ 940 ಕೋಟಿ ರೂಪಾಯಿಗಳನ್ನು ಇಟ್ಟು ಈಗ ಮುಂದಿನ ಸರ್ಕಾರಕ್ಕೆ ಅದನ್ನು ಬಿಟ್ಟಿದ್ದರು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಮಹದೇವ್ ಪ್ರಸಾದ್‌ರವರೇ, ಈಗ 581 ಕೋಟಿ ರೂಪಾಯಿ ಹಣ ಏನಿದೆ, ಇದನ್ನು ಆದಷ್ಟು ಬೇಗ ಬಿಡುಗಡೆ ಮಾಡಲಿಕ್ಕೆ ನೀವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡುತ್ತೇನೆ.

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಾವೇನು ಹೇಳಿದ್ದೇವೆಂದರೆ, 900 ಕೋಟಿ ರೂಪಾಯಿ ಅಷ್ಟು ಬಜೆಟ್‌ನಲ್ಲಿ provision ಮಾಡಿ ಪೇಮೆಂಟ್ ಮಾಡಲಿಕ್ಕೆ ಇಟ್ಟಿದ್ದೆವು

ಎನ್ನುವುದನ್ನು ನಾವು ಹೇಳಿದ್ದೇವೆ. ನಂತರ ಚುನಾವಣೆ ಇದ್ದುದರಿಂದ ನೀತಿ ಸಂಹಿತೆ ಜಾರಿಯಲ್ಲಿತ್ತು. ಸ್ಥಳೀಯ ಸಂಸ್ಥೆಗಳ ಚುನಾವಣೆಯೂ ನಡೆಯಿತು. ನೀತಿ ಸಂಹಿತೆ ಅನ್ವಯಿಸುವುದಿಲ್ಲವೆಂದು ಯಾರು ಹೇಳಿದರು? 2 ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡಲಿಕ್ಕೆ provision ಮಾಡಿ ಅದರ ಬಗ್ಗೆ ಕ್ಯಾಬಿನೆಟ್ ತೀರ್ಮಾನ ಮಾಡಿದ್ದೆವು. ಇವರದನ್ನು ಕೊಡಲಿಕ್ಕೆ ಬಿಡಲಿಲ್ಲ. ಅದನ್ನು ಕೊಡಲಿಕ್ಕೆ ಇವರು ಬಿಟ್ಟರಾ? ನಮಗೆ ಹೇಳುತ್ತಾರೆ. ಇದು ಸಹ ಜನಪರ, ರೈತರ ಪರ ಕಾರ್ಯಕ್ರಮ ತಾನೆ. ಆದಕಾರಣ 2 ರೂ.ಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುವುದು ಜನಪರ ಕಾರ್ಯಕ್ರಮ ಅಲ್ಲ ಎಂದರೆ ಹೇಗೆ?

**Sri M.B. Patil:-** Code of Conduct is applicable for fresh works.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, ನಾನೇ ಮಾನ್ಯ ಸಚಿವರಿಗೆ ಬೇಗನೇ ಹಣವನ್ನು ಬಿಡುಗಡೆ ಮಾಡಬೇಕೆಂದು ಮನವಿ ಮಾಡಿಕೊಂಡೆ. ಅದು ಅವರಿಗೆ ಅರ್ಥವಾಯಿತೇ? ಅವರೇನು Code of Conduct applicable ಆಗುತ್ತದೆ ಎಂದು ಹೇಳಿದರಲ್ಲ, it is not applicable. It is applicable only for new works and not for old works.

**ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, 25,000 ರೂಪಾಯಿ ಸಾಲವನ್ನು ಮನ್ನಾ ಮಾಡಬೇಕೆಂದು ಹಿಂದಿನ ಸರ್ಕಾರ ನಿರ್ಣಯವನ್ನು ತೆಗೆದುಕೊಂಡಿದ್ದು ಬಹಳ ಸಂತೋಷದ ವಿಚಾರವಾಗಿದೆ. 25,000 ರೂಪಾಯಿಗಳಿಗಿಂತ ಹೆಚ್ಚಿನ ಸಾಲವಿದ್ದರೆ ಅದನ್ನು ಮರುಪಾವತಿ ಮಾಡಲು ಜೂನ್ ತಿಂಗಳವರೆವಿಗೂ ಸಮಯವನ್ನು ಕೊಟ್ಟಿದ್ದರು. ಹಾಗಾಗಿ ಅವರು ಘೋಷಣೆ ಮಾಡಿದರು, ಆದರೆ ಜವಾಬ್ದಾರಿಯನ್ನು ಹೊಸ ಸರ್ಕಾರಕ್ಕೆ ಕೊಟ್ಟರು.

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠದಲ್ಲಿ ಉಪಸ್ಥಿತರಾದರು)**

**ಶ್ರೀ ಡಿ.ವಿ. ಸದಾನಂದಗೌಡ:-** ಜನಾದೇಶ ಏನೆಂದರೆ, ನೀವು ಕೆಲಸ ಮಾಡಿ ಎಂದು ಹೇಳುತ್ತಿದ್ದಾರೆ. ನೀವು ಆ ಕೆಲಸವನ್ನು ಮಾಡಿ ಎಂದು ಹೇಳುತ್ತಿದ್ದೇವೆ ಅಷ್ಟೆ. ಈಗ ನಾವೇನು ಅದರ ಬಗ್ಗೆ ಚಿಂತನೆಯನ್ನು ಮಾಡುತ್ತಿಲ್ಲ.

**ಸಭಾಪತಿಯವರು:-** ಈಗ ವೀರಣ್ಣ ಮತ್ತಿಕಟ್ಟಿಯವರು ನಿರ್ಣಯವನ್ನು ಮಂಡನೆ ಮಾಡಲಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ತಾವು ಸಭಾಪೀಠದಿಂದ ಎದ್ದು ಹೋದ ಮೇಲೆ ನನಗೆ ಮಾತನಾಡಲು ಅವಕಾಶವನ್ನೇ ಕೊಡಲಿಲ್ಲ. ನೀವು ಒಳಗಡೆ ಇದ್ದಾಗ ಅದನ್ನು ನೋಡಿರುತ್ತೀರಿ. ಮಾನ್ಯ ಮಧುಸೂದನ್‌ರವರ ಆರ್ಭಟ ಮತ್ತು ಮಾನ್ಯ ನಾರಾಯಣ ಸಾ.ಬಾಂಡಗೆಯವರು ಆಗೊಮ್ಮೆ ಈಗೊಮ್ಮೆ ಮಿಂಚಿ ಮಾಯವಾಗುತ್ತಾರೆ. ಇವರುಗಳೇ ಮಾತನಾಡಿದರು.

**ಸಭಾಪತಿಯವರು:-** ಮಾನ್ಯ ವೀರಣ್ಣ ಮತ್ತಿಕಟ್ಟಿಯವರೇ, ನೀವು ಬೇಗನೆ ನಿರ್ಣಯವನ್ನು ಮಂಡಿಸಿದರೆ, ಮಾನ್ಯ ಅಲ್ಲಮಪ್ರಭು ಪಾಟೀಲ್‌ರವರು ಸಹ ಮಾತನಾಡಲು ಕಾಯುತ್ತಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಮ್ಮ ಸರ್ಕಾರದ ಮೂಲಭೂತ ಉದ್ದೇಶವನ್ನು ಮತ್ತು ಇನ್ನು ಹಲವಾರು ವಿಚಾರಗಳನ್ನು ತಿಳಿಸಿದ್ದಾರೆ. 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬುದು ಸರ್ಕಾರದ ನೀತಿ' ಎಂಬ ಮಾತನ್ನು ಹೇಳಿದ್ದಾರೆ. ಅದರ ಜೊತೆಗೆ ಇವತ್ತು ಏನಾಗಿದೆ ಎಂದರೆ, ಗ್ರಾಮಗಳಲ್ಲಿ ಇರತಕ್ಕಂಥ ಜನಸಂಖ್ಯೆಯ ಪ್ರಮಾಣ ಬಹಳ ಕಡಿಮೆಯಾಗುತ್ತದೆ. ಮೊದಲು ಶೇಕಡಾ 80ರಷ್ಟು ಜನಸಂಖ್ಯೆ ಇದ್ದದು ಈಗ ಶೇಕಡಾ 60ಕ್ಕೆ ಇಳಿಯುತ್ತದೆ. ಇದಕ್ಕೆ ಕಾರಣವೇನು? ಗ್ರಾಮಗಳಲ್ಲಿ ಮೂಲಭೂತ ಅನುಕೂಲತೆಗಳ ಕೊರತೆ ಇದೆ. ಗ್ರಾಮೀಣ ಜನರಿಗೆ

ಉದ್ಯೋಗವನ್ನು ಸೃಷ್ಟಿಸತಕ್ಕಂಥ ಕೃಷಿಯನ್ನು ಮತ್ತು ಕೃಷಿ ಆಧಾರಿತವಾದ ಕಸುಬುಗಳನ್ನು ಲಾಭದಾಯಕವಾಗಿ ಮಾಡತಕ್ಕಂಥ ಕೆಲಸವಾಗುತ್ತಿಲ್ಲ. ನಮ್ಮ ಹಿಂದಿನ ರಾಷ್ಟ್ರಪತಿಗಳಾದ ಸನ್ಮಾನ್ಯ ಎ.ಪಿ.ಜೆ. ಅಬ್ದುಲ್ ಕಲಾಂರವರು ಹೇಳಿದ ಹಾಗೆ **'PURA'** ಎಂಬ ಧೋರಣೆಯ ಮೇಲೆ ಗ್ರಾಮಗಳನ್ನು ನಾವು ಅಭಿವೃದ್ಧಿ ಪಡಿಸಬೇಕು ಮತ್ತು ಮೂಲ ಅನುಕೂಲತೆಗಳನ್ನು ಮಾಡಬೇಕು. ಇವತ್ತು ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ನಮ್ಮ ರಾಜ್ಯದ ಹಿರಿಯ ನಾಯಕರಲ್ಲಿ ಒಬ್ಬರಾದ ಸನ್ಮಾನ್ಯ ಹೆಚ್.ಕೆ.ಪಾಟೀಲ್‌ರವರು ಗ್ರಾಮೀಣ ಜನರ ಕುಡಿಯುವ ನೀರಿನ ಬವಣೆಯನ್ನು ಅರ್ಥ ಮಾಡಿಕೊಂಡು, ಗ್ರಾಮೀಣ ಜನರು ಕಲ್ಮಶವಾದ ನೀರನ್ನು ಕುಡಿಯಬಾರದು. ಅವರ ಆರೋಗ್ಯ ಕೆಡಲಿಕ್ಕೆ, ಜನರು ಸಂಕಷ್ಟದಲ್ಲಿರಲಿಕ್ಕೆ ಏನು ಕಾರಣವೆಂದರೆ ಪಟ್ಟಣ ಪ್ರದೇಶದಲ್ಲಿ ಶುದ್ಧವಾದ ನೀರು ಹೇಗೆ ಸಿಗುತ್ತದೆ, ಅದು ಗ್ರಾಮೀಣ ಜನರಿಗೂ ಸಿಗಬೇಕೆಂದು ಅದನ್ನು ಪ್ರಾಯೋಗಿಕವಾಗಿ ಇವತ್ತು ಬಹಳಷ್ಟು ಹಳ್ಳಿಗಳಲ್ಲಿ ಸನ್ಮಾನ್ಯ ಹೆಚ್.ಕೆ.ಪಾಟೀಲ್‌ರವರು ಅವರ ತಂದೆಯಾದ ಶ್ರೀ ಕೆ.ಹೆಚ್.ಪಾಟೀಲ್‌ರ ಹೆಸರಿನಲ್ಲಿರುವ ಪ್ರತಿಷ್ಠಾನದ ನೇತೃತ್ವದಲ್ಲಿ, ಆ ಕಕ್ಷೆಯಲ್ಲಿ ಆ ಕೆಲಸವನ್ನು ಮಾಡಿದ್ದಾರೆ. ಅದನ್ನು ನಾವೆಲ್ಲರೂ ನೋಡಿದ್ದೇವೆ. ಸನ್ಮಾನ್ಯ ದೇಶಪಾಂಡೆಯವರು ಸಹ ಅದನ್ನು ನೋಡಿದ್ದಾರೆ. ಅದೇ ರೀತಿ ಹಲವಾರು ಜನ ನಾಯಕರು ಹಳ್ಳಿ ಹಳ್ಳಿಗೆ ಹೋಗಿ ಅದನ್ನು ನೋಡಿದ್ದಾರೆ. ಸುಮಾರು 5–6 ತಿಂಗಳುಗಳ ನಂತರ ಆ ಹಳ್ಳಿಗಳಿಗೆ ಹೋದರೆ ಹಳ್ಳಿಯ ಮಕ್ಕಳ ಮುಖದ ಮೇಲೆ ನಗು ಇತ್ತು. ಈ ರೀತಿಯ ಒಂದು ವಾತಾವರಣ ನಿರ್ಮಾಣವಾಗಬೇಕು. ಕೇಂದ್ರ ಸರ್ಕಾರದಲ್ಲಿ ನಮ್ಮ ಅದಿನಾಯಕಿ, ಯುಪಿಎ ಅಧ್ಯಕ್ಷೆಯಾದ ಶ್ರೀಮತಿ ಸೋನಿಯಾ ಗಾಂಧೀಯವರು ಮತ್ತು ನಮ್ಮ ಪ್ರಧಾನ ಮಂತ್ರಿಗಳಾದ ಡಾ|| ಮನಮೋಹನ ಸಿಂಗ್ ರವರು ಇರಬಹುದು... ಅವರು ದೇವೇಗೌಡರು ಎಂದು ಹೇಳುವುದಿಲ್ಲವೇನು, ಅದಕ್ಕೆ ನಾವು ಬೇಡವೆಂದು ಹೇಳುತ್ತೇವೇನು? ಶ್ರೀಮತಿ ಸೋನಿಯಾ ಗಾಂಧೀಯವರು ಯುಪಿಎ ಸರ್ಕಾರದ ಅಧ್ಯಕ್ಷೆ ಆಗಿದ್ದಾರೆ. ಅವರು ಇನ್ನ್ಯಾರು ಬೇರೆ ಅಲ್ಲ. ಮಾನ್ಯ ಬಸವರಾಜ ಹೊರಟ್ಟಿಯವರು ಒಂದು ನಿಮಿಷ ನನ್ನ ಮಾತನ್ನು ಕೇಳಲಿ. She is the Chairperson of the UPA Government. ನಾನು ನಮ್ಮ ಪ್ರಧಾನ

ಮಂತ್ರಿಗಳಾದ ಡಾ॥ ಮನಮೋಹನ ಸಿಂಗ್‌ರವರು ಎಂದು ಸಹ ಹೇಳಿದೆ. ಅವರು ಸಮಾಧಾನದಿಂದ ಕೇಳುವುದೇ ಇಲ್ಲ, ನಾವೇನು ಮಾಡೋಣ.

**ಶ್ರೀ ಕೆ.ಬಿ. ಶಾಣಪ್ಪ:–** ನೀವು ಮಾತು ಮಾತಿಗೂ ಯುಪಿಎ ಅಧ್ಯಕ್ಷೆ ಎಂದು ಹೇಳುತ್ತೀರಿ, ಅದನ್ನು ಬಿಟ್ಟು ಬೇರೆ ಯಾವುದೇ ಹೆಸರು ಇಲ್ಲವೇನು?

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಅವರು ಇಡೀ ಕುಡಿಯುವ ನೀರಿಗಾಗಿ 1400 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ 5875 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಈ ವರ್ಷದಲ್ಲಿ ಪ್ರಾಯೋಗಿಕವಾಗಿ 1 ಸಾವಿರ ಹಳ್ಳಿಗಳಲ್ಲಿ ಆ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕೆ ಮಾರ್ಗಸೂಚಿಯಂತೆ, ಗದಗ ಕ್ಷೇತ್ರದಲ್ಲಿ ನಡೆದ ಕುಡಿಯುವ ನೀರಿನ ವ್ಯವಸ್ಥೆಯಂತೆ ಎಲ್ಲಾ ಹಳ್ಳಿಗಳಲ್ಲಿ ಆಗಬೇಕು. ಇದು ಗ್ರಾಮೀಣ ಜನತೆಯ ಜೀವನಕ್ಕೆ ಹೊಸತನವನ್ನು ಒದಗಿಸಿ ಕೊಡುತ್ತದೆ.

**ಶ್ರೀ ಬಸವರಾಜ ಹೊರಟ್ಟಿ:–** ತಾವು ಮಾತನಾಡುತ್ತಾ, ರೈತರು ಇಂದು ಪಟ್ಟಣಕ್ಕೆ ಬಂದು ಸೇರುತ್ತಿದ್ದಾರೆ ಎಂದು ಹೇಳಿದಿರಿ. ಅದನ್ನು ತಪ್ಪಿಸಲು ಏನು ಯೋಜನೆ ಮಾಡಿದ್ದೀರಿ?

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಅದರ ಬಗ್ಗೆ ಕೂಡ ನಾನು ಹೇಳಿದ್ದೇನೆ. ಗ್ರಾಮೀಣ ಕೃಷಿ ಉದ್ಯೋಗ, ಕೃಷಿ ಆಧಾರಿತ ಉದ್ಯೋಗಗಳಿಗೆ ಶಕ್ತಿ ಕೊಡಬೇಕು. ಇವತ್ತು ಪಟ್ಟಣಕ್ಕೆ ಬಹಳ ಜನ ಬರುತ್ತಾರೆ. ಬಂದಮೇಲೆ ಏನಾಗುತ್ತದೆ? ಇಲ್ಲಿ ಹೊಸ ಸಮಸ್ಯೆಗಳು ಸೃಷ್ಟಿಯಾಗುತ್ತವೆ, ಕೊಳಚೆ ಪ್ರದೇಶಗಳ ನಿರ್ಮಾಣವಾಗುತ್ತವೆ, ವಸತಿ ಸಮಸ್ಯೆ ಉಂಟಾಗುತ್ತದೆ, ಅಸಮಾನತೆ, ನೀರಿನ ಸಮಸ್ಯೆ ತಲೆದೋರುತ್ತದೆ. ಇವತ್ತು ಬೆಂಗಳೂರಿಗೆ ಕಾವೇರಿಯ ಮೂರನೆ ಹಂತದ ಯೋಜನೆ ಜಾರಿ ಮಾಡಿದರೂ ನೀರು ಸಾಕಾಗುತ್ತಿಲ್ಲ. ಬೆಂಗಳೂರು ನಗರದ ಜನಸಂಖ್ಯೆ ಥೈಲ್ಯಾಂಡ್ ದೇಶದ ಜನಸಂಖ್ಯೆಗಿಂತ ಹೆಚ್ಚಿದೆ. ಹಳ್ಳಿಗಳಲ್ಲಿರುವ ಮೂಲಭೂತ ಸಮಸ್ಯೆಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಮನೆ ಇಲ್ಲದವರಿಗೆ ಮನೆ ಒದಗಿಸಿ ಕೊಡುವ ಯೋಜನೆ ಬಹಳ

ಪ್ರಮುಖವಾದುದು. ಮಾನ್ಯ ಎಸ್.ಎಂ.ಕೃಷ್ಣಾರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ 11 ಲಕ್ಷ ಮನೆಗಳನ್ನು ಕಟ್ಟಿ ಕೊಡಬೇಕೆಂದು ಯೋಜನೆ ಹಾಕಿ 9 ಲಕ್ಷ 80 ಸಾವಿರ ಮನೆಗಳನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ನೀಡಿದರು. ಇಂತಹ ಕಾರ್ಯಕ್ರಮಗಳು ಆಗಬೇಕು. ಈ ನಿಟ್ಟಿನಲ್ಲಿ ಕೇಂದ್ರದ ಇಂದಿರಾ ಆವಾಸ್ ಯೋಜನೆ, ರಾಜೀವ್‌ಗಾಂಧಿ ಗೃಹ ನಿರ್ಮಾಣ ಯೋಜನೆಗಳು ಇವೆ. ನಮ್ಮ ಹಿಂದಿನ ಸರ್ಕಾರದ, ಬಸವ ವಸತಿ ಯೋಜನೆ, ಅಂಬೇಡ್ಕರ್ ವಸತಿ ಯೋಜನೆಗಳೇನಿವೆ ಇವುಗಳನ್ನು ಶಕ್ತಿಯುತವನ್ನಾಗಿ ಮಾಡಬೇಕು. ಜನರಿಗೆ ಅನುಕೂಲ ಕಲ್ಪಿಸುವಂಥದ್ದು ನಮ್ಮ ಸರ್ಕಾರದ ಉದ್ದೇಶವಾಗಿದೆ. ಇದನ್ನು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಈ ರಾಜ್ಯದ ಮಾನವ ಸಂಪನ್ಮೂಲ ಪ್ರಮುಖವಾದುದು. ವಿಶ್ವದಲ್ಲೇ ಶ್ರೇಷ್ಠರಾದ ಐಟಿ-ಬಿಟಿ ವಿಜ್ಞಾನಿಗಳನ್ನು ಸೃಷ್ಟಿ ಮಾಡುವ ದಿಸೆಯಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಇಲ್ಲಿ ನಾವು ಗಣಿ ಮಾರಿಕೊಳ್ಳುವ ಪ್ರಸಂಗ ಬರುವುದಿಲ್ಲ, ನೈಸರ್ಗಿಕ ಸಂಪತ್ತನ್ನು ಲೂಟಿ ಮಾಡುವ ಹಾಗಿಲ್ಲ. ನಮ್ಮ ಬುದ್ಧಿ, ನಮ್ಮ ಕಾರ್ಯಕ್ಷಮತೆಯಿಂದ ಭಾರತಕ್ಕೆ ವಿದೇಶಿ ವಿನಿಮಯವನ್ನು ತಂದು ಕೊಡಬಹುದಾಗಿದೆ. ಇಡೀ ವಿಶ್ವದಲ್ಲೇ ಐಟಿ-ಬಿಟಿಯಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಬೆಂಗಳೂರಿಗೆ ತಂದು ಕೊಟ್ಟಿದ್ದು ಮಾನ್ಯ ರಾಜೀವ್‌ಗಾಂಧಿಯವರ ಕನಸು ಮತ್ತು ಎಸ್.ಎಂ.ಕೃಷ್ಣಾರವರ ನೀತಿ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಯಾರೇ ಉದ್ದಿಮೆದಾರರು ನಮ್ಮ ರಾಜ್ಯದಲ್ಲಿ ಬಂಡವಾಳ ತೊಡಗಿಸಬೇಕಾದರೆ ಶಾಂತತೆ ಇರಬೇಕು, ಸೌಹಾರ್ದ ವಾತಾವರಣ ಇರಬೇಕು, ವಿದ್ಯುತ್‌ನ ಅನುಕೂಲತೆ ಇರಬೇಕು. ಇಲ್ಲದಿದ್ದರೆ ಯಾರೂ ಬರುವುದಿಲ್ಲ. ಇವರು, ನಾವು ಎರಡು ಜಾಗತಿಕ ಹೂಡಿಕೆದಾರರ ಸಮಾವೇಶಗಳನ್ನು (GIM) ಮಾಡಿದ್ದೇವೆ ಎಂದು ಹೇಳಿದರು.

**ಶ್ರೀ ಬಸವರಾಜ ಹೊರಟ್ಟಿ:-** 'ಅವರು-ಇವರು' ಎಂದು ಅಡ್ಡಗೋಡೆ ಮೇಲೆ ದೀಪ ಇಡುವ ಹಾಗೆ ಏಕೆ ಮಾತನಾಡುತ್ತೀರಿ? ಯಾರು ಹೇಳಿದರು ಎಂದು ಅವರ ಹೆಸರನ್ನು ಹೇಳಿ . . .

**ಶ್ರೀ ಮತ್ತಿಕಟ್ಟಿ ವೀರಣ್ಣ:–** ನಾನು, ಮಾನ್ಯ ರಂಗನಾಥ ಮತ್ತು ಮಾನ್ಯ ವೀರೇಂದ್ರ ಪಾಟೀಲ್‌ರಂತಹ ನಾಯಕರ ಹತ್ತಿರ ಬೆಳೆದವನು. ಇನ್ನೊಬ್ಬರ ಮನಸ್ಸಿಗೆ ನೋವು ಮಾಡುವುದು ನನಗೆ ಗೊತ್ತಿಲ್ಲ. ನಾವು, ನೀವು ತಪ್ಪು ಮಾಡುತ್ತಿದ್ದೀರಿ, ನೀವೂ ಮನುಷ್ಯರು, ಅದನ್ನು ತಿದ್ದಿಕೊಳ್ಳಿ ಎಂದು ಹೇಳುತ್ತೇವೆ. . . .

**ಸಭಾಪತಿಯವರು:–** ಮಾನ್ಯ ಮತ್ತಿಕಟ್ಟಿಯವರೇ, ದಯವಿಟ್ಟು ನಿಮ್ಮ ಮಾತುಗಳನ್ನು ಮುಗಿಸಿಬಿಡಿ.

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಗಳೇ, ತಾವು ಪೀಠದಲ್ಲಿ ಇಲ್ಲದೇ ಮಾನ್ಯ ಉಪಸಭಾಪತಿಗಳು ಕುಳಿತಿದ್ದಾಗ ಬೇರೆ ಬೇರೆ ಸದಸ್ಯರುಗಳು ನನಗೆ ಮಾತನಾಡುವುದಕ್ಕೆ ಬಿಡಲಿಲ್ಲ. ಎದ್ದು ಏನೇನೋ ಮಾತನಾಡಿದರು, ಇತಿಹಾಸವನ್ನು ತಿರುವಿ ಹೇಳಿದರು. ಆಗ ನಾನು ಅಸಮಾಧಾನಗೊಂಡೆ, ಆಗ ಹಿರಿಯರಾದ ಸನ್ಮಾನ್ಯ ಸದಾನಂದಗೌಡರು ನನ್ನ ನೆರವಿಗೆ ಬಂದು, 'ತಾವು ಸಿಟ್ಟು ಮಾಡಿಕೊಳ್ಳಬೇಡಿ, ನಾನು ನಮ್ಮ ಸದಸ್ಯರುಗಳಿಗೆ ತಿಳಿ ಹೇಳುತ್ತೇನೆ' ಎಂಬ ಮಾತನ್ನು ಹೇಳಿದರು. ಬಡವರ ಮಕ್ಕಳು ದಾರಿ ಬಿಡುವಂತಹ ಕೆಲಸ ಮಾಡುವುದಕ್ಕೆ ಹೋಗಬೇಡಿ, ದಾರಿಗೆ ಹಚ್ಚುವ ಕೆಲಸ ಮಾಡಿ, ಪುಣ್ಯ ಕಟ್ಟಿಕೊಳ್ಳಿ. ಮಾನ್ಯ ಸಭಾಪತಿಗಳೇ, ನಮ್ಮಲ್ಲಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಮುಂದಿನ ಪೀಳಿಗೆಗೋಸ್ಕರ ಉಳಿಸುವ, ಬೆಳೆಸುವ ಕೆಲಸ ಮಾಡಬೇಕು. ಪರಿವರ್ತನೆಗೊಳಿಸಿ ಮೌಲ್ಯಗಳನ್ನು ಹೆಚ್ಚು ಮಾಡುವುದಕ್ಕೆ ಆದ್ಯತೆ ಕೊಡುತ್ತೇವೆ ಎನ್ನುವ ಮಾತನ್ನು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಯಾರು ವಿಶ್ವಾಸವನ್ನು ಕಳೆದುಕೊಂಡರೋ, ಅಂತಹ ಉದ್ದಿಮೆದಾರರು ರಾಜ್ಯಕ್ಕೆ ಬಂದಿಲ್ಲ. ಅವರಲ್ಲಿ ವಿಶ್ವಾಸವನ್ನು ಸೃಷ್ಟಿಸುವಂತಹ, ನಂಬಿಕೆಯನ್ನು ಹೆಚ್ಚು ಮಾಡುವಂತಹ ಕೆಲಸ ಆಗಬೇಕು. ಈ ಎಲ್ಲಕ್ಕೂ ಪೂರಕವಾದುದು ವಿದ್ಯುತ್. ನೀರು, ನೀರಾವರಿ ಎಷ್ಟು ಮುಖ್ಯವೋ ಅಷ್ಟೇ ವಿದ್ಯುತ್ ಕೂಡ ಮುಖ್ಯ. ಇವುಗಳಿದ್ದರೆ ನಾವು ಸಮೃದ್ಧ ಕರ್ನಾಟಕವನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಿದೆ. ಸಣ್ಣ ಸಣ್ಣ ಗಿರಣಿಯಿಂದ ಹಿಡಿದು ಯಾವುದೇ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕಾದರೆ ವಿದ್ಯುತ್ ಬೇಕಾಗುತ್ತದೆ.

ಒಬ್ಬ ರೈತ ನೀರಾವರಿ ಮಾಡಬೇಕಾದರೆ ಆತನ ಪಂಪ್‌ಸೆಟ್‌ಗೆ ಕರೆಂಟ್ ಬೇಕು. ದುರ್ದೈವ ಎಂದರೆ ಕಳೆದ 5 ವರ್ಷಗಳಲ್ಲಿ ಕೇವಲ ಒಂದು ಮೆಗಾವ್ಯಾಟ್ ವಿದ್ಯುತ್ತನ್ನೂ ಹೆಚ್ಚು ಉತ್ಪಾದನೆ ಮಾಡಿಲ್ಲ. ಈ ಸತ್ಯವನ್ನು ತಾವು ತಿಳಿದುಕೊಳ್ಳಬೇಕು. ನಿಮಗೆ ಇದರ ಬಗ್ಗೆ ಹೆಚ್ಚಿಗೆ ಗೊತ್ತಿದ್ದರೆ ಆಮೇಲೆ ಹೇಳಿ. ರಾಯಚೂರಿನಲ್ಲಿ ಒಟ್ಟು 8 ವಿದ್ಯುತ್ ಘಟಕಗಳಿವೆ. ಇವರ ಕಾಲದಲ್ಲಿ ನಾಲ್ಕಕ್ಕಿಂತ ಹೆಚ್ಚು ವಿದ್ಯುತ್ ಘಟಕಗಳು ಓಡಲೇ ಇಲ್ಲ. ಇಂತಹ ವಿಷಯಗಳ ಕಡೆ ಸರ್ಕಾರಗಳು ಬದ್ಧತೆಯಿಂದ ವಿಚಾರ ಮಾಡಬೇಕು. ಒಂದು ಹಳ್ಳಿಯಲ್ಲಿ ಒಬ್ಬ ತಾಯಿ ತನ್ನ ಮನೆಗೆ ಒಂದು ವಾರಕ್ಕಾಗುವಷ್ಟು ವಸ್ತುಗಳು ಏನೇನು ಬೇಕಾಗಬಹುದೆಂದು ಗಮನದಲ್ಲಿಟ್ಟುಕೊಂಡು ತಂದು ಇಟ್ಟುಕೊಳ್ಳುತ್ತಾಳೆ. ಅಂದರೆ, ನಮಗೆ ಎಷ್ಟು ಅವಶ್ಯಕತೆ ಇದೆಯೇ ಅಷ್ಟನ್ನು ಕ್ರೋಢೀಕರಿಸಿಕೊಂಡು ಸಂಗ್ರಹಿಸಿಬೇಕು. ಇಂತಹ ವಿಚಾರ ನಿಮ್ಮಲ್ಲಿ (ಬಿಜೆಪಿ ಸರ್ಕಾರ) ಇರಲಿಲ್ಲ. ವಿದ್ಯುತ್ತನ್ನು ಹೇಗೆ ಹೊರಗಿನಿಂದ ಖರೀದಿ ಮಾಡುವುದು, ಹೇಗೆ ಆಮದು ಮಾಡಿಕೊಳ್ಳುವುದು, ಹೇಗೆ ಕಮಿಶನ್ ಹೊಡೆಯುವುದು ಎಂಬ ಬಗ್ಗೆಯೇ ಯೋಚನೆ ಮಾಡುತ್ತಿದ್ದಿರಿ. ಆದ್ದರಿಂದಲೇ ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯವಾಗಲಿಲ್ಲ. ಕಲ್ಲಿದ್ದಲಿಗಾಗಿ ನಿಶ್ಚಿತವಾದ, ಪ್ರಾಮಾಣಿಕವಾದ ಪ್ರಯತ್ನ ಆಗಲಿಲ್ಲ. ಇದರ ಬಗ್ಗೆ ನನಗೆ ಬಹಳಷ್ಟು ಗೊತ್ತಿದೆ. ಆಗ ನಿಮ್ಮನ್ನು (ಬಿಜೆಪಿ) ನಾನು ಸಾಕಷ್ಟು ಸಲ ರಕ್ಷಿಸಿದ್ದೇನೆ. ದಯವಿಟ್ಟು ಸತ್ಯವನ್ನು ತಿಳಿದುಕೊಳ್ಳಿ. ಒಂದು ಉದಾಹರಣೆ ಹೇಳಲೇ? ಅದು ನಿಮಗೂ ಗೊತ್ತಿದೆ. ಯಾವುದೇ ಒಬ್ಬ ವ್ಯಕ್ತಿಯನ್ನು ಸಚಿವರನ್ನಾಗಿ ಮಾಡುವಾಗ ಅವರ ಸಾಮರ್ಥ್ಯ, ಯೋಗ್ಯತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. . .

**ಶ್ರೀ ಡಿ.ವಿ. ಸದಾನಂದಗೌಡ:–** ಒಂದು ವಿಚಾರ. "ಕಮಿಶನ್ ಹೊಡೆದರು" ಎಂದೇನು ಪದ ಬಳಸಿದರೋ ಅದನ್ನು ಕಡತದಿಂದ ತೆಗೆಸಬೇಕು. ಅಂತಹ ಮಾಹಿತಿ ಮಾನ್ಯ ಸದಸ್ಯರ ಹತ್ತಿರ ಇದ್ದರೆ ಅದನ್ನು ಸದನದ ಮುಂದಿಡಲಿ. ಅಲಿಗೇಷನ್ ಮಾಡುವುದು ಸೂಕ್ತವಾಗುವುದಿಲ್ಲ. 'ಕಮಿಷನ್' ಎನ್ನುವ ಶಬ್ದವನ್ನು ಕಡತದಿಂದ ತೆಗೆಯಬೇಕು. ಮಾನ್ಯ ಸದಸ್ಯರ ಹತ್ತಿರ ಇರುವ ಮಾಹಿತಿಗಳನ್ನು ಸದನದ ಮುಂದೆ ಇಡಲಿ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ಮಾಹಿತಿ ಇದೆ ನೋಡಿ.

**ಶ್ರೀ ಡಿ.ವಿ. ಸದಾನಂದಗೌಡ:-** ಆ ಮಾಹಿತಿಗಳನ್ನು ಸದನದ ಮುಂದೆ ಇಡಲಿ.

**ಶ್ರೀ ಎಸ್.ಆರ್. ಪಾಟೀಲ್:-** ಯಾವ ಉದ್ದೇಶದಿಂದ ಅವರು ಹೇಳಿದ್ದಾರೆಂದರೆ, ಈ ರಾಜ್ಯ ವಿದ್ಯುತ್ ಕೊರತೆಯಿಂದ ಪರಿತಪಿಸುವಂತಹ ಸಂದರ್ಭದಲ್ಲಿ ವಿದ್ಯುತ್ ಖರೀದಿಗಾಗಿ ಹತ್ತು ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ನೀವು ವ್ಯಯ ಮಾಡಿದ್ದೀರಿ. ಆದರೆ, ವಿದ್ಯುತ್ ಉತ್ಪಾದನೆಗಾಗಿ ಕೇವಲ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ.

**ಡಿ.ವಿ.ಸದಾನಂದಗೌಡ:-** ಅದನ್ನು ನಾವು ಒಪ್ಪಿಕೊಳ್ಳುತ್ತೇನೆ. Coal ಖರೀದಿಯಲ್ಲಿ commission ಹೊಡೆದರು, ಮತ್ತೊಂದು ಹೊಡೆದರು ಎಂದು ಹೇಳುತ್ತಿದ್ದಾರೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:-** ನೀವು commission ಹೊಡೆದಿದ್ದೀರೋ ಇಲ್ಲವೋ?

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, 'commission' ಎನ್ನುವ ಪದವನ್ನು ಕಡತದಿಂದ ತೆಗೆದುಬಿಡಿ.

**Sri VEERANNA MATHIKATTI:-** Mr.Chairman Sir, that is not unconstitutional.

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ವಿದ್ಯುತ್ ಉತ್ಪಾದನೆಗೆ ನೀವು ಹೆಚ್ಚು ಹಣ ವ್ಯಯ ಮಾಡಬೇಕಾಗಿತ್ತು. ಆದರೆ, ವಿದ್ಯುತ್ ಖರೀದಿಗೆ ಹೆಚ್ಚು ಹಣ ವ್ಯಯ ಮಾಡಿದ್ದೀರಿ. What does it indicates ಎನ್ನುವಂತಹ ಭಾವನೆಯನ್ನು ಇಟ್ಟುಕೊಂಡು ಮಾತನಾಡಿದ್ದಾರೆ. ಆ ಶಬ್ದ ನೇರವಾಗಿ it is unwarranted. It is not in good taste. That much I can tell. ಆದರೆ, ನೀವು ವಿದ್ಯುತ್ ಉತ್ಪಾದನೆಗೆ ಹೆಚ್ಚು ಹಣ ವ್ಯಯ

ಮಾಡಿದ್ದರೆ ಇವತ್ತೇನು ನಮಗೆ ಸಮಸ್ಯೆ ಇರುತ್ತಿರಲಿಲ್ಲ. ಆದರೆ, ಖರೀದಿಗೆ ಹತ್ತು ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡಿ ಉತ್ಪಾದನೆಗಾಗಿ ಕೇವಲ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಅರ್ಥ ಏನು ಎನ್ನುವ ಭಾವನೆ ಜನರಲ್ಲಿ ಬಂದಿದೆ ಎನ್ನುವುದನ್ನು ಅವರು ಆ ರೀತಿ ಪರ್ಯಾಯವಾಗಿ ಹೇಳಿದ್ದಾರೆ. ಅದು ನಮ್ಮ ಜಿಲ್ಲೆಯ ಭಾಷೆ.

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವನ್ನು ಹೇಳುತ್ತೇನೆ. ಅವರು ತಪ್ಪು ತಿಳಿದುಕೊಳ್ಳುವುದು ಬೇಡ. ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಯಾಗಿದ್ದರು, ಮಾನ್ಯ ಕೆ.ಬಿ.ಶಾಣಪ್ಪನವರು ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಈ ರಾಜ್ಯದಲ್ಲಿ ಬಹಳಷ್ಟು ಜನ ಜವಾಬ್ದಾರಿ ಸ್ಥಾನದಲ್ಲಿ ಕೆಲಸ ಮಾಡಿರುವವರು ಇದ್ದಾರೆ. ಸರ್ಕಾರದಲ್ಲಿ ಮಂತ್ರಿಯಾದವರು ವಿಧಾನಸೌಧದ ಕೊಠಡಿಯಲ್ಲಿ ವಾರದಲ್ಲಿ ಕನಿಷ್ಠ ಮೂರು ದಿವಸಗಳಾದರೂ ಇದ್ದು ತಮ್ಮ ಇಲಾಖೆಯ ಕಾರ್ಯಕ್ರಮಗಳನ್ನು pull-up ಮಾಡಿ ಇಲಾಖೆಯ ಪ್ರಧಾನ ಕಾರ್ಯದರ್ಶಿ, ನಿರ್ದೇಶಕರು, ಆಯುಕ್ತರು, ಇವರೆಲ್ಲರನ್ನೂ ಕರೆದು ಅದರ ಬಗ್ಗೆ ಪ್ರಯತ್ನ ಮಾಡಿರುವುದು ಹಿಂದಿನ ಸರ್ಕಾರದಲ್ಲಿ ಇಲ್ಲ. ನಾನು ಸಭಾಪತಿಯಾಗಿರುವಾಗ ಈ ಸದನದಲ್ಲಿ ಹೇಳಿರುವುದು ರೆಕಾರ್ಡ್‌ನಲ್ಲಿ ಇದೆ. ನಾನು ಅಂದಿನ ಮುಖ್ಯಮಂತ್ರಿಗಳಾದ ಮಾನ್ಯ ಯಡಿಯೂರಪ್ಪನವರಿಗೆ ಹೇಳಿದೆ, ದಿವಂಗತ ಡಾ|| ವಿ.ಎಸ್.ಆಚಾರ್ಯರವರು ಇದ್ದರು. ಅವರು ಬಹಳ ಒಳ್ಳೆಯ ಮನುಷ್ಯರು ನಾನು ಅವರಿಗೆ ಅತ್ಯಂತ ಗೌರವ ಕೊಡುತ್ತೇನೆ. ಅವರು ಇರುವಾಗಲೇ ಹೇಳಿದ್ದೆ. ಅದು ತಮಗೂ ಗೊತ್ತಿದೆ. 'ನೋಡಿ, ನಿಮ್ಮ ಸಚಿವರಿಗೆ ಹೇಳಿ, ವಿಧಾನಸೌಧ ಒಂದು ಗೌರವ ಇರುವ ಸ್ಥಳ. ಇದು ನಮ್ಮ ಪ್ರಜಾಪ್ರಭುತ್ವದ ದೇಗುಲ. ಇಲ್ಲಿ ಕುಳಿತು ಕೆಲಸ ಮಾಡುವುದಕ್ಕೆ ಹೇಳಿ' ಎಂದು ಹೇಳಿದೆ. ಅದನ್ನು ಮಾಡಲಿಲ್ಲ. ಇದು ಅದರ ಪರಿಣಾಮ. ಇದೆಲ್ಲವನ್ನು ಇವರು ಒಪ್ಪಿಕೊಳ್ಳುತ್ತಾರೆ. ಭೀಕರವಾದಂತಹ ಪ್ರವಾಹ, ಎಂದು ಕಂಡ ಅರಿಯದಂತಹ ಮಹಾಪೂರ ಬಂತು. ಉತ್ತರ ಕರ್ನಾಟಕದ 14 ಜಿಲ್ಲೆಗಳಲ್ಲಿ

ನೀರಿನ ಆವರ್ತದಿಂದ ಕನಿಷ್ಠ 11 ಲಕ್ಷ ಜನ ರೈತರು, ಕೂಲಿಕಾರರು ಸಂಕಷ್ಟಕ್ಕೆ ಒಳಗಾದರು. ಆಗ ನಾನು, 'ಎಲ್ಲಾ ಒಂದಾಗಿ ಜನರ ಸಂಕಷ್ಟಕ್ಕೆ ಹೋಗಿ' ಎಂದು ಹೇಳಿದೆ. ಆಗ ಸರ್ಕಾರ ಬದಲಾವಣೆಗೆ ಮತ್ತು ಸರ್ಕಾರವನ್ನು ಕಿತ್ತು ಒಗೆಯುವುದಕ್ಕೆ ಗುದ್ದಾಡಲು ಪ್ರಾರಂಭ ಮಾಡಿದರು. ಅದು ತಮಗೂ ಗೊತ್ತಿದೆ. ಇವೆಲ್ಲ ಘಟನೆಗಳಿಂದ ಕರ್ನಾಟಕದ ಜನರಿಗೆ ನೋವಾಯಿತು. ಇವತ್ತಿಗೂ ಆ ಜನ ಸಂಕಷ್ಟದಲ್ಲಿದ್ದಾರೆ. ಎರಡು ವರ್ಷಗಳ ಕಾಲ ಭೀಕರ ಬರಗಾಲ. ಅದರಲ್ಲಿ ಸಣ್ಣ ಹಿಡುವಳಿದಾರರು ಅಷ್ಟೆ ಅಲ್ಲ, ದೊಡ್ಡ ರೈತರೂ ಕೂಡ ಸಂಕಷ್ಟಕ್ಕೆ ಸಿಲುಕಿದರು. ರೈತರು ತಮಗಿಂತ ತಮ್ಮ ದನಕರುಗಳನ್ನು ಬಹಳ ಪ್ರೀತಿ ಮಾಡುತ್ತಾರೆ. ಉತ್ತರ ಕರ್ನಾಟಕದ ಯಾವುದೇ ಮನೆಗೆ ಹೋದರೂ ಕೂಡ ಮನೆ ಯಜಮಾನ ಪಡಸಾಲೆಯ ಮುಂದೆ ಇರುತ್ತಾನೆ ಆ ಪಡಸಾಲೆಯ ಮುಂದೆ ದನಕರುಗಳು, ಎತ್ತುಗಳು, ಎಮ್ಮೆಗಳನ್ನು ಮತ್ತು ಆಕಳುಗಳನ್ನು ಕಟ್ಟಿರುತ್ತಾರೆ. ಅವುಗಳಿಗೆ ಹೊಟ್ಟು ಹಾಕಿದ್ದಾರೆಯೋ ಇಲ್ಲವೋ, ಅಕ್ಕಿಕಾಳುಗಳನ್ನು ಹಾಕಿದ್ದಾರೆಯೋ ಇಲ್ಲವೋ, ನೀರು ಕುಡಿಸಿದ್ದಾರೆಯೋ ಇಲ್ಲವೋ ಎಂದು ಆ ಮನೆಯ ಯಜಮಾನ ನೋಡುತ್ತಾನೆ. ಆಮೇಲೆ, 'ಸ್ವಲ್ಪ ಮೈ ತಿಕ್ಕಿರಿ' ಎಂದು ಹೇಳುತ್ತಾನೆ. ಅಷ್ಟು ಪ್ರೀತಿ ಮಾಡುತ್ತಾರೆ. ಆ ಜನಗಳೆಲ್ಲಾ ಈ ಎರಡು ವರ್ಷಗಳಲ್ಲಿ ಕಣ್ಣೀರು ಇಟ್ಟರು. ಕುಡಿಯುವುದಕ್ಕೆ ನೀರಿಲ್ಲ. ನಾವು ಚುನಾವಣಾ ಪ್ರಚಾರಕ್ಕಾಗಿ ಹೋದಾಗ ನೀರು ಕೇಳಿದರೆ ಅಲ್ಲಿ ನೀರು ಸಿಗುತ್ತಿರಲಿಲ್ಲ. 'Bisleri' ನೀರನ್ನು ತೆಗೆದುಕೊಂಡು ಹೋಗುತ್ತಿದ್ದೆವು. ನಾವು ಕಾರಿನಲ್ಲಿ ಓಡಾಡಿಕೊಂಡು 'Bisleri' ನೀರನ್ನು ಕುಡಿಯುತ್ತಿದ್ದೆವು. ಅವರಿಗೆ ಕುಡಿಯುವುದಕ್ಕೆ ನೀರಿಲ್ಲ. ಇವೆಲ್ಲಾ ಸಮಸ್ಯೆಗಳನ್ನು ಪರಿಹರಿಸದಿದ್ದರೆ ಹೇಗಾಗುತ್ತದೆ? ಅದಕ್ಕೆ ಬರಗಾಲ ಪರಿಹಾರಕ್ಕಾಗಿ ನಾವು district wise Task Force Committee ಮಾಡಿ, ಅವುಗಳ ಕಾರ್ಯ ನಡೆಯುತ್ತಿದೆಯೇ ಇಲ್ಲವೋ ಎಂಬುದನ್ನು ನೋಡಿ, ಅದಕ್ಕೆ ಒಬ್ಬ ಬದ್ಧತೆ ಇರುವ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರನ್ನು ನೇಮಕ ಮಾಡಿ ಎಂದೆಲ್ಲಾ ಹೇಳಿದ್ದೆವು. ಇವು ಯಾವುದು ಕೆಟ್ಟದ್ದಲ್ಲ, ಜಾತಿ ಪ್ರತಿಪಾದನೆಯಲ್ಲ, ಯಾವ ಪಕ್ಷಕ್ಕೆ ಸಂಬಂಧಪಟ್ಟಿದಲ್ಲ, ಜನರ ಸಲುವಾಗಿ ಮಾಡಿ ನಿಮಗೆ ದೇವರು ಒಳ್ಳೆಯದು ಮಾಡುತ್ತಾನೆ ಎಂದು ಹೇಳಿದೆ. ಅದನ್ನು ಮಾಡಲಿಲ್ಲ. ಇವತ್ತು ಈ ಪರಿಸ್ಥಿತಿ

ನಿರ್ಮಾಣವಾಗಿದೆ. ಇವತ್ತು ನಾವು ಈ ಕೆಲಸವನ್ನು ಮಾಡದೆ ಹೋದರೆ ಈ ಐದು ವರ್ಷಗಳಲ್ಲಿ ಜನರ ಸಮಸ್ಯೆಗೆ ಪರಿಹಾರವನ್ನು ಒದಗಿಸದಿದ್ದರೆ, ನೀರಾವರಿ ಯೋಜನೆಗಳನ್ನು ಹೆಚ್ಚಿಗೆ ಮಾಡದೆ ಹೋದರೆ, ಎಲ್ಲಾ ವರ್ಗದ ಮಕ್ಕಳಿಗೆ ಉತ್ತಮವಾದ ಶಿಕ್ಷಣವನ್ನು ಕೊಡದೆ ಹೋದರೆ ನಾವು ಮತ್ತೆ ಅವರ ಸ್ಥಾನಕ್ಕೆ ಬರುತ್ತೇವೆ ಎನ್ನುವ ಕಟುಸತ್ಯ ನಮಗೆ ಗೊತ್ತಿದೆ. ಆ ದೃಷ್ಟಿಯಿಂದ ನಾವು ಕೆಲಸ ಮಾಡಬೇಕಾಗಿದೆ. ಆ ಬದ್ಧತೆ ನಮ್ಮಲ್ಲಿ ಬೇಕಾಗಿದೆ. ಯಾವುದೇ ಸರ್ಕಾರಕ್ಕೆ ಬದ್ಧತೆ ಇರಬೇಕು. ಆ ಬದ್ಧತೆಯಿಂದ ಸರ್ಕಾರ ಕೆಲಸ ಮಾಡಬೇಕಾಗಿದೆ. ಆ ದೃಷ್ಟಿಯಿಂದಲೇ ಈಗೇನು ಸಂವಿಧಾನಬದ್ಧವಾಗಿ (ಮಾನ್ಯ ಸದಸ್ಯರಾದ ವೀರಯ್ಯನವರು ಸಭೆಯಿಂದ ಹೊರಗೆ ಹೋಗಿದ್ದನ್ನು ಗಮನಿಸಿ) ನಮ್ಮ ವೀರಯ್ಯನವರು ಈಗ ಹೊರಗಡೆ ಹೋದರು. ಡಾ|| ಅಂಬೇಡ್ಕರ್‌ರವರು ಭಾರತ ಸಂವಿಧಾನವನ್ನು ರಚಿಸಿದಂಥವರು. ವೀರಯ್ಯನವರು ಪರಿಶ್ರಮ ವಹಿಸಿ ಕೆಲಸ ಮಾಡಿದ್ದಾರೆ. ದೀನ ದಲಿತರ ಬಗ್ಗೆ ಕಾಳಜಿ ವಹಿಸಬೇಕು. ಎಲ್ಲರೂ ಒಂದೇ ಎಂದು ನಡೆದುಕೊಳ್ಳಬೇಕು. ಆದ್ದರಿಂದ ಹರಿಜನ-ಗಿರಿಜನರಿಗೆ ನೀಡಬೇಕಾದ ಬ್ಯಾಕ್‌ಲಾಗ್ ಹುದ್ದೆಗಳು ಈಗ ಬಹಳಷ್ಟು ಖಾಲಿ ಉಳಿದಿವೆ. ಅವುಗಳನ್ನು ತುಂಬತಕ್ಕಂಥ ಕೆಲಸ ಆಗಬೇಕು. ನಮ್ಮ ಗೌರವಾನ್ವಿತ ರಾಜ್ಯಪಾಲರು ತಮ್ಮ ಭಾಷಣದಲ್ಲಿ, 'ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳನ್ನು ಎರಡು ವರ್ಷಗಳಲ್ಲಿ ನಾವು ಭರ್ತಿ ಮಾಡುತ್ತೇವೆ' ಎಂದು ಹೇಳಿರುವುದು ಶ್ಲಾಘನೀಯವಾದದ್ದು. ಅದೇ ರೀತಿ ರಾಜ್ಯದ ಬಂಡವಾಳ ಹೂಡಿಕೆದಾರರ ಬಗ್ಗೆ ವಿಶ್ವಾಸವನ್ನು ಕುದುರಿಸುವುದರ ಜೊತೆಗೆ ಮೂಲಭೂತ ಅನುಕೂಲತೆಗಳನ್ನು ನಾವು ಒದಗಿಸಿಕೊಡಬೇಕು. ವಿದ್ಯುತ್ ಉತ್ಪತ್ತಿಗೆ ನಮ್ಮದೇ ಆದ planning ಮಾಡಿಕೊಳ್ಳಬೇಕು. ಇವತ್ತು ಎರಡು ವರ್ಷದಲ್ಲೇ ನಮಗೆ 13,000 ಮೆಗಾವ್ಯಾಟ್ ವಿದ್ಯುತ್ ಬೇಕು. ಈಗ ನಾವು 8,000 ದಿಂದ 9,000 ಮೆಗಾವ್ಯಾಟ್ ಒಳಗೆ ವಿದ್ಯುತ್ ಉತ್ಪತ್ತಿ ಮಾಡುತ್ತಿದ್ದೇವೆ. ಇನ್ನೂ ನಾಲ್ಕೈದು ಸಾವಿರ ಮೆಗಾವ್ಯಾಟ್ ವಿದ್ಯುತ್ತಿನ ಕೊರತೆ ಇದೆ. ಒಂದು ಕಾಲದಲ್ಲಿ ಭಾರತದಲ್ಲೇ ಕರ್ನಾಟಕ ವಿದ್ಯುತ್ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿತ್ತು. ಹಲವಾರು ದಿನಗಳಿಂದ ನಿರ್ಲಕ್ಷಿಸಲ್ಪಟ್ಟು ಇವತ್ತು ನಾವು ಕೇಳಿ, ಭಿಕ್ಷೆ ಬೇಡಿ, ಹೆಚ್ಚಿಗೆ ಹಣ ಕೊಟ್ಟು ತೆಗೆದುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆ

ಪರಿಸ್ಥಿತಿ ಹೋಗಬೇಕು. ಸೌರಶಕ್ತಿ ಇರಬಹುದು, ಪವನ ಶಕ್ತಿ ಇರಬಹುದು, ನೈಸರ್ಗಿಕ ಮೂಲಗಳಿಂದ ವಿದ್ಯುತ್ ಉತ್ಪತ್ತಿ ಮಾಡುವಂಥದ್ದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕಾಗುತ್ತದೆ. Raichur Thermal Power Station ನ 8 ಘಟಕಗಳೇನಿವೆ ಅದಕ್ಕೆ ಪೂರಕವಾದ planning ಮಾಡಿಕೊಳ್ಳಬೇಕು. ನಾನು ಯಾರ ಬಗ್ಗೆಯೂ ದ್ವೇಷದಿಂದ ಹೇಳುತ್ತಿಲ್ಲ. ಆ ರೀತಿಯ planning ಇರಲೇ ಇಲ್ಲ. planning ಮಾಡುವುದನ್ನು ಬಿಟ್ಟು ಅವನು ಮಂತ್ರಿಯಾಗಬೇಕು, ಇವನು ಮಂತ್ರಿಯಾಗಬೇಕು, ಅವನನ್ನು ತೆಗೆಯಬೇಕು, ಇವನನ್ನು ತೆಗೆಯಬೇಕು ಎಂದು ಜಗಳವಾಡುತ್ತಿದ್ದರು. ಇದು ತಪ್ಪು. ನಮಗೆ ವಹಿಸಿದ ಕೆಲಸವನ್ನು ನಾವು ಬದ್ಧತೆಯಿಂದ ಮಾಡಿದರೆ ಕರ್ನಾಟಕ ಈ ಪರಿಸ್ಥಿತಿಗೆ ಬರುತ್ತಿರಲಿಲ್ಲ. ಅದನ್ನು ಸರಿಯಾಗಿ ನಿರ್ವಹಣೆ ಮಾಡಬೇಕಾಗಿತ್ತು. ದೇವರು ಕರ್ನಾಟಕಕ್ಕೆ ಎಲ್ಲಾ ನೈಸರ್ಗಿಕ ಸಂಪನ್ಮೂಲಗಳನ್ನು ಕೊಟ್ಟಿದ್ದಾನೆ. ಅದನ್ನು ಸರಿಯಾಗಿ ಬಳಸಿಕೊಂಡು ಸಮೃದ್ಧ ಕರ್ನಾಟಕವನ್ನು ನಿರ್ಮಾಣ ಮಾಡುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಈ ದೃಷ್ಟಿಯಲ್ಲಿ ವಿದ್ಯುತ್‌ಗೆ ಆದ್ಯತೆ ಕೊಡುವಂತಹ ಕೆಲಸವನ್ನು ಮಾಡಬೇಕು. ನಾನು ಆಗಲೇ ಹೇಳಿದ್ದೇನೆ. ಮಾನವ ಸಂಪನ್ಮೂಲದ ಬಗ್ಗೆ ಮಾತನಾಡುತ್ತಾ, ನಮ್ಮ ಕಾಲೇಜುಗಳು, ವಿಶ್ವವಿದ್ಯಾನಿಲಯಗಳು, ಐ.ಟಿ.ಐ., ಪಾಲಿಟೆಕ್ನಿಕ್‌ಗಳು, ಇವುಗಳನ್ನೆಲ್ಲಾ ನಾವು ಹೆಚ್ಚು ವಿಸ್ತರಿಸಿ ಸರ್ವ ಜನಾಂಗಕ್ಕೆ ಅನುಕೂಲವಾಗಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಐ.ಟಿ.ಐ., ಡಿಪ್ಲೋಮೋ ಕೋರ್ಸ್‌ಗಳು ಸಾಮಾನ್ಯ ರೈತರ ಮಕ್ಕಳಿಗೆ, ಹಳ್ಳಿಗಾಡಿನ ಜನರಿಗೆ ಅನುಕೂಲವಾಗುತ್ತದೆ. ಯಾರು ಆರ್ಥಿಕವಾಗಿ ಸಶಕ್ತರಿಲ್ಲ, ಯಾರಿಗೆ ಹಣಕಾಸಿನ ನಿಶ್ಚಿತ ಆದಾಯ, ಶಕ್ತಿ ಇಲ್ಲ ಅಂತಹ ಜನರ ಮಕ್ಕಳಿಗೆ ಆ ಕೆಲಸ ಆಗಬೇಕು. ನಮ್ಮಲ್ಲಿ ಒಂದು ಒಳ್ಳೆಯ ಪರಂಪರೆ ಇದೆ. ಮೊದಲಿನಿಂದಲೂ ಹಳೆ ಮೈಸೂರಿನಲ್ಲಿ ಮೈಸೂರು ಮಹಾರಾಜರು ಎಲ್ಲಾ ಜಾತಿಗಳ ಎಲ್ಲಾ ವರ್ಗಗಳ ವಿದ್ಯಾರ್ಥಿಗಳಿಗೆ ಶಾಲೆಗಳು ಮತ್ತು ಹಾಸ್ಟಲ್‌ಗಳ ವ್ಯವಸ್ಥೆಯನ್ನು ಹಾಗೂ ವಸತಿ ಶಾಲೆಗಳ ವ್ಯವಸ್ಥೆಯನ್ನು ಸಹ ಮಾಡಿಕೊಟ್ಟಿದ್ದರು. ಉತ್ತರ ಕರ್ನಾಟಕದಲ್ಲಿ ಹಾಗೂ ಹೈದರಾಬಾದ್‌ಗೆ ಅಂದಿನ ರಾಜ ಮಹಾರಾಜರು ಆ ವ್ಯವಸ್ಥೆಯನ್ನು ಮಾಡಿರಲಿಲ್ಲ. ಸುದೈವದಿಂದ ಮಠಮಾನ್ಯಗಳು, ಆ ಭಾಗದ ಶ್ರೀಮಂತ ವರ್ತಕರನ್ನು, ದೊಡ್ಡ ರೈತರನ್ನು,

ಯಾರ್ಯಾರಿಗೆ ಹೆಚ್ಚಿಗೆ ಆದಾಯವಿದೆ ಅವರನ್ನೆಲ್ಲಾ ಕೂಡಿಸಿಕೊಂಡು ಊರಿನಲ್ಲಿ ಒಂದು ಕನ್ನಡ ಶಾಲೆ, ಒಂದು ಬೋರ್ಡಿಂಗ್ ಸ್ಕೂಲ್, ಒಂದು ಹೈಸ್ಕೂಲ್, ಈ ರೀತಿ ಶಾಲೆಗಳನ್ನು ಪ್ರಾರಂಭ ಮಾಡಿದರು.

ಒಂದು ಕನ್ನಡದ ಮಾಧ್ಯಮದ ಹೈಸ್ಕೂಲ್ ಅನ್ನು ತೆರೆಯಲಾಯಿತು. ಹಿಂದೆ ಕನ್ನಡ ಶಾಲೆ ಸಹಿತ ಇರಲಿಲ್ಲ. ಅಷ್ಟೊಂದು ಉತ್ತಮವಾದಂತಹ ಸೇವೆ ಮಾಡಿದಂತಹ ಜನರಿದ್ದಾರೆ. ರಾಜ್ಯದಲ್ಲಿ ಪ್ರವಾಹವಾಯಿತು. ಆ ಸಂದರ್ಭದಲ್ಲಿ ಶ್ರೀಯುತ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. ರಾಜ್ಯದ ಜನತೆ ತೊಂದರೆಯಲ್ಲಿದ್ದಾರೆಂದು ಹೇಳಿ ನಮ್ಮ ಕರ್ನಾಟಕದ ಉದ್ದಿಮೆದಾರರನ್ನು, ವ್ಯಾಪಾರಸ್ಥರನ್ನು, ಹಣವಂತ ಕೈಗಾರಿಕೋದ್ಯಮಿಗಳನ್ನು ಸಹಾಯ ಮಾಡಿ ಎಂದು ಬೇಡಿಕೊಂಡಾಗ ತಮಗೆ ಗೊತ್ತಿರುವಂತೆ ಕೇಂದ್ರ ಸರ್ಕಾರವೂ ಸೇರಿದಂತೆ ಇವರುಗಳೆಲ್ಲರೂ ಸೇರಿ ಸುಮಾರು 150 ಕೋಟಿ ರೂಪಾಯಿಗಳನ್ನು ಕೊಟ್ಟರು. ದುಡ್ಡು ಇದ್ದಂತಹ ದೊಡ್ಡ ದೊಡ್ಡ ವ್ಯಕ್ತಿಗಳು ಹಣ ಸಹಾಯ ಮಾಡಿದರು. ಇದರ ಜೊತೆಗೆ ಧರ್ಮಸ್ಥಳದ ಶ್ರೀ ವಿರೇಂದ್ರ ಹೆಗಡೆಯವರು ಇರಬಹುದು, ಶ್ರೀ ಪೂತ್ತೂರು ಶ್ರೀಗಳು ಇರಬಹುದು, ಬೇರೆ ಬೇರೆ ಮಠಮಾನ್ಯಗಳಿರಬಹುದು, ಅಮ್ಮಾ ಇರಬಹುದು, ಅವರುಗಳೇ ಕೆಲವು ಹಳ್ಳಿಗಳಲ್ಲಿ ಮನೆಗಳನ್ನು ಕಟ್ಟಿಸಿ ಜನರುಗಳಿಗೆ ಕೊಟ್ಟರು. ಈ ರೀತಿಯ ವಾತಾವರಣ ಕರ್ನಾಟಕದಲ್ಲಿತ್ತು. ಕರ್ನಾಟಕದ ಜನ ಬಹಳ ವಿಶಾಲ ಹೃದಯದವರು. ಇದನ್ನೆಲ್ಲಾ ಸದುಪಯೋಗ ಮಾಡಿಕೊಂಡರೆ ನಮ್ಮ ನಾಡನ್ನು ಬಂಗಾರದ ನಾಡನ್ನಾಗಿ ಮಾಡಬಹುದು. ಆದರ್ಶ ನಾಡನ್ನಾಗಿ ಮಾಡಬಹುದು.

ಈ ದೃಷ್ಟಿಯಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಹಿಂದೆ ಅವರು ಆ ರೀತಿ ಮಾಡಿದ್ದರು, ಇವರು ಈ ರೀತಿ ಮಾಡಿದ್ದಾರೆನ್ನುವುದು ಬೇಡ. ಇವತ್ತು ನಾವೆಲ್ಲರೂ ಸೇರಿ ಒಂದು ಹೊಸ ಅಧ್ಯಾಯವನ್ನು ಪ್ರಾರಂಭ ಮಾಡೋಣ. ಈ ವಿಚಾರವನ್ನು ಮಾನ್ಯ ಶ್ರೀ ಡಿ.ವಿ.ಸದಾನಂದಗೌಡರು ಗಮನಿಸಬೇಕು. ತಾವು ಈಗಾಗಲೇ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ರಾಷ್ಟ್ರಮಟ್ಟದಲ್ಲಿ parliament

ಸದಸ್ಯರಾಗಿ ಕೆಲಸ ಮಾಡಿದ್ದೀರಿ, ಹಿರಿಯ ನಾಯಕರಿದ್ದೀರಿ, ಜವಾಬ್ದಾರಿಯುತ ಹುದ್ದೆಯಲ್ಲಿರುವ ತಮಗೆ ಮತ್ತು ತಮ್ಮ ಮೂಲಕ ಎಲ್ಲರಿಗೂ ನಾನು ಹೇಳುವುದೇನೆಂದರೆ ಇವತ್ತಿನ ಅವಶ್ಯಕತೆಗೆ ನಾವೆಲ್ಲರೂ ಒಂದಾಗಿ ಕರ್ನಾಟಕ ಹಿಂದಿನ ಪರಂಪರೆ ಹಾಗೂ ಗೌರವವನ್ನು ಮರಳಿ ತರೋಣ.

ಮಾನ್ಯ ಸಭಾಪತಿಯವರೇ, ತಮ್ಮೆಲ್ಲರ ಮಾರ್ಗದರ್ಶನದ ಮೂಲಕ ಈ ಒಂದು ಕೆಲಸವನ್ನು ಮಾಡೋಣ, ಆ ದೃಷ್ಟಿಯಲ್ಲಿ ನಡೆದುಕೊಳ್ಳೋಣ ಎನ್ನುವುದು ನನ್ನ ವಿಚಾರ. ಮುಂಜಾನೆ ಒಂದು ವಿಚಾರ ಪ್ರಸ್ತಾಪವಾಯಿತು. ಮಾನ್ಯ ವಿರೋಧ ಪಕ್ಷದ ನಾಯಕರಾದ ತಾವು ಸಹ ಈ ವಿಚಾರವಾಗಿ ಹೇಳಿದ್ದೀರಿ. ಶಿವಮೊಗ್ಗ, ಹಾಸನ, ಪಶುಸಂಗೋಪನಾ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಹೇಳಬೇಕಾದರೇ, ಅಲ್ಲಿನ ವಿದ್ಯಾರ್ಥಿಗಳು ಪರೀಕ್ಷೆ ಮುಗಿಸಿ, ಪದವಿ ಪಡೆಯುವುದಕ್ಕೆ ಎಷ್ಟು ಕಷ್ಟಪಟ್ಟಿರುತ್ತಾರೋ ಗೊತ್ತಿಲ್ಲ. ಅವರ ಪೋಷಕರು, ರಾತ್ರಿ-ಹಗಲು ದುಡಿಮೆ ಮಾಡಿ, ಕೂಲಿಗೆ ಹೋಗಿ ತಮ್ಮ ಮಕ್ಕಳನ್ನು ಕಲಿಯುವುದಕ್ಕೆ ಶಾಲೆಗೆ ಕಳುಹಿಸುತ್ತಾರೆ. ಅವರ ಮಕ್ಕಳು ಬಹಳ ಶ್ರಮವಹಿಸಿ ಓದಿ, ಪರೀಕ್ಷೆಯನ್ನು ಬರೆದು ಪದವಿಯನ್ನು ಪಡೆದುಕೊಂಡಿರುತ್ತಾರೆ. ಈಗ recognized ಕಾಲೇಜಿನಲ್ಲಿ ಕಲಿಯಬೇಕಿತ್ತು ಎಂದರೆ ಕಷ್ಟಪಟ್ಟು ಓದಿದಂತಹ ವಿದ್ಯಾರ್ಥಿಗಳು ಈಗ ಏನು ಮಾಡಬೇಕು? ಆ ಕಾಲೇಜುಗಳನ್ನು ಬೇರೆ ಸಂಘ-ಸಂಸ್ಥೆಗಳು ಮಾಡಿದಂತಹದ್ದು ಅಲ್ಲ. ಸರ್ಕಾರ ಮಾಡಿರುವಂತಹದ್ದು. ಎಷ್ಟು ಅವಮಾನಕರವಾದ ವಿಚಾರ ಇದು. ಈ ವಿಚಾರವನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಮಾನ್ಯ ಸಭಾನಾಯಕರಾದ ಶ್ರೀಯುತ ಎಸ್.ಆರ್.ಪಾಟೀಲ್‌ರವರಿಗೆ ಇದನ್ನು ಹೇಗಾದರೂ ಮಾಡಿ ಪರಿಹಾರ ಮಾಡಬೇಕೆಂದು ಹೇಳಿದ್ದೇನೆ. ತದನಂತರ ಕಾನೂನು ಸಚಿವರಾದ ಮಾನ್ಯ ಶ್ರೀ ಟಿ.ಬಿ.ಜಯಚಂದ್ರರವರ ಜೊತೆ ಮಾತನಾಡಿ, ನಾಳೆಯೇ ದೆಹಲಿಗೆ ಹೋಗಿ ಅಲ್ಲಿ ಸಂಬಂಧಪಟ್ಟವರ ಜೊತೆ ಮಾತನಾಡಿ, 'ಇದನ್ನಿ ಸರಿ ಮಾಡಿಸಿ' ಎಂದು ಹೇಳಿದ್ದೇನೆ. ಈ ಭಾವನೆ ನಮ್ಮೆಲ್ಲರಲ್ಲೂ ಬರಬೇಕು. ನಾವು ಇವತ್ತು ಬೇರೆ ಬೇರೆ ಪಕ್ಷದಲ್ಲಿರಬಹುದು, ಅಥವಾ ಬೇರೆ ಬೇರೆ ರಾಜಕೀಯ ಸಿದ್ಧಾಂತಗಳನ್ನೊಳಗೊಂಡಿರಬಹುದು.

ನಮ್ಮ ಬದ್ಧತೆ ಏನೆಂದರೆ, ಈ ರಾಜ್ಯದ ಜನರ ಏಳಿಗೆ ಮತ್ತು ಈ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ. ಹೀಗಾಗಿ ನಮ್ಮಲ್ಲಿರುವ ಎಲ್ಲಾ ಭಿನ್ನಾಭಿಪ್ರಾಯಗಳನ್ನು ತೊರೆದು, ನಾವೆಲ್ಲರೂ ಒಂದಾಗಿ ಕೆಲಸ ಮಾಡೋಣ ಎನ್ನುವ ಮಾತನ್ನು ಹೇಳುತ್ತಾ, ನಾನು ಈ ಕೆಳಕಂಡ ಪ್ರಸ್ತಾಪವನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ದಿನಾಂಕ 2013ನೇ ಜೂನ್ 3ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಪರಿಷತ್ತಿನ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತೇವೆ.

**ಶ್ರೀ ಅಲ್ಲಮ ಪ್ರಭು ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಳೆದ ಮೇ ತಿಂಗಳಿನಲ್ಲಿ ನಡೆದಂತಹ ವಿಧಾನಸಭೆ ಚುನಾವಣೆಯಲ್ಲಿ ಸ್ಪಷ್ಟವಾದಂತಹ ಜನಾದೇಶ ಪಡೆದು ಮುಖ್ಯಮಂತ್ರಿಗಳಾಗಿರುವಂತಹ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಸರ್ಕಾರ ರಚನೆಯಾಗಿರುವ ಹಿನ್ನೆಲೆಯಲ್ಲಿ ಗೌರವಾನ್ವಿತ ರಾಜ್ಯಪಾಲರಾದ ಸನ್ಮಾನ್ಯ ಹಂಸರಾಜ್ ಭಾರದ್ವಜ್‌ರವರು ನಮ್ಮ ವಿಧಾನ ಮಂಡಲದ ಎರಡು ಸದನಗಳ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಿರುವುದು ನಮಗೆಲ್ಲರಿಗೂ ವಿಶೇಷವಾಗಿ ಬಹಳ ಹೆಮ್ಮೆಯನ್ನು ತರುವಂತಹದ್ದಾಗಿದೆ. ಘನತೆವೆತ್ತ ರಾಜ್ಯಪಾಲರ ಈ ಭಾಷಣಕ್ಕೆ ಹಿರಿಯ ಸದಸ್ಯರಾದ ಸನ್ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಮಂಡಿಸಿರತಕ್ಕಂತಹ ವಂದನಾರ್ಪಣಾ ಪ್ರಸ್ತಾವನೆಯ ನಿರ್ಣಯವನ್ನು ಅನುಮೋದಿಸುತ್ತಾ, ಇದರ ಬಗ್ಗೆ ಒಂದೆರಡು ಮಾತುಗಳನ್ನಾಡಲು ತಮ್ಮ ಅನುಮತಿಯನ್ನು ಪಡೆಯುತ್ತಿದ್ದೇನೆ.

**ಸಭಾಪತಿಯವರು:–** ತಾವು ಮಾತನಾಡಬಹುದು.

**ಶ್ರೀ ಅಲ್ಲಮ ಪ್ರಭು ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರು ಸುಮಾರು 40 ನಿಮಿಷಗಳ ಕಾಲ ಜಂಟಿ ಸದನವನ್ನುದ್ದೇಶಿಸಿ ಭಾಷಣ ಮಾಡಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ

ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ತಮ್ಮ ಮುಂದಿನ 5 ವರ್ಷಗಳ ಕಾಲ ಮಾಡತಕ್ಕಂತಹ ಆಡಳಿತ ಚೆನ್ನಾಗಿ ಮುನ್ನಡೆಯಲಿ ಎಂದು ಆಶಿಸುತ್ತೇನೆ. ಈ ಚುನಾವಣೆಯಲ್ಲಿ ರಾಜ್ಯದ ಜನತೆ ಸ್ಪಷ್ಟವಾದ ಜನಾದೇಶವನ್ನು ನೀಡುವುದರ ಮೂಲಕ ಹಿಂದಿನ ಸರ್ಕಾರದ ಉಸಿರುಗಟ್ಟಿಸುವ ವಾತಾವರಣದಿಂದ ಹೊರಬಂದು ರಾಜಕೀಯ ರಂಗದಲ್ಲಿ ಹೊಸ ಗಾಳಿ-ಬೆಳಕು ಬೀಸುವಲ್ಲಿ ಕಾರಣಕರ್ತರಾಗಿದ್ದಾರೆಂದು ಹೇಳಲಿಕ್ಕೆ ಬಯಸುತ್ತೇನೆ. ಮುಂದಿನ 5 ವರ್ಷಗಳ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರಾಜ್ಯದ ಜನತೆಗೆ ಶುದ್ಧವಾದಂತಹ, ಭ್ರಷ್ಟಾಚಾರ ರಹಿತವಾದಂತಹ, ಪಾರದರ್ಶಕವಾದ ಆಡಳಿತವನ್ನು ನೀಡುವ ಭರವಸೆಯನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ನೀಡಿದ್ದಾರೆ.

ಸನ್ಮಾನ್ಯ ಸಭಾಪತಿಯವರೇ, ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಬಡವರ ಕಣ್ಣೀರು ಒರೆಸುವಂತಹ, ಸಮಾಜದ ಕಟ್ಟಕಡೆಯ ಮನುಷ್ಯನ ಕಣ್ಣೀರು ಒರೆಸುವಂತಹ ಸಾಮಾಜಿಕ ನ್ಯಾಯ ಕೊಡುವಂತಹ ಮತ್ತು ಅಸ್ಪೃಶ್ಯತೆಯನ್ನು ಹೋಗಲಾಡಿಸುವಂತಹ ರೀತಿಯಲ್ಲಿ ಬಸವಣ್ಣನವರು ಏನು ಆಡಳಿತವನ್ನು ಕೊಟ್ಟಿದ್ದರು, ಆ ರೀತಿಯಲ್ಲಿ ನಮ್ಮ ಮುಖ್ಯಮಂತ್ರಿಯಾಗಿರುವಂತಹ ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಒಂದು ಗಂಟೆಯೊಳಗೆ ಅವರು ತೆಗೆದುಕೊಂಡಿರುವಂತಹ ನಿರ್ಣಯಗಳು, ಈ ರಾಜ್ಯದಲ್ಲಿರುವಂತಹ ದೀನ-ದಲಿತರ, ಬಡವರ, ಅಲ್ಪಸಂಖ್ಯಾತರ ಸುಮಾರು 10 ಸಾವಿರ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುವುದರ ಜೊತೆಗೆ ಅನೇಕ ಜನಪ್ರಿಯ ಕಾರ್ಯಕ್ರಮಗಳು, ಬಡವರಿಗೆ 1 ರೂಪಾಯಿಗೆ 1 ಕೆ.ಜಿ.ಯಂತೆ 30 ಕೆ.ಜಿ. ಅಕ್ಕಿಯನ್ನು ಕೊಡುವ ಬಗ್ಗೆ ಹೇಳಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, 10 ಸಾವಿರ ಕೋಟಿ ರೂಪಾಯಿಗಳ ಸಾಲ ಮನ್ನಾ ಬಗ್ಗೆ ಹೇಳಿದ್ದೀರಲ್ಲಾ, ಯಾವ್ಯಾವುದನ್ನು ಮನ್ನಾ ಮಾಡಿದ್ದೀರಿ ಎನ್ನುವುದಕ್ಕೆ ವಿವರವನ್ನು ಕೊಡುತ್ತೀರಾ?

(ಗೊಂದಲ)

**ಶ್ರೀ ಅಲ್ಲಮಪ್ರಭು ಪಾಟೀಲ್:-** ಅಲ್ಪಸಂಖ್ಯಾತರ ಸಾಲಗಳನ್ನು, ದೀನ-ದಲಿತರ ಸಾಲಗಳನ್ನು ಹಾಗೂ ಬಡವರ ಸಾಲಗಳನ್ನು ಮನ್ನಾ ಮಾಡುವ ಮತ್ತು 1 ಲೀಟರ್ ಹಾಲಿಗೆ 4 ರೂಪಾಯಿಗಳ ಧನ ಸಹಾಯವನ್ನು ಕೊಡುವ ಬಗ್ಗೆ ಹೇಳಲಾಗಿದೆ.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-** ಎಷ್ಟೆಷ್ಟು ಎಂದು braek-up ಕೊಡಿ. OBC ಗೆ ಎಷ್ಟು, ಅಲ್ಪಸಂಖ್ಯಾತರಿಗೆ ಎಷ್ಟು, ದೀನ-ದಲಿತರಿಗೆ ಎಷ್ಟು ಎಂದು ವಿವರ ಕೊಡಿ. ನೀವು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. 10 ಸಾವಿರ ಕೋಟಿ ರೂಪಾಯಿಗಳಿಗೆ ಬದಲಿಗೆ 15 ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದರೂ ಸಹ ನಾವು ಖುಷಿ ಪಡುತ್ತೇವೆ. ಆದರೆ, ಅಲ್ಲಮ ಪ್ರಭು ಪಾಟೀಲ್‌ರವರು 10 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಅದಕ್ಕೆ braek-up ಕೊಟ್ಟರೆ ಚೆನ್ನಾಗಿರುತ್ತದೆ.

(ಗೊಂದಲ)

1 ಲೀಟರ್ ಹಾಲಿಗೆ ಕೊಡುತ್ತಿದ್ದ 2 ರೂಪಾಯಿಗಳ ಪ್ರೋತ್ಸಾಹಧನವನ್ನು 4 ರೂಪಾಯಿಗಳಿಗೆ ಹೆಚ್ಚು ಮಾಡಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. ಹೈನುಗಾರಿಕೆ ಒಳ್ಳೆಯ ಪ್ರೋತ್ಸಾಹವನ್ನು ಕೊಡುತ್ತಿದ್ದು, ಜನರು ಖುಷಿಯಾಗಿದ್ದಾರೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವುದು ಮುಖ್ಯವಾದ ವಿಚಾರ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):-** ನೀವು 1 ಲೀಟರ್ ಹಾಲಿಗೆ 2 ರೂಪಾಯಿಗಳ ಪ್ರೋತ್ಸಾಹಧನವನ್ನು ನೀಡಿದ್ದೀರಿ, ನಾವು ಅದನ್ನು 4 ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. 1 ಕೆ.ಜಿ.ಗೆ 1 ರೂಪಾಯಿಯಂತೆ 30 ಕೆ.ಜಿ. ಅಕ್ಕಿಯನ್ನು ಕೊಡುವುದರಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು 6 ಸಾವಿರ ಕೋಟಿ ರೂಪಾಯಿಗಳ ಹೊರೆ ಬಿದ್ದಿದೆ. ಅಂದು ಏನು ಅಲ್ಪಸಂಖ್ಯಾತರ ನಿಗಮ, ಹಿಂದುಳಿದ ವರ್ಗಗಳ ನಿಗಮ ಮತ್ತು ಅಂಬೇಡ್ಕರ್

ನಿಗಮಗಳಿಂದ ತೆಗೆದುಕೊಂಡಂತಹ ಸಾಲಗಳನ್ನು ಮನ್ನಾ ಮಾಡಿದ್ದಾರೆ. ಭಾಗ್ಯಜ್ಯೋತಿಗೆ ಸಂಬಂಧಪಟ್ಟಂತೆ ವಿದ್ಯುತ್ ಬಾಕಿ ಏನಿತ್ತು, ಇದನ್ನೆಲ್ಲಾ ಮನ್ನಾ ಮಾಡಲಾಗಿದೆ. ಇದನ್ನೆಲ್ಲಾ ಲೆಕ್ಕ ಹಾಕಿದರೆ 10 ಸಾವಿರ ಕೋಟಿ ರೂಪಾಯಿಗಳಾಗಬಹುದು ಎನ್ನುವ ಅಂದಾಜು ಇದೆ.

**ಶ್ರೀ ಬಸವರಾಜ ಹೊರಟ್ಟಿ:-** parliament election ಇರುವುದರಿಂದ ಈ ರೀತಿ ಮಾಡುತ್ತಿದ್ದೀರಿ. Parliament election ಆದ ಕೂಡಲೇ ಇದೆಲ್ಲವನ್ನೂ ನೀವು cut ಮಾಡುತ್ತೀರಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:-** ಈಗ ಏನು ಹಸಿರು ಕಾರ್ಡ್‌ನ್ನು ಕೊಡುತ್ತೇವೆ, ಅದನ್ನು parliament election ಮುಗಿದ ತಕ್ಷಣ ರದ್ದು ಮಾಡುವಂತಹ ಕೆಲಸವನ್ನು ನಾವು ಮಾಡುವುದಿಲ್ಲ.

(ಗೊಂದಲ)

**ಸಭಾಪತಿಯವರು:-** ಶ್ರೀಯುತ ಅಲ್ಲಮಪ್ರಭು ಪಾಟೀಲ್‌ರವರೇ, ತಾವು ಮಾತನಾಡಿ.

**ಶ್ರೀ ಅಲ್ಲಮಪ್ರಭು ಪಾಟೀಲ್:-** ಮಾನ್ಯ ಸಭಾಪತಿಯವರೇ, ಅನೇಕ ಮಹತ್ತರವಾದ ಜನಪ್ರಿಯ ನಿರ್ಧಾರಗಳನ್ನು ಕೈಗೊಂಡಿರುವಂತಹ, ನಾಡಿನ ಜನತೆಗೆ ಹೊಸ ಭರವಸೆಯನ್ನು ಮೂಡಿಸಿರುವಂತಹ ನಮ್ಮ ಜನಪ್ರಿಯ ಮುಖ್ಯಮಂತ್ರಿಗಳು ಇವತ್ತು ಪ್ರಮುಖವಾಗಿ ಬಡವರಿಗೆ ಅಗ್ಗದ ದರದಲ್ಲಿ ಅಕ್ಕಿಯನ್ನು ಕೊಡುವಂತಹ ಕೆಲಸವನ್ನು ಮಾಡಿದ್ದಾರೆ. ಪ್ರಣಾಳಿಕೆಯಲ್ಲಿ ಹೇಳಿದ ಕೆಲಸವನ್ನು ಮಾಡಿದ್ದಾರೆ. ಹಿಂದಿನ ಸರ್ಕಾರ ಮಾಡದೇ ಇರತಕ್ಕಂತಹ ಕೆಲಸವನ್ನು ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಜುಲೈ 1ನೇ ತಾರೀಖಿನಿಂದ ಬಡವರಿಗೆ 1 ಕೆ.ಜಿ. ಅಕ್ಕಿಗೆ 1 ರೂಪಾಯಿಯಂತೆ 30 ಕೆ.ಜಿ. ಅಕ್ಕಿಯನ್ನು ಕೊಡುವಂತಹ ನಿರ್ಧಾರವನ್ನು ತೆಗೆದುಕೊಂಡಿದೆ.

ಈ ನಿರ್ಣಯದಿಂದ ರಾಜ್ಯದ ಬೊಕ್ಕಸಕ್ಕೆ ದೊಡ್ಡ ಹೊರೆ ಬರುತ್ತದೆ ಎಂದು ಗೊತ್ತಿದ್ದರೂ ನಮ್ಮ ಜನಪ್ರಿಯ ಮುಖ್ಯಮಂತ್ರಿಗಳಿಗೆ ಅಪಾರವಾದ ಆಡಳಿತದ ಅನುಭವ ಇರುವ ಹಿನ್ನೆಲೆಯಲ್ಲಿ ಅಂತಹ ಒಂದು ಸವಾಲನ್ನು ಮೆಟ್ಟಿ ನಿಲ್ಲತಕ್ಕಂಥಹ ಒಂದು ಸಾಮರ್ಥ್ಯ ಇದೆ ಎಂದರೆ ಅದು ಅತಿಶಯೋಕ್ತಿಯಾಗಲಾರದು. ಒಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ನೀಡುತ್ತೇವೆಂಬ ಈ ಒಂದು ಜನಪರ ಕಾರ್ಯಕ್ರಮದ ಬಗ್ಗೆ ಲಕ್ಷಾಂತರ ಜನರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ ಹೆಣ್ಣುಮಕ್ಕಳನ್ನು ಕೇಳಿದರೆ ಇದರ ಉಪಯೋಗ ಏನು ಎಂಬುದು ತಮಗೆ ಗೊತ್ತಾಗುತ್ತದೆ. ತಮ್ಮ ಕೈಯ್ಯಲ್ಲಿ ಆಗದೇ ಇದ್ದುದ್ದನ್ನು ನಾವು ಮಾಡಿದ್ದೇವೆ. ನಾವು ಎಲ್ಲವನ್ನೂ ಸರಿ ಮಾಡಿ ಒಂದು ತಿದ್ದುಪಡಿ ಮಾಡುವ ಕೆಲಸವನ್ನು ಮಾಡಿದ್ದೇವೆ. ಇದು ಇವತ್ತು ಪ್ರಾರಂಭವಾಗಿದೆ. ಇದನ್ನು ಸಮರ್ಪಕವಾಗಿ ಜಾರಿಗೆ ತರಬೇಕಾಗಿದೆ. ದಯಮಾಡಿ ಕಾದು ನೋಡಿ. ಈಗ ನಾವು ಅಧಿಕಾರಕ್ಕೆ ಬಂದಿದ್ದೇವೆ.

**ಶ್ರೀ ನಾರಾಯಣ ಸಾ ಬಾಂಡಗೆ:-** ನಾವು ಈಗ ಇಲ್ಲಿಗೆ ಬಂದಿದ್ದೇವೆ. ನೀವು ಈಗ ಅಲ್ಲಿಗೆ ಹೋಗಿದ್ದೀರಿ.

**ಶ್ರೀ ಅಲ್ಲಮ ಪ್ರಭು ಪಾಟೀಲ್:-** ಮಾನ್ಯ ಹೊರಟ್ಟಿಯವರು ಅವರು ಇಬ್ಬರು classmates. ಮಾನ್ಯ ಮತ್ತಿಕಟ್ಟಿಯವರು ಅವರ ಸ್ನೇಹಿತರು.

**ಸಭಾಪತಿಯವರು:-** ನೀವು ಅವರ ಕಡೆಗೆ ಗಮನ ಕೊಡಬೇಡಿ. ನೇರವಾಗಿ ನನ್ನ ಮುಖವನ್ನು ನೋಡಿಕೊಂಡು ಮಾತನಾಡಿ.

**ಶ್ರೀ ಅಲ್ಲಮ ಪ್ರಭು ಪಾಟೀಲ್:-** ಮನೆಯಲ್ಲಿ ಅಕ್ಕಿ ಬೇಳೆ ತುಂಬಿದ್ದರೆ ಮನೆಯೊಡತಿಗೆ ಒಂದು ರೀತಿಯಲ್ಲಿ ಆತ್ಮ ವಿಶ್ವಾಸ ತುಂಬಿರುತ್ತದೆ. ಆ ಒಂದು ಆತ್ಮವಿಶ್ವಾಸವನ್ನು ತುಂಬಿಸುವಂತಹ ಕೆಲಸವನ್ನು ಮಾಡುವುದಕ್ಕೋಸ್ಕರ ನಮ್ಮ ಮುಖ್ಯಮಂತ್ರಿಗಳಾಗಿರತಕ್ಕಂತಹ ಮಾನ್ಯ ಸಿದ್ದರಾಮಯ್ಯನವರು ಬಡವರಿಗೆ ಅಗ್ಗದ ದರದಲ್ಲಿ ಅಕ್ಕಿಯನ್ನು ನೀಡುವ ಘೋಷಣೆಯನ್ನು ಮಾಡಿದ್ದಾರೆ. ತುತ್ತಿನ ಕೂಳಿಗೆ ಸಮಸ್ಯೆ ಇಲ್ಲದಿದ್ದರೆ ಸಮಾಜದಲ್ಲಿ ಮತ್ತು ಮನೆಯಲ್ಲಿ

ಶಾಂತಿ ತುಂಬುತ್ತದೆ. ಆ ಒಂದು ಕೆಲಸವನ್ನು ಮಾಡುವ ಮೂಲಕ ಬಡವರ ಗೋಳನ್ನು ದೂರ ಮಾಡುವ ಹಿನ್ನೆಲೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ಈ ಒಂದು ಕ್ರಾಂತಿಕಾರಕರವಾದ ಬದಲಾವಣೆಯನ್ನು ತಂದಿದ್ದಾರೆ. ಸುಮಾರು 1970ರ ದಶಕದಲ್ಲಿ ನಮ್ಮ ನೆಚ್ಚಿನ ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ತಮ್ಮ 20 ಅಂಶಗಳ ಕಾರ್ಯಕ್ರಮಗಳಲ್ಲಿ ಒಂದಾಗಿದ್ದ ಋಣಮುಕ್ತ ಕಾರ್ಯಕ್ರಮದಡಿ ಬಡವರು, ಸಮಾಜದ ದುರ್ಬಲವರ್ಗದವರು ಮತ್ತು ಶತಮಾನಗಳಿಂದ ಶೋಷಿತರಾದವರನ್ನು ಸಾಲದಿಂದ ಮುಕ್ತರನ್ನಾಗಿ ಮಾಡಿ ಕ್ರಾಂತಿಕಾರಕ ಬದಲಾವಣೆಯನ್ನು ತಂದಿದ್ದರು. ಅದೇ ರೀತಿಯಲ್ಲಿ ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಇಂತಹ ಒಂದು ಕಾರ್ಯಕ್ರಮವನ್ನು ಸಮರ್ಥವಾಗಿ ತೆಗದುಕೊಂಡು, ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದ ಬಂಧುಗಳು ಸರ್ಕಾರದ ವಿವಿಧ ಮಂಡಳಿಗಳಿಂದ ಪಡೆದಿರತಕ್ಕಂತಹ ಸಾಲವನ್ನು ಮನ್ನಾ ಮಾಡುವುದರ ಮೂಲಕ ಒಂದು ದಾರಿ ದೀಪ ಆಗಿದ್ದಾರೆ ಎಂದು ತಮ್ಮ ಮೂಲಕ ಹೇಳಬಯಸುತ್ತೇನೆ ಮತ್ತು ಅವರನ್ನು ಅಭಿನಂದಿಸಬೇಕಾಗುತ್ತದೆ. ಸರ್ಕಾರದ ಎಲ್ಲಾ ಸೌಲಭ್ಯಗಳನ್ನು ಜನತೆಯ ಮನೆ ಬಾಗಿಲಿಗೆ ತಲುಪಿಸುವಂತಹ ಒಂದು ಜನೋಪಯೋಗಿ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ. ನಮ್ಮ ಸರ್ಕಾರ ದೀನರು, ದುರ್ಬಲರು ಮತ್ತು ಅಂಗವಿಕಲರು ಯಾರಿದ್ದಾರೆ ಇವರುಗಳಿಗೆ ನೀಡುತ್ತಿರುವ ಭದ್ರತಾ ಪಿಂಚಣಿಗಳನ್ನು ಸಕಾಲದಲ್ಲಿ ಮತ್ತು ಸೂಕ್ತ ರೀತಿಯಲ್ಲಿ ತಲುಪಿಸುವ ವ್ಯವಸ್ಥೆ ಮಾಡಲಾಗುವುದು ಎಂಬ ಒಂದು ಭರವಸೆಯ ಮಾತುಗಳನ್ನು ಆಡಿದ್ದಾರೆ. ನಮ್ಮ ಸರ್ಕಾರ ಅನೇಕ ಉತ್ತಮ ಆಡಳಿತ ಮತ್ತು ಅವಿಷ್ಕಾರ ಕೇಂದ್ರ ಸ್ಥಾಪನೆ ಮಾಡುವ ಉದ್ದೇಶವನ್ನು ಹೊಂದಿದೆ. ಪ್ರತಿ ವರ್ಷ ಶಿಕ್ಷಕರ ಅರ್ಹತಾ ಪರೀಕ್ಷೆ, ಕೃಷಿ ಬೆಲೆ ಆಯೋಗ ಸ್ಥಾಪನೆ, ಜವಳಿ ಮತ್ತು ಭೂ ನೀತಿ ರಚನೆ, ಲೋಕೋಪಯೋಗಿ ಇಲಾಖೆಯಲ್ಲಿ ಪಾರದರ್ಶಕತೆ, ಮೂಲಸೌಕರ್ಯ ಅಭಿವೃದ್ಧಿ ನೀತಿ–2007ರ ಪುನರ್ ಪರಿಶೀಲನೆ, ಸಕಾಲ ಯೋಜನೆಯಲ್ಲಿ ಎರಡನೇ ಹಂತದ ಸುಧಾರಣಾ ಕ್ರಮಗಳ ಜಾರಿ, ಅಂಗವಿಕಲರ ಕಲ್ಯಾಣಕ್ಕೆ

ಆದ್ಯತೆಯನ್ನು ನೀಡುವುದು, ಅರಣ್ಯ ಜಮೀನು ಒತ್ತುವರಿ ಮತ್ತು ಕಳ್ಳಬೇಟೆ ತಡೆಗೆ ಕಠಿಣ ಕ್ರಮ, ಪಂಚಾಯತ್‌ರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಅಡ್ಡಿಪಡಿಸುವ ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರನ್ನು ಅನರ್ಹಗೊಳಿಸಲು ಹೊಸ ಕಾಯಿದೆ, ನೆನೆಗುದಿಗೆ ಬಿದ್ದಿರುವ ವಿದ್ಯುತ್ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದು, ನಗರಗಳ ಮೂಲ ಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಸಂಸ್ಥೆಗಳ ನಡುವೆ ಸಮನ್ವಯ ಮಾಡುವುದು, ಇವೆಲ್ಲವೂ ಇದರಲ್ಲಿ ಇದೆ. ಹಾಗೂ ಕಳೆದ 40 ವರ್ಷಗಳ ಹೋರಾಟ ಮತ್ತು ಹೈದರಾಬಾದ್–ಕರ್ನಾಟಕದ ಸಮಸ್ಯೆ ಬಹಳವಾಗಿ ಇತ್ತು. ಸಂವಿಧಾನದ 371 (ಜೆ) ಕಲಂ ತಿದ್ದುಪಡಿಯನ್ನು, ಕೇಂದ್ರ ಸರ್ಕಾರ ಸರ್ವಾನುಮತದಿಂದ ಅಂಗೀಕಾರವಾಗಿದ್ದರೂ ಅದು ನೆನೆಗುದಿಗೆ ಬಿದ್ದಿತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೂರು ತಿಂಗಳಲ್ಲಿ ಅದನ್ನು ಜಾರಿಗೆ ತರುತ್ತೇವೆಂದು ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಅವೆಲ್ಲವನ್ನೂ ಒಟ್ಟಾರೆ ಕ್ರೋಢೀಕರಿಸಿ ಸನ್ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಉಲ್ಲೇಖ ಮಾಡಿದ್ದಾರೆ. ನಮ್ಮ ರಾಜ್ಯದ ಕಾರ್ಯ ವೈಖರಿ ಬಗ್ಗೆ ವಿಶೇಷವಾಗಿ ಒತ್ತಿ, ಹೇಳಿ, ಹೊಗಳಿಕೆಯನ್ನು ಮಾಡಿದ್ದಾರೆ. ಗದಗ್ ಜಿಲ್ಲೆಯಲ್ಲಿ ನಮ್ಮ ಹೆಚ್.ಕೆ. ಪಾಟೀಲ್ ಅವರು ತಮ್ಮ ತಂದೆಯ ಹೆಸರಿನಲ್ಲಿ ಶುದ್ಧವಾದ ಕುಡಿಯುವ ನೀರನ್ನು ಒದಗಿಸುವ ಕೆಲಸವನ್ನು ಏನು ಜಾರಿಗೆ ತಂದಿದ್ದಾರೆ ಅದು ಬಹಳ ಶ್ಲಾಘನೀಯವಾದದ್ದು. ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಅದನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಇಡೀ ಜಿಲ್ಲೆಯಲ್ಲಿನ 1000 ಹಳ್ಳಿಗಳಿಗೆ ಶುದ್ಧ ಕುಡಿಯುವ ನೀರನ್ನು ಕೊಡತಕ್ಕಂತಹ ಯೋಜನೆಯನ್ನು ನಮ್ಮ ಸರ್ಕಾರ ಘೋಷಣೆ ಮಾಡಿದೆ. ಮಾನ್ಯ ಜಲ ಸಂಪನ್ಮೂಲ ಸಚಿವರು ಈ ರಾಜ್ಯದ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಿಸುವ ಸಲುವಾಗಿ ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿನ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ ಕೃಷ್ಣಾ ನದಿಗೆ ನೀರು ಬಿಡಿಸುವ ಕೆಲಸವನ್ನು ಮಾಡಿದ್ದಾರೆ. ನಮ್ಮ ಭಾಗದಲ್ಲಿರತಕ್ಕಂತಹ ಭೀಮಾ ನದಿಗೆ ಕೂಡ ನೀರನ್ನು ಬಿಡಿಸಿದ್ದಾರೆ. ಆ ಭಾಗದಲ್ಲಿನ ಜನರ ಕುಡಿಯುವ ನೀರಿನ ಬವಣೆಯನ್ನು ದೂರ ಮಾಡುವ ಕೆಲಸವನ್ನು ಏನು ಮಾಡಿದ್ದಾರೆ ಅದಕ್ಕಾಗಿ ಅವರನ್ನು ಮತ್ತು ಮಾನ್ಯ

ಮುಖ್ಯಮಂತ್ರಿಯವರನ್ನು ಅಭಿನಂದಿಸಬೇಕಾಗಿದೆ. ಕೇವಲ ಈ ಸರ್ಕಾರ ಅಧಿಕಾರಕ್ಕೆ ಬಂದ 15 ದಿವಸಗಳಲ್ಲಿ ಇಂತಹ ಅನೇಕ ಜನಪರ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಮಾಡಿದೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಸತತವಾಗಿ ಮೂರು ತಾಸುಗಳ ಕಾಲ ಭಾಷಣವನ್ನು ಮಾಡಿದ್ದಾರೆ. 2013ರ ಜೂನ್ 3 ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣವನ್ನು ಮಾನ್ಯ ವೀರಣ್ಣ ಮತ್ತಿಕಟ್ಟಿಯವರು ಸೂಚಿಸಿರತಕ್ಕಂತಹ ವಂದನಾ ನಿರ್ಣಯಕ್ಕೆ ನಾನು ಅನುಮೋದನೆ ಮಾಡುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಪ್ರಸ್ತಾಪವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಈಗ ಮಾನ್ಯ ಸಭಾ ನಾಯಕರು ಹೇಳಬೇಕು. ಬೆಳಿಗ್ಗೆ ಗುಟ್ಕಾ ನಿಷೇಧದ ಬಗ್ಗೆ, ಅಡಿಕೆ ಬೆಳೆಗಾರರ ಸಮಸ್ಯೆ ಬಗ್ಗೆ ಚರ್ಚೆ ನಡೆಯುವಾಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದ್ದರೆ ಒಳ್ಳೆಯದು ಎಂಬ ಕಾರಣಕ್ಕಾಗಿ ಆ ಚರ್ಚೆಯನ್ನು ಅಲ್ಲಿಗೇ ನಿಲ್ಲಿಸಿದ್ದೆವು. ಮಾನ್ಯ ಸಭಾ ನಾಯಕರೇ, ತಾವು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡುತ್ತೇನೆ ಎಂದು ತಿಳಿಸಿದ್ದೀರಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾವತಿಯವರೇ, ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿದೆ. ಅವರು ಇವತ್ತು ರಾತ್ರಿ 8 ಗಂಟೆಗೆ flight ನಲ್ಲಿ ದೆಹಲಿಗೆ ಹೋಗಿ ನಾಳೆ ಮಧ್ಯಾಹ್ನ ಅಥವಾ ಸಂಜೆ ಬೆಂಗಳೂರಿಗೆ ಬರುವವರಿದ್ದಾರೆ. ಅವರು ಅಲ್ಲಿಂದ ಬರುವಷ್ಟರಲ್ಲಿ ಈ ಸಭೆ ಮುಂದೂಡಲ್ಪಟ್ಟರೆ ಅಥವಾ ಇನ್ನೇನಾದರೂ ಅನಾನುಕೂಲತೆ ಆದರೆ ತೊಂದರೆ ಆಗಬಹುದು. ಬೇಗ ಬಂದರೆ ಅವರು ಈ ಸದನಕ್ಕೆ ಬಂದು ಮಾತನಾಡಬಹುದು. ಅವರು ದೆಹಲಿಯಿಂದ ಬೆಂಗಳೂರು ಮುಟ್ಟುವುದು ತಡವಾದರೆ ಅವರು ಸಮಯಕ್ಕೆ ಸರಿಯಾಗಿ reach ಆಗುವುದು ಕಷ್ಟ.

**ಸಭಾಪತಿಯವರು:–** ಅವರು ಬರುವುದು ಕಷ್ಟವಾಗುವುದಾದರೆ ಸಭಾ ನಾಯಕರು ಅಥವಾ ಸಂಬಂಧಿಸಿದ ಸಚಿವರು ಉತ್ತರ ಕೊಟ್ಟರೂ ಸಾಕು.

**ಶ್ರೀ ಎಸ್.ಆರ್. ಪಾಟೀಲ್:–** ನಾಳೆ ತೆಗೆದುಕೊಳ್ಳೋಣ.

**ಸಭಾಪತಿಯವರು:–** ಹಾಗಿದ್ದರೆ ನಾನು ನಾಳಿನ agendaದಲ್ಲಿ ಈ ವಿಚಾರಗಳನ್ನು ಸೇರಿಸುತ್ತೇನೆ. ಮಾನ್ಯ ನಾಣಯ್ಯನವರು ತಾಂತ್ರಿಕವಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಅವರು ಪ್ರಸ್ತಾಪ ಮಾಡಿದ್ದು ಸರಿ ಇದೆ. ಆದರೆ, ವ್ಯಾವಹಾರಿಕವಾಗಿ ನಮಗೆ ಕಷ್ಟವಾಗುತ್ತದೆ. ಅಡಿಕೆ ಬೆಳೆಗಾರರ ಸಮಸ್ಯೆ ಮತ್ತು ಗುಟ್ಕಾ ನಿಷೇಧದ ಬಗ್ಗೆ ಚರ್ಚೆಯನ್ನು ಬೇಗನೆ ಮುಗಿಸೋಣ. ಮಾನ್ಯ ನಾಣಯ್ಯನವರು ಕೊಟ್ಟಿರತಕ್ಕಂತಹ ಒಂದು Adjournment Motion ಏನು ಇದೆ, ಅದರ ಬಗ್ಗೆ ನಾನು ಸಂಜೆ ಹೇಳುತ್ತೇನೆಂದು ಹೇಳಿದ್ದೆ. Adjournment Motion ಇರಬೇಕೋ ಬೇಡವೋ ಎಂಬ ಬಗ್ಗೆ ನಿಯಮಾವಳಿಯ ಸಮಿತಿ ಸಭೆಯಲ್ಲಿ ಚರ್ಚೆ ನಡೆದಾಗ ಆವತ್ತಿನ ವಿಧಾನ ಪರಿಷತ್ತಿನ ಸದಸ್ಯನಾಗಿ ನಾನೂ ಕೂಡ ಆ ಸಭೆಯಲ್ಲಿ ಭಾಗವಹಿಸಿದ್ದೆ. ಆಗ ಕೆಲವರು, 'ಇಲ್ಲ ಈ Adjournment Motion ಮೇಲ್ಮನೆಗೆ suit ಆಗುವುದಿಲ್ಲ ಬೇಡ' ಎಂದು ಹೇಳಿದ್ದರು. ಆದರೆ, ಅದು ವಿರೋಧ ಪಕ್ಷದವರ ಕೈಯಲ್ಲಿ ಇರುವ ಒಂದು ಅಸ್ತ್ರವಾಗಿದೆ. ಆದುದರಿಂದ ಅದನ್ನು ಹುಷಾರಾಗಿ ಬಳಸಿದರೆ, ಸದನದ ಕಲಾಪಕ್ಕೆ ಒಂದು ರೀತಿಯಲ್ಲಿ ರಂಗು ಬರುತ್ತದೆ, ಕಲಾಪ ಅರ್ಥಪೂರ್ಣವಾಗುತ್ತದೆ ಎನ್ನುವ ಹಿನ್ನೆಲೆಯಲ್ಲಿ ಆವತ್ತು ಇದ್ದಂತಹ ಸರ್ಕಾರ ಮತ್ತು ನಾನು ಮತ್ತಿತ್ತರ ಸದಸ್ಯರು ಕೊಟ್ಟಂತಹ ಸಲಹೆಯ ಹಿನ್ನೆಲೆಯಲ್ಲಿ Adjournment Motion ಅನ್ನು ಮುಂದುವರಿಸಲಾಗಿದೆ. ಆ Adjournment Motion ಅನ್ನು ನಮ್ಮ ಸದನದಲ್ಲಿ ಎಂದೂ ನಾವು ಚರ್ಚೆಗೆ ಅಲೋ ಮಾಡಿಲ್ಲ. ವಿಷಯದ ಗಾಂಭೀರ್ಯತೆಯ ಹಿನ್ನೆಲೆಯಲ್ಲಿ ಅರಿತು ಅದನ್ನು convert ಮಾಡುತ್ತೇವೆ. ಆದುದರಿಂದ ಈ ಸದನ ಮುಗಿಯುವುದರೊಳಗೆ ನಾನು ಈ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ ಎಂದು ಬೆಳಿಗ್ಗೆ ಮಾನ್ಯ ನಾಣಯ್ಯನವರಿಗೆ ಹೇಳಿದ್ದೆನು. ಅದನ್ನು ಮಾನ್ಯ ನಾಣಯ್ಯನವರು ತಪ್ಪು ತಿಳಿಯಬಾರದು. ದಯಮಾಡಿ ಸಹಕರಿಸುತ್ತಾರೆಂದು ಅಂದುಕೊಂಡಿದ್ದೇನೆ.

ನಿಯಮ 68ರ ಅಡಿಯಲ್ಲಿ ಗುಟ್ಕಾ ನಿಷೇಧದ ಬಗ್ಗೆ ಚರ್ಚೆ ಮುಗಿದ ನಂತರ ತಕ್ಷಣ, ಮಾನ್ಯ ನಾಣಯ್ಯನವರು ಕಳಿಸಿರುವ ಪ್ರಸ್ತಾವನೆಯ ವಿಚಾರವನ್ನು ನಿಯಮ 68ರ ಅಡಿಯಲ್ಲಿಯೇ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11–00 ಗಂಟೆಯವರೆಗೆ ಮುಂದೂಡಿದ್ದೇನೆ.

**(ಸದನವು ಸಂಜೆ 5 ಗಂಟೆ ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 5ನೇ ಜೂನ್ ಮಾಹೆ 2013ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)**